ಬುಧವಾರ, ಮೇ 14, 2025 | ₹ 7.00
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಾಧನೆಯ ಸಂಭ್ರಮ

ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 10ನೇ ತರಗತಿ ಪರೀಕ್ಷೆ ಫಲಿತಾಂಶವನ್ನು ಮಂಗಳವಾರ ಪ್ರಕಟಿಸಿದ್ದು, ಉತ್ತಮ ಸಾಧನೆ ಮಾಡಿದ ಗುರುಗ್ರಾಮದ ಶಾಲೆಯೊಂದರ ವಿದ್ಯಾರ್ಥಿನಿಯರು ಸಂಭ್ರಮಿಸಿದರು

MONKEY 555®
No.1*
ಪ್ರತಿ 5 ರಲ್ಲಿ
4 ಮನೆಗಳು
ಮಂಕೀ 555
ಪೊರಕೆ ಯನ್ನೇ
ಬಳಸುತ್ತಿವೆ!!*
• STRONG
• NATURAL
• LONG-LASTING
India's Largest Selling Grass Brooms
VIBHAVA
Total Housekeeping Solutions
• Monkey 555 is present in 80% of households*.
• As per internal survey conducted by IAMPL.
www.vibhava.com

ಬುಧವಾರ, ಮೇ 14, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 133 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ–ಅಗಲ ಭಾರತದಲ್ಲಿ ಏರುವುದೇ ಔಷಧ ಬೆಲೆ?

'ಗುತ್ತಿಗೆದಾರರಿಗೆ ಬಾಕಿ ಹಣ ಶೀಘ್ರ ಬಿಡುಗಡೆ' 8

'ಮಂಡ್ಯಕ್ಕೆ ಬರಲು ಜೋಶಿಗೆ ಭಯವೇಕೆ?' 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,148	24,578	₹1 ಲಕ್ಷ (ಬೆಂಗಳೂರು)	₹1.01 ಲಕ್ಷ (ಬೆಂಗಳೂರು)	85.36

ವಿದಾಯ...

ಕೆಲಸದಿಂದ ನಿವೃತ್ತಿ ನಂತರದಲ್ಲಿ ಯಾವುದೇ ಅಧಿಕೃತ ಹುದ್ದೆ ಅಥವಾ ಜವಾಬ್ದಾರಿಯನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಕಾನೂನು ಕ್ಷೇತ್ರದಲ್ಲಿಯೇ ವೃತ್ತಿಜೀವನ ಮುಂದುವರಿಸಲಿದ್ದೇನೆ. ಕಾನೂನು ಕ್ಷೇತ್ರದ ಕುರಿತು ಏನಾದರೂ ಮಾಡುತ್ತೇನೆ

ಸಂಜೀವ್ ಖನ್ನಾ, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ

(ವೃತ್ತಿಯ ಕೊನೆಯ ದಿನ ಮಂಗಳವಾರ ಬೀಳ್ಕೊಡುಗೆ ಸಮಾರಂಭದಲ್ಲಿ)



ಒಂದೇ ಎಪಿಕ್ ಸಂಖ್ಯೆ; ಸಮಸ್ಯೆ ಪರಿಹಾರ

ನವದೆಹಲಿ (ಪಿಟಿಐ): ಹಲವು ಮತದಾರರ ಗುರುತಿನ ಚೀಟಿಗಳು ಒಂದೇ ಎಪಿಕ್ ಸಂಖ್ಯೆ ಹೊಂದಿರುವ ಸಮಸ್ಯೆಯನ್ನು ಪರಿಹರಿಸಲಾಗಿದ್ದು, ಅಂತಹ ಮತದಾರರಿಗೆ ಹೊಸ ಸಂಖ್ಯೆಗಳೊಂದಿಗೆ ಹೊಸ ಗುರುತಿನ ಚೀಟಿ ನೀಡಲಾಗಿದೆ ಎಂದು ಚುನಾವಣಾ ಆಯೋಗದ ಮೂಲಗಳು ಮಂಗಳವಾರ ತಿಳಿಸಿವೆ.

ಒಂದೇ ರೀತಿಯ ಗುರುತಿನ ಚೀಟಿಗಳು ಅಥವಾ ಎಪಿಕ್ ಸಂಖ್ಯೆ ಹೊಂದಿರುವ ತುಂಬಾ ಕಡಿಮೆ ಪ್ರಕರಣಗಳು ಪರಿಶೀಲನೆ ವೇಳೆ ಕಂಡುಬಂದಿವೆ. ಸರಾಸರಿ ನಾಲ್ಕು ಮತಗಟ್ಟೆಗಳಲ್ಲಿ ಇಂತಹ ಒಂದು ಪ್ರಕರಣ ಮಾತ್ರ ಗಮನಕ್ಕೆ ಬಂದಿದ್ದಾಗಿ ಹೇಳಿವೆ.

ಒಂದೇ ಎಪಿಕ್ ಸಂಖ್ಯೆ ಹೊಂದಿರುವವರು ವಿವಿಧ ವಿಧಾನಸಭಾ ಕ್ಷೇತ್ರಗಳು ಮತ್ತು ಮತಗಟ್ಟೆಗಳಲ್ಲಿನ ಅಸಲಿ ಮತದಾರರೇ ಆಗಿದ್ದಾರೆ ಎಂಬುದು ಪರಿಶೀಲನೆ ವೇಳೆ ತಿಳಿದುಬಂದಿದೆ ಎಂದು ತಿಳಿಸಿವೆ.

ಪ್ರತಿಯೊಬ್ಬ ಮತದಾರರ ಹೆಸರು, ಆತ ವಾಸಿಸುವ ಪ್ರದೇಶದಲ್ಲಿನ ಮತಗಟ್ಟೆಯ ಹೆಸರು ಮತದಾರರ ಪಟ್ಟಿಯಲ್ಲಿದೆ. ಒಂದೇ ಎಪಿಕ್ ಸಂಖ್ಯೆ ಹೊಂದಿರುವ ಯಾವುದೇ ಮತದಾರರಿಗೂ ಇನ್ನೊಂದು ಮತಗಟ್ಟೆಯಲ್ಲಿ ಮತ ಚಲಾಯಿಸಲು ಎಂದಿಗೂ ಅವಕಾಶ ನೀಡಿಲ್ಲ. ಹೀಗಾಗಿ, ಈ ಸಮಸ್ಯೆಯು ಯಾವುದೇ ಚುನಾವಣೆಯ ಫಲಿತಾಂಶದ ಮೇಲೆ ಪರಿಣಾಮ ಬೀರಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿವೆ.

ಟ್ರಂಪ್ ಪಾತ್ರವಿಲ್ಲ: ಕೇಂದ್ರ

ಅಣ್ವಸ್ತ್ರ ಸಂಘರ್ಷ ಶಮನ: ಅಮೆರಿಕ ಹೇಳಿಕೆ ಅಲ್ಲಗಳೆದ ರಣಧೀರ್ ಜೈಸ್ವಾಲ್

ಪ್ರಜಾವಾಣಿ ವಾರ್ತೆ

ನವದೆಹಲಿ: 'ಭಾರತ–ಪಾಕಿಸ್ತಾನ ನಡುವಣ ಕದನ ವಿರಾಮಕ್ಕೆ ಮಧ್ಯಸ್ಥಿಕೆ ವಹಿಸಿದ್ದು, ಉಭಯ ದೇಶಗಳ ನಡುವೆ ಅಣ್ವಸ್ತ್ರ ಸಂಘರ್ಷದ ಸಾಧ್ಯತೆ ತಪ್ಪಿಸಲಾಗಿದೆ' ಎಂಬ ಅಮೆರಿಕದ ಪ್ರತಿಪಾದನೆಯನ್ನು ಭಾರತ ಸ್ಪಷ್ಟವಾಗಿ ತಳ್ಳಿಹಾಕಿದೆ.

'ಕಾಶ್ಮೀರವು ಭಾರತ–ಪಾಕ್ ನಡುವಣ ವಿವಾದ' ಎಂಬ ನಿಲುವನ್ನು ಭಾರತ ಪುನರುಚ್ಚರಿಸಿದೆ. ಈ ವಿವಾದ ಇತ್ಯರ್ಥಕ್ಕೆ ಮಧ್ಯಸ್ಥಿಕೆ ವಹಿಸಲು ಸಿದ್ಧ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಸ್ತಾವವನ್ನು ನಿರಾಕರಿಸಿದೆ.

'ಕಾಶ್ಮೀರ ವಿವಾದಕ್ಕೆ ಸಂಬಂಧಿಸಿ ಭಾರತ– ಪಾಕಿಸ್ತಾನವೇ ದ್ವಿಪಕ್ಷೀಯ ಚರ್ಚೆ ನಡೆಸಬೇಕು ಎಂಬುದು ಭಾರತದ ದೀರ್ಘ ಕಾಲದ ನಿಲುವು. ಇದರಲ್ಲಿ ಬದಲಾವಣೆ ಇಲ್ಲ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದರು.

'ಭಾರತದ ಸೇನಾ ದಾಳಿಗೆ ಪ್ರತಿಯಾಗಿ ಅಣ್ವಸ್ತ್ರ ಬಳಸುವ ಆಯ್ಕೆಯನ್ನು ನಾವು ಎಂದಿಗೂ ಪರಿಗಣಿಸಿರಲಿಲ್ಲ' ಎಂಬ ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ಡಾರ್ ಅವರ ಅಧಿಕೃತ ಹೇಳಿಕೆಯನ್ನೂ ಅವರು ಉಲ್ಲೇಖಿಸಿದರು.

ಪಾಕ್‌ಗೆ ಮತ್ತೆ ಮೋದಿ ಎಚ್ಚರಿಕೆ: ತಾನು ನಡೆಸಿರುವ ದಾಳಿಯಿಂದಾಗಿ ಆದಂಪುರ ವಾಯುನೆಲೆಗೆ ಹಾನಿಯಾಗಿದೆ ಎಂದು ಪಾಕಿಸ್ತಾನ 'ಸುಳ್ಳು' ಹೇಳಿಕೆ ನೀಡಿದ ಕೆಲವು ದಿನಗಳ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಪಂಜಾಬ್‌ನ ಪ್ರಮುಖ ವಾಯುನೆಲೆಗೆ ಮಂಗಳವಾರ ಭೇಟಿ ನೀಡಿ ನೆರೆ ರಾಷ್ಟ್ರಕ್ಕೆ ಸ್ಪಷ್ಟ ಸಂದೇಶ ರವಾನಿಸಿದರು.

'ಶತ್ರುಗಳು ದಾಳಿ ನಡೆಸಿದರೆ ಅವರನ್ನು ದೂಳೀಪಟ ಮಾಡಲು ಭಾರತ ಯಾವಾಗಲೂ ಸಿದ್ಧವಿದೆ' ಎಂದು ಮೋದಿ ಪ್ರತಿಪಾದಿಸಿದರು.

'ಸಿಂಧೂರ' ಕಾರ್ಯಾಚರಣೆಗೆ ಪ್ರತಿಯಾಗಿ ಪಾಕಿಸ್ತಾನವು ಇದೇ 7ರಿಂದ 10ರವರೆಗೆ ನಡೆಸಿದ್ದ ಡ್ರೋನ್ ಹಾಗೂ ಕ್ಷಿಪಣಿ ದಾಳಿಗಳಿಂದ ಸೇನಾ ನೆಲೆಗಳು ಹಾಗೂ ವಾಯುಪಡೆ ನೆಲೆಗಳನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಭಾರತದ ಎಸ್-400 ವಾಯು ರಕ್ಷಣಾ ವ್ಯವಸ್ಥೆಯ ಮುಂದೆ ನಿಂತಿದ್ದ ಸಶಸ್ತ್ರ ಪಡೆ ಸಿಬ್ಬಂದಿಯನ್ನು ಉದ್ದೇಶಿಸಿ ಮೋದಿ ಮಾತನಾಡಿದರು.

ಮಿಗ್ 29 ಯುದ್ಧ ವಿಮಾನಗಳನ್ನು ಹೊಂದಿರುವ ಆದಂಪುರ ನೆಲೆಯು ದೇಶದ ಎರಡನೇ ಅತಿದೊಡ್ಡ ವಾಯುನೆಲೆಯಾಗಿದೆ ಹಾಗೂ ಪಾಕಿಸ್ತಾನ ಗಡಿಯಿಂದ 100 ಕಿ.ಮೀ. ದೂರದಲ್ಲಿದೆ.

'ಭಯೋತ್ಪಾದನೆಯ ವಿರುದ್ಧ ಭಾರತದ 'ಲಕ್ಷ್ಮಣ ರೇಖೆ' ಈಗ ಸ್ಪಷ್ಟವಾಗಿದೆ. ಈಗ ಮತ್ತೊಂದು ಭಯೋತ್ಪಾದಕ ದಾಳಿ ನಡೆದರೆ, ಭಾರತವು ತಕ್ಕ ಪ್ರತ್ಯುತ್ತರ ನೀಡುತ್ತದೆ. ಭಾರತ ಯಾವುದೇ ಪರಮಾಣು ಬೆದರಿಕೆಗಳನ್ನು ಸಹಿಸುವುದಿಲ್ಲ. ಭಯೋತ್ಪಾದನೆ ಬೆಂಬಲಿಸುವ ಸರ್ಕಾರ ಮತ್ತು ಭಯೋತ್ಪಾದನೆಯ ಸಂಚುಕೋರರನ್ನು ನಾವು ಪ್ರತ್ಯೇಕ ಪ್ರತ್ಯೇಕವಾಗಿ ನೋಡುವುದಿಲ್ಲ' ಎಂದು ಅವರು ಪುನರುಚ್ಚರಿಸಿದರು.

11ನೇ ಪುಟ ನೋಡಿ



ಪ್ರಧಾನಿ ಮೋದಿ ಪಂಜಾಬ್‌ನ ಆದಂಪುರ ವಾಯುನೆಲೆಯಲ್ಲಿ ಮಾತನಾಡಿದರು. 'ಎಸ್ 400 ಕ್ಷಿಪಣಿ ವ್ಯವಸ್ಥೆ'ಯನ್ನು ಚಿತ್ರದಲ್ಲಿ ಕಾಣಬಹುದು —ಪಿಟಿಐ ಚಿತ್ರ

ಮುಗ್ಧ ಜನರ ರಕ್ತ ಚೆಲ್ಲಿದರೆ ವಿನಾಶ

ನೀವು ಭಯೋತ್ಪಾದನೆಯ ಎಲ್ಲ ದೊಡ್ಡ ನೆಲೆಗಳನ್ನು ನಾಶಪಡಿಸಿದ್ದೀರಿ. ಭಯೋತ್ಪಾದಕರ ಒಂಬತ್ತು ಅಡಗುತಾಣಗಳು ನಾಶವಾದವು. 100ಕ್ಕೂ ಹೆಚ್ಚು ಭಯೋತ್ಪಾದಕರು ಸತ್ತರು. ಭಾರತದಲ್ಲಿ ಮುಗ್ಧ ಜನರ ರಕ್ತ ಚೆಲ್ಲುವುದರಿಂದ ವಿನಾಶ ಮತ್ತು ಮಹಾ ವಿನಾಶ ಬರುತ್ತದೆ ಎಂಬುದು ಎಲ್ಲರಿಗೂ ಗೊತ್ತಾಗಿದೆ

ನರೇಂದ್ರ ಮೋದಿ, ಪ್ರಧಾನಿ

ದಿನದ ಬೆಳವಣಿಗೆ

- ಭದ್ರತಾ ಪಡೆಗಳು ದಕ್ಷಿಣ ಕಾಶ್ಮೀರದ ಶೋಪಿಯಾನ್ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಗುಂಡಿನ ದಾಳಿ ನಡೆಸಿ ಲಷ್ಕರ್-ಎ-ತಯಬಾ ಭಯೋತ್ಪಾದಕ ಸಂಘಟನೆಯ ಮೂವರು ಉಗ್ರರನ್ನು ಹತ್ಯೆ ಮಾಡಿವೆ
- ಗಡಿ ಜಿಲ್ಲೆಗಳನ್ನು ಹೊರತುಪಡಿಸಿ ಜಮ್ಮು– ಕಾಶ್ಮೀರದ ಉಳಿದೆಡೆ ಶಾಲಾ– ಕಾಲೇಜುಗಳು ಪುನರಾರಂಭಗೊಂಡವು
- ಪಹಲ್ಗಾಮ್‌ನಲ್ಲಿ ದಾಳಿ ನಡೆಸಿದ ಉಗ್ರರ ಕುರಿತು ಯಾವುದೇ ಮಾಹಿತಿ ನೀಡಿದರೆ ₹20 ಲಕ್ಷ ಬಹುಮಾನ ನೀಡುವುದಾಗಿ ಹೇಳಿರುವ ಪೋಸ್ಟರ್‌ಗಳನ್ನು ಜಮ್ಮು ಮತ್ತು ಕಾಶ್ಮೀರದ ಶೋಪಿಯಾನ್ ಜಿಲ್ಲೆಯ ವಿವಿಧೆಡೆ ಅಂಟಿಸಲಾಗಿದೆ
- ಹರಿಯಾಣದಲ್ಲಿ ಮೇ 25ರ ವರೆಗೆ ಡ್ರೋನ್ ಬಳಕೆಗೆ ನಿರ್ಬಂಧ ಹೇರಲಾಗಿದೆ
- ನವದೆಹಲಿಯಲ್ಲಿರುವ ಪಾಕಿಸ್ತಾನ ಹೈಕಮಿಷನ್ ಕಚೇರಿಯ ಅಧಿಕಾರಿಯೊಬ್ಬರು ತಮ್ಮ ಅಧಿಕೃತ ಸ್ಥಾನಮಾನಕ್ಕೆ ವಿರುದ್ಧವಾದ ಚಟುವಟಿಕೆಗಳಲ್ಲಿ ತೊಡಗಿದ್ದಕ್ಕೆ ಭಾರತ ಹೊರಹಾಕಿದೆ. ದೇಶ ತೊರೆಯಲು 24 ಗಂಟೆಗಳ ಕಾಲಾವಕಾಶ ನೀಡಲಾಗಿದೆ
- 'ಆಪರೇಷನ್ ಸಿಂಧೂರ' ಯಶಸ್ಸಿಗೆ ಸಶಸ್ತ್ರ ಪಡೆಗಳನ್ನು ಶ್ಲಾಘಿಸಲು ದೆಹಲಿಯ ಬಿಜೆಪಿ ನೇತೃತ್ವದ ಸರ್ಕಾರ, ಕರ್ತವ್ಯ ಪಥದಲ್ಲಿ 'ಶೌರ್ಯ ಸಮ್ಮಾನ ಯಾತ್ರೆ' ನಡೆಸಿತು
- ಭಾರತದ ಜತೆಗಿನ ಸೇನಾ ಸಂಘರ್ಷದಲ್ಲಿ ತನ್ನ 11 ಸೈನಿಕರು ಮತ್ತು 40 ನಾಗರಿಕರು ಮೃತಪಟ್ಟಿರುವುದಾಗಿ ಪಾಕಿಸ್ತಾನ ಹೇಳಿದೆ



ಬೆಳಗಾವಿ ತಾಲ್ಲೂಕಿನ ಬಸವನ ಕುಡಚಿಯಲ್ಲಿ ಮಂಗಳವಾರ ಸುರಿದ ಮಳೆಯಿಂದ ಬಸವೇಶ್ವರ ದೇವಸ್ಥಾನದ ಆವರಣ ಜಲಾವೃತಗೊಂಡಿತ್ತು

ಹಲವೆಡೆ ಗುಡುಗು ಸಹಿತ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ, ಮೈಸೂರು, ಚಿಕ್ಕಮಗಳೂರು ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಮಂಗಳವಾರ ಬಿರುಸಿನ ಮಳೆಯಾಗಿದೆ. ಕಲ್ಯಾಣ ಕರ್ನಾಟಕದ ರಾಯಚೂರು, ಕೊಪ್ಪಳ, ಬೀದರ್ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿಯೂ ಭಾರಿ ಮಳೆಯಾಗಿದೆ. ಬಿರು ಬಿಸಿಲಿನ ಧಗೆಯು ಸ್ವಲ್ಪ ಕಡಿಮೆಯಾಗುವಂತಾಗಿದೆ.

ಮೈಸೂರು ನಗರ, ಹೊರವಲಯದ ಹಲವು ಗ್ರಾಮಗಳಲ್ಲಿ ಸಂಜೆ ಮುಕ್ಕಾಲು ಗಂಟೆಗೂ ಹೆಚ್ಚು ಮಳೆಯಾಯಿತು. ಕೊಡಗು ಜಿಲ್ಲೆಯ ಮಡಿಕೇರಿ ನಗರ ಸೇರಿದಂತೆ ಸಿದ್ದಾಪುರ, ಗುಹ್ಯ, ಕರಡಿಗೋಡು ಭಾಗಗಳಲ್ಲಿ ಸಾಧಾರಣ ಮಳೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿ ಸೇರಿ ಕೆಲವೆಡೆ ಬಿರುಗಾಳಿ, ಗುಡುಗು ಸಹಿತ ಮಳೆ ಸುರಿಯಿತು.

8ನೇ ಪುಟ ನೋಡಿ

ಸಿಡಿಲಿಗೆ 11 ಮಂದಿ ಸಾವು

ಹುಬ್ಬಳ್ಳಿ/ಕಲಬುರಗಿ/ಕಡೂರು: ಕಳೆದ 24 ಗಂಟೆಗಳಲ್ಲಿ ರಾಜ್ಯದ ವಿವಿಧೆಡೆ ಸಿಡಿಲು ಬಡಿದು ಹನ್ನೊಂದು ಮಂದಿ ಮೃತಪಟ್ಟಿದ್ದು, ಒಬ್ಬ ಬಾಲಕ ಗಾಯಗೊಂಡಿದ್ದಾನೆ.

ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಡಮ್ಮಳ್ಳಿಯ ನಾಗಪ್ಪ ಬಸವಣೆಪ್ಪ ಕಣಸೋಗಿ (65), ರಟ್ಟೀಹಳ್ಳಿ ತಾಲ್ಲೂಕಿನ ಕುಡುಪಲಿ ಸುನೀಲ್ ಕಾಳೇರ (29), ಗದಗ ಜಿಲ್ಲೆಯ ಬಸಾಪುರದ ಮರಿಯವ್ವ ನಾಯ್ಕರ್ (60) ಮೃತಪಟ್ಟಿದ್ದಾರೆ.

ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ತಂಗಡಗಿ ಗ್ರಾಮದಲ್ಲಿ ರೈತ ಮಲ್ಲಪ್ಪ ಗುರುಶಾಂತಪ್ಪ ತಾಳಿಕೋಟಿ (47), ಆಲೂರ ಗ್ರಾಮದಲ್ಲಿ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆ ಜತ್ತ ತಾಲ್ಲೂಕಿನ ಮಣಿಕನಾಳ ಗ್ರಾಮದ ಕೂಲಿಕಾರ್ಮಿಕ ಶ್ರೀಶೈಲ ರಾಮಲಿಂಗ ಮುಗಳಕೋಡ (35), ಬಳ್ಳಾರಿ ಜಿಲ್ಲೆ ಸಿರಗುಪ್ಪದಲ್ಲಿ ರಾರಾವಿ ಗ್ರಾಮದ ಭೀರಪ್ಪ (45), ಸುನೀಲ (26) ಮೃತಪಟ್ಟಿದ್ದಾರೆ. ವಿನೋದ ಎಂಬ ಬಾಲಕನಿಗೆ ಗಾಯವಾಗಿದೆ.

8ನೇ ಪುಟ ನೋಡಿ

4 ದಿನ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದಾದ್ಯಂತ ಮುಂದಿನ ಒಂದು ವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಬುಧವಾರದಿಂದ ನಾಲ್ಕು ದಿನಗಳು ಎಲ್ಲ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

OFFER PRICE AVAILABLE ON DINE-IN AND KFC APP ONLY. FREE DELIVERY ON KFC APP.
ಚಿಕನ್ ಉತ್ಪನ್ನವು ಮೊನೊಸೋಡಿಯಂ ಗ್ಲುಟಮೇಟ್ ಅನ್ನು ಹೊಂದಿದ್ದು, 12 ತಿಂಗಳ ಕೆಳಗಿನ ಶಿಶುಗಳಿಗೆ ಮತ್ತು ಗರ್ಭಿಣಿಯರಿಗೆ ಇದನ್ನು ಶಿಫಾರಸು ಮಾಡುವುದಿಲ್ಲ. ಸಂಸ್ಕರಿಸಿದ ಗೋಧಿ ಹಿಟ್ಟು (ಮೈದಾ) ಮತ್ತು ಸ್ವಾಮ್ಯದ ಮಸಾಲೆ ಮಿಶ್ರಣಗಳನ್ನು ಒಳಗೊಂಡಿದೆ. ಉತ್ಪನ್ನದ ಚಿತ್ರಗಳು ವಿವರಣಾತ್ಮಕವಾಗಿವೆ. *ಬೆಲೆಯು ತೆರಿಗೆಯನ್ನು ಒಳಗೊಂಡಿರುವುದಿಲ್ಲ. ಆಯ್ದ ಮಾರುಕಟ್ಟೆಗಳು/ರೆಸ್ಟೋರೆಂಟ್‌ಗಳು ವಿಭಿನ್ನ ಬೆಲೆಗಳನ್ನು ಹೊಂದಿರಬಹುದು. ವಿವರಗಳಿಗಾಗಿ online.kfc.co.in/terms-and-conditions ಅನ್ನು ನೋಡಿ. ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.

ಸಿಬಿಎಸ್‌ಇ 10–12 ಫಲಿತಾಂಶ ಬಾಲಕಿಯರೇ ಮೇಲುಗೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) 2024–25ನೇ ಸಾಲಿನ ಫಲಿತಾಂಶ ಪ್ರಕಟವಾಗಿದ್ದು, ಕರ್ನಾಟಕದಲ್ಲಿ ಪರೀಕ್ಷೆ ಬರೆದಿದ್ದ 10ನೇ ತರಗತಿಯ ಶೇ 98.71 ಹಾಗೂ 12ನೇ ತರಗತಿಯ ಶೇ 95.95 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಬೆಂಗಳೂರು ಪ್ರದೇಶದ (ಕರ್ನಾಟಕ) ವಿದ್ಯಾರ್ಥಿಗಳ ಸಾಧನೆ ಕುಸಿದಿದೆ. 12ನೇ ತರಗತಿಯ ಪರೀಕ್ಷೆಗಳಲ್ಲಿ 2023–24ರಲ್ಲಿ ಶೇ 96.95, 2022–23ರಲ್ಲಿ ಶೇ 98.64 ಫಲಿತಾಂಶ ಬಂದಿತ್ತು. 10ನೇ ತರಗತಿಯಲ್ಲಿ 2023–24ರಲ್ಲಿ ಶೇ 99.26 ಹಾಗೂ 2022–23ರಲ್ಲಿ ಶೇ 99.18 ಫಲಿತಾಂಶ ಲಭಿಸಿತ್ತು.

ಬಾಲಕಿಯರೇ ಮೇಲುಗೈ: ಈ ಬಾರಿಯೂ 10 ಮತ್ತು 12ನೇ ತರಗತಿಯಲ್ಲಿ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. 10ನೇ ತರಗತಿಯಲ್ಲಿ 93,148 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. 50,236 ಬಾಲಕರಲ್ಲಿ ಶೇ 98.43 ಮತ್ತು 42,912 ಬಾಲಕಿಯರಲ್ಲಿ ಶೇ 99.46ರಷ್ಟು ಉತ್ತೀರ್ಣರಾಗಿದ್ದಾರೆ.

12ನೇ ತರಗತಿಯಲ್ಲಿ 21,745 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. 11,767 ಬಾಲಕರಲ್ಲಿ ಶೇ 95.14 ಹಾಗೂ 9,978 ಬಾಲಕಿಯರಲ್ಲಿ ಶೇ 96.90ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಬೆಂಗಳೂರು ಶಾಲೆಗಳ ಸಾಧನೆ: ಬೆಂಗಳೂರಿನ ಹಲವು ಶಾಲೆಗಳು ಶೇ 100 ಫಲಿತಾಂಶ ಪಡೆದಿವೆ. ಮಲ್ಲಸಂದ್ರದ ಶ್ರೀ ಕುಮಾರನ್ಸ್ ಚಿಲ್ಡ್ರನ್ಸ್ ಹೋಂ ಶೇ 100 ಫಲಿತಾಂಶ ಪಡೆದಿದ್ದು, ಅನುಷ್ಕಾ ಟೋನಪಿ 10ನೇ ತರಗತಿಯಲ್ಲಿ 500ಕ್ಕೆ 495 ಅಂಕ ಗಳಿಸಿದ್ದಾಳೆ. 12ನೇ ತರಗತಿಯ ವಾಣಿಜ್ಯ ವಿಭಾಗದಲ್ಲಿ ಸಮರ್ಥ್ ಜುಂಜುನ್‌ವಾಲಾ 500ಕ್ಕೆ 498 ಮತ್ತು ಮಾನವಿಕ ವಿಭಾಗದಲ್ಲಿ ಎಸ್. ಪ್ರಕೃತಿ 500ಕ್ಕೆ 495 ಅಂಕ ಗಳಿಸಿದ್ದಾರೆ.

11ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಸುಳ್ಳು ಸುದ್ದಿಗಳ ಅಬ್ಬರ; ಶಿಕ್ಷೆಗೆ ಬರ

ಮಂಡ್ಯ: ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸಿದವರ ವಿರುದ್ಧ ರಾಜ್ಯದ ಪೊಲೀಸ್ ಠಾಣೆಗಳಲ್ಲಿ 259 ಪ್ರಕರಣಗಳು ದಾಖಲಾಗಿದ್ದು, 6 ಪ್ರಕರಣಗಳಲ್ಲಷ್ಟೇ ಶಿಕ್ಷೆಯಾಗಿದೆ.

ಅವುಗಳಲ್ಲಿ 75 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿವೆ. ಸುಳ್ಳು ಸುದ್ದಿ ಪ್ರಸಾರದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಯಾವುದೇ ಯೂಟ್ಯೂಬ್ ಚಾನೆಲ್‌ಗಳನ್ನು ಇದುವರೆಗೆ ನಿಷೇಧಿಸಿಲ್ಲ ಎನ್ನುತ್ತವೆ ಗೃಹ ಇಲಾಖೆ ಮೂಲಗಳು. ಬೆಂಗಳೂರು ನಗರ ಜಿಲ್ಲೆಯಲ್ಲಿ ಹೆಚ್ಚು ಪ್ರಕರಣ ದಾಖಲಾಗಿದ್ದು, ರಾಜ್ಯದಲ್ಲೇ ಮುಂಚೂಣಿಯಲ್ಲಿದೆ.

5

ಬಸ್ ಪಲ್ಟಿ: 9 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಬೇಗೂರು ಜಂಕ್ಷನ್ ಬಳಿ ಪಲ್ಟಿಯಾಗಿದ್ದ ಬಸ್

ಬೆಂಗಳೂರು: ಕಾರ್ಮಿಕರನ್ನು ಊಟಕ್ಕೆ ಕರೆದೊಯ್ಯುತ್ತಿದ್ದ ಬಸ್ ಬೇಗೂರು ಜಂಕ್ಷನ್ ಬಳಿ ಪಲ್ಟಿಯಾಗಿ 9 ಮಂದಿ ಪ್ರಯಾಣಿಕರು ಗಾಯಗೊಂಡಿದ್ದಾರೆ.

ಒಬ್ಬರ ಸ್ಥಿತಿ ಗಂಭೀರವಾಗಿದೆ. ಎಲ್ಲರನ್ನೂ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಮಂಗಳವಾರ ಮಧ್ಯಾಹ್ನ 1 ಗಂಟೆಯ ಸುಮಾರಿಗೆ ಊಟಕ್ಕೆ ಕರೆದೊಯ್ಯಲಾಗುತ್ತಿತ್ತು. ಆಗ ರಸ್ತೆ ವಿಭಜಕಕ್ಕೆ ಬಸ್ ಡಿಕ್ಕಿಯಾಗಿ ಪಲ್ಟಿಯಾಗಿದೆ. ಕ್ರೇನ್ ತರಿಸಿ ಬಸ್ ಅನ್ನು ಮೇಲಕ್ಕೆ ಎತ್ತಲಾಯಿತು ಎಂದು ಸಂಚಾರ ಪೊಲೀಸರು ಹೇಳಿದರು.

ದೇವನಹಳ್ಳಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರ್.ಸಿ. ಕಲಾ ಕಾಲೇಜು ವಿದ್ಯಾರ್ಥಿಗಳ ಪ್ರತಿಭಟನೆ

ಆರ್.ಸಿ. ಮತ್ತು ಸರ್ಕಾರಿ ಕಲಾ ಕಾಲೇಜು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾಗಿ ಆರ್.ಸಿ. ಕಾಲೇಜು ಮತ್ತು ಸರ್ಕಾರಿ ಕಲಾ ಕಾಲೇಜು ಅನ್ನು ಪರಿವರ್ತಿಸಿ ಸರ್ಕಾರದ ನಿರ್ಧಾರ ಖಂಡಿಸಿ ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು.

ರಾಮನಾರಾಯಣ್ ಚೆಲ್ಲಾರಾಮ್ (ಆರ್.ಸಿ.) ಕಾಲೇಜು ಮತ್ತು ಕೆ.ಆರ್. ವೃತ್ತದಲ್ಲಿರುವ ಸರ್ಕಾರಿ ಕಲಾ ಕಾಲೇಜು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾದರೆ, ಕಾಲೇಜಿನ ಶುಲ್ಕ ಹೆಚ್ಚಳವಾಗುತ್ತದೆ. ಬಡ ವಿದ್ಯಾರ್ಥಿಗಳ ಕಲಿಕೆಗೆ ತೊಂದರೆ ಆಗಲಿದೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಮಾತನಾಡಿ, 'ಘಟಕ ಕಾಲೇಜುಗಳ ಪರಿಸ್ಥಿತಿ ಸರಿ ಇಲ್ಲ. ವಿವಿಧ ಪದವಿ ಕೋರ್ಸುಗಳಿಗೆ ಸರ್ಕಾರಿ ಪದವಿ ಕಾಲೇಜುಗಳಲ್ಲಿ ₹6,000 ಗಿಂತ ಕಡಿಮೆ ಶುಲ್ಕವಿದ್ದರೆ, ಘಟಕ ಕಾಲೇಜುಗಳ ಕನಿಷ್ಠ ಶುಲ್ಕವೇ ₹12,000ರಿಂದ ಆರಂಭವಾಗುತ್ತದೆ' ಎಂದರು.

'ವಿಶ್ವವಿದ್ಯಾಲಯ ನಡೆಸಲು ಸುಮಾರು ₹250 ಕೋಟಿ ಅವಶ್ಯಕತೆಯಿದೆ. ಈಗಾಗಲೇ ವಿಶ್ವವಿದ್ಯಾಲಯಗಳು ಹಣದ ಕೊರತೆ ಎದುರಿಸುತ್ತಿವೆ. ಹೀಗಿರುವಾಗ ಈ ಎರಡೂ ಶಿಕ್ಷಣ ಸಂಸ್ಥೆಗಳು ವಿಶ್ವವಿದ್ಯಾಲಯದ ಸುಪರ್ದಿಗೆ ಬಂದರೆ, ವಿದ್ಯಾರ್ಥಿಗಳನ್ನು ಶಿಕ್ಷಣದಿಂದ ಹೊರಗುಳಿಯುವಂತೆ ಸರ್ಕಾರವೇ ಮಾಡಿದಂತೆ ಆಗುತ್ತದೆ' ಎಂದರು.

ಕೂಡಲೇ ಘಟಕ ಕಾಲೇಜುಗಳಾಗಿ ಪರಿವರ್ತಿಸುವ ನಿರ್ಧಾರವನ್ನು ಸರ್ಕಾರ ಹಿಂಪಡೆಯಬೇಕು ಎಂದು ರಾಜ್ಯ ಉಪಾಧ್ಯಕ್ಷ ಅಭಯ ದಿವಾಕರ್ ಅವರು ಸರ್ಕಾರವನ್ನು ಆಗ್ರಹಪಡಿಸಿದರು.

ಪ್ರತಿಭಟನೆಯಲ್ಲಿ ಆರ್.ಸಿ ಮತ್ತು ಸರ್ಕಾರಿ ಕಲಾ ಕಾಲೇಜಿನ ವಿದ್ಯಾರ್ಥಿಗಳು, ಜಿಲ್ಲಾ ಅಧ್ಯಕ್ಷೆ ಅಪೂರ್ವ, ಜಿಲ್ಲಾ ಕಾರ್ಯದರ್ಶಿ ಕಲ್ಯಾಣ್, ಭಾಗವಹಿಸಿದ್ದರು.

ನಗರದಲ್ಲಿ ಕೆಲವೆಡೆ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಮಂಗಳವಾರ ಸಂಜೆ 4ರ ಸುಮಾರಿಗೆ ಹಾಗೂ ರಾತ್ರಿ ಬಿರುಗಾಳಿ ಮಳೆಯಾಯಿತು.

ನಗರದಾದ್ಯಂತ ಮಧ್ಯಾಹ್ನದವರೆಗೆ ಬಿರುಬಿಸಿಲಿತ್ತು, ಉಷ್ಣಾಂಶವೂ ಹೆಚ್ಚಿತ್ತು. ಮಧ್ಯಾಹ್ನ 3.20ರ ಸುಮಾರಿಗೆ ದಟ್ಟ ಮೋಡಕವಿದ ವಾತಾವರಣ ನಿರ್ಮಾಣವಾಯಿತು. ಸಂಜೆ ಗಾಳಿಯೊಂದಿಗೆ ಬಿರುಸಿನ ಮಳೆ ಆರಂಭವಾಯಿತು. ವಾತಾವರಣ ತಂಪಾಯಿತು. ದಿಢೀರನೆ ಸುರಿದ ಮಳೆಯಿಂದಾಗಿ ರಸ್ತೆಗಳೆಲ್ಲಾ ಕಾಲುವೆಯಂತಾದವು. ನಗರದ ಕೆಲವೆಡೆ ಮರಗಳ ಕೊಂಬೆ ಉರುಳಿ ಬಿದ್ದು ಸಂಚಾರಕ್ಕೆ ತೊಂದರೆಯಾಯಿತು.

ಬಾಣಸವಾಡಿ, ಕಲ್ಯಾಣನಗರ, ಮೆಜೆಸ್ಟಿಕ್, ಆನಂದರಾವ್ ಸರ್ಕಲ್, ರೇಸ್‌ಕೋರ್ಸ್ ರಸ್ತೆ, ಶಿವಾನಂದ ಸರ್ಕಲ್, ಮಲ್ಲೇಶ್ವರ, ಶೇಷಾದ್ರಿಪುರಂ ಸುತ್ತಮುತ್ತ ಬಿರುಸಿನ ಮಳೆಯಾಯಿತು. ಹೆಬ್ಬಾಳ ಲೇಔಟ್‌ನಲ್ಲಿ ಬೃಹತ್ ಮರಗಳು ಧರೆಗುರುಳಿದವು. ಮಲ್ಲೇಶ್ವರದ ಪಿಯುಸಿ ಬೋರ್ಡ್, ಕಾವೇರಿ ಜಂಕ್ಷನ್ ಮರಗಳು ಬಿದ್ದಿವೆ. ವಿಂಡ್ಸರ್ ಮ್ಯಾನರ್ ಕೆಳಸೇತುವೆಯಿಂದ ಅರಮನೆ ಮೈದಾನ ಕಡೆ ಹೋಗುವ ಮಾರ್ಗದಲ್ಲೂ ಮರದ ಕೊಂಬೆ ಮುರಿದುಬಿದ್ದಿದೆ. ಯಾವುದೇ ಅನಾಹುತ ಸಂಭವಿಸಿಲ್ಲ.

ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ಜೋರು ಮಳೆಯಾಗಿ ರಸ್ತೆಯಲ್ಲಿ ನೀರು ನಿಂತ ಪರಿಣಾಮ ಸಂಚಾರ ದಟ್ಟಣೆ ಉಂಟಾಯಿತು. ನಾಗವಾರ, ಹೆಬ್ಬಾಳ ಭಾಗಗಳಲ್ಲೂ ಮಳೆ ಬಿರುಸಾಗಿತ್ತು. ಕುಮಾರಸ್ವಾಮಿ ಲೇಔಟ್ ಬಳಿ ನಿರಂತರ ಮಳೆಗೆ ರಸ್ತೆ ತುಂಬೆಲ್ಲ ನೀರು ಹರಿದು, ವಾಹನ ಸವಾರರು ಪರದಾಡಿದರು.

ಪೂರ್ವ ಬಾಣಸವಾಡಿಯಲ್ಲಿ 3.7 ಸೆಂ.ಮೀ, ಎಚ್‌ಎಎಲ್ ಏರ್‌ಪೋರ್ಟ್‌ನಲ್ಲಿ 3.5 ಸೆಂ.ಮೀ, ಕಾಟನ್‌ಪೇಟೆಯಲ್ಲಿ 2.5 ಸೆಂ.ಮೀ ಮಳೆಯಾಯಿತು. ಹೊರಮಾವು ಮತ್ತು ಕುಶಾಲ್‌ನಗರ ಭಾಗದಲ್ಲಿ 2 ಸೆಂ.ಮೀಗೂ ಅಧಿಕ ಮಳೆಯಾಯಿತು. ಯಲಹಂಕ ಭಾಗದಲ್ಲಿ ಜಕ್ಕೂರು, ಚೌಡೇಶ್ವರಿನಗರ, ಕೊಡಿಗೆಹಳ್ಳಿಯಲ್ಲಿ ಒಂದು ಸೆಂ.ಮೀಗೂ ಅಧಿಕ ಮಳೆಯಾಗಿದೆ. ಮಹದೇವಪುರ, ಪುಲಕೇಶಿ ನಗರದ ಕೆಲವು ಭಾಗಗಳಲ್ಲಿ ಒಂದೂವರೆ ಸೆಂ.ಮೀನಷ್ಟು ಮಳೆಯಾಗಿದೆ.

27 ಮರಗಳು ಧರೆಗೆ: ಒಟ್ಟು 27 ಮರಗಳು ಮತ್ತು 94 ಕೊಂಬೆಗಳು ಮುರಿದುಬಿದ್ದಿರುವುದಾಗಿ ಬಿಬಿಎಂಪಿಯಲ್ಲಿ ದೂರು ದಾಖಲಾಗಿತ್ತು. 19 ಮರಗಳು ಮತ್ತು 55 ಕೊಂಬೆಗಳನ್ನು ತೆರವುಗೊಳಿಸಿದ್ದು, ಉಳಿದವುಗಳ ತೆರವು ಕಾರ್ಯ ನಡೆಯುತ್ತಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ರಾಮಮೂರ್ತಿ ನಗರದ ದೊಡ್ಡಬಾಣಸವಾಡಿ ರಸ್ತೆಯಲ್ಲಿ ಮರದ ಕೊಂಬೆ ರಸ್ತೆಗೆ ಉರುಳಿತು

ಬೆಂಗಳೂರಿನಲ್ಲಿ ಮಂಗಳವಾರ ಸುರಿದ ಮಳೆಯಿಂದಾಗಿ ಎಂ.ಜಿ ರಸ್ತೆಯಲ್ಲಿ ಹೊಳೆಯಂತೆ ಹರಿದ ನೀರು ಪರದಾಡಿದ ವಾಹನ ಸವಾರರು –ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು ಕೃಷಿ ವಿ.ವಿ ಘಟಿಕೋತ್ಸವ ನಾಳೆ

ಪ್ರಜಾವಾಣಿ ವಾರ್ತೆ



ವಿ. ಬಾಲಸುಬ್ರಮಣಿಯನ್

ಯೋಗೇಂದ್ರ ಕುಮಾರ್

ಬೆಂಗಳೂರು: 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 59ನೇ ಘಟಿಕೋತ್ಸವವು ಮೇ 15ರಂದು ನಡೆಯಲಿದೆ. 2023–24ನೇ ಸಾಲಿನಲ್ಲಿ ಉತ್ತೀರ್ಣರಾದ 1,271 ವಿದ್ಯಾರ್ಥಿಗಳಿಗೆ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ವಿಷಯಗಳಲ್ಲಿ ಪದವಿ ಪ್ರದಾನ ಮಾಡಲಾಗುತ್ತದೆ' ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ ಮಾಹಿತಿ ನೀಡಿದರು.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '871 ವಿದ್ಯಾರ್ಥಿಗಳಿಗೆ ವಿವಿಧ ಸ್ನಾತಕ ಪದವಿ, 311 ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ 89 ವಿದ್ಯಾರ್ಥಿಗಳಿಗೆ ಪಿಎಚ್‌.ಡಿ ಪದವಿಗಳನ್ನು ನೀಡಲಾಗುತ್ತದೆ' ಎಂದು ವಿವರಿಸಿದರು.

'ಬೆಳಿಗ್ಗೆ 11ಕ್ಕೆ ಜಿಕೆವಿಕೆ ಆವರಣದಲ್ಲಿರುವ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ವಹಿಸಲಿದ್ದಾರೆ. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಭಾಗವಹಿಸಲಿದ್ದು, ಇಫ್ಕೊ ವ್ಯವಸ್ಥಾಪಕ ನಿರ್ದೇಶಕ ಯು.ಎಸ್. ಅವಸ್ಥಿ ಅವರು ಘಟಿಕೋತ್ಸವದ ಪ್ರಧಾನ ಭಾಷಣ ಮಾಡಲಿದ್ದಾರೆ' ಎಂದು ತಿಳಿಸಿದರು.

'ಪಿಎಚ್‌.ಡಿಯಲ್ಲಿ ಒಟ್ಟು 30 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಗುವುದು. 13 ವಿದ್ಯಾರ್ಥಿನಿಯರು ಹಾಗೂ 3 ವಿದ್ಯಾರ್ಥಿಗಳು ಕೃಷಿ ವಿಶ್ವವಿದ್ಯಾಲಯ ನೀಡುವ 14 ಚಿನ್ನದ ಪದಕಗಳು, 10 ದಾನಿಗಳ ಚಿನ್ನದ ಪದಕಗಳು, 5 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣಪತ್ರಗಳನ್ನು ಹಾಗೂ ಒಂದು ಆವರಣ ಚಿನ್ನದ ಪದಕವನ್ನು ಹಂಚಿಕೊಂಡಿದ್ದಾರೆ' ಎಂದರು.

'ಸ್ನಾತಕೋತ್ತರ ಪದವಿಯಲ್ಲಿ 62 ಹಾಗೂ 'ಸ್ನಾತಕ ಪದವಿಯಲ್ಲಿ 58 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಗುವುದು' ಎಂದು ಹೇಳಿದರು.

ಇಬ್ಬರಿಗೆ ಗೌರವ ಡಾಕ್ಟರೇಟ್: ನಿವೃತ್ತ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯನ್ ಹಾಗೂ ಇಫ್ಕೊ ಇ-ಬಜಾರ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಯೋಗೇಂದ್ರ ಕುಮಾರ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಲಾಗುತ್ತಿದೆ ಎಂದು ಎಸ್.ವಿ. ಸುರೇಶ ಮಾಹಿತಿ ನೀಡಿದರು.

ವಿದ್ಯಾರ್ಥಿನಿಯರಿಗೆ 123 ಚಿನ್ನದ ಪದಕಗಳು: 2023-24ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಒಟ್ಟು 63 ವಿದ್ಯಾರ್ಥಿಗಳಿಗೆ 150 ಚಿನ್ನದ ಪದಕಗಳು ಹಾಗೂ ಚಿನ್ನದ ಪದಕ ಪ್ರಶಸ್ತಿ ಪ್ರಮಾಣಪತ್ರಗಳನ್ನು ಪ್ರದಾನ ಮಾಡಲಾಗುತ್ತದೆ. ಇದರಲ್ಲಿ 49 ವಿದ್ಯಾರ್ಥಿನಿಯರು ಒಟ್ಟು 123 ಚಿನ್ನದ ಪದಕ ಹಾಗೂ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಪಡೆದು ಕೊಂಡಿದ್ದಾರೆ. 14 ವಿದ್ಯಾರ್ಥಿಗಳು 27 ಚಿನ್ನದ ಪದಕಗಳು ಮತ್ತು ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿದ್ದಾರೆ ಎಂದರು.

ಕುಲಸಚಿವ ಕೆ.ಸಿ. ನಾರಾಯಣಸ್ವಾಮಿ, ವಿಸ್ತರಣಾ ನಿರ್ದೇಶಕ ವೈ.ಎನ್. ಶಿವಲಿಂಗಯ್ಯ, ಸಹ ವಿಸ್ತರಣಾ ನಿರ್ದೇಶಕ ಕೆ.ಪಿ. ರಘುಪ್ರಸಾದ್ ಸುದ್ದಿಗೋಷ್ಠಿಯಲ್ಲಿದ್ದರು.

ಟಿ.ಎಲ್. ದೀಪ್ತಿಗೆ 13 ಚಿನ್ನದ ಪದಕಗಳು

ಟಿ.ಎಲ್. ದೀಪ್ತಿ

ಬಿಎಸ್‌ಸಿ (ಆನರ್ಸ್) ಕೃಷಿಯಲ್ಲಿ ಟಿ.ಎಲ್. ದೀಪ್ತಿ ಅವರು ಒಟ್ಟು 13 ಪದಕಗಳು ಹಾಗೂ 4 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿದ್ದಾರೆ. ಕೃಷಿ ವಿಶ್ವವಿದ್ಯಾಲಯದ 1 ಚಿನ್ನದ ಪದಕ, ದಾನಿಗಳ 12 ಚಿನ್ನದ ಪದಕ ಹಾಗೂ ದಾನಿಗಳ 3 ಚಿನ್ನದ ಪದಕಗಳ ಪ್ರಮಾಣ ಪತ್ರಗಳನ್ನು ಗಳಿಸಿದ್ದಾರೆ.

ನಗರದಲ್ಲಿ ಇಂದು

ವಾರ್ಷಿಕೋತ್ಸವ ಸಮಾರಂಭ: ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಅತಿಥಿಗಳು: ಎಂ.ಎಸ್. ನರಸಿಂಹಮೂರ್ತಿ, ವೂಡೇ ಪಿ. ಕೃಷ್ಣ, ಪವನ್ ಕುಮಾರ್ ಎಸ್., ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ, ಶೇಷಾದ್ರಿಪುರ, ಬೆಳಿಗ್ಗೆ 9.30

ಬಿ. ಚನ್ನಕೃಷ್ಣಪ್ಪ ಅವರಿಗೆ ನುಡಿನಮನ: ಅತಿಥಿಗಳು: ಸಿದ್ದರಾಮಯ್ಯ, ಎಚ್‌.ಸಿ. ಮಹದೇವಪ್ಪ, ಆಯೋಜನೆ: ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11.30

ಆರ್. ಗುಂಡೂರಾವ್ ವೃತ್ತದ ಅಭಿವೃದ್ಧಿ ಕಾಮಗಾರಿಯ ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶೋಭಾ ಕರಂದ್ಲಾಜೆ, ಪಿ.ಸಿ. ಮೋಹನ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಆಯೋಜನೆ: ಬಿಬಿಎಂಪಿ, ಸ್ಥಳ: ಶಾಂತಲ ಸಿಲ್ಕ್ಸ್ ಮುಂಭಾಗ, ಗಾಂಧಿನಗರ, ಸಂಜೆ 4

ಜಿ.ಎಸ್. ಸಿದ್ಧಲಿಂಗಯ್ಯ ಅವರಿಗೆ ನುಡಿನಮನ: ಭಾಗವಹಿಸುವವರು: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ಗೊ.ರು. ಚನ್ನಬಸಪ್ಪ, ಮಹೇಶ ಜೋಶಿ, ಕೆ.ವಿ. ನಾಗರಾಜಮೂರ್ತಿ, ಕೆ.ಎಸ್. ಸಿದ್ಧಲಿಂಗಪ್ಪ, ಮಂಡಗದ್ದೆ ಶ್ರೀನಿವಾಸಯ್ಯ, ಕೆ.ಇ. ರಾಧಾಕೃಷ್ಣ, ಆರ್. ಲಕ್ಷ್ಮೀನಾರಾಯಣ್, ಕಾ.ವೆಂ. ಶ್ರೀನಿವಾಸಮೂರ್ತಿ, ರುದ್ರೇಶ್ ಅದರಂಗಿ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಸಂಸ್ಥಾಪಕರ ದಿನ: ಅತಿಥಿಗಳು: ನಂದಕುಮಾರ್ ಜೈರಾಮ್, ಶಿಲ್ಪಾ ಮುಡ್ಬಿ, ಆಯೋಜನೆ: ಆರ್‌ಬಿಎಎನ್‌ಎಂಎಸ್, ಸ್ಥಳ: ಸಭಾ ಕಾಮರಾಜ ರಸ್ತೆ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ- nagaradalli_indu@prajavani.co.in

---

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: ECN-TRD-02-2025
ದಿನಾಂಕ: 06.05.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು–ಧರ್ಮಾವರಂ (2x25ಕೆವಿ ಉನ್ನತೀಕರಣ), ಬೆಂಗಳೂರು–ಜೋಲಾರಪೇಟೆ (2x25 ಕೆವಿ ಉನ್ನತೀಕರಣ), ಬಳ್ಳಾರಿ–ಚಿಕ್ಕಜಾಜೂರು (ಡಿಎಲ್), ಹೊಸಪೇಟೆ–ಬಳ್ಳಾರಿ (ಕ್ಯೂಎಲ್) ಮತ್ತು ಸ್ವಾಮಿಹಳ್ಳಿ–ರಾಯದುರ್ಗ ಹೊಸ ಲೈನಿನ ವಿದ್ಯುದೀಕರಣದ ಸಮೀಕ್ಷೆ.	ರೂ. 1,07,90,361.92

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **28.05.2025, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಿರಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಟ್ರ್ಯಾಕ್ಷನ್ ವಿನಿಯೋಗ (ನಿರ್ಮಾಣ)/ಬೆಂಗಳೂರು ದಂಡು
PUB/104/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿ

South Western Railway - SWR | SWRRLY | SWRRLY

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ. ಲೀಲಾವತಿ
ಪರಪ್ಪನ ಅಗ್ರಹಾರ, ಬೆಂಗಳೂರು.

ಇವರು ದಿ: 13.05.2025 ನೇ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿ. 14.05.2025ರಂದು ಪರಪ್ಪನ ಅಗ್ರಹಾರ ಗ್ರಾಮದಲ್ಲಿ ಮಧ್ಯಾಹ್ನ 1 ಗಂಟೆಗೆ ನೇರವೇರಿಸಲಾಗುವುದು

ಇಂತಿ ದುಃಖತಪ್ತರು:
ನರಸಿಂಹಪ್ಪ (ಪತಿ) ಮತ್ತು
ದಿ. ಯರ್ರಪ್ಪನವರ ಕುಟುಂಬದವರು
9341943661 / 9341227222

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ–2, (ಬಿಎಂಐಸಿಪಿ),
ನಂ. 14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ,
1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560001.

ಸಂ: ಕೆಐಎಡಿಬಿ/ಎಲ್‌ಎಕ್ಯೂ/418/2025–26 ದಿನಾಂಕ: 07.05.2025

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ, ಹುಲಿಕುಂಟೆ, ದೊಡ್ಡಮಂಕನಾಳ ಮತ್ತು ಕಾಡತಿಪ್ಪನಹಳ್ಳಿ ಗ್ರಾಮಗಳಲ್ಲಿ ಒಟ್ಟು 1012–29.08 ಎಕರೆ/ಗುಂಟೆ ವಿಸ್ತೀರ್ಣದ ಜಮೀನನ್ನು ಕೆಐಎಡಿ ಕಾಯ್ದೆ 1966 ಕಲಂ 28(4)ರಂತೆ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 29 ಎಸ್‌ಪಿಕ್ಯೂ 2024 ದಿನಾಂಕ 18.03.2025 ರಾಜ್ಯಪತ್ರ ಪ್ರಕಟಿತ ದಿನಾಂಕ 20.03.2025 ರನ್ವಯ ಕೈಗಾರಿಕಾ ಪ್ರದೇಶದ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಈ ಜಮೀನುಗಳಿಗೆ ಕೆಐಎಡಿ ಕಾಯ್ದೆ ಕಲಂ 29(2)ರನ್ವಯ ಭೂಪರಿಹಾರ ನಿಗದಿಪಡಿಸಲು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ **ದಿನಾಂಕ 16.05.2025 ರಂದು ಬೆಳಿಗ್ಗೆ 11.00 ಘಂಟೆಗೆ** ಈ ಕೆಳಕಂಡ ವಿಳಾಸದಲ್ಲಿ ಭೂದರ ಸಲಹಾ ಸಮಿತಿ ಸಭೆಯನ್ನು ಕರೆಯಲಾಗಿದೆ.

"ಶ್ರೀ ಅಂಜನಾದ್ರಿ ಭವನ" (ರಾಜ ಮಹಲ್)
ಚಿಕ್ಕಬೆಳವಂಗಲ, ದೊಡ್ಡಬಳ್ಳಾಪುರ–ದಾಬಸ್‌ಪೇಟೆ ಮುಖ್ಯರಸ್ತೆ,
ರಾ.ಹೆ–207, ದೊಡ್ಡಬಳ್ಳಾಪುರ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ–561204

ಆದುದರಿಂದ **ದಿನಾಂಕ: 16.05.2025 ರಂದು** ನಡೆಯುವ ಭೂದರ ಸಲಹಾ ಸಮಿತಿ ಸಭೆಗೆ ಕಡ್ಡಾಯವಾಗಿ ಅಧಿಸೂಚಿತ ಖಾತೆದಾರರು ಮಾತ್ರ ಹಾಜರಾಗಲು ತಿಳಿಸಿದೆ.

ಸಹಿ/–ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ(ಬಿಎಂಐಸಿಪಿ),
ನೃಪತುಂಗ ರಸ್ತೆ, ಬೆಂಗಳೂರು.

ಕೇಂದ್ರಿಯ ಹಿಂದಿ ನಿರ್ದೇಶನಾಲಯ
ಶಿಕ್ಷಣ ಸಚಿವಾಲಯ
ಸತ್ಯಮೇವ ಜಯತೇ

ಪ್ರವೇಶ ಪ್ರಕಟಣೆ: 2025–26

ದೂರ ಶಿಕ್ಷಣ ಮೂಲಕ ಹಿಂದಿ ಕಲಿಯಿರಿ
ಹಿಂದಿ ದೂರ ಶಿಕ್ಷಣ ಕೋರ್ಸ್‌ಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಶುಲ್ಕ: ಆನ್‌ಲೈನ್ ಡಿಜಿಟಲ್ ಮೋಡ್/ಐಪಿಒ/ಬ್ಯಾಂಕ್ ಡ್ರಾಫ್ಟ್ ಮಾತ್ರ.

ಕೋರ್ಸ್	ಶುಲ್ಕ	
	ಭಾರತೀಯ ರೂಪಾಯಿಗಳಲ್ಲಿ	ವಿದೇಶಿ ರೂಪಾಯಿಗಳಲ್ಲಿ
ಸರ್ಟಿಫಿಕೇಟ್/ಡಿಪ್ಲೋಮ	ರೂ. 50/–	$50 ಅಥವಾ ತತ್ಸಮಾನ
ಅಡ್ವಾನ್ಸ್ ಡಿಪ್ಲೋಮ	ರೂ. 200/–	$200 ಅಥವಾ ತತ್ಸಮಾನ

- ನಿರ್ದೇಶಕರು, ಸೆಂಟ್ರಲ್ ಹಿಂದಿ ಡೈರೆಕ್ಟೊರೇಟ್ ರವರ ಹೆಸರಿಗೆ ಶುಲ್ಕ ಪಾವತಿಸತಕ್ಕದ್ದು.
- ಅರ್ಜಿ ಸಂಸ್ಕರಣೆ: ವಿಸ್ತೃತ ವಿವರಣಾ ಕೈಪಿಡಿಗಾಗಿ, ದಯವಿಟ್ಟು **www.chd.education.gov.in** ವೆಬ್‌ಸೈಟ್‌ಗೆ ಲಾಗಿನ್ ಆಗಿರಿ.
- ವಿಚಾರಣೆಗಳಿಗಾಗಿ ಅಥವಾ ಹೆಚ್ಚಿನ ಮಾಹಿತಿಗಾಗಿ **ccchdadmission@gmail.com** ವಿಳಾಸಕ್ಕೆ ಇಮೇಲ್ ಬರೆಯಿರಿ.
- **ಅರ್ಜಿಗೆ ಕೊನೆಯ ದಿನಾಂಕ 31/07/2025**

CBC-21252/11/0001/2526

ಭಾರತ ಸರಕಾರ
ವಿತ್ತ ಸಚಿವಾಲಯ, ಹಣಕಾಸು ಸೇವೆಗಳ ವಿಭಾಗ
ಸಾಲ ವಸೂಲಾತಿ ನ್ಯಾಯಾಧಿಕರಣ–1, ಕರ್ನಾಟಕ , ಬೆಂಗಳೂರು
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು - 560 001.

ಫಾರಂ ನಂ. 14 (ರೆಗ್ಯುಲೇಷನ್ 33(2))

ಡಿಮ್ಯಾಂಡ್ ನೋಟೀಸು

ರಿಕವರಿ ಆಫ್ ಡೆಟ್ಸ್ ಅಂಡ್ ಬ್ಯಾಂಕರಪ್ಸಿ ಆಕ್ಟ್ 1993ರ ಸೆಕ್ಷನ್ 25 ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲಿನ ನಿಯಮ 2ರ ಅನ್ವಯ ನೋಟೀಸು.

ಆರ್ ಸಿ ನಂ. 84/2024 ಒ.ಎ. ನಂ.2120/2015
ಕರ್ನಾಟಕ ಬ್ಯಾಂಕ್ ಲಿಮಿಟೆಡ್ ವಿರುದ್ಧ ಶ್ರೀಮತಿ ಶೋಭಾರಾಣಿ

ಇವರ ವಿಷಯದಲ್ಲಿ : (ಸಿಹೆಚ್ 1), **ಕರ್ನಾಟಕ ಬ್ಯಾಂಕ್ ಲಿ.**, ಯಲಹಂಕ ನ್ಯೂ ಟೌನ್ ಶಾಖೆ, ಬೆಂಗಳೂರು. **... ಅರ್ಜಿದಾರ ಬ್ಯಾಂಕ್/ಸರ್ಟಿಫಿಕೇಟ್ ಹೋಲ್ಡರ್**

ವಿರುದ್ಧ

(ಸಿಡಿ1) : **ಶ್ರೀಮತಿ ಶೋಭಾರಾಣಿ** W/o. ಶ್ರೀ ಮಹದೇವ ಕುಮಾರ್ ಸಿ., ಮಾಲೀಕರು : ಮೆ. ಮಂದಾರ ಎಂಟರ್‌ಪ್ರೈಸಸ್, ಆಂಜನೇಯ ದೇವಸ್ಥಾನದ ಹತ್ತಿರ, ಚಿಕ್ಕಬೊಮ್ಮಸಂದ್ರ, ಜಿಕೆವಿಕೆ ಅಂಚೆ, ಯಲಹಂಕ, ಬೆಂಗಳೂರು – 560 065.

ಮತ್ತೊಂದು ವಿಳಾಸ : **ಶ್ರೀಮತಿ ಶೋಭಾರಾಣಿ** W/o. ಶ್ರೀ ಮಹದೇವ ಕುಮಾರ್ ಸಿ., ಮಾಲೀಕರು : ಮೆ. ಮಂದಾರ ಎಂಟರ್‌ಪ್ರೈಸಸ್, ಕಚೇರಿ : ನಂ. 17, ಸಂಜೀವಪ್ಪ ರಸ್ತೆ, 2ನೇ ಮುಖ್ಯ ರಸ್ತೆ, ಚಿಕ್ಕಬೊಮ್ಮಸಂದ್ರ, ಜಿಕೆವಿಕೆ ಅಂಚೆ, ಯಲಹಂಕ, ಬೆಂಗಳೂರು – 560 065.

...... **ಪ್ರತಿವಾದಿಗಳು / ಸರ್ಟಿಫಿಕೇಟ್ ಹೋಲ್ಡರ್**

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕಣ, ಬೆಂಗಳೂರು (ಡಿಆರ್‌ಟಿ–1) ಇವರು ಒ.ಎ. ನಂ. 2120/2015 ರಲ್ಲಿ ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ ರೂ. **1125896.50** (ರೂಪಾಯಿ ಹನ್ನೊಂದು ಲಕ್ಷ ಇಪ್ಪತ್ತೈದು ಸಾವಿರ ಎಂಟು ನೂರ ತೊಂಬತ್ತಾರು ಮತ್ತು ಪೈಸೆ ಐವತ್ತು ಮಾತ್ರ) ಜೊತೆಗೆ ವಾರ್ಷಿಕ ಶೇ.12.25%ಬಡ್ಡಿ ಮತ್ತು ದಿನಾಂಕ 09.11.2015ರಿಂದ ಪೂರ್ತಿ ಪಾವತಿಯ ವರೆಗಿನ ಮಾಸಿಕ ಚಕ್ರಬಡ್ಡಿ ಪಾವತಿಸಬೇಕಿದೆ. ಹಾಗೂ ವೆಚ್ಚ **ರೂ.14760/-** (ರೂಪಾಯಿ ಹದಿನಾಲ್ಕು ಸಾವಿರದ ಏಳು ನೂರ ಅರವತ್ತು ಮಾತ್ರ) ನಿಮ್ಮಿಂದ (ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ/ಪೂರ್ತಿಯಾಗಿ/ ಮಿತವಾಗಿ) ಬಾಕಿ ಇರುತ್ತದೆ.

ಸಿಡಿ ಹೆಸರು	ಬಡ್ಡಿ ವಿಧ/ ರೀತಿ	ಬಡ್ಡಿ ದರ	ಅನ್ವಯಿಸುವ ದಿನಾಂಕ	ಆದೇಶದ ದಿನಾಂಕ	ಬಾಕಿಯ ವಿಧ	ಆರ್‌ಸಿ ಮೊತ್ತ ರೂ.
(ಸಿಡಿ1) : ಶ್ರೀಮತಿ ಶೋಭಾರಾಣಿ	ಮಾಸಿಕ ಚಕ್ರಬಡ್ಡಿ	12.25% p.a.	09.11.2015	24.04.2023	ಪೂರ್ತಿಯಾಗಿ	1125896.50

(2) ನೀವು ಸದರಿ ಮೊತ್ತವನ್ನು ಈ ನೋಟೀಸನ್ನು ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ರಿಕವರಿ ಆಫ್ ಡೆಟ್ಸ್ ಡ್ಯೂ ಬ್ಯಾಂಕ್ಸ್ ಅಂಡ್ ಫೈನಾನ್ಷಿಯಲ್ ಇನಿಸ್ಟಿಟ್ಯೂಷನ್ಸ್ ಆಕ್ಟ್, 1993ರ ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. (3) ನಿಮಗೆ ಈ ಮೂಲಕ ಸೂಚಿಸುವುದೇನೆಂದರೆ ಮುಂದಿನ ವಿಚಾರಣೆಯ ದಿನಾಂಕದಂದು ನಿಮ್ಮ ಸ್ವತ್ತುಗಳ ವಿವರಗಳನ್ನು ಅಫಿಡವಿಟ್ ಮೂಲಕ ಘೋಷಿಸಬೇಕೆಂದು ಆದೇಶ ನೀಡಲಾಗಿದೆ. (4) ನಿಮಗೆ ಈ ಮೂಲಕ ಆದೇಶಿಸುವುದೇನೆಂದರೆ ಮುಂದಿನ ಪ್ರಕ್ರಿಯೆಗಳಿಗಾಗಿ ಈ ನೋಟೀಸನ್ನು ನೀಡಿದ 15 ದಿನಗಳ ಒಳಗೆ ಕೆಳಸಹಿದಾರರ ಮುಂದೆ ಹಾಜರಾಗಬೇಕು. (5)ಮೇಲೆ ಹೇಳಲ್ಪಟ್ಟ ಮೊತ್ತವಲ್ಲದೆ ನೀವು ಹೆಚ್ಚುವರಿಯಾಗಿ ಮುಂದಿನದಕ್ಕೂ ಬಾಧ್ಯರಾಗುತ್ತೀರಿ :(ಎ)ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನು ಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ. (ಬಿ) ಈ ನೋಟೀಸನ್ನು ಜಾರಿ ಮಾಡಲು ಮತ್ತು ವಾರಂಟ್‌ಗಳಿಗೆ ಮತ್ತು ಇತರ ಪ್ರಕ್ರಿಯೆಗಳಿಗೆ ಮತ್ತು ಇತರ ಎಲ್ಲಾ ನಡಾವಳಿಗಳಿಗೆ ಸಾಲವನ್ನು ವಸೂಲಿ ಮಾಡುವಲ್ಲಿ ತಗಲುವ ಎಲ್ಲ ಖರ್ಚು ಮತ್ತು ವೆಚ್ಚಗಳು. ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **25.04.2024 ರಂದು** ಕೊಡಲ್ಪಟ್ಟಿದೆ.

ಸಹಿ/- (ಪಿ. ಹೆಚ್. ಹೇಮಂತ ಕುಮಾರ್ ಐಆರ್‌ಎಸ್) ವಸೂಲಾತಿ ಅಧಿಕಾರಿ -2
ಸಾಲ ವಸೂಲಾತಿ ನ್ಯಾಯಾಧಿಕರಣ, (ಡಿಆರ್‌ಟಿ–1) ಬೆಂಗಳೂರು

ಭಾರತ ಸರ್ಕಾರ
ಬುಡಕಟ್ಟು ವ್ಯವಹಾರಗಳ ಸಚಿವಾಲಯ
ಶಿಷ್ಯವೇತನ ವಿಭಾಗ

ಆಯ್ಕೆ ವರ್ಷ 2025–26ನೇ ಸಾಲಿಗೆ ಎಸ್‌ಟಿ ಅಭ್ಯರ್ಥಿಗಳಿಗಾಗಿ ನ್ಯಾಷನಲ್ ಓವರ್‌ಸೀಸ್ ಸ್ಕಾಲರ್‌ಶಿಪ್ ಸ್ಕೀಮ್ (ಎನ್‌ಒಎಸ್)

ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯ ಇವರು, ಆಯ್ಕೆ ವರ್ಷ 2025–26ನೇ ಸಾಲಿನ ನ್ಯಾಷನಲ್ ಓವರ್‌ಸೀಸ್ ಸ್ಕಾಲರ್‌ಶಿಪ್ ಸ್ಕೀಮ್ (ಎನ್‌ಒಎಸ್) ಯೋಜನೆಗೆ ಎಸ್‌ಟಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಮಾಸ್ಟರ್ ಲೆವೆಲ್, ಪಿಹೆಚ್.ಡಿ. ಮತ್ತು ಪೋಸ್ಟ್ ಡಾಕ್ಟೋರಲ್ ರಿಸರ್ಚ್ ಕಾರ್ಯಕ್ರಮಗಳ ಅಡಿ ವಿದೇಶದಲ್ಲಿ ಉನ್ನತ ಅಧ್ಯಯನ ಕೈಗೊಳ್ಳಲು ಆಯ್ಕೆಗೊಳ್ಳುವ ವಿದ್ಯಾರ್ಥಿಗಳಿಗೆ ಈ ಸ್ಕಾಲರ್‌ಶಿಪ್ ನೀಡಲಾಗುತ್ತದೆ.

ಸ್ಕಾಲರ್‌ಶಿಪ್ ಸ್ಲಾಟ್‌ಗಳ ಸಂಖ್ಯೆ: 20

ಆಸಕ್ತಿಯುಳ್ಳ ಅಭ್ಯರ್ಥಿಗಳು ಎನ್‌ಒಎಸ್ ಪೋರ್ಟಲ್ **https://overseas.tribal.gov.in/** ಮುಖಾಂತರ ಆನ್‌ಲೈನ್ ಅರ್ಜಿ ಸಲ್ಲಿಸಬಹುದು. ಸದರಿ ಪೋರ್ಟಲ್ ಅರ್ಜಿ ಸಲ್ಲಿಕೆಗಾಗಿ 15 ಮೇ 2025 ರಿಂದ 30 ಜೂನ್ 2025 (ಸಂಜೆ 5:30 ಗಂಟೆ) ರವರೆಗೆ ತೆರೆದಿರುತ್ತದೆ.

ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಸಚಿವಾಲಯದ **https://overseas.tribal.gov.in/** ವೆಬ್‌ಸೈಟ್ ಪರಿಶೀಲಿಸಬಹುದು.

CBC 43101/11/0007/2526

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್,
ದೊಡ್ಡಬಳ್ಳಾಪುರ–561203. ದೂರವಾಣಿ: 080–29562046

ಸಂಖ್ಯೆ: DPA/TP/ಭೂಉನಿ/01/2025–26 ದಿನಾಂಕ: 13.05.2025

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3) ರ ತಿದ್ದುಪಡಿ ಕಾಯ್ದೆಯಂತೆ)

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 95 ಬಿಎಂಆರ್ 2016 ದಿನಾಂಕ: 30.11.2017 ರನ್ವಯ ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಬಿನುವನಹಳ್ಳಿ ಗ್ರಾಮವು "ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶ" ವ್ಯಾಪ್ತಿಗೆ ಒಳಪಟ್ಟಿದ್ದು, ಈ ಹಿಂದೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 157 ಬಿಎಂಆರ್ ದಿನಾಂಕ: 27.01.2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29.01.2009ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಬಿನುವನಹಳ್ಳಿ ಗ್ರಾಮದ ಸರ್ವೆ ನಂ. 62ರ ಪೈಕಿ 00–16 ಗುಂಟೆ ವಿಸ್ತೀರ್ಣದ ಪ್ರದೇಶವನ್ನು 'ಉದ್ಯಾನವನ ಉದ್ದೇಶಕ್ಕಾಗಿ' ಕಾಯ್ದಿರಿಸಲಾಗಿರುತ್ತದೆ. ಮಹಾಯೋಜನೆ ಅನುಮೋದನೆಗೊಂಡು ಐದು ವರ್ಷಗಳ ಅವಧಿಯು ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(2) ರನ್ವಯ ಉದ್ಯಾನವನ ಉದ್ದೇಶಕ್ಕಾಗಿ ಕಾಯ್ದಿರಿಸಲಾದ ಭೂ ಉಪಯೋಗ ರದ್ದಾಗುತ್ತದೆ. ಈ ಹಿನ್ನೆಲೆಯಲ್ಲಿ ಇದೇ ಕಾಯ್ದೆ ಕಲಂ 69(3) ರನ್ವಯ 'ವಸತಿ' ಭೂ ಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(4)ರ ಅಡಿಯಲ್ಲಿ 'ವಸತಿ' ಭೂ ಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿವಸಗಳೊಳಗಾಗಿ** ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಆರ್. ಮಹೇಶ್‌ಕುಮಾರ್ ಬಿನ್ ಸಿ. ರಾಮಯ್ಯ ರವರ ಪರವಾಗಿ ನೋಂದಾಯಿತ ಜಿಪಿಎದಾರರಾದ ಶ್ರೀ ಬಿ.ಕೆ. ಆನಂದ ಬಿನ್ ಕೃಷ್ಣಪ್ಪ, ಶ್ರೀ ಅರುಣ್ ಕುಮಾರ್ ಬಿ.ಎಸ್. ಬಿನ್ ಶಿವರಾಮ್ ಬಿ.ಎಂ. ಶ್ರೀ ಬಿ.ಎಸ್. ವಿನೋದ್‌ಕುಮಾರ್ ಬಿನ್ ಸೋಮಶೇಖರ್	ದೊಡ್ಡಬಳ್ಳಾಪುರ	ಕಸಬಾ	ಬಿನುವನಹಳ್ಳಿ	62ರ ಪೈಕಿ	00–16	ಉದ್ಯಾನವನ	ವಸತಿ

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–297/2024–25/603/2025–26 ದಿನಾಂಕ: 12.05.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ರ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಸತಿ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಕೆ.ಪಾಪಣ್ಣ ಮತ್ತು ಇತರರು	ಆನೇಕಲ್	ಸರ್ಜಾಪುರ	ಹಾರೋಹಳ್ಳಿ	71/2	1–39	ವ್ಯವಸಾಯ ವಲಯ	ವಸತಿ

ಷರಾ: ಅರ್ಜಿದಾರರು ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಸರ್ಕಾರಕ್ಕೆ ತೆರಿಗೆಗಳು ಉತ್ಪತ್ತಿಯಾಗುತ್ತದೆ. ಈ ಜಮೀನಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಈಗಾಗಲೇ ಮಿಶ್ರ ಅಭಿವೃದ್ಧಿಗಳು ಬಂದಿರುವುದರಿಂ ವಾಸದ ಬೆಳವಣಿಗೆಗಳನ್ನು ಕೈಗೊಂಡಿದ್ದಲ್ಲಿ ಯೋಜಿತ ಬೆಳವಣಿಗೆಗೆ ಬೇಕಾಗುವ ಮೂಲ ಸೌಕರ್ಯಗಳು ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ನೈಋತ್ಯ ರೈಲ್ವೆ

ಬೆಂಗಳೂರು ವಿಭಾಗದಿಂದ ಪಾರ್ಸೆಲ್ ಸ್ಥಳ, ಪಾರ್ಕಿಂಗ್ & ಜಾಹೀರಾತು ಮತ್ತು ವಿವಿಧ ಗುತ್ತಿಗೆಗಳಿಗಾಗಿ ಇ–ಹರಾಜು

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ದಿನಾಂಕಗಳಂದು ಇ–ಹರಾಜಿಗಾಗಿ ಬಿಡ್ಡರ್‌ಗಳನ್ನು ಆಹ್ವಾನಿಸಿದ್ದಾರೆ:

1. ಕೆಟರಿಂಗ್ & ಎಂಪಿಎಸ್ ಸ್ಟಾಲ್‌ಗಳು: **21.05.2025, 22.05.2025 & 23.05.2025**
2. ಪಾರ್ಕಿಂಗ್ & ಪಾವತಿ ಮತ್ತು ಬಳಕೆ: **14.05.2025, 15.05.2025, 21.05.2025, 22.05.2025, 23.05.2025 & 26.05.2025**
3. ಪಾರ್ಸೆಲ್‌ಗಳು: **22.05.2025, 23.05.2025, 26.05.2025 & 27.05.2025.**
5. ಜಾಹೀರಾತು, ಎಟಿಎಂ & ವಿವಿಧ: **21.05.2025, 22.05.2025, 26.05.2025, 27.05.2025, 28.05.2025, 29.05.2025 & 30.05.2025**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಿರಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು
PUB/107/AAF/PRB/SWR/2025-26 ಬೆಂಗಳೂರು

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿ

South Western Railway - SWR | SWRRLY | SWRRLY

ಸಾರ್ವಜನಿಕ ಸೂಚನೆ

ಮೆ. ಜಗನ್ಮಯಿ ಹೈ ರೈಸ್ ಪ್ರೈವೇಟ್ ಲಿಮಿಟೆಡ್, ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಸ್ಥಾಪಿಸಲ್ಪಟ್ಟಿದೆ) ಸರ್ವೇ ನಂ. 71/1, 71/2, 71/3, 72/1 ಮತ್ತು 72/2, ಚಿಕ್ಕಗುಬ್ಬಿ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಬೆಂಗಳೂರು ಗ್ರಾಮೀಣ ಜಿಲ್ಲೆ ಎಂ/ಎಸ್. ಜಗನ್ಮಯಿ ಹೈ ರೈಸ್ ಪ್ರೈವೇಟ್ ಲಿಮಿಟೆಡ್ ರವರ ಉದ್ದೇಶಿತ ಗ್ರೀನ್ ವುಡ್ ಪ್ರಾಥಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ಪರಿಸರ ಅನುಮತಿಯನ್ನು ನೀಡಿದ್ದು ಫೈಲ್ ನಂಬರ್ ಎಸ್‌ಇಐಎಎ 54 ಸಿ ಓ ಏನ್ 2025, ಹಾಗೂ ಅನುಮತಿ ಪತ್ರದ ಪ್ರತಿಯನ್ನು ಪರಿವೇಶ್ ಪೋರ್ಟಲ್-ಎಸ್‌ಇಐಎಎ ಕರ್ನಾಟಕ ವೆಬ್ಸೈಟ್ **http://parivesh.nic.in** ನಲ್ಲಿ ಕಾಣಬಹುದು.

ಸಾರ್ವಜನಿಕ ಸೂಚನೆ

ಮೆ. ಸತ್ವ ರೆಸಿ ಪ್ರೈವೇಟ್ ಲಿಮಿಟೆಡ್, ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಸ್ಥಾಪಿಸಲ್ಪಟ್ಟಿದೆ) ಸರ್ವೇ ನಂ. 90(P1), 112, 113, 123, 128, 130 ಮತ್ತು 161, ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮೀಣ ಜಿಲ್ಲೆ ಎಂ/ಎಸ್. ಸತ್ವ ರೆಸಿ ಪ್ರೈವೇಟ್ ಲಿಮಿಟೆಡ್ ರವರ ಉದ್ದೇಶಿತ ವಸತಿ ಕಟ್ಟಡ ನಿರ್ಮಾಣಕ್ಕಾಗಿ ಪರಿಸರ ಅನುಮತಿಯನ್ನು ನೀಡಿದ್ದು ಫೈಲ್ ನಂಬರ್ ಎಸ್‌ಇಐಎಎ 136 ಸಿ ಓ ಏನ್ 2024, ಹಾಗೂ ಅನುಮತಿ ಪತ್ರದ ಪ್ರತಿಯನ್ನು ಪರಿವೇಶ್ ಪೋರ್ಟಲ್-ಎಸ್‌ಇಐಎಎ ಕರ್ನಾಟಕ ವೆಬ್ಸೈಟ್ **http://parivesh.nic.in** ನಲ್ಲಿ ಕಾಣಬಹುದು.

ಸಾರ್ವಜನಿಕ ಸೂಚನೆ

ಮೆ. ಸತ್ವ ರೆಸಿ ಪ್ರೈವೇಟ್ ಲಿಮಿಟೆಡ್, ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಸ್ಥಾಪಿಸಲ್ಪಟ್ಟಿದೆ) ಸರ್ವೇ ನಂ. 90(P), 73(P2), 133 ಮತ್ತು 166, ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮೀಣ ಜಿಲ್ಲೆ ಎಂ/ಎಸ್. ಸತ್ವ ರೆಸಿ ಪ್ರೈವೇಟ್ ಲಿಮಿಟೆಡ್ ರವರ ಉದ್ದೇಶಿತ ವಸತಿ ಕಟ್ಟಡ ನಿರ್ಮಾಣಕ್ಕಾಗಿ ಪರಿಸರ ಅನುಮತಿಯನ್ನು ನೀಡಿದ್ದು ಫೈಲ್ ನಂಬರ್ ಎಸ್‌ಇಐಎಎ 26 ಸಿ ಓ ಏನ್ 2025 ಹಾಗೂ ಅನುಮತಿ ಪತ್ರದ ಪ್ರತಿಯನ್ನು ಪರಿವೇಶ್ ಪೋರ್ಟಲ್-ಎಸ್‌ಇಐಎಎ ಕರ್ನಾಟಕ ವೆಬ್ಸೈಟ್ **http://parivesh.nic.in** ನಲ್ಲಿ ಕಾಣಬಹುದು.

ವೈಯಾಲಿಕಾವಲ್ ಠಾಣೆಯ ಪೊಲೀಸರ ಕಾರ್ಯಾಚರಣೆ • ನಗದು, ದ್ವಿಚಕ್ರ ವಾಹನ ಜಪ್ತಿ

₹1.51 ಕೋಟಿ ದೋಚಿ ಪರಾರಿಯಾಗಿದ್ದ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಮಾಲೀಕನ ಮನೆಯಲ್ಲಿ ₹1.51 ಕೋಟಿ ನಗದು ಕಳ್ಳತನ ಮಾಡಿ ಪರಾರಿ ಆಗಿದ್ದ ಆರೋಪಿಯನ್ನು ವೈಯಾಲಿಕಾವಲ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಗುಂಟೂರಿನ ರಾಜೇಶ್(45) ಬಂಧಿತ ಆರೋಪಿ. ವೈಯಾಲಿಕಾವಲ್ ಟಿಟಿಡಿ ದೇವಸ್ಥಾನದ ಬಳಿಯ ಮನೆಯಲ್ಲಿ ನೆಲಸಿದ್ದ. ಆರೋಪಿಯಿಂದ ನಗದು ಹಾಗೂ ದ್ವಿಚಕ್ರ ವಾಹನವನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕೋದಂಡರಾಯಪುರದಲ್ಲಿ ಲೆಕ್ಕ-ಪರಿಶೋಧನಾ ಕಚೇರಿ ಹೊಂದಿರುವ ತೋಟದ ಪ್ರಸಾದ್ ಅವರ ಬಳಿ ಆರೋಪಿ ರಾಜೇಶ್ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ರಾಜೇಶ್

ಗ್ರಾಹಕರ ತೆರಿಗೆ ಹಣವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡುವ ಉದ್ದೇಶದಿಂದ ಕಾರಿನಲ್ಲಿ ಇಡುವಂತೆ ಕಾರು ಚಾಲಕನಿಗೆ ತೋಟದ ಪ್ರಸಾದ್ ಅವರು ಹೇಳಿದ್ದರು. ಆದರೆ, ಆರೋಪಿ ಕಾರಿನಲ್ಲಿ ಇಡದೇ ಬೈಕ್‌ನಲ್ಲಿ ಹಣ ಇಟ್ಟುಕೊಂಡು ಪರಾರಿಯಾಗಿದ್ದ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

'ಕಳವು ಮಾಡಿದ್ದ ಹಣವನ್ನು ಆರೋಪಿ ತನ್ನ ಮನೆಯಲ್ಲಿ ಇಟ್ಟುಕೊಂಡಿದ್ದ. ಶೋಧ ನಡೆಸಿದಾಗ ಹಣ ಪತ್ತೆ ಆಯಿತು' ಎಂದು ಅವರು ಮಾಹಿತಿ ನೀಡಿದರು.

ಮನೆ, ಚಿನ್ನಾಭರಣ ಅಂಗಡಿಯಲ್ಲಿ ಕಳವು: ಇಬ್ಬರ ಬಂಧನ

ಬೆಂಗಳೂರು: ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡುತ್ತಿದ್ದ ಇಬ್ಬರನ್ನು ಎಚ್‌ಎಸ್‌ಆರ್ ಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಚಿತ್ರದುರ್ಗದ ನಿವಾಸಿ ಶಾಲಿನಿ (30) ಎಂಬಾಕೆಯನ್ನು ಬಂಧಿಸಿ ₹10 ಲಕ್ಷ ಮೌಲ್ಯದ 113 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆದುಕೊಂಡಿದ್ದಾರೆ. ಎಚ್‌ಎಸ್‌ಆರ್ ಲೇಔಟ್‌ನ ನಿವಾಸಿ, ಐ.ಟಿ ಉದ್ಯೋಗಿ ಅಕ್ಷಯ್ ಕೃಷ್ಣ ಮನೆಯಲ್ಲಿ ಕಳ್ಳತನ ನಡೆದಿತ್ತು.

ಶಾಲಿನಿ, ಪತಿ ಮತ್ತು ಮಕ್ಕಳ ಜತೆ ಸೋಮಸಂದ್ರದಲ್ಲಿ ವಾಸವಾಗಿದ್ದಳು. ಪತಿ ಆಟೊ ಚಾಲಕ. ಶಾಲಿನಿ ಕೇರ್ ಟೇಕರ್ ಆಗಿ ಕೆಲಸ ಮಾಡುತ್ತಿದ್ದಳು. ದೂರುದಾರ ಮನೆಯಲ್ಲಿದ್ದ ವೃದ್ಧೆಯೊಬ್ಬರನ್ನು ಶಾಲಿನಿ ಮೂರು ವರ್ಷಗಳಿಂದ ನೋಡಿಕೊಳ್ಳುತ್ತಿದ್ದಳು. ಎಂದು ಪೊಲೀಸರು ಹೇಳಿದರು.

ಚಿನ್ನಾಭರಣ ಕಳ್ಳತನ ಕುರಿತು ಅಕ್ಷಯ್ ಕೃಷ್ಣ ದೂರು ನೀಡಿದ್ದರು. ಬಳಿಕ ತನಿಖೆ ನಡೆಸಿ ಶಾಲಿಯನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡಿದ್ದಾಳೆ ಎಂದು ಮೂಲಗಳು ಹೇಳಿವೆ.

ಮತ್ತೊಂದು ಪ್ರಕರಣ: ಕೆಲಸ ಮಾಡುತ್ತಿದ್ದ ಚಿನ್ನಾಭರಣ ಅಂಗಡಿಯಲ್ಲೇ ಕಳವು ಮಾಡಿದ್ದ ಆರೋಪಿ ಚಿತ್ರದುರ್ಗದ ನಿವಾಸಿ ಗೋಪಾಲ್ ನಾಯಕ್(30) ಎಂಬುವವರನ್ನು ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಈತನಿಂದ ₹3 ಲಕ್ಷ ಮೌಲ್ಯದ 3 ಕೆ.ಜಿ ಬೆಳ್ಳಿ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಜಪ್ತಿ ಮಾಡಿಕೊಂಡ ಬೆಳ್ಳಿ ಸಾಮಗ್ರಿ

ಆರೋಪಿ ಸುಮಾರು ಐದು ವರ್ಷಗಳಿಂದ ಠಾಣೆ ವ್ಯಾಪ್ತಿಯ ಚಿನ್ನಾಭರಣ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ಅಂಗಡಿಯ ಕೆಳ ಭಾಗದಲ್ಲಿ ಚಿನ್ನಾಭರಣ ಪಾಲಿಶ್ ಮಾಡುವ ಮಳಿಗೆ ಇದ್ದು, ಅಲ್ಲಿಗೆ ಆರೋಪಿಯೇ ಬೆಳ್ಳಿ ವಸ್ತುಗಳನ್ನು ಕೊಂಡೊಯ್ಯುತ್ತಿದ್ದ. ಈ ಮಧ್ಯೆ ಪಾಲಿಶ್ ಮಳಿಗೆ ಪಕ್ಕದಲ್ಲಿ ನಿಲುಗಡೆ ಮಾಡುತ್ತಿದ್ದ ಬೈಕ್‌ನಲ್ಲಿ ಬೆಳ್ಳಿ ಸಾಮಗ್ರಿ ಇಟ್ಟು, ಸಂಜೆ ಕೊಂಡೊಯ್ಯುತ್ತಿದ್ದ. ಇತ್ತೀಚೆಗೆ ಜ್ಯೂವೆಲ್ಲರಿ ಶಾಪ್‌ನಲ್ಲಿ ಲೆಕ್ಕ ಪರಿಶೋಧನೆ ಮಾಡುವಾಗ ಕಳವು ಆಗಿರುವುದು ಪತ್ತೆ ಆಗಿತ್ತು ಎಂದು ಪೊಲೀಸರು ತಿಳಿಸಿದರು.

ಪ್ರಧಾನಿ ವಿರುದ್ಧ ಹೇಳಿಕೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ಅವರ ಮನೆಯ ಮೇಲೆ ಮೊದಲು ಬಾಂಬ್ ದಾಳಿ ನಡೆಸಬೇಕು' ಎಂಬುದಾಗಿ ಹೇಳಿಕೆ ನೀಡಿ ಆ ವಿಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿದ್ದ ಹಾಕಿದ್ದ ಯುವಕನನ್ನು ಅಗ್ನೇಯ ವಿಭಾಗದ ಬಂಡೇಪಾಳ್ಯ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನವಾಜ್ ಬಂಧಿತ ಆರೋಪಿ.

ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಧೀಶರ ಎದುರು ಹಾಜರುಪಡಿಸಲಾಯಿತು. ನ್ಯಾಯಾಧೀಶರು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು.

ವಿಡಿಯೊದಲ್ಲಿ ಏನಿತ್ತು?: 'ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಯುದ್ಧ ನಡೆಯುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಮನೆಯ ಮೇಲೆ ಪಾಕಿಸ್ತಾನ ಇನ್ನೂ ಏಕೆ ಬಾಂಬ್ ಹಾಕಿಲ್ಲ? ಜನರೆಲ್ಲ ಸುಮ್ಮನೆ ನೆಮ್ಮದಿಯಿಂದ ಇರುವಾಗ ಈ ಪರಿಸ್ಥಿತಿ ಸೃಷ್ಟಿಸಿದ್ದು, ಮೋದಿ. ಮೊದಲು ನರೇಂದ್ರ ಮೋದಿ ಅವರ ಮನೆಯ ಮೇಲೆ ಬಾಂಬ್ ಹಾಕಬೇಕು' ಎಂದು ನವಾಜ್ ವಿಡಿಯೊದಲ್ಲಿ ಹೇಳಿದ್ದ.

ನವಾಜ್

ಆ ವಿಡಿಯೊವನ್ನು 'ಪಬ್ಲಿಕ್ ಸರ್ವೆಂಟ್' ಎಂಬ ಸಾಮಾಜಿಕ ಮಾಧ್ಯಮದ ಖಾತೆಯಲ್ಲಿ ಅಪ್‌ಲೋಡ್ ಮಾಡಿದ್ದ. ಬಂಡೇಪಾಳ್ಯ ಪೊಲೀಸ್ ಠಾಣೆಯ ಸಾಮಾಜಿಕ ಮಾಧ್ಯಮಗಳ ನಿಗಾ ವಿಭಾಗದ ಪೊಲೀಸರು ಆ ವಿಡಿಯೊ ಗಮನಿಸಿ ಯುವಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿದ್ದಾರೆ.

ಕಾರು ಸಮೇತ ಮಹಿಳೆ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಹಾಗೂ ಮೈಸೂರು ಸುತ್ತಾಡಲು ಪರಿಚಯಸ್ಥ ಚಾಲಕರೊಬ್ಬರನ್ನು ಸಂಪರ್ಕಿಸಿ, ಬಾಡಿಗೆಗಾಗಿ ಬುಕ್ ಮಾಡಿದ್ದ ಕಾರು ಸಮೇತ ಪರಾರಿಯಾಗಿರುವ ಮಹಿಳೆ ವಿರುದ್ಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಚ್‌ಎಂಟಿ ಲೇಔಟ್ ನಿವಾಸಿ ಅನಂತಕುಮಾರ್ ಅವರ ದೂರು ಆಧರಿಸಿ ಅಪರಿಚಿತ ಮಹಿಳೆ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಅನಂತ್ ಅವರು 15 ದಿನದ ಹಿಂದೆ ಬಾಡಿಗೆ ನಿಮಿತ್ತ ಕಾರವಾರಕ್ಕೆ ಹೋಗಿದ್ದಾಗ ಮಹಿಳೆ ಪರಿಚಯವಾಗಿದೆ. ಆಗ ಮೊಬೈಲ್ ನಂಬರ್ ಪಡೆದುಕೊಂಡಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿದೆ.

'ಮೇ 6ರ ರಾತ್ರಿ ವಾಟ್ಸ್‌ಆ್ಯಪ್ ಕರೆ ಮಾಡಿದ್ದ ಮಹಿಳೆ ಬೆಂಗಳೂರಿಗೆ ಬಂದಿರುವುದಾಗಿ ಚಾಲಕನಿಗೆ ಹೇಳಿದ್ದಳು. ತಾನು ಹುಬ್ಬಳ್ಳಿಯಲ್ಲಿದ್ದೆ. ಮಾರನೇ ದಿನ ಬೆಂಗಳೂರಿಗೆ ಬಂದಿರುವುದಾಗಿ ಚಾಲಕ ಆಕೆಗೆ ವಿಷಯ ಮುಟ್ಟಿಸಿದ. ತನಗಾಗಿ ಲಾಡ್ಜ್‌ನಲ್ಲಿ ರೂಮ್ ಬುಕ್ ಮಾಡಲು ಕೋರಿದ್ದು,ಅದರಂತೆ ಚಾಲಕ ರೂಮ್ ಬುಕ್ ಮಾಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಬುಕ್ ಮಾಡಿದ್ದ ರೂಮಿಗೆ ಇಬ್ಬರು ಬಂದರು. ಚಾಲಕನಿಗೆ ತಾನು ಬ್ಯೂಟಿ-ಪಾರ್ಲರ್‌ಗೆ ಹೋಗಬೇಕಿದೆ. ಹಾಗಾಗಿ ನೀವೂ ಸಿದ್ಧರಾಗಲು ಕೋರಿದ್ದಳು. ಚಾಲಕ ತನ್ನ ಮೊಬೈಲ್ ಫೋನ್ ಚಾರ್ಜ್ ಹಾಕಿ ಟೇಬಲ್ ಮೇಲೆ ಕಾರಿನ ಕೀ ಇಟ್ಟು ಶೌಚಗೃಹಕ್ಕೆ ಹೋಗಿದ್ದರು. ಆಗ ಮಹಿಳೆ ಶೌಚಗೃಹದ ಬಾಗಿಲಿನ ಚಿಲಕ ಹಾಕಿ ಕಾರಿನ ಸಮೇತ ಪರಾರಿಯಾಗಿದ್ದಾಳೆ' ಎಂದು ದೂರಲಾಗಿದೆ.

ಕಿಟಕಿ ಮೂಲಕ ಹೊರಗಿದ್ದವರ ನೆರವಿನಲ್ಲಿ ಚಿಲಕ ತೆಗೆಸಿ ಹೊರ ಬಂದು, ಪೊಲೀಸರಿಗೆ ದೂರು ನೀಡಿದ್ದಾರೆ.

ಸಾರ್ವಜನಿಕ ಅಧಿಸೂಚನೆ

ನಾರ್ಥ್ ಈಸ್ಟ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಹೆಸರು ಬದಲಾವಣೆಯ ಅಧಿಸೂಚನೆ

ಅಗತ್ಯವಿರುವ ನಿಯಂತ್ರಣಾತ್ಮಕ ಹಾಗೂ ಕಾನೂನುಮಟ್ಟದ ಅನುಮತಿಗಳ ಪ್ರಕಾರ, ಸಾರ್ವಜನಿಕರಿಗೆ, ಹೂಡಿಕೆದಾರರಿಗೆ ಮತ್ತು ಮೌಲ್ಯವಂತ ಗ್ರಾಹಕರಿಗೆ ತಿಳಿಸಲಾಗುತ್ತದೆ, ನಾರ್ಥ್ ಈಸ್ಟ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಹೆಸರು ಸ್ಲೈಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಎಂದು ಬದಲಾಗಿರುವುದು.

ದಯವಿಟ್ಟು ಗಮನಿಸಿ, ಇದು ಕೇವಲ ಹೆಸರಿನ ಬದಲಾವಣೆಯಷ್ಟೇ, ಬ್ಯಾಂಕನ ಯಾವುದೇ ಹಳೆಯ ಬದ್ಧತೆಗಳು, ಹೊಣೆಗಾರಿಕೆಗಳು ಅಥವಾ ಕಾರ್ಯಾಚರಣೆಗಳಿಗೆ ಇದರಿಂದ ಯಾವುದೇ ಪರಿಣಾಮವಿಲ್ಲ. ಎಲ್ಲಾ ವ್ಯಾಪಾರಿಕ ವ್ಯವಹಾರಗಳು, ಪತ್ರವ್ಯವಹಾರಗಳು ಮತ್ತು ದಾಖಲೆಗಳು ಇಂದಿನಿಂದ ಹೊಸ ಹೆಸರಿನಲ್ಲಿ ನಡೆಯುತ್ತವೆ.

ನಮ್ಮ ನೋಂದಾಯಿತ ಕಚೇರಿಯು ಈ ಕೆಳಗಿನ ಸ್ಥಳದಿಂದ ಕಾರ್ಯ ನಿರ್ವಹಿಸುವುದನ್ನು ಮುಂದುವರೆಸುತ್ತದೆ: 1ನೇ ಹಾಗೂ 3ನೇ ಮಹಡಿ (ಫ್ಲೋರ್), ಫಾರ್ಚ್ಯೂನ್ ಸೆಂಟ್ರಲ್, ಬಸಿಸ್ಥಪುರ, ಬೈ ಲೇನ್ 3, ಬೇಲ್ಟೋಲಾ, ಗುವಾಹಟಿ, ಅಸ್ಸಾಮ್ 781028. ನಮ್ಮ ಎಲ್ಲಾ ಗ್ರಾಹಕರು, ಪಾಲುದಾರರು, ಮತ್ತು ಸಾರ್ವಜನಿಕರು ಇದನ್ನು ಗಮನದಲ್ಲಿಡಬೇಕಾಗಿ ನಾವು ವಿನಂತಿಸುತ್ತೇವೆ.

ಯಾವುದೇ ಪ್ರಶ್ನೆಗಳು ಅಥವಾ ಹೆಚ್ಚಿನ ಮಾಹಿತಿಗೆ, ನೀವು ನಮ್ಮ ಗ್ರಾಹಕ ಸೇವಾ ಸಹಾಯವಾಣಿಯ 080-4832-9999 ರಲ್ಲಿ ನಮ್ಮನ್ನು ಸಂಪರ್ಕಿಸಬಹುದು ಅಥವಾ help@sliceit.com ನಲ್ಲಿ ನಮಗೆ ಇಮೇಲ್ ಮಾಡಬಹುದು, ಅಥವಾ ನಮ್ಮ ವೆಬ್‌ಸೈಟ್ www.slicebank.com ಗೆ ಭೇಟಿನೀಡಬಹುದು.

ನಿಮ್ಮ ನಿರಂತರ ಬೆಂಬಲಕ್ಕೆ ಧನ್ಯವಾದಗಳು.

ದಿನಾಂಕ: ಮೇ 14, 2025

ಸ್ಥಳ: ಗುವಾಹಟಿ

ನಿರ್ವಹಣೆ

ಸ್ಲೈಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

ಗೌರವಾನ್ವಿತ ನ್ಯಾಯಮೂರ್ತಿ
ಡಾ. ಹೆಚ್.ಎನ್.ನಾಗಮೋಹನ ದಾಸ್
ಏಕ ಸದಸ್ಯ ಆಯೋಗ

ಯವನಿಕಾ, ನೃಪತುಂಗ ರಸ್ತೆ, ಬೆಂಗಳೂರು.

ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆ - 2025

ಮಾಹಿತಿ ಇನ್ನೂ ನೀಡಿಲ್ಲವೇ ?

ತಡಮಾಡದೆ ತಕ್ಷಣ ನೀಡಿ. ಸಮೀಕ್ಷೆ ಇನ್ನು ಕೆಲವೇ ದಿನಗಳು ಉಳಿದಿವೆ.

ನಿಮ್ಮ ಸಾಮಾಜಿಕ ಜವಾಬ್ದಾರಿಯಲ್ಲಿ ಪಾಲ್ಗೊಳ್ಳಲು ಒಂದು ಸುವರ್ಣಾವಕಾಶ

ಸಮೀಕ್ಷೆ ಈಗಾಗಲೇ ಪ್ರಾರಂಭವಾಗಿದೆ

(ಸಮೀಕ್ಷೆಯ ಅವಧಿ 05.05.2025 ರಿಂದ 23.05.2025 ರ ವರೆಗೆ. ಬೆಳಿಗ್ಗೆ 6.30 ರಿಂದ ಪ್ರಾರಂಭ)

- ಮನೆ ಮನೆಗೂ ಭೇಟಿ ನೀಡುತ್ತಿದ್ದಾರೆ ಸಮೀಕ್ಷಾದಾರರು.
- ಸಮೀಕ್ಷಾದಾರರಿಗೆ ನಿಮ್ಮ ಮೂಲ ಜಾತಿಯ ಬಗ್ಗೆ ಮಾಹಿತಿ ನೀಡಿ, ಮೀಸಲಾತಿ ಸೌಲಭ್ಯ ಪಡೆಯಿರಿ.
- ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರನ್ನು ಗುರುತಿಸಲು ಪರಿಶಿಷ್ಟ ಜಾತಿಗಳಲ್ಲಿ (ಎಸ್‌ಸಿ) ಆಂತರಿಕ ಮೀಸಲಾತಿಯ ಬೇಡಿಕೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡ ಒಂದು ಮಹತ್ವಾಕಾಂಕ್ಷಿ ಹಾಗೂ ದಿಟ್ಟ ಹೆಜ್ಜೆಯಾಗಿದೆ.
- ಸಮೀಕ್ಷೆಗೆ ಸಹಕರಿಸಿ, ನಿಖರವಾದ ಮಾಹಿತಿಗಳನ್ನು ನೀಡಿ.
- ನಿಮ್ಮ ಮುಂದಿನ ಪೀಳಿಗೆ ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗದಿರಲಿ.
- ನ್ಯಾಯಯುತ ಮೀಸಲಾತಿ ಹಂಚಿಕೆಗಾಗಿ ಸಮೀಕ್ಷಾದಾರರಿಗೆ ಪರಿಶಿಷ್ಟ ಜಾತಿಗೆ ಸೇರಿದವರು ತಮ್ಮ ಮೂಲ ಜಾತಿ, ಶಿಕ್ಷಣ, ವರಮಾನ, ಉದ್ಯೋಗ ಮತ್ತು ಇನ್ನಿತರ ನಿಖರ ಮಾಹಿತಿ ನೀಡುವುದು ನಿಮ್ಮೆಲ್ಲರ ಆದ್ಯ ಕರ್ತವ್ಯ.

ನಿಮ್ಮ ಜಾತಿ,
ಆದಿ ಕರ್ನಾಟಕ
ಆದಿ ದ್ರಾವಿಡ
ಆದಿ ಆಂಧ್ರ
ಎಂದು ಇದ್ದಲ್ಲಿ ಮೂಲ ಜಾತಿಯನ್ನು ಸಮೀಕ್ಷೆಗೆ ಒದಗಿಸುವುದು

ಹಂತ	ವಿವರ	ಅವಧಿ
1.	ಸಮೀಕ್ಷಾದಾರರಿಂದ ಮನೆ-ಮನೆ ಭೇಟಿ ನೀಡಿ ಸಮೀಕ್ಷೆ	05-05-2025 ರಿಂದ 17-05-2025
2.	ಸಮೀಕ್ಷಾದಾರರಿಂದ ವಿಶೇಷ ಶಿಬಿರಗಳಲ್ಲಿ ಸಮೀಕ್ಷೆ	19-05-2025 ರಿಂದ 21-05-2025
3.	ಸ್ವಯಂ ಘೋಷಣೆ (ಆನ್‌ಲೈನ್ ಮೂಲಕ)	19-05-2025 ರಿಂದ 23-05-2025

ಮಾನ್ಯ ಸಮಾಜ ಕಲ್ಯಾಣ ಸಚಿವರಾದ **ಡಾ. ಹೆಚ್.ಸಿ. ಮಹದೇವಪ್ಪ** ರವರು ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಿರುವುದು.

ನಮ್ಮ ಕರ್ನಾಟಕ **ಗ್ಯಾರಂಟಿ ಕರ್ನಾಟಕ**

ಶಕ್ತಿ | ಅನ್ನಭಾಗ್ಯ 10 kg | ಗೃಹಜ್ಯೋತಿ 200 | ಗೃಹಲಕ್ಷ್ಮಿ ₹2000 | ಯುವನಿಧಿ ₹3000 | ₹1500

ಸಹಾಯವಾಣಿ : 9481359000

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಅಡಕಮಾರನಹಳ್ಳಿಯಲ್ಲಿ ಬೆಂಕಿ ಅವಘಡ, ದಟ್ಟ ಹೊಗೆ, ಅಪಾರ ನಷ್ಟ

ಉರಿದ ತೈಲ ದಾಸ್ತಾನು ಗೋದಾಮು

ಪ್ರಜಾವಾಣಿ ವಾರ್ತೆ

ಬೆಂಕಿ ಅವಘಡದಲ್ಲಿ ಹೊತ್ತಿ ಉರಿದ ಗೋದಾಮು

ನೆಲಮಂಗಲ: ಬೆಂಗಳೂರು ಉತ್ತರ ತಾಲ್ಲೂಕಿನ ಅಡಕಮಾರನಹಳ್ಳಿಯಲ್ಲಿ ಶೆಲ್ ಆಯಿಲ್ ಕಂಪನಿ ಉತ್ಪನ್ನಗಳನ್ನು ದಾಸ್ತಾನು ಮಾಡಿದ್ದ ಗೋದಾಮಿನಲ್ಲಿ ಮಂಗಳವಾರ ಮುಂಜಾನೆ ಬೆಂಕಿ ಅವಘಡ ಸಂಭವಿಸಿದ್ದು, ಅಪಾರ ನಷ್ಟವಾಗಿದೆ.

ಬೆಂಗಳೂರಿನ ಕೃಷ್ಣಪ್ಪ ಅವರಿಗೆ ಸೇರಿದ ಗೋದಾಮನ್ನು ಬಾಡಿಗೆಗೆ ಪಡೆದಿದ್ದ ಶೆಲ್ ಕಂಪನಿ, ತೈಲ ಹಾಗೂ ಇತರೆ ಇಂಧನ ಉತ್ಪನ್ನಗಳನ್ನು ಬ್ಯಾರೆಲ್‌ಗಳಲ್ಲಿ ಶೇಖರಿಸಿ ಇಟ್ಟಿತ್ತು.

ಗೋದಾಮಿನ ತುಂಬ ತೈಲ ಶೇಖರಣೆ ಮಾಡಿಕೊಂಡಿದ್ದರಿಂದ ಬೆಂಕಿ ಬೇಗನೆ ವ್ಯಾಪಿಸಿ ಧಗಧಗನೆ ಹೊತ್ತಿ ಉರಿಯಿತು. ಬೆಂಕಿ ಗಮನಿಸಿದ ಭದ್ರತಾ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದರು.

ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕದಳದ ಸಿಬ್ಬಂದಿ ಬೆಂಕಿ ನಂದಿಸಲು ಹರಸಾಹಸ ಪಟ್ಟರು. ಮಂಗಳವಾರ ಮಧ್ಯಾಹ್ನದವರೆಗೂ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.

ನೆಲಮಂಗಲ, ಪೀಣ್ಯ, ಯಶವಂತಪುರ ಭಾಗದ ಸುಮಾರು 15 ಅಗ್ನಿಶಾಮಕ ವಾಹನಗಳು, 80ಕ್ಕೂ ಹೆಚ್ಚು ಸಿಬ್ಬಂದಿಯಿಂದ ಕಾರ್ಯಾಚರಣೆ ನಡೆಯಿತು.

‘ಪ್ರಾಣಹಾನಿ ಸಂಭವಿಸಿಲ್ಲ. ಬೆಂಕಿಯ ತೀವ್ರತೆಗೆ ತೈಲದ ಬ್ಯಾರೆಲ್‌ಗಳು ಒಡೆದು ಗೋದಾಮಿನ ಹೊರಗೂ ತೈಲ ಹರಿದು ಬೆಂಕಿ ವ್ಯಾಪಿಸಿ ಕಾರ್ಯಾಚರಣೆಗೆ ಅಡಚಣೆ ಉಂಟಾಯಿತು’ ಎಂದು ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

‘ಪ್ರಾಥಮಿಕ ತನಿಖೆಯ ಪ್ರಕಾರ ಬೆಂಕಿ ಅವಘಡಕ್ಕೆ ವಿದ್ಯುತ್ ಶಾರ್ಟ್ ಸರ್ಕಿಟ್ ಕಾರಣ ಎಂಬುದು ಗೊತ್ತಾಗಿದೆ. ತನಿಖೆ ಮುಂದುವರೆದಿದೆ’ ಎಂದು ಪೊಲೀಸರು ಹೇಳಿದರು.

ಹೆಚ್ಚಿನ ತೈಲ ದಾಸ್ತಾನು?

ಮುಂಬೈಯಿಂದ ಬರುತ್ತಿದ್ದ ತೈಲ ಹಾಗೂ ಇತರ ಇಂಧನ ಉತ್ಪನ್ನವನ್ನು ಇಲ್ಲಿ ಶೇಖರಿಸಿ ರಾಜ್ಯ ಹಾಗೂ ಹೊರ ರಾಜ್ಯಗಳಿಗೆ ಪೂರೈಸಲಾಗುತ್ತಿತ್ತು. ಗೋದಾಮಿಗೆ ಪರವಾನಗಿ ಇತ್ತು. ಭಾರತ ಹಾಗೂ ಪಾಕಿಸ್ತಾನದ ಮಧ್ಯೆ ಸಂಘರ್ಷದ ವಾತಾವರಣ ಇದ್ದುದರಿಂದ ತೈಲದ ಕೊರತೆ ಆಗಬಹುದೆಂದು ಭಾವಿಸಿ ಹೆಚ್ಚಿನ ಪ್ರಮಾಣದಲ್ಲಿ ಶೇಖರಣೆ ಮಾಡಿಕೊಳ್ಳಲಾಗಿತ್ತು ಎನ್ನಲಾಗಿದೆ.

ದಟ್ಟ ಹೊಗೆ: ಬೆಂಕಿಯ ಕೆನ್ನಾಲಿಯಿಂದ ಹೊಗೆ ಸುತ್ತಮುತ್ತ ಆವರಿಸಿತ್ತು. ಇದರಿಂದ ಸುತ್ತಮುತ್ತಲ ಗ್ರಾಮದ ಮನೆಗಳು ಹಾಗೂ ಕೈಗಾರಿಕೆಗಳಿಗೆ ಬೆಂಕಿ ತಗುಲುವ ಭಯ ಆವರಿಸಿತ್ತು. ಕಪ್ಪಾದ ಹೊಗೆಯು ಇಡೀ ಪ್ರದೇಶವನ್ನು ಆವರಿಸಿತ್ತು. ಅವಘಡ ಸಂಭವಿಸಿರುವುದು ಬಹುದೂರದವರೆಗೂ ಕಾಣಿಸುತ್ತಿತ್ತು. ಮಾದನಾಯಕನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಟೋಲ್ ಲಾಜಿಸ್ಟಿಕ್ ಸಂಸ್ಥೆಯ ನಿರ್ವಹಣೆ

ಗೋದಾಮನ್ನು ‘ಟೋಲ್ ಲಾಜಿಸ್ಟಿಕ್ಸ್’ ಎಂಬ ಸಂಸ್ಥೆ ನಿರ್ವಹಿಸುತ್ತಿದೆ. ‘ಗೋದಾಮನ್ನು ಬಾಡಿಗೆಗೆ ಪಡೆದು ಕಂಪನಿಯ ಉತ್ಪನ್ನಗಳನ್ನು ಸಂಗ್ರಹಣೆ ಮಾಡಲಾಗಿತ್ತು’ ಎಂದು ಶೆಲ್ ಕಂಪನಿ ತಿಳಿಸಿದೆ.

ಬೆಂಕಿ ಅವಘಡದಲ್ಲಿ ಸಾವು–ನೋವು ಸಂಭವಿಸಿಲ್ಲ. ಬೆಂಕಿ ಅವಘಡ ಸಂಭವಿಸಿದ ಮಾಹಿತಿ ತಿಳಿದ ತಕ್ಷಣವೇ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದರು.

ಉದ್ಯೋಗಿಗಳು, ಪಾಲುದಾರರು ಮತ್ತು ಸುತ್ತಮುತ್ತ1 ಜನರ ಸುರಕ್ಷತೆಯೇ ಕಂಪನಿಯ ಮೊದಲ ಆದ್ಯತೆಯಾಗಿದೆ. ಬೆಂಕಿ ಅವಘಡಕ್ಕೆ ಕಾರಣ ಏನು ಎಂಬುದನ್ನು ಪತ್ತೆಹಚ್ಚಲಾಗುತ್ತಿದೆ ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

8 ಮಂದಿಗೆ ‘ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಶಿವರಾಜ ಬ್ಯಾಡರಹಳ್ಳಿ | ರವಿಕುಮಾರ್ ನೀಹ | ಮಹಾಂತೇಶ ಪಾಟೀಲ | ಧರಣೇಂದ್ರ ಕುರಕರಿ
ಗೀತಾ ಮಂಜು ಬೆಣ್ಣೆಹಳ್ಳಿ | ಕರವೀರ ಪ್ರಭು ಕ್ಯಾಲಕೊಂಡ | ಮಹಾಂತೇಶ ನವಲಕಲ್ | ಶಶಿ ತರೀಕೆರೆ

ಬೆಂಗಳೂರು: ಸ್ವಾಭಿಮಾನಿ ಕರ್ನಾಟಕ ವೇದಿಕೆ ನೀಡುವ 2024ನೇ ಸಾಲಿನ ‘ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ’ಗೆ ಸಾಹಿತ್ಯದ ವಿವಿಧ ಪ್ರಕಾರಗಳ ಎಂಟು ಕೃತಿಗಳು ಆಯ್ಕೆಯಾಗಿವೆ.

ಕಥಾ ವಿಭಾಗದಲ್ಲಿ ರವಿಕುಮಾರ್ ನೀಹ ಅವರ ‘ಅವು ಅಂಗೇ’ ಮತ್ತು ಮಹಾಂತೇಶ ನವಲಕಲ್ ಅವರ ‘ಬುದ್ಧ ಗಂಟೆಯ ಸದ್ದು’, ಕವನ ವಿಭಾಗದಲ್ಲಿ ಗೀತಾ ಮಂಜು ಬೆಣ್ಣೆಹಳ್ಳಿ ಅವರ ‘ಕಿರು ಬೆಳಕಿನ ಸೂಜಿ’ ಮತ್ತು ಶಶಿ ತರೀಕೆರೆ ಅವರ ‘ಪ್ರೂಷಾ’, ಪ್ರಬಂಧ ವಿಭಾಗದಲ್ಲಿ ಶಿವರಾಜ ಬ್ಯಾಡರಹಳ್ಳಿ ಅವರ ‘ಒಂದು ತಲೆ ಚವುರದ ಕಥೆ’ ಮತ್ತು ಕರವೀರ ಪ್ರಭು ಕ್ಯಾಲಕೊಂಡ ಅವರ ‘ನೀವೂ ನೆಪೋಲಿಯನ್ ಆಗಿ’ ಕೃತಿಗಳು ಪ್ರಶಸ್ತಿಗೆ ಆಯ್ಕೆಯಾಗಿವೆ.

‘ಡಾ. ಸಿ. ಸೋಮಶೇಖರ್ ಮತ್ತು ಶ್ರೀಮತಿ ಸರ್ವಮಂಗಳ ದತ್ತಿ ಪ್ರಶಸ್ತಿ’ಗೆ ಧರಣೇಂದ್ರ ಕುರಕರಿ ಅವರ ‘ಜಾತ್ರಿ’ ಕಾದಂಬರಿ ಮತ್ತು ಮಹಾಂತೇಶ ಪಾಟೀಲ ಅವರ ‘ಬೆಳಕು ಬೆಳೆಯುವ ಹೊತ್ತು’ ವಿಮರ್ಶಾ ಕೃತಿ ಭಾಜನವಾಗಿವೆ. ಪ್ರಶಸ್ತಿಯು ತಲಾ ₹5 ಸಾವಿರ ನಗದು ಒಳಗೊಂಡಿದೆ.

ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಇದೇ 30ರಂದು ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದ್ದು, ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ವೇದಿಕೆ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘವು 2025–26ನೇ ಶೈಕ್ಷಣಿಕ ಸಾಲಿನ ವಸತಿ-ನಿಲಯಕ್ಕೆ ಅರ್ಜಿ ಆಹ್ವಾನಿಸಿದೆ.

ಪಿಯು, ಪದವಿ, ಸ್ನಾತ್ತಕೋತ್ತರ ಪದವಿ, ತಾಂತ್ರಿಕ ಮತ್ತು ವೈದ್ಯಕೀಯ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ತಿಗಳ ಸಮುದಾಯದ (ಅಗ್ನಿವಂಶ ಕ್ಷತ್ರಿಯ) ಮತ್ತು ಇತರೆ ಸಮುದಾಯಗಳ ಆಸಕ್ತ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ಮೇ 30ರೊಳಗೆ ಅರ್ಜಿಗಳನ್ನು ಸಲ್ಲಿಸಬಹುದು ಎಂದು ತಿಳಿಸಿದೆ.

ಮಾಹಿತಿಗೆ ಫೋ.ನಂ: 080–23200608, 9740178757.

ಕಾಸಿಯಾ ಅಮೃತ ಮಹೋತ್ಸವ 17ಕ್ಕೆ

ಬೆಂಗಳೂರು: ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಮೃತ ಮಹೋತ್ಸವ ಸಮಾರಂಭ ಮೇ 17ರಂದು ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಕಾಸಿಯಾ ಅಧ್ಯಕ್ಷ ಎಂ.ಜಿ. ರಾಜಗೋಪಾಲ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ಅಮೃತ ಮಹೋತ್ಸವ ನಿಮಿತ್ತ ಬಿ2ಬಿ ಪೋರ್ಟಲ್, ಉದ್ಯೋಗ ಪೋರ್ಟಲ್, ವಾಣಿಜ್ಯ ಪೋರ್ಟಲ್‌ಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಣ್ಣ ಕೈಗಾರಿಕೆಗಳ ಸಚಿವ ಶರಣಬಸಪ್ಪ ದರ್ಶನಾಪುರ, ಶಾಸಕರಾದ ಟಿ. ರಘುಮೂರ್ತಿ, ಪ್ರಿಯಕೃಷ್ಣ ಅವರು ಭಾಗವಹಿಸಲಿದ್ದಾರೆ’ ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

REQUIRED FEMALE TEACHERS for High School MSC_BED (Maths, Physics) MA_BED (Social, English) Nandini_Layout. Call. 8618293621

THE MYSORE EDUCATION SOCIETY
#62,"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003. Website: www.mesinstitutions.in
Invites applications for the following posts:
Lecturers for PU Colleges
Subject : Computer Science (Full Time / Part Time)
Essential Qualification: Master's Degree in relevant subject from a recognized university with a minimum of 55% Marks and B.Ed., with teaching methods in relevant subject(s).
1. Applications with BIO-DATA and copies of certificates of relevant qualifications and experience, should reach the Chief Executive, MES at the above address on or before 22.05.2025 duly superscribing the envelope with "Application for the post of "Lecturer in Computer Science".
2. Candidates with experience are preferred.
3. Competency in ICT enabled teaching is desirable.
4. All posts are tenable in any of the MES Institutions and are transferable.
5. Decision of the selection committee is final.
6. Resorting to any sort of influence will be deemed as a disqualification of the candidature.
7. Download the application form from the MES website: https://mesinstitutions.in
Advt. No. MES/19/ADM-1/2025 Dated 15.05.2025
CHIEF EXECUTIVE

RAMAIAH Polytechnic
VACANCY EXIST FOR THE POSITION OF
Lecturers in the following branches:
- Computer Science Engineering
- Electronics and Communication Engineering
- Electrial and Electronics Engineering
Qualification: Min. B.E. in the respective branch
- Lecturer postion in English
Qualification: M.A. English
Application to be sent either in person / E-mail / post, within 10days of the Advertisement.
Person having experience of two years above will be preferred. Retired faculty from Government and Aided Polytechnics may also apply.
E-mail:msrp_principal@yahoo.com
Ph: 080-2360 0732 / 2360 2481 / 2360 2484 / 90363 84341
Principal
M.S.R.Nagar, MSRIT Post, Bangalore – 560054
www.ramaiahptedu.in

HERITAGE PUBLIC_SCHOOL Konanakunte requires HIGH SCHOOL TEACHERS for Social_Science PRIMARY TEACHERS for`Maths_and English KG COORDINATOR and KG_TEACHERS Fresh graduates can also apply:WhatsApp or`email resume`to Mob:9901733776 Email: heritagepublicschoolkk@gmail.com

Multiple Vacancy
POM POWER — POM SYSTEMS AND SERVICES PVT LTD — JOB OPPORTUNITIES
A Leading Manufacturers of Online UPS Systems, Solar Inverters, Energy Storage Systems and EV Fast Chargers requires for the following Posts :
GENERAL MANAGER — 5 to 6 Years Experience in Marketing Field
MARKETING MANAGER — 3 to 4 Years Experience in Marketing Field
SALES EXECUTIVES — 1 to 2 Years Experience in Sales Field
COMMERCIAL EXECUTIVES: 2 to 3 Years Experience with Good Knowledge in Computers
SERVICE ENGINEERS — 1 to 2 Years Experience in Power Electronics
For Walk-in Interview Call: 90350 10265
Share your Resume to: pompower@pompower.in
No. 75, 6tha Main, 3rd Phase, Peenya Indl. Area, Bangalore - 560 058.

Smt. Bylamma Educational & Charitable Trust (R)
HARWARD INTERNATIONAL SCHOOL
CBSE Affiliation No. 830335
Dasanapura, Tumkur Road, Bengaluru North 562162
WALK-IN-INTERVIEW
Good Experience with CBSE
ENGLISH, HINDI, COMPUTER SCIENCE
Front Office, PRO & ACCOUNTANT
HARWARD P.U. COLLEGE
Business Studies, Hindi, Economics
Eligible candidates mail your application with updated Bio-data to : email: infoharwardints@gmail.com
Contact : 9880112833 / 9945230285

WANTED LADY TEACHER to teach Kannada, English & Social for High School. Contact immediately with resume: CAMLIN ENGLISH SCHOOL, 4th Cross, Near 7th Main Bus Stop, Hampinagar Bangalore-560104 PHONE: 080-23301363

WANTED EXPERIENCED Teachers to teach X Std. ICSE and SSLC Maths, Computer Science and Hindi. Contact Principal- S.D.A. High School & PU College. Phone: 9845606243. Email: sdapucollege@gmail.com

GURUKULA INTERNATIONAL School Requires Nursery Teachers. Maths, English Social Teachers for High School. 9th Cross, Near Magadi Road, Metro Station, Bangalore-23. 7829338292 7795417999

WANTED FRESHER/ Experience Teachers/ Academic Co-ordinators ENGLISH/ MATHS/ SOCIAL/ PHYSICS/ CHEMISTRY/ BIOLOGY/ HINDI/ KANNADA/ COMPUTER TEACHERS Salary Rs.20000 to 40000/- PM ESI, PF WALK-IN INTERVIEW ALL WORKING DAYS Between 10.30 AM TO 4.00 PM MATHA'S INTERNATIONAL SCHOOL ICSE AFFILIATION CODE KA470, MATHA'S ENGLISH HIGH SCHOOL, State Syllabus, English Medium, #55/2 B, 11th K.M.Hosur Main Road, Garuve Bhavipalya, Bommanahalli post, Bangalore- 560068 M: 9449814917, 8277258609

GE KAY Convent High School Judges Colony Basaveshwaranagar Bengaluru Requires Nursery/ Primary For All Subject High School Teachers With Experienced for Full Time Or Part Time Even Retired Teachers also Preferred Contact Principal: 9880800758

TEACHER'S TRAINED POST-GRADUATE FOR LKG ENGLISH SOCIAL SCIENCE MATHS HIGH SCHOOL COMPUTER NAVODAYA VIDYANIKETHANA SCHOOL #19,Dinnur Main Road R.T.Nagar Bangalore-32 Navodaya_vidyaniket@yahoo.in Contact08023334266 08041244631 9343247885

DH DECCAN HERALD — ಪ್ರಜಾವಾಣಿ
Classifieds — More value, more impact
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
+91 9731810277 | +91 9886213331
+91 9845114560 | +91 9900428036
080- 45557163/164
*Conditions apply

Accounts & Finance

WANTED OFFICE ACCOUNTS ASST. Maximum 3 years experience (Male only) Contact: 98453 22644

Engg/ Production Technical

WANTED EXPERIENCED TURNER, MILLER & CNC OPERATOR GOOD SALARY. @ SHUBDIN INDUSTRIES, MAGADI NICE ROAD, NEAR ROYAL OAK. CONTACT: 9632947474

Drivers

WANTED DRIVER for a Company in Rajarajeshwarinagar. Min 5 years exp. Attractive Package: 73378-44260

General

REQUIRES HOME Nursing Staff for Bangalore. Experience: above 1 year, Salary: 15,000-30,000. Call: 9880165253.

Marketing & Sales

MARKETING & Sales Executive for Top Brand Kids and Ladies wear in Sheshadripuram, Bangalore.Candidates with experience and scooter preferred.Call: 8217039220

REQUIRED SALES/ Marketing Executive For Energy Saving Products, 2 Wheeler & English Must Salary 20000+ Big Incentive. 8884504422 info@behlinnov.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

AUTOMOTIVE

Four Wheelers Selling

Maruti

FOR SALE MARUTHI OMNI - 2017 Silky Silver-8 Seator 1st Party - Good Running Condition / Tyres + Remote 72,000 KM Rs. 3,20,000/- Contact: 98453 22644

BUSINESS

Business to Business

Business

RS.75,000/- MORE Net PerMonth. If You Get Selected as Associate, Franchisee/Distributor/ Channel Partner.- 9011515845

Medical

LOOKING TO rent upto 50 bedded hospital with 2 O.T., licenses and compliances in bangalore, Contact-8848158577

PUBLIC NOTICE

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀಮತಿ. ಡಿ. ಶಾರದ ಕೋಂ. ಶ್ರೀ. ಬಿ.ಆರ್.ಧನಪಾಲ್, ವಿಳಾಸ – ಕಾರ್ ಸ್ಟ್ರೀಟ್, ವಾರ್ಡ್ ನಂ. 14, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ–561203 ಇವರು, ನಂ. 35/3 ಎಂಎಂಎಚ್ ಫಾರಂ ಹೌಸ್, ಚೊಕ್ಕನಹಳ್ಳಿ ಗ್ರಾಮ, ಯಲಹಂಕ ಹೋಬಳಿ, ಜಾಲ ಹೋಬಳಿ, ಬೆಂಗಳೂರು–56004 ವಿಳಾಸದ ರಹವಾಸಿಯಾಗಿರುವ ಸುಮಾರು 33 ವರ್ಷ ವಯಸ್ಸಿನ ಶ್ರೀ. ವಿನು. ಎಸ್ ಬಿನ್ ಶ್ರೀನಿವಾಸಯ್ಯರವರಿಂದ ಷೆಡ್ಯೂಲ್ ‘ಎ’ ಸ್ವತ್ತನ್ನು ಮತ್ತು ನಂ. 49, 20ನೇ ಅಡ್ಡರಸ್ತೆ, ಭುವನೇಶ್ವರಿನಗರ, ಹೆಬ್ಬಾಳ ಗ್ರಾಮ, ಬೆಂಗಳೂರು–560024 ವಿಳಾಸ ರಹವಾಸಿಯಾಗಿರುವ ಸುಮಾರು 38 ವರ್ಷ ವಯಸ್ಸಿನ ಶ್ರೀ ಮೂರ್ತಿ ನಾಯ್ಕ ಬಿ.ಎಲ್. ಬಿನ್ ಲಚ್ಚಾ ನಾಯ್ಕ ಇವರಿಂದ ಷೆಡ್ಯೂಲ್ ‘ಬಿ’ ಸ್ವತ್ತನ್ನು ಖರೀದಿಸಲು ಉದ್ದೇಶಿಸಿರುತ್ತಾರೆ. ಆದ್ದರಿಂದ, ಸದರಿ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾರಿಗಾದರೂ ಕಾನೂನುಬದ್ಧ ಕ್ಲೇಮ್‌ಗಳಿದ್ದಲ್ಲಿ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗೆ ಕೆಳಕಂಡ ಸಹಿದಾರರಿಗೆ ಮಾಹಿತಿ ನೀಡಬೇಕೆಂದು ಕೋರಲಾಗಿದ್ದು, ಇಲ್ಲವಾದಲ್ಲಿ ನನ್ನ ಕಕ್ಷಿದಾರರು ತಮ್ಮ ಖರೀದಿ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳಲು ಮುಂದುವರಿಯುತ್ತಾರೆ.

ಷೆಡ್ಯೂಲ್ ‘ಎ’ ಪ್ರಾಪರ್ಟಿ
ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡ ಬೆಳವಂಗಲ ಹೋಬಳಿಯ ಕತ್ತಿಹೊಸಹಳ್ಳಿ ಗ್ರಾಮದ ಸರ್ವೆ ನಂ. 99ರಲ್ಲಿ ಸ್ಥಿತಗೊಂಡಿರುವ 2 ಎಕರೆ ವಿಸ್ತೀರ್ಣವುಳ್ಳ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:– ಪೂರ್ವಕ್ಕೆ: ಗಂಗಮ್ಮ ಮತ್ತು ಚಿನ್ನಪ್ಪನವರ ಜಮೀನು; ಪಶ್ಚಿಮಕ್ಕೆ: ರಾಮಯ್ಯ ಮತ್ತು ವೆಂಕಟಸಾಮಯ್ಯನವರ ಜಮೀನು; ಉತ್ತರಕ್ಕೆ: ಸರ್ವೆ ನಂ. 23/ಪಿ5 ಜಮೀನು, ದಕ್ಷಿಣಕ್ಕೆ: ಗಂಗಯ್ಯ ಮತ್ತು ಚಿನ್ನ ಗಂಗಯ್ಯನವರ ಜಮೀನು.

ಷೆಡ್ಯೂಲ್ ‘ಬಿ’ ಪ್ರಾಪರ್ಟಿ
ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡ ಬೆಳವಂಗಲ ಹೋಬಳಿಯ ಕತ್ತಿಹೊಸಹಳ್ಳಿ ಗ್ರಾಮದ ಸರ್ವೆ ನಂ. 93/1ರಲ್ಲಿ ಸ್ಥಿತಗೊಂಡಿರುವ 3 ಎಕರೆ 31.08 ಗುಂಟಾ ವಿಸ್ತೀರ್ಣವುಳ್ಳ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:– ಪೂರ್ವಕ್ಕೆ: ರಸ್ತೆ ಮತ್ತು ಖಾಸಗಿ ಸ್ವತ್ತು; ಪಶ್ಚಿಮಕ್ಕೆ: ಸರ್ವೆ ನಂ. 23/ಪಿ5 ಜಮೀನು; ಉತ್ತರಕ್ಕೆ: ಅದೇ ಸರ್ವೆ ನಂ. 93 ರಲ್ಲಿನ ಉಳಿಕೆ ಭಾಗ, ದಕ್ಷಿಣಕ್ಕೆ: ಅಂಜನಪ್ಪ ಮತ್ತು ಮಾದಪ್ಪನವರ ಜಮೀನು.

ವೇಣುಗೋಪಾಲ್.ಎಸ್.ಕೆ, ವಕೀಲರು
ಫ್ಲಾಟ್ ನಂ. 1, ನೆಲಮಹಡಿ, ‘ಶ್ರೀ ಕೃಷ್ಣ ರೆಸಿಡೆನ್ಸಿ ಅಪಾರ್ಟ್‌ಮೆಂಟ್ಸ್’, ಲ್ಯಾಂಗ್‌ಫೋರ್ಡ್ ಕ್ರಾಸ್ ರಸ್ತೆ, ಶಾಂತಿನಗರ, ಬೆಂಗಳೂರು–560025, ಮೊಬೈಲ್ ನಂ. 9886882557, 9686889300
ಇ–ಮೇಲ್: venugoplaskadvocate@gmail.com

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

House

BTM Layout

SALE 5-BHK House North Facing on 30x40 Site in BTM Layout. Contact Agent 9341952021/ 910879240

Industrial & Factory

Tumkur Road

SALE, 2, 4, 5, 10 Acres Industrial Warehouse, Agriculture Land near Nelamangala, Dabaspet. NAIK: 9141326819

General

North

FOR SALE BBMP A Khata property. North Facing 1200 sft plot with 4500 sft building at MSR Nagar. Includes Borewell, BWSSB & BESCOM connections. Close to MS Ramaiah College. Call 7022106263 / 8970433064

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8970126393

PERSONAL

Change of Name

I, LOKESH_KUMAR S/o.Maheshwar Mishra R/a#G-6, B`Block Ashwini Homes Apartment Jinkethimmanahalli Varanasi, TC.Palya Main Road,KR.Puram Bengaluru 560036 have`changed my minor Son's Name from AARNAV to AARNAV_MISHRA DOB:10.12.2010 vide`affidavit dated:3.5.2025 before`Notary A.R.MuneerAhmed Bangalore.

CHANGE OF NAME
I, ROOPA REDDY @ ROOPA YELAHANKA SAMPANGI REDDY W/o Narendra Reddy, R/at Villa No.77, Phase II, Mantryacourtyard, Nagegowdanapalya, Bengaluru-560109, declare that above names pertain to me only and henceforth I shall be called as **ROOPA REDDY** vide affidavit dt:12-05-2025, before notary H K Gopalagowda, Benglauru

I, VIVEK_M S/o.Madhi R/a#336 Siddartha`Nagar Jalahalli West Bangalore North Bangalore 560015 have`changed my_Name to VIVEK_CLINTON vide`affidavit dated:12.2.2025 before`Notary T.V.Bhadravijaya Bangalore

I, LOKESHACHANDRA. R, S/o Ramanjinappa, Residing at No.4132 2nd Main, B Block 2nd Stage Rajajinagar Subramanyanagar Bangalore 560021 Declare that I have changed my name from LOKESHACHANDRA. R to LOKESH CHANDRA. R vide affidavit Dated 21/04/25 Sworn before Notary KS Giridhar Bangalore

I, RENU SETHIA ASHOK KUMAR have changed my name to RENU SETHIA vide affidavit dated: 13/5/2025 Before Notary Manohar Jeerige Bangalore.

I, RAMESH M, S/o. Late G.Munireddy, residing No353/2, Sree Sai Sumukhaa Mahal, 4th Cross, 3rd A Main, Behind St.GeorgeCollege, OMBR Layout, Banaswadi, Bengaluru 560043, have changed my sonname from Dhrutik Reddy.R to DHRUVIN REDDY.R aged 14 years, affidavitdated 12.05.2025 Advocate K.Venkateshan

Lost

ಕಳೆದಿದೆ
ಮೀನಾ ಬಿ ವಿ, ನಂ.19, 1ನೇ ಮೇನ್, ಎಸ್‌ಬಿಐ ಕಾಲೋನಿ, ಕೋಡಿಚಿಕ್ಕನಹಳ್ಳಿ, ಬೆಂಗಳೂರು–560056 ನಿವಾಸಿಯಾಗಿದ್ದು, 15/11/2025ರಂದು ಪ್ರಯಾಣ ಮಾಡುವಾಗ ಐಡೆಂಟಿಫಿಕೇಶನ್ ನಂ. 3950/23–24 ಹೊಂದಿರುವ ಮೂಲ ಕ್ರಯಪತ್ರವನ್ನು ಕಳೆದುಕೊಂಡಿರುತ್ತೇನೆ. ಯಾರಿಗಾದರೂ ಸಿಕ್ಕಿದಲ್ಲಿ, ದಯವಿಟ್ಟು ಸಂಪರ್ಕಿಸಿ: 9591681349.

EDUCATION SUCCESS

L. R. CAMBRIDGE SCHOOL
Wilson Garden, Bengaluru-560 027
SSLC TOPPERS 2024-25

SUMITH 571 (91%) | VINAY RAGHAVENDRA 571 (91%)
SYED SAQLAIN 550 (88%) | DHARAHAS 549 (88%) | AAFIYA KOUSER 548 (88%) | PRANEETH S D 543 (87%) | SANA FATHIMA 542 (87%)
VIKAS M 531 (85%) | YASHASVI 515 (82%) | RASHIKALA 514 (82%) | MD ABUBAKAR 509 (81%) | ROHIT VIRAT 505 (81%)
SAHANA 504 (81%) | PAVITHRA 497 (79%) | V AKSHAYA 493 (79%) | AFRA MEHREEN 492(79%) | RITU PARNA 489 (78%)
SAFREEN 482 (77%) | SYED SHAHID 479 (77%) | ANANYA CHANDEL 467 (75%) | MD MOINUDIN 456 (73%) | MD SUFIYAN 452 (72%)
GAGAN 443 (71%) | MD FAIZAN 438 (70%) | M VIGNESH 428 (68 %) | SAHERA BEE 419 (67%) | UMME ARFA 417 (67%)
NANDINI SHUKLA 416 (67%) | SONY 406 (65%) | PRIYANKA 402 (64%)
There are no secrets to success. It is the result of preparation, hard work, and learning.
Hearty Congratulations
- From PRINCIPAL, MANAGEMENT & STAFF
ROUNAQH

EDUCATION CORNER

RAMAN GROUP OF INSTITUTIONS
12, Magadi Main Road, Kamakshipalya, (Near Sumanahalli Bus Stop) Bengaluru-560079
Website: www.ramaneducation.org
RAMAN P.U. COLLEGE
In association with Deeksha Vedantu
Science + Integrated ♦ Commerce
Contact: 9686162639 / 9686162637
RAMAN DEGREE COLLEGE
BBA | BCom | BCA
Contact: 9686162639 / 9686162637
RAMAN POLYTECHNIC & ITI
♦ Civil ♦ Mechanical ♦ Electrical ♦ Electronics ♦ Computer Science ♦ Automobile ♦ Fitter ♦ Electronic Mechanic ♦ Electrician
Contact: 6360903500 / 8050066771
RAMAN SCHOOL OF NURSING - GNM
Contact: 8050488623 / 8880959499
CALIFORNIA PUBLIC SCHOOL
ICSE & State Syllabus. Nursery to X Standard
Contact: 9481305504 / 8197104255
RMN-25602

ಸೋನು ನಿಗಮ್ ಅರ್ಜಿ: 15ಕ್ಕೆ ವಿಚಾರಣೆ

ಪ್ರಜಾವಾಣಿ ವಾರ್ತೆ

ಸೋನು ನಿಗಮ್

ಬೆಂಗಳೂರು: 'ಕನ್ನಡದ ಅಭಿಮಾನವನ್ನು ಪಹಲ್ಗಾಮ್ ಘಟನೆಗೆ ತಳುಕು ಹಾಕಿದ ಆರೋಪ ಹೊರಿಸಿ ನನ್ನ ವಿರುದ್ಧ ದಾಖಲಿಸಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಗಾಯಕ ಸೋನು ನಿಗಮ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಇದೇ 15ಕ್ಕೆ ಮುಂದೂಡಿದೆ.

'ನನ್ನ ವಿರುದ್ಧ ಬೆಂಗಳೂರಿನ ಅವಲಹಳ್ಳಿ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಮುಂಬೈನ ಸೋನು ನಿಗಮ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಶಿವಶಂಕರ ಅಮರಣ್ಣವರ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸೋನು ನಿಗಮ್ ಪರ ಹೈಕೋರ್ಟ್ ವಕೀಲೆ ಕವಿತಾ ದಾಮೋದರನ್ ವಾದ ಮಂಡಿಸಲು ಮುಂದಾದರು. ಆಗ ನ್ಯಾಯಪೀಠವು, 'ಕಚೇರಿ ಆಕ್ಷೇಪಣೆಗೆ ಸಂಬಂಧಿಸಿದಂತೆ ವಕೀಲೆಯ ವಾದವನ್ನು ದಾಖಲಿಸಲಾಗಿದ್ದು, ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಲಾಗಿದೆ' ಎಂದು ಆದೇಶಿಸಿತು. ಅರ್ಜಿಯಲ್ಲಿ ದೂರುದಾರ 'ಕರ್ನಾಟಕ ರಕ್ಷಣಾ ವೇದಿಕೆ'ಯ (ನಾರಾಯಣಗೌಡ ಬಣ) ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಎ.ಧರ್ಮರಾಜ ಮತ್ತು ರಾಜ್ಯ ಪ್ರಾಸಿಕ್ಯೂಷನ್ ಅನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಪ್ರಕರಣವೇನು?: 'ಸೋನು ನಿಗಮ್ ಅವರು 'ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ'ಯಲ್ಲಿ ನಡೆದಿದ್ದ ಸಂಗೀತ ಕಾರ್ಯಕ್ರಮದಲ್ಲಿ ಆಕ್ಷೇಪಾರ್ಹ ಮತ್ತು ಕನ್ನಡಿಗರ ಭಾವನೆ ಕೆರಳಿಸುವ ಹೇಳಿಕೆ ನೀಡಿದ್ದಾರೆ' ಎಂದು ಆರೋಪಿಸಿ ಧರ್ಮರಾಜ ಇದೇ 2ರಂದು ದೂರು ನೀಡಿದ್ದರು.

ಧ್ವಜಕ್ಕೆ ಅಪಮಾನ ಆರೋಪ: ಚಾರ್ಜ್‌ಶೀಟ್‌ಗೆ ತಡೆ

ಬೆಂಗಳೂರು: ಸಿಹಿ ಹಂಚಿದ ನಂತರ ಕೈಯನ್ನು ರಾಷ್ಟ್ರಧ್ವಜದಿಂದ ಒರೆಸಿಕೊಂಡ ಆರೋಪಕ್ಕೆ ಸಂಬಂಧಿಸಿದಂತೆ 'ಕನ್ನಡಾಭಿಮಾನಿ ಸಂಘ'ದ ಅಧ್ಯಕ್ಷ ಎ.ಕೃಷ್ಣಪ್ಪ ವಿರುದ್ಧ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸುವ ನ್ಯಾಯಿಕ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ನನ್ನ ವಿರುದ್ಧ ತಿಲಕನಗರ ಠಾಣಾ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಎ.ಕೃಷ್ಣಪ್ಪ ಬಿನ್ ಅಣ್ಣಯ್ಯ (72) ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಶಿವಶಂಕರ ಅಮರಣ್ಣನವರ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ವಿವೇಕ್ ಸುಬ್ಬಾರೆಡ್ಡಿ, 'ಅರ್ಜಿದಾರರಿಗೆ ರಾಷ್ಟ್ರ ಧ್ವಜಕ್ಕೆ ಅಪಮಾನ ಉಂಟುಮಾಡುವಂತಹ ಯಾವುದೇ ಉದ್ದೇಶ ಇರಲಿಲ್ಲ. ಭಾರತೀಯ ಸೇನೆಯು, ಪಾಕಿಸ್ತಾನದ ಮೇಲೆ ದಾಳಿ ನಡೆಸಿ ಯಶಸ್ಸು ಸಾಧಿಸಿದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಸಿಹಿ ಹಂಚಲಾಗಿತ್ತು. ಆ ಸಂದರ್ಭದಲ್ಲಿ ಆಕಸ್ಮಿಕವಾಗಿ ಈ ಘಟನೆ ನಡೆದಿದೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ಅರ್ಜಿದಾರರ ವಿರುದ್ಧ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವ ಪ್ರಕ್ರಿಯೆಗೆ ತಡೆ ನೀಡಿತು. ಅಂತೆಯೇ, ಅರ್ಜಿಗೆ ಸಂಬಂಧಿಸಿದಂತೆ ತಿಲಕನಗರ ಠಾಣಾಧಿಕಾರಿ ಮತ್ತು ಪ್ರಕರಣದ ದೂರುದಾರ ಪೊಲೀಸ್ ಅಧಿಕಾರಿ ಮಂಜುನಾಥ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಪ್ರಕರಣವೇನು?: 'ಜಯನಗರದ 4ನೇ ಹಂತದಲ್ಲಿರುವ ವಿನಾಯಕ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಬಳಿ ಕನ್ನಡಾಭಿಮಾನ ಸಂಘವು ಇದೇ 8ರಂದು ಸಿಹಿ ಹಂಚಿಕೆ ಕಾರ್ಯಕ್ರಮ ಆಯೋಜಿಸಿತ್ತು. ಈ ವೇಳೆ ಸಿಹಿ ಹಂಚಿದ ನಂತರ ಕೃಷ್ಣಪ್ಪ ತಮ್ಮ ಕೈಯನ್ನು ರಾಷ್ಟ್ರಧ್ವಜಕ್ಕೆ ಒರೆಸಿದ್ದಾರೆ. ಆ ಮೂಲಕ ರಾಷ್ಟ್ರಧ್ವಜದ ಘನತೆ ಮತ್ತು ಗೌರವಕ್ಕೆ ಅವಮಾನ ಎಸಗಿದ್ದಾರೆ' ಎಂದು ಪೊಲೀಸ್ ಅಧಿಕಾರಿ ಮಂಜುನಾಥ್ ತಿಲಕ್ ನಗರ ಠಾಣೆಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಕೃಷ್ಣಪ್ಪ ವಿರುದ್ಧ, ರಾಷ್ಟ್ರೀಯ ಗೌರವಗಳಿಗೆ ಅಪಮಾನ ತಡೆ ಕಾಯ್ದೆ-1971ರ ಕಲಂ 2ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ರನ್ಯಾ ರಾವ್ ಅರ್ಜಿ: ಆಕ್ಷೇಪಣೆ ಸಲ್ಲಿಸಲು ಗಡುವು

ರನ್ಯಾ ರಾವ್

'ಅಕ್ರಮ ಚಿನ್ನ ಸಾಗಣೆ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ನಟಿ ರನ್ಯಾ ರಾವ್ ಅವರಿಗೆ ಕಾಫಿಪೋಸಾ ಕಾಯ್ದೆ ಅನ್ವಯಿಸಿ ಬಂಧನದಲ್ಲಿ ಇರಿಸಿರುವುದು ಕಾನೂನುಬಾಹಿರ ಮತ್ತು ಈ ಕ್ರಮವನ್ನು ಅನೂರ್ಜಿತ ಎಂದು ಘೋಷಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಹೈಕೋರ್ಟ್, ಕೇಂದ್ರ ಸರ್ಕಾರಕ್ಕೆ ಎರಡು ವಾರಗಳ ಗಡುವು ನೀಡಿದೆ.

ಈ ಸಂಬಂಧ ರನ್ಯಾ ರಾವ್ ತಾಯಿ ಎಚ್.ಪಿ.ರೋಹಿಣಿ (58) ಸಲ್ಲಿಸಿರುವ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ನೇತೃತ್ವದ ರಜಾಕಾಲದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಚಂದ್ರಶೇಖರ್, 'ಅರ್ಜಿದಾರರನ್ನು ಬಂಧಿಸುವ ಮುನ್ನ ಅನುಸರಿಸಬೇಕಾದ ನ್ಯಾಯಿಕ ಪ್ರಕ್ರಿಯೆಯಲ್ಲಿ ನಿಯಮಗಳನ್ನು ಪಾಲನೆ ಮಾಡಿಲ್ಲ. ಸಕ್ಷಮ ಪ್ರಾಧಿಕಾರದ ಗಮನಕ್ಕೆ ತಾರದೆ ರನ್ಯಾ ರಾವ್ ಅವರನ್ನು, ವಿದೇಶಿ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯ್ದೆ–1974ರ (ಕಾಫಿಪೋಸಾ) ಅಡಿಯಲ್ಲಿ ಬಂಧಿಸಲಾಗಿದೆ. ಇದು ಕಾನೂನುಬಾಹಿರ. ಆದ್ದರಿಂದ, ಬಂಧನವನ್ನು ಕಾನೂನು ಬಾಹಿರ ಎಂದು ಘೋಷಿಸಿ. ಕೂಡಲೆ ರನ್ಯಾ ಅವರನ್ನು ಬಿಡುಗಡೆ ಮಾಡಲು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಮನವಿ ಮಾಡಿದರು.

ಕೇಂದ್ರ ಸರ್ಕಾರದ ಪರ ಹಾಜರಿದ್ದ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್, ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ನಾಲ್ಕು ವಾರಗಳ ಕಾಲಾವಕಾಶ ನೀಡುವಂತೆ ನ್ಯಾಯಪೀಠಕ್ಕೆ ಮನವಿ ಮಾಡಿದರು. ಎರಡು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಜೂನ್ 3ಕ್ಕೆ ಮುಂದೂಡಿತು.

ಯಾವ ಆಧಾರದಲ್ಲಿ ಸಂಘರ್ಷ ಶಮನ– ಸಚಿವ ದಿನೇಶ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ದಿನೇಶ್ ಗುಂಡೂರಾವ್

ಬೆಂಗಳೂರು: 'ಭಾರತೀಯ ಸೇನೆಯಿಂದ 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ನಡೆಯುತ್ತಿದ್ದಾಗಲೇ ಯಾವ ಆಧಾರದಲ್ಲಿ ಕದನ ವಿರಾಮ ಒಪ್ಪಿಕೊಳ್ಳಲಾಗಿದೆ ಎನ್ನುವುದನ್ನು ಪ್ರಧಾನಿ ನರೇಂದ್ರ ಮೋದಿ ಯವರು ಸ್ಪಷ್ಟಪಡಿಸಬೇಕು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಉಗ್ರರನ್ನು ಮಣ್ಣುಪಾಲು ಮಾಡುವವರೆಗೂ ಬಿಡುವುದಿಲ್ಲ ಎಂದು ಮೋದಿ ಹೇಳಿದ್ದರು. ಹೀಗಾಗಿ ದೊಡ್ಡ ತೀರ್ಮಾನ ತೆಗೆದುಕೊಳ್ಳುವ ನಿರೀಕ್ಷೆ ಇತ್ತು. ದಾಳಿ ನಿಲ್ಲಿಸುವಂತೆ ಪಾಕಿಸ್ತಾನ ಅಂಗಲಾಚಿತು ಎಂದೂ ಮೋದಿ ಹೇಳಿದ್ದಾರೆ. ಆದರೆ, ಏನು ನಡೆದಿದೆ ಎಂದು ಯಾರಿಗೂ ಗೊತ್ತಿಲ್ಲ' ಎಂದರು.

'ನೂರಾರು ಉಗ್ರರನ್ನು ಸಾಯಿಸಿದ್ದೇವೆ ಎಂದೂ ಮೋದಿ ಹೇಳುತ್ತಾರೆ. ಯಾರಿಗೆ ಗೊತ್ತು ಎಷ್ಟು ಜನ ಸತ್ತಿದ್ದಾರೆಂದು? ಪುಲ್ವಾಮಾ ದಾಳಿ ಮಾಡಿದವರನ್ನು ಇನ್ನೂ ಬಂಧಿಸಿಲ್ಲ. ಪಹಲ್ಗಾಮ್ ಘಟನೆಗೆ ಕಾರಣರಾಗಿರುವವರು ಏನಾದರು? ಬಿಜೆಪಿಯವರು ಪ್ರತಿಯೊಂದನ್ನೂ ರಾಜಕೀಯಕ್ಕೆ ಬಳಸಿಕೊಳ್ಳುತ್ತಾರೆ' ಎಂದೂ ಅವರು ಟೀಕಿಸಿದರು.

ಸಿಬಿಎಸ್‌ಇ: ಚೈತನ್ಯ ಟೆಕ್ನೊ ಶಿಕ್ಷಣ ಸಂಸ್ಥೆಯ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 10 ಮತ್ತು 12ನೇ ತರಗತಿಯ ಪರೀಕ್ಷೆಯಲ್ಲಿ ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಯ ಇಲ್ಲಿನ ಶ್ರೀ ಚೈತನ್ಯ ಟೆಕ್ನೊ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

10ನೇ ತರಗತಿಯಲ್ಲಿ ಹರ್ಷಿತ್ ರೆಡ್ಡಿ ವಿ., ಡಿ.ಜೆ. ಚರಣ್ ಹಾಗೂ ಸನ್ಯಮ್ ಲಾಲ್ವಾನಿ 495 ಅಂಕಗಳನ್ನು ಪಡೆದಿದ್ದಾರೆ. 20 ವಿದ್ಯಾರ್ಥಿಗಳು 490 ಹಾಗೂ ಅದಕ್ಕಿಂತ ಹೆಚ್ಚಿನ ಅಂಕ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

12ನೇ ತರಗತಿಯಲ್ಲಿ ನರೇನ್ ಎಂ. 496 ಅಂಕ ಗಳಿಸಿದರೆ, ದಿನೇಶ್ ಗೋಮತಿ, ನಿಹಾಲ್ ಸಾಗರ್ ವಿಷ್ಣು, ಸಾಯಿಶ್ರೀ ತಳೂರಿ ತಲಾ 494 ಅಂಕಗಳನ್ನು ಪಡೆದಿದ್ದಾರೆ. 12 ವಿದ್ಯಾರ್ಥಿಗಳು 490 ಹಾಗೂ ಅದಕ್ಕಿಂತ ಹೆಚ್ಚಿನ ಅಂಕ ಗಳಿಸಿದ್ದಾರೆ.

ಸನ್ಯಮ್ ಲಾಲ್ವಾನಿ

ನರೇನ್ ಎಂ.

ಡಿ.ಜೆ. ಚರಣ್

ಹರ್ಷಿತ್ ರೆಡ್ಡಿ

ವಿದ್ಯಾರ್ಥಿಗಳ ಈ ಸಾಧನೆಗೆ ಪೋಷಕರು, ಶಿಕ್ಷಣ ಸಂಸ್ಥೆಯ ಸಿಬ್ಬಂದಿ ಮತ್ತು ಆಡಳಿತ ಮಂಡಳಿ ಸದಸ್ಯರು ಸಂತಸ ವ್ಯಕ್ತಪಡಿಸಿದ್ದಾರೆ. ಶ್ರೀ ಚೈತನ್ಯ ಶೈಕ್ಷಣಿಕ ಸಂಸ್ಥೆಗಳ ನಿರ್ದೇಶಕಿ ಸುಷ್ಮಾ ಬೊಪ್ಪಣ ಅವರು ಸಿಬಿಎಸ್‌ಇ 10ನೇ ತರಗತಿ ಹಾಗೂ 12ನೇ ತರಗತಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಗಳ ಸಾಧನೆ

ಮಹಾನ್ ಕೆ.ಎಸ್ (ಶೇ 97)

ತನ್ವಿ ಎಸ್. (ಶೇ 96)



ಶ್ರೀನಿವಾಸ್ ಸುದರ್ಶನ್ (ಶೇ 96.8)

ಕಸಾಪ ಕಾರ್ಯಕಾರಿ ಸಮಿತಿ ಸಭೆ ಇಂದು

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕಾರ್ಯಕಾರಿ ಸಮಿತಿ ಸಭೆ ಬುಧವಾರ ಬೆಳಿಗ್ಗೆ 11 ಗಂಟೆಗೆ ಚಾಮರಾಜಪೇಟೆಯಲ್ಲಿರುವ ಪರಿಷತ್ತಿನ ಪಂಪ ಸಭಾಂಗಣದಲ್ಲಿ ನಡೆಯಲಿದೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರ ನೇತೃತ್ವದಲ್ಲಿ ನಡೆಯಲಿರುವ ಈ ಸಭೆಯಲ್ಲಿ, ಪ್ರಸ್ತುತ ಎದುರಿಸುತ್ತಿರುವ ಸವಾಲುಗಳ ಕುರಿತು ಚರ್ಚೆ ನಡೆಯಲಿದೆ ಎನ್ನಲಾಗಿದೆ. ಸದಸ್ಯರು ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕು ಎಂದು ಕಸಾಪದ ಗೌರವ ಕಾರ್ಯದರ್ಶಿ ಪದ್ಮಿನಿ ನಾಗರಾಜು ಅವರು ಸಭಾ ಸೂಚನಾ ಪತ್ರದಲ್ಲಿ ತಿಳಿಸಿದ್ದಾರೆ.

ಬಿಜೆಪಿ ತಿರಂಗಾ ಯಾತ್ರೆ ನಾಳೆ

ಪ್ರಜಾವಾಣಿ ವಾರ್ತೆ



ಆರ್. ಅಶೋಕ

ಬೆಂಗಳೂರು: ಭಾರತೀಯ ಸೇನೆಗೆ ಸಂಪೂರ್ಣ ಬೆಂಬಲ ನೀಡುವ ಉದ್ದೇಶದಿಂದ ಇದೇ 15 ರಂದು ಬೆಂಗಳೂರು ಸೇರಿ ರಾಜ್ಯದ ಪ್ರಮುಖ ನಗರಗಳಲ್ಲಿ ತಿರಂಗಾ ಯಾತ್ರೆ ನಡೆಸಲಾಗುವುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, 'ತಿರಂಗಾ ಯಾತ್ರೆಯಲ್ಲಿ ಪಕ್ಷದ ಚಿಹ್ನೆ ಬಳಸುವುದಿಲ್ಲ. ರಾಷ್ಟ್ರ ಧ್ವಜವನ್ನು ಮಾತ್ರ ಬಳಸಲಾಗುವುದು' ಎಂದರು.

15ರಂದು ಬೆಂಗಳೂರಿನ ಮಲ್ಲೇಶ್ವರದ ಸಂಪಿಗೆ ರಸ್ತೆಯ ಶಿರೂರು ಪಾರ್ಕ್‌ನಿಂದ 18ನೇ ಕ್ರಾಸ್‌ವರೆಗೆ ಯಾತ್ರೆ ನಡೆಯಲಿದೆ. ಮೇ 16 ಮತ್ತು 17ರಂದು ಜಿಲ್ಲಾ ಕೇಂದ್ರಗಳಲ್ಲಿ, ಮೇ 18 ರಿಂದ 23ರವರೆಗೆ ತಾಲ್ಲೂಕು ಕೇಂದ್ರಗಳಲ್ಲಿ ಯಾತ್ರೆ ನಡೆಯಲಿದೆ. ಎಂದರು.

ಶಿವಮೊಗ್ಗದಲ್ಲಿ ಈ ಕುರಿತು ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, 'ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಎಲ್ಲ ರಾಜ್ಯಗಳಲ್ಲಿ ತಿರಂಗಾ ಯಾತ್ರೆ ನಡೆಸಲು ಕರೆ ನೀಡಿದ್ದಾರೆ' ಎಂದು ಹೇಳಿದರು.

ಒಡಕಿನ ಮಾತು ಬೇಡ: ಅಶೋಕ

ಕಾಂಗ್ರೆಸ್ ನಾಯಕರು ಸಂಘರ್ಷಕ್ಕೆ ಮುನ್ನ ಶಾಂತಿಯ ಮಾತು ಆಡುತ್ತಾರೆ. ಕದನ ವಿರಾಮ ಆದಾಗ ಸಂಘರ್ಷ ನಿಲ್ಲಿಸಿದ್ದೇಕೆ ಎಂದು ಪ್ರಶ್ನಿಸುತ್ತಾರೆ. ಇದು ಸಂಸತ್ತಿನ ಅಧಿವೇಶನ ನಡೆಸುವ ಸಮಯವೂ ಅಲ್ಲ. ನಮ್ಮ ಯೋಧರು ತಮ್ಮ ಸಾಹಸ ಕಾರ್ಯಕ್ಕೆ ಪುರಾವೆಗಳನ್ನು ನೀಡಿದ್ದಾರೆ. ಇನ್ನು ಮುಂದೆ ಸಾಕ್ಷಿ ಎಲ್ಲಿದೆ ಎಂದು ಯಾರೂ ಕೇಳಬಾರದು' ಎಂದು ಆರ್.ಅಶೋಕ ಹೇಳಿದರು.



ಬರುತ್ತಿವೆ ಪಾರದರ್ಶಕ ದೃಶ್ಯಪರದೆಗಳು

‘ಎಐ’ ಹೆದರಿಕೆಯಲ್ಲಿ ಮುದುಡಿದ ‘ಸ್ಪ್ರೆಡ್‌ಶೀಟ್’

ಕೃಷ್ಣ ಭಟ್

ಆರ್ಟಿಫಿಶಿಯಲ್ ಇಂಟಲಿಜೆನ್ಸ್ (ಎ.ಐ.) ಬೆಳೆಯುತ್ತಿರುವ ಈ ಹೊತ್ತಿನಲ್ಲಿ ನಮ್ಮ ಹಲವು ಕೆಲಸಗಳ ವರ್ತನೆಯಲ್ಲಿ ಬದಲಾವಣೆಯಾಗಿದೆ. ಮೊದಲು ಬಳಸುತ್ತಿದ್ದ ರೀತಿಯಲ್ಲಿ ಸರ್ಚ್ ಎಂಜಿನ್‌ಗಳನ್ನು ನಾವು ಬಳಸುತ್ತಿಲ್ಲ. ಸರ್ಚ್ ಎಂಜಿನ್‌ಗಳನ್ನು ಬಳಸುವುದರ ಬದಲಿಗೆ ಎಐ ಟೂಲ್‌ಗಳನ್ನು ಬಳಸುತ್ತಿದ್ದೇವೆ. ಉದ್ಯಮಗಳು ಎಲ್ಲ ಆಟೋಮೇಷನ್‌ಗೂ ಎಐಯನ್ನು ಬಳಕೆ ಮಾಡುತ್ತಿವೆ.

ಆದರೆ, ಈ ಮಧ್ಯೆ ಎಐ ಬಂದ ಕಾಲದಿಂದಲೇ ನಡುಕ ಶುರುವಾಗಿದ್ದು ಸ್ಪ್ರೆಡ್‌ಶೀಟ್‌ಗೆ ಎಂದರೆ ನೀವು ನಂಬಬೇಕು!

‘ಸ್ಪ್ರೆಡ್‌ಶೀಟ್’ ಅಥವಾ ‘ಎಕ್ಸೆಲ್ ಶೀಟ್’ನ ಪರಿಕಲ್ಪನೆ ಆರಂಭವಾಗಿದ್ದೇ ಫ್ಲಾಪಿ ಡಿಸ್ಕ್‌ಗಳನ್ನು ನಾವು ಬಳಸುತ್ತಿದ್ದ ಕಾಲದಲ್ಲಿ. ಆದರೆ, ಅದು ಇಂದಿನವರೆಗೂ ತನ್ನ ಅಸ್ತಿತ್ವ ಉಳಿಸಿಕೊಂಡಿತ್ತು. ಅಷ್ಟೇ ಅಲ್ಲ, ಅದು ತನ್ನ ಅಸ್ತಿತ್ವವನ್ನು ದಿನದಿಂದ ದಿನಕ್ಕೆ ವಿಸ್ತರಿಸಿಕೊಳ್ಳುತ್ತಲೇ ಇತ್ತು. ಸಾವಿರಾರು ಉದ್ಯೋಗಿಗಳಿರುವ ಕಂಪನಿಗಳು ಕೂಡ ಸ್ಪ್ರೆಡ್‌ಶೀಟ್‌ಗಳನ್ನು ಅತ್ಯಂತ ಸಾಮಾನ್ಯವೆಂಬಂತೆ ಬಳಸುತ್ತಿರುತ್ತವೆ. ಹಲವು ಪ್ರೊಸೆಸ್‌ಗಳಿಗೆ ಸ್ಪ್ರೆಡ್‌ಶೀಟ್ ಒಂದು ಸುಲಭ ಮತ್ತು ಸರಳ ವಿಧಾನವಾಗಿ ಕೆಲಸ ಮಾಡುತ್ತವೆ. ಅಷ್ಟೇ ಅಲ್ಲ, ಸಿಆರ್‌ಎಂ, ಡೇಟಾ ನಿರ್ವಹಣೆ ಸೇರಿದಂತೆ ಹಲವು ಕೆಲಸಗಳಿಗೆ ಸ್ಪ್ರೆಡ್‌ಶೀಟ್ ಕೆಲಸ ಮಾಡುವ ವಿಧಾನದಲ್ಲಿಯೇ ಕಂಪನಿಗಳು ತಮಗೆ ಬೇಕಾದ ಹಾಗೆ ಸಣ್ಣಪುಟ್ಟ ಸಾಫ್ಟ್‌ವೇರ್‌ಗಳನ್ನೂ ಅಭಿವೃದ್ಧಿಪಡಿಸಿಕೊಂಡಿವೆ.

ಇವೆಲ್ಲವುಗಳಿಗೂ ಸ್ಪ್ರೆಡ್‌ಶೀಟ್ ಒಂದು ರೀತಿಯ ತಾಯಿ ಇದ್ದ ಹಾಗೆ. ಇಡೀ ಉದ್ಯಮ ಮತ್ತು ಸರ್ವೀಸ್ ವಲಯದಲ್ಲಿ ಸ್ಪ್ರೆಡ್‌ಶೀಟ್ ಎಂಬುದು ಒಂದು ಆಟದ ಮೈದಾನ ಇದ್ದ ಹಾಗೆ. ಆ ಮೈದಾನದಲ್ಲಿ ತಮಗೆ ಬೇಕಾದ ಆಟಗಳನ್ನು ಬೇರೆ ಬೇರೆ ತಂಡಗಳು ಆಡುತ್ತಿದ್ದವು. ಆದರೆ, ಈಗ ಆಟ ಅದೇ ಇದ್ದರೂ, ಮೈದಾನ ಬದಲಾಗುತ್ತಿದೆ!

ಈ ಎಲ್ಲ ಕೆಲಸವನ್ನೂ ಜೆನ್ ಎಐ ಇನ್ನಷ್ಟು ಸುಲಭವಾಗಿ ಮತ್ತು ಸರಳವಾಗಿ, ಅಷ್ಟೇ ಅಲ್ಲ ಇನ್ನೂ ಪರಿಣಾಮಕಾರಿಯಾಗಿ ಮಾಡಬಲ್ಲದು ಎಂಬುದು ಈಗ ಗೊತ್ತಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ಸ್ಪ್ರೆಡ್‌ಶೀಟೇ ಒಂದು ಸಮಸ್ಯೆಯಾಗುತ್ತಿತ್ತು. ಸಮಸ್ಯೆಯನ್ನು ನಿಖರವಾಗಿ ಪರಿಹಾರ ಮಾಡುತ್ತದೆಯಾದರೂ, ಭವಿಷ್ಯದ ಊಹೆ ಮಾಡುವುದಿಲ್ಲ. ಆ ಊಹೆಯನ್ನು ನಾವೇ ಮಾಡಬೇಕು. ವಿಶ್ಲೇಷಣೆ ಮಾಡುವುದಿಲ್ಲ. ಬದಲಿಗೆ, ವಿಶ್ಲೇಷಣೆಗೆ ಡೇಟಾ ಕೊಡುತ್ತದೆ.

ಆದರೆ, ಎಐ ಹಾಗಲ್ಲವಲ್ಲ. ನೀವು ಡೇಟಾ ಕೊಟ್ಟರೆ ಸಾಕು, ವಿಶ್ಲೇಷಣೆ ಮಾಡಿಕೊಡುತ್ತದೆ! ಎಲ್ಲಕ್ಕಿಂತ ಮುಖ್ಯವಾಗಿ ಸಮಯ ಉಳಿತಾಯವಾಗುತ್ತದೆ. ಸ್ಪ್ರೆಡ್‌ಶೀಟ್‌ನಲ್ಲಿ ನಾವು ಪಿವೋಟ್‌ಚಾರ್ಟ್‌ಗಳನ್ನು ಹಾಕಿಕೊಂಡು, ಅದರಲ್ಲಿ ಸರ್ಕಸ್ ಮಾಡಿಕೊಂಡು ವಿಶ್ಲೇಷಣೆಗೆ ಡೇಟಾ ಸಿದ್ಧಪಡಿಸಿಕೊಳ್ಳಬೇಕು. ಎಐ ಇವೆಲ್ಲವನ್ನೂ ಒಂದು ಕ್ಲಿಕ್‌ನಲ್ಲಿ ಮಾಡಿ ತೋರಿಸುತ್ತದೆ.

ಸೇವಾವಲಯದಲ್ಲಿ ಸಮಯ ಅತ್ಯಂತ ಮುಖ್ಯ. ಸಾವಿರಾರು ಕಾಲಂಗಳಲ್ಲಿ ಡೇಟಾ ತುಂಬಿಕೊಂಡು ಅದನ್ನು ವಿಶ್ಲೇಷಣೆ ಮಾಡುವುದಕ್ಕೆ ಅಪಾರ ಸಮಯ ಹಿಡಿಯುತ್ತದೆ. ಆದರೆ, ಎಐ ಇಂಥದ್ದನ್ನು ಕೆಲವು ಸೆಕೆಂಡುಗಳಲ್ಲಿ ಮಾಡಿ ನಮ್ಮ ಮುಂದಿಡುತ್ತದೆ. ಕೆಲವು ತಜ್ಞರು ಊಹಿಸುವ ಪ್ರಕಾರ ಇನ್ನೆರಡು ವರ್ಷದಲ್ಲಿ ಕಂಪನಿಗಳು ಹಾಗೂ ಉದ್ಯಮಿಗಳು ಸ್ಪ್ರೆಡ್‌ಶೀಟ್ ಕೈಬಿಟ್ಟು ಎಐ ಅನ್ನೇ ಪರ್ಯಾಯವಾಗಿ ಬಳಸಲು ಶುರು ಮಾಡುತ್ತವೆ.

ಸದ್ಯದ ಸನ್ನಿವೇಶದಲ್ಲಿ ಡೇಟಾ ತುಂಬುವುದಕ್ಕೆ ಸ್ಪ್ರೆಡ್‌ಶೀಟ್ ಬಳಕೆಯಾಗುತ್ತಿದ್ದು, ಅದರ ವಿಶ್ಲೇಷಣೆಗೆ ಮಾತ್ರ ಎಐ ಬಳಕೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಡೇಟಾ ಇಟ್ಟುಕೊಳ್ಳುವುದು ಮತ್ತು ಅದರ ವಿಶ್ಲೇಷಣೆ ಮಾಡುವುದೆಲ್ಲವನ್ನೂ ಎಐ ಮಾಡುತ್ತದೆ. ಸ್ಪ್ರೆಡ್‌ಶೀಟ್‌ನ ಡೇಟಾ ವಿಶ್ಲೇಷಣೆ ಮಾಡುವುದರಲ್ಲಿ ಇರುವ ದೊಡ್ಡ ಸಮಸ್ಯೆಯೇ ಮಾನವ ಸಹಜ ತಪ್ಪುಗಳು! ಅದು ವಿಶ್ಲೇಷಣೆ ಮಾಡಬಹುದಾದ ಡೇಟಾವನ್ನು ನಮ್ಮ ಎದುರು ಇಡುತ್ತದೆ. ಆದರೆ, ನಮ್ಮ ಅನುಕೂಲಕ್ಕೆ ಬೇಕಾದ ಹಾಗೆ ವಿಶ್ಲೇಷಣೆ ಮಾಡಲು ನಾವು ಡೇಟಾವನ್ನು ನಮ್ಮ ಕೈಯಾರೆ ಪ್ರೊಸೆಸ್ ಮಾಡಿಕೊಳ್ಳಬೇಕು. ಅದರ ನಂತರವೇ ಡೇಟಾ ವಿಶ್ಲೇಷಣೆಗೆ ಸಿಗುತ್ತದೆ. ಆದರೆ, ಆ ವಿಶ್ಲೇಷಣೆಯನ್ನಾದರೂ ಮನುಷ್ಯನೇ ಮಾಡಬೇಕು.

ಉದಾಹರಣೆಗೆ, ಹತ್ತಾರು ಕಂಪನಿಗಳ ವರ್ಷಗಟ್ಟಲೆ ಇನ್ವಾಯ್ಸ್ ಡೇಟಾವನ್ನು ಒಂದು ಕಂಪನಿ ಇಟ್ಟುಕೊಂಡಿದೆ ಎಂದುಕೊಳ್ಳೋಣ. ಅದರಲ್ಲಿ ಎಷ್ಟು ಪಾವತಿಯಾಗಿದೆ ಮತ್ತು ಎಷ್ಟು ಪಾವತಿಯಾಗಿಲ್ಲ ಹಾಗೂ ಯಾವ ಕಂಪನಿ ಹೆಚ್ಚು ಬಾಕಿ ಉಳಿಸಿಕೊಂಡಿದೆ ಮತ್ತು ಅದರ ಶೇಕಡವಾರು ಎಷ್ಟು ಎಂಬುದೆಲ್ಲವನ್ನೂ ಕಂಡುಹಿಡಿಯಲು ನಾವು ‘sort’ ಹಾಗೂ ಇತರ ಫಂಕ್ಷನ್‌ಗಳನ್ನು ಬಳಸಿಕೊಂಡು ಡೇಟಾ ತೆಗೆದುಕೊಳ್ಳಬೇಕು. ಅದರ ನಂತರ ಅದರ ವಿಶ್ಲೇಷಣೆ ಮಾಡಬೇಕು.

ಆದರೆ, ಜೆನ್ ಎಐ ಬಳಸಿದರೆ ಇಷ್ಟೆಲ್ಲ ಸರ್ಕಸ್ ಮಾಡಬೇಕಿಲ್ಲ. ಎಐ ಏಜೆಂಟ್ ನಿರ್ಮಾಣ ಮಾಡಿಕೊಂಡು, ಅದಕ್ಕೆ ಕಾಲಕಾಲಕ್ಕೆ ಎಲ್ಲ ಡೇಟಾ ತುಂಬಿದರೆ, ಲೈವ್ ಆಗಿ ಬೇಕಾದರೂ ಸಹಿತ ನಮಗೆ ಈ ಎಲ್ಲ ಮಾಹಿತಿಯನ್ನು ತಂದಿಡುತ್ತದೆ. ಜೊತೆಗೆ, ನಮಗೆ ಬೇಕಾದ ಹಾಗೆ ಮಾಹಿತಿಯನ್ನು ಬರೆದು ಕೂಡ ಕೊಡುತ್ತದೆ.

ಅಷ್ಟೇ ಅಲ್ಲ, ಸ್ಪ್ರೆಡ್‌ಶೀಟ್‌ನ ದೊಡ್ಡ ಮಿತಿ ಏನೆಂದರೆ, ಡೇಟಾವನ್ನು ಬಳಸಿಕೊಂಡು ಈವರೆಗೆ ಏನಾಯಿತು ಎಂದು ಹೇಳಬಹುದೇ ಹೊರತು ಮುಂದೆ ಏನಾಗಲಿದೆ ಎಂಬುದನ್ನು ಹೇಳಲಾಗುವುದಿಲ್ಲ. ಉದಾಹರಣೆಗೆ, ಕಳೆದ ವರ್ಷದಲ್ಲಿ ಹಣಕಾಸಿನ ಪರಿಸ್ಥಿತಿ ಹೀಗಿತ್ತು ಎಂಬ ಡೇಟಾವನ್ನು ಅದು ಕೊಡುತ್ತದೆಯೇ ಹೊರತು, ಮುಂದಿನ ವರ್ಷದ ಹಣಕಾಸಿನ ಪರಿಸ್ಥಿತಿ ಏನಾಗಬಹುದು ಎಂಬ ಸುಳಿವನ್ನು ಕೊಡುವುದಿಲ್ಲ. ಹಿಂದಿನ ವರ್ಷದ ಡೇಟಾ ಇಟ್ಟುಕೊಂಡು ನಾವೇ ಅದನ್ನು ವಿಶ್ಲೇಷಣೆ ಮಾಡಿಕೊಳ್ಳಬೇಕು. ಆದರೆ, ಜೆನ್ ಎಐನ ಅನುಕೂಲವೇ ಭವಿಷ್ಯವನ್ನೂ ಅದು ನಮಗೆ ಹೇಳಬಲ್ಲದು. ವಿಭಿನ್ನ ಪರಿಸ್ಥಿತಿಯನ್ನು ಕೊಟ್ಟರೆ ಹಿಂದಿನ ಡೇಟಾ ಇಟ್ಟುಕೊಂಡು ಅದು ಊಹೆ ಮಾಡಿ, ಲೆಕ್ಕಾಚಾರ ಮಾಡಿ, ಲಾಭ ನಷ್ಟವನ್ನೂ ಊಹಿಸಬಲ್ಲದು. ಯಾವುದೇ ಉದ್ಯಮಕ್ಕೆ ಅದೊಂದು ದೊಡ್ಡ ಅನುಕೂಲ.

ಸರ್ವೀಸ್ ಸೆಕ್ಟರ್‌ನಲ್ಲಿ ಇಂಥ ಸಮಯ ಉಳಿತಾಯ ಅತ್ಯಂತ ಮುಖ್ಯ!

ಕೆಲವು ವರ್ಷಗಳ ಹಿಂದೆ ‘ಪೇಜರ್’ ಎಂಬ ಸಾಧನವೊಂದಿತ್ತು ಎಂದು ನಾವು ಈಗ ಹೇಳುವ ಹಾಗೆ, ಮುಂದೆ ಕೆಲವು ವರ್ಷಗಳಲ್ಲಿ ಸರ್ವೀಸ್ ಸೆಕ್ಟರ್‌ನಲ್ಲಿರುವ ಪರಿಣತರು ಹಿಂದೆಲ್ಲ ನಾವು ಸ್ಪ್ರೆಡ್‌ಶೀಟ್‌ನಲ್ಲಿ ಇಂಥ ಸರ್ಕಸ್‌ಗಳನ್ನೆಲ್ಲ ಮಾಡುತ್ತಿದ್ದೆವು. ಆದರೆ, ಈಗ ಅವೆಲ್ಲ ನೋಡಲೂ ಸಿಗುವುದಿಲ್ಲ ಎಂದು ಹೇಳಬಹುದೇನೋ!

ಚಲುವಪ್ಪ

ನಾವು ಭವಿಷ್ಯದ ತಂತ್ರಜ್ಞಾನವನ್ನು ಹೇಗೆ ಕಲ್ಪಿಸಿಕೊಳ್ಳುತ್ತೇವೆ? ನಿಮ್ಮ ಕಾರಿನ ಗಾಜಿನ ಮೇಲೆ ನೀವು ಪ್ರಯಾಣಿಸಬೇಕಿರುವ ಹಾದಿಯ ಜಾಡಿನ (ನ್ಯಾವಿಗೇಶನ್) ಮಾಹಿತಿ ಕಾಣುವಂತಾದರೆ? ಅಥವಾ ಅಂಗಡಿಗಳ ಗಾಜಿನ ಮೇಲೆಯೇ ಉತ್ಪನ್ನಗಳ ವಿವರಗಳು, ಬೆಲೆ ಮತ್ತು ಗ್ರಾಹಕರ ವಿಮರ್ಶೆಗಳು ಕಾಣಿಸಿದರೆ?

ಈ ಎಲ್ಲವೂ ಈಗ ಕೇವಲ ವಿಜ್ಞಾನದ ಕಲ್ಪನೆಯಾಗಿ ಉಳಿದಿಲ್ಲ. ಪಾರದರ್ಶಕ ದೃಶ್ಯಪರದೆಗಳ ಮೂಲಕ ಇವು ವಾಸ್ತವವಾಗಿ ಬದಲಾಗುತ್ತಿವೆ.

ಪಾರದರ್ಶಕ ದೃಶ್ಯಪರದೆಯು ಚಾಲನೆಯಲ್ಲಿ ಇಲ್ಲದಿದ್ದಾಗ ಸಾಮಾನ್ಯ ಪಾರದರ್ಶಕ ಗಾಜಿನಂತೆ ವರ್ತಿಸಿ ದೃಶ್ಯಪರದೆಯ ಆಚೆ ಬದಿಯ ವಸ್ತುಗಳನ್ನು ನೋಡಲು ಸಾಧ್ಯವಾಗಿಸುತ್ತದೆ. ದೃಶ್ಯಪರದೆಯನ್ನು ಚಾಲನೆಗೊಳಿಸಿದಾಗ ಅದು ನೋಡುಗರಿಗೆ ಏಕಕಾಲದಲ್ಲಿ, ದೃಶ್ಯಪರದೆಯಲ್ಲಿ ಚಿತ್ರಗಳು ಹಾಗೂ ಡಿಜಿಟಲ್ ಮಾಹಿತಿಯನ್ನು ತೋರಿಸುವುದರ ಜೊತೆಗೆ ಸಾಮಾನ್ಯ ಪಾರದರ್ಶಕ ಗಾಜಿನಂತೆ, ದೃಶ್ಯಪರದೆಯ ಆಚೆ ಬದಿಯ ವಸ್ತುಗಳನ್ನು ನೋಡಲು ಸಾಧ್ಯವಾಗಿಸುತ್ತದೆ. ಇದರಿಂದ ನೋಡುಗರಿಗೆ ಚಿತ್ರಗಳು ಗಾಳಿಯಲ್ಲಿ ಸೃಷ್ಟಿಯಾಗಿ ಕಾಣುತ್ತಿರುವಂತಹ ಅನುಭವ ಉಂಟಾಗುತ್ತದೆ.

ಸ್ಯಾಮ್ಸಂಗ್ ಕಂಪನಿಯು 2012ರಲ್ಲಿ ಅಮೆರಿಕದ ಲಾಸ್ ವೇಗಸ್‌ನಲ್ಲಿ ನಡೆದ ಪ್ರದರ್ಶನವೊಂದರಲ್ಲಿ, ಪ್ರಥಮ ಬಾರಿಗೆ 46 ಇಂಚಿನ ಪಾರದರ್ಶಕ ದೃಶ್ಯಪರದೆಯನ್ನು ಜಗತ್ತಿಗೆ ಪರಿಚಯಿಸಿತು. ಅಲ್ಲಿಂದ ಈಚೆಗೆ ಹಲವು ಕಂಪನಿಗಳು ಪಾರದರ್ಶಕ ದೃಶ್ಯಪರದೆಗಳನ್ನು ಸಾಮಾನ್ಯ ಬಳಕೆಯಲ್ಲಿ ಉಪಯೋಗಿಸಲು ಸಾಧ್ಯವಾಗುವಂತೆ ಅಭಿವೃದ್ಧಿಪಡಿಸುತ್ತಿವೆ.

ಪಾರದರ್ಶಕ ದೃಶ್ಯಪರದೆಗಳು ‘ಪಾರದರ್ಶಕ ಒಎಲ್‌ಇಡಿ’ ಅಥವಾ ‘ಮೈಕ್ರೋಎಲ್‌ಇಡಿ’ ತಾಂತ್ರಿಕತೆಯ ಮೇಲೆ ಅವಲಂಬಿತವಾಗಿವೆ. ಸಾಂಪ್ರದಾಯಿಕ ಟಿ.ವಿ.ಗಳು ‘ಲಿಕ್ವಿಡ್ ಕ್ರಿಸ್ಟಲ್ ಡಿಸ್‌ಪ್ಲೆ’ಯನ್ನು ಉಪಯೋಗಿಸುತ್ತವೆ. ಈ ತಾಂತ್ರಿಕತೆಯಲ್ಲಿ ಹಿಂಬದಿಯ ಬೆಳಕು ಮತ್ತು ಇವುಗಳನ್ನು ಅಡಕಗೊಳಿಸುವ ಕಪಾಟಿನ ಅವಶ್ಯಕತೆ ಇರುತ್ತದೆ. ಆದರೆ ಪಾರದರ್ಶಕ ಒಎಲ್‌ಇಡಿ ದೃಶ್ಯಪರದೆಗಳಲ್ಲಿ ಪ್ರತಿಯೊಂದು ಚಿತ್ರಮೂಲಾಂಶದ (ಪಿಕ್ಸೆಲ್) ಮೂಲಕ ವಿದ್ಯುತ್ ಶಕ್ತಿ ಪ್ರವಹಿಸಿದಾಗ, ಈ ಪಿಕ್ಸೆಲ್‌ಗಳು ತಮ್ಮದೇ ಬೆಳಕನ್ನು ಸೂಸುತ್ತ ಬೆಳಗುತ್ತವೆ. ಎಂದರೆ ‘ಪಿಕ್ಸೆಲ್’ಗಳಲ್ಲಿರುವ ಕೆಂಪು, ಹಸಿರು ಮತ್ತು ನೀಲಿಬಣ್ಣಗಳು (ಆರ್‌ಜಿಬಿ) ಪಾರದರ್ಶಕ ಪರದೆಗಳಂತೆಯೇ ಪರಿವರ್ತಿತವಾಗುತ್ತವೆ. ಇದರ ತಾತ್ಪರ್ಯ, ಪಾರದರ್ಶಕವಾಗಿರುವ ಈ ಒಎಲ್‌ಇಡಿಗಳು ಪರದೆ ಮತ್ತು ಕಪಾಟು ಎಂಬ ಭೇದದಿಂದ ಮುಕ್ತವಾಗುತ್ತವೆ. ಹೀಗಾಗಿ ಸಾಂಪ್ರದಾಯಿಕ ದೃಶ್ಯಪರದೆಗಳಲ್ಲಿ ಅವಶ್ಯಕವಾಗಿರುವ ಹಿಂಬದಿಯ ಬೆಳಕಿನ ಮೂಲ ಮತ್ತು ಅದನ್ನು ಅಡಕಗೊಳಿಸುವ ಕಪಾಟಿನ ಅವಶ್ಯಕತೆಯನ್ನು ಇಲ್ಲವಾಗಿಸುತ್ತದೆ. ಚಾಲನೆಗೊಳಿಸದ ಪಾರದರ್ಶಕ ಒಎಲ್‌ಇಡಿ ಪಿಕ್ಸೆಲ್‌ಗಳೇ ಪಾರದರ್ಶಕ ಪರದೆಯಾಗುತ್ತವೆ; ಎಂದರೆ ಬೆಳಕನ್ನು ತಮ್ಮ ಮೂಲಕ ಹಾದು ಹೋಗಲು ಅನುವು ಮಾಡಿಕೊಡುತ್ತವೆ; ಚಾಲನೆಗೊಳಿಸಿದಾಗ ಬೆಳಕನ್ನು ಸೂಸಿ ಪ್ರತಿಬಿಂಬವನ್ನು ಮೂಡಿಸುತ್ತವೆ. ಪರದೆ ಮತ್ತು ಕಪಾಟಿನ ಪ್ರತ್ಯೇಕತೆ ಇಲ್ಲದಿರುವುದರಿಂದ ಪಾರದರ್ಶಕ ಪರದೆ ತುಂಬ ತೆಳುವಾಗಿಯೂ ಇರುತ್ತದೆ.

ಭವಿಷ್ಯದಲ್ಲಿ ಪಾರದರ್ಶಕ ದೃಶ್ಯಪರದೆಗಳನ್ನು ಕಾರು ಮತ್ತು ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ ಬಳಸುವುದರ ಮೂಲಕ ನ್ಯಾವಿಗೇಷನ್, ವೇಗ ಮತ್ತು ಸುರಕ್ಷತಾ ಎಚ್ಚರಿಕೆಗಳನ್ನು ವಾಹನಚಾಲಕರಿಗೆ ಅವರ ನೋಟಕ್ಕೆ ಅಡ್ಡಬಾರದಂತೆ ವಾಹನಗಳ ಗಾಜಿನ ಮೇಲೆ ತೋರಿಸಲು ಸಾಧ್ಯವಾಗುತ್ತದೆ.

ಪಾರದರ್ಶಕ ದೃಶ್ಯಪರದೆಗಳನ್ನು ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿಯೂ ಉಪಯೋಗಿಸಿಕೊಳ್ಳಬಹುದು. ಇದು ಕಲಿಕೆಯಲ್ಲಿ ಹೊಸ ಆಯಾಮವನ್ನು ಉಂಟುಮಾಡಬಲ್ಲವು. ಇವುಗಳ ಬಳಕೆಯು ಸಂವೇದನೆಯನ್ನು ಚುರುಕುಗೊಳಿಸುತ್ತದೆ; ತಲ್ಲಿನತೆಯನ್ನೂ ಹೆಚ್ಚಿಸುತ್ತದೆ. ಜೊತೆಗೆ ವಿದ್ಯಾರ್ಥಿಗಳ ಏಕಾಗ್ರತೆಯೂ ತೀವ್ರವಾಗಬಹುದು. ವಿದ್ಯಾಭ್ಯಾಸದ ಅನುಭವವನ್ನು ಹೆಚ್ಚಿಸಲು ಉಪಯೋಗಿಸಬಹುದು. ಉದಾಹರಣೆಗೆ, ಅಂಗರಚನಶಾಸ್ತ್ರದ ತರಗತಿಗಳಲ್ಲಿ ಪಾರದರ್ಶಕ ದೃಶ್ಯಪರದೆಗಳನ್ನು ಸ್ನಾಯುಗಳ ಮತ್ತು ಮೂಳೆಗಳ, ದೇಹದ ಇತರ ಅಂಗಾಂಗಗಳ ವಿವಿಧ ಸ್ತರದ ಚಿತ್ರಗಳನ್ನು ನೈಜವಾದ ರೀತಿಯಲ್ಲಿಯೇ ತೋರಿಸಲು ಉಪಯೋಗಿಸಬಹುದು.

ಪಾರದರ್ಶಕ ದೃಶ್ಯಪರದೆಗಳನ್ನು ಆರೋಗ್ಯಕ್ಷೇತ್ರದಲ್ಲಿಯೂ ಉಪಯೋಗಿಸಬಹುದು. ರೋಗನಿರ್ಣಯ ಮತ್ತು ಶಸ್ತ್ರಚಿಕಿತ್ಸೆಗಳಲ್ಲಿ ಇದನ್ನು ಬಳಸಿ ಚಿಕಿತ್ಸೆಯ ಗುಣಮಟ್ಟವನ್ನು ಹೆಚ್ಚಿಸಬಹುದು.

ಭವಿಷ್ಯದಲ್ಲಿ ವಸ್ತುಸಂಗ್ರಹಾಲಯಗಳಲ್ಲಿ ಕಲಾಕೃತಿಗಳನ್ನು ನೈಜವಾದ ರೀತಿಯಲ್ಲಿ ತೋರಿಸಲು ಕೂಡ ಪಾರದರ್ಶಕ ದೃಶ್ಯಪರದೆಗಳನ್ನು ಬಳಸಬಹುದು.

ತಾಂತ್ರಿಕತೆಯು ಬಹಳ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವಂಥ ಈ ಶತಮಾನದಲ್ಲಿ, ಪಾರದರ್ಶಕ ಟಿ.ವಿ. ಹಾಗೂ ಕಂಪ್ಯೂಟರ್ ಪರದೆಗಳು ತಾಂತ್ರಿಕ ಪ್ರಪಂಚದ ಹೊಸ ಕಲ್ಪನೆಯ ಕ್ರಿಯಾಶೀಲತೆಗೆ ದೊಡ್ಡ ಕೊಡುಗೆಯಾಗಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

17) ರಾಸಾಯನಿಕ ಕ್ರಿಯೆಯಲ್ಲಿ ಹಲವು ವಿಧಗಳಿವೆ ಅವುಗಳನ್ನು ಹೆಸರನ್ನು ಬರೆಯಿರಿ

ಉತ್ತರ:– ರಾಸಾಯನಿಕ ಕ್ರಿಯೆಗಳಲ್ಲಿ ಹಲವು ವಿಧಗಳಿವೆ

1) ರಾಸಾಯನಿಕ ಸಂಯೋಗ ಕ್ರಿಯೆ
2) ರಾಸಾಯನಿಕ ವಿಭಜನೆ ಕ್ರಿಯೆ
3) ರಾಸಾಯನಿಕ ಸ್ಥಾನಪಲ್ಲಟ ಕ್ರಿಯೆ
4) ರಾಸಾಯನಿಕ ದ್ವಿಸ್ಥಾನಪಲ್ಲಟ ಕ್ರಿಯೆ.

18) ಅಂತರುಷ್ಣಕ ರಾಸಾಯನಿಕ ಕ್ರಿಯೆ ಎಂದರೇನು?

ಉತ್ತರ:– ಉಷ್ಣವನ್ನು ಹೀರಿಕೊಳ್ಳುವ ರಾಸಾಯನಿಕ ಕ್ರಿಯೆಗಳಿಗೆ ಅಂತರುಷ್ಣಕ ರಾಸಾಯನಿಕ ಕ್ರಿಯೆ ಎನ್ನುವರು.

19) ಬಹಿರುಷ್ಣಕ ರಸಾಯನಿಕ ಕ್ರಿಯೆ ಎಂದರೇನು?

ಉತ್ತರ:– ಉಷ್ಣ ಬಿಡುಗಡೆ ಮಾಡುವ ರಾಸಾಯನಿಕ ಕ್ರಿಯೆಗಳಿಗೆ ಬಹುರುಷ್ಣಕ ರಾಸಾಯನಿಕ ಕ್ರಿಯೆಗಳು ಎನ್ನುವರು.

20) ಉಸಿರಾಟವನ್ನು ಬಹಿರುಷ್ಣಕ ಕ್ರಿಯೆ ಎಂದು ಏಕೆ ಪರಿಗಣಿಸಲಾಗಿದೆ?

ಉತ್ತರ:– ಉಸಿರಾಟದ ಕ್ರಿಯೆಯಲ್ಲಿ ಜೀವಕೋಶಗಳಲ್ಲಿರುವ ಗ್ಲುಕೋಸ್ ಆಕ್ಸಿಜನ್ನೊಂದಿಗೆ ಪ್ರತಿವರ್ತಿಸಿ (ದಹನಗೊಂಡು) ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರನ್ನು ಕೊಡುತ್ತದೆ ಈ ಕ್ರಿಯೆಯಲ್ಲಿ ಉಷ್ಣ ಬಿಡುಗಡೆ ಆಗುವುದರಿಂದ ಇದನ್ನು ಬಹಿರುಷ್ಣಕ ಕ್ರಿಯೆ ಎಂದು ಪರಿಗಣಿಸುತ್ತಾರೆ.

21) ರಾಸಾಯನಿಕ ಸಂಯೋಜನೆ ಎಂದರೇನು?

ಉತ್ತರ:– ಎರಡು ಇಲ್ಲವೇ ಹೆಚ್ಚು ಪದಾರ್ಥಗಳು ರಾಸಾಯನಿಕವಾಗಿ ಒಟ್ಟುಗೂಡಿ ಕೇವಲ ಒಂದೇ ಒಂದು ಉತ್ಪನ್ನವನ್ನು ಉಂಟು ಮಾಡುವ ರಾಸಾಯನಿಕ ಕ್ರಿಯೆಗಳಿಗೆ ರಾಸಾಯನಿಕ ಸಂಯೋಗ ಕ್ರಿಯೆಗಳು ಎಂದು ಕರೆಯುತ್ತಾರೆ ಇದಕ್ಕೆ ರಾಸಾಯನಿಕ ಸಂಯೋಜನೆ ಎಂದು ಕರೆಯುತ್ತಾರೆ.

22) ಸುಟ್ಟಸುಣ್ಣಕ್ಕೆ ನೀರು ಸುರಿದರೆ ದ್ರಾವಣವು ಕುದಿಯುತ್ತದೆ ಇದಕ್ಕೆ ಕಾರಣ ಕೊಡಿ

ಉತ್ತರ:– ಸುಟ್ಟ ಸುಣ್ಣಕ್ಕೆ (ಕ್ಯಾಲ್ಸಿಯಂ ಆಕ್ಸೈಡ್) ಸಂಯುಕ್ತವು ನೀರಿನೊಂದಿಗೆ ಕ್ಷಿಪ್ರವಾಗಿ ಪ್ರತಿವರ್ತಿಸಿ ಅರಳಿದ ಸುಣ್ಣ(ಕ್ಯಾಲ್ಸಿಯಂ ಹೈಡ್ರಾಕ್ಸೈಡ್) ಅನ್ನು ಉಂಟು ಮಾಡುವುದರೊಂದಿಗೆ ಅಪಾರ ಉಷ್ಣವನ್ನು ಬಿಡುಗಡೆ ಮಾಡುತ್ತದೆ, ಹೀಗಾಗಿ ದ್ರಾವಣ ಕುದಿಯುತ್ತದೆ.

23) ಆಕ್ಸಿಜನ್‌ನೊಂದಿಗೆ ಹೈಡ್ರೋಜನ್ ಪ್ರತಿವರ್ತಿಸಿದಾಗ ನೀರು ಉಂಟಾಗುತ್ತದೆ, ಅದು ಯಾವ ವಿಧದ ರಾಸಾಯನಿಕ ಕ್ರಿಯೆಯಾಗಿದೆ?

ಉತ್ತರ:– ಇಲ್ಲಿ ಎರಡು ಪ್ರತಿವರ್ತಕಗಳು ರಾಸಾಯನಿಕವಾಗಿ ಒಗ್ಗೂಡಿ ನೀರು ಉಂಟಾಗುತ್ತದೆ ಇದು ರಾಸಾಯನಿಕ ಸಂಯೋಗ ಕ್ರಿಯೆಯಾಗಿದೆ.

24) ವಿಭಜನ ಕ್ರಿಯೆ ಎಂದರೇನು?

ಉತ್ತರ:– ಒಂದು ರಾಸಾಯನಿಕ ಸಂಯುಕ್ತವು ರಾಸಾಯನಿಕವಾಗಿ ಒಡೆದು ಎರಡು ಇಲ್ಲವೇ ಇನ್ನೂಹೆಚ್ಚು ಸರಳ ಪದಾರ್ಥಗಳನ್ನು ನೀಡುವ ಕ್ರಿಯೆಗೆ ರಾಸಾಯನಿಕ ವಿಭಜನ ಕ್ರಿಯೆ ಎಂದು ಕರೆಯುತ್ತಾರೆ. ಇದಕ್ಕೆ ರಾಸಾಯನಿಕ ವಿಭಜನೆ ಎಂದು ಕರೆಯುತ್ತಾರೆ.

ಉದಾ:– ಫೆರಸ್ ಸಲ್ಫೇಟ್ ಸಂಯುಕ್ತವನ್ನು ಕಾಯಿಸಿದಾಗ ರಾಸಾಯನಿಕವಾಗಿ ಒಡೆದು ನಿರ್ಜಲ ಫೆರಸ್ ಸಲ್ಫೇಟ್ ಮತ್ತು ನೀರು ಉಂಟಾಗುತ್ತದೆ,

25) ಮೆಗ್ನೇಷಿಯಂ ಪಟ್ಟಿಯನ್ನು ಗಾಳಿಯಲ್ಲಿ ಉರಿಸುವುದು ಮತ್ತು ಮೆಗ್ನೇಸಿಯಂ ಆಕ್ಸೈಡ್ ಅನ್ನು ವಾಚ್‌ಗ್ಲಾಸ್‌ನಲ್ಲಿ ಸಂಗ್ರಹಿಸುವುದರ ಚಿತ್ರ ಬರೆಯಿರಿ

ಉತ್ತರ:–



26) ಉಷ್ಣ ವಿಭಜನ ಕ್ರಿಯೆ ಎಂದರೇನು?

ಉತ್ತರ:– ಉಷ್ಣ ಶಕ್ತಿಯ ನೆರವಿನಿಂದ ಒಂದು ರಾಸಾಯನಿಕ ಸಂಯುಕ್ತವು ಎರಡು ಇಲ್ಲವೇ ಹೆಚ್ಚು ಉತ್ಪನ್ನಗಳಾಗಿ ಒಡೆದು ಹೋಗುವ ಕ್ರಿಯೆಗೆ ಉಷ್ಣ ವಿಭಜನ ಕ್ರಿಯೆ ಎಂದು ಹೆಸರು.

27 ಸಸ್ಯ ಜನ್ಯ ವಿಘಟನೆಯಿಂದ ಕಾಪೋಸ್ಟ್ ಮಾಡಲಾಗುತ್ತದೆ. ಅದೂ ಯಾವ ರೀತಿಯ ಕ್ರಿಯೆಗೆ ಉದಾಹರಣೆಯಾಗಿದೆ?

ಉತ್ತರ:– ಬಹಿರುಷ್ಣಕ ಕ್ರಿಯೆ

28) ದ್ಯುತಿ ವಿಭನ ಕ್ರಿಯೆ ಎಂದರೇನು?

ಉತ್ತರ:– ಬೆಳಕಿನ ಸಾನಿಧ್ಯದಲ್ಲಿ ಒಂದು ರಾಸಾಯನಿಕ ಸಂಯುಕ್ತವು ಒಡೆದು ಹೋಗಿ ಎರಡು ಇಲ್ಲವೇ ಹೆಚ್ಚು ಹೊಸ ಪದಾರ್ಥಗಳನ್ನು ಉಂಟುಮಾಡುವ ರಾಸಾಯನಿಕ ಕ್ರಿಯೆಗೆ ದ್ಯುತಿ ವಿಭಜನ ಕ್ರಿಯೆ ಎಂದು ಹೆಸರು.

ಉದಾ:– ಸೂರ್ಯನ ಬೆಳಕಿನ ಸಾನಿಧ್ಯದಲ್ಲಿ ಬೆಳ್ಳಿಯ ಕ್ಲೋರೈಡ್ ಸಂಯುಕ್ತವು ರಾಸಾಯನಿಕವಾಗಿ ವಿಭನೆ ಹೊಂದಿ ಬೆಳ್ಳಿ ಮತ್ತು ಕ್ಲೋರಿನ್ ಅನಿಲಗಳನ್ನು ಕೊಡುತ್ತದೆ,

29) ಸೂರ್ಯನ ಬೆಳಕಿನಲ್ಲಿ ಸಿಲ್ವರ್ ಕ್ಲೋರೈಡ್ ವಿಭಜನೆಗೊಳ್ಳುತ್ತದೆ ಎಂದು ಹೇಗೆ ತೋರಿಸುವಿರಿ?

ಉತ್ತರ:– ಒಂದು ಚೀನಾ ಪಾತ್ರೆಯಲ್ಲಿ ಸುಮಾರು 2ಗ್ರಾಂ ಬೆಳ್ಳಿಯ ಕ್ಲೋರೈಡ್ ತೆಗೆದುಕೊಳ್ಳಿ, ಈ ಪಾತ್ರೆಯನ್ನು ಸ್ವಲ್ಪ ಸಮಯ ಸೂರ್ಯನ ಬೆಳಕಿನಲ್ಲಿಡಿ ಬೆಳ್ಳಿಯ ಕ್ಲೋರೈಡ್‌ನ ಬಣ್ಣದಲ್ಲಿ ಉಂಟಾಗುವ ಬದಲಾವಣೆಯನ್ನು ಗಮನಿಸಿ. ಬೆಳ್ಳಿಯ ಕ್ಲೋರೈಡಿನ ಬಿಳಿಯ ಹರಳುಗಳು ಸೂರ್ಯನ ಬೆಳಕಿನಲ್ಲಿ ಬೂದು ಬಣ್ಣಕ್ಕೆ ತಿರುಗುತ್ತದೆ, ಬೆಳ್ಳಿಯ ಕ್ಲೋರೈಡ್ ಸಂಯುಕ್ತವು ಸೂರ್ಯನ ಬೆಳಕಿನಲ್ಲಿ ರಾಸಾಯನಿಕ ವಿಭಜನೆಗೆ ಒಳಗಾಗಿ ಬೆಳ್ಳಿಯನ್ನು ಕ್ಲೋರಿನ್ ಅನಿಲವನ್ನು ಕೊಡುತ್ತದೆ.,

30) ವಿಭಜನ ಕ್ರಿಯೆಯ ಮೂರು ವಿಧಗಳನ್ನು ತಿಳಿಸಿ

ಉತ್ತರ:– ರಾಸಾಯನಿಕ ಕ್ರಿಯೆ ಜರಗುವುದಕ್ಕೆ ಅಗತ್ಯವಿರುವ ಶಕ್ತಿಯನ್ನು ಯಾವ ರೂಪದಲ್ಲಿ ಒದಗಿಸಿದೆ ಎಂಬುದನ್ನು ಆಧರಿಸಿ ವಿಭಜನೆ ಕ್ರಿಯೆಯನ್ನು 3 ವಿಧಗಳಾಗಿ ವಿಂಗಡಿಸಿದ್ದಾರೆ 1) ಉಷ್ಣ ವಿಭಜನೆ 2) ದ್ಯುತಿ ವಿಭಜನೆ 3) ವಿದ್ಯುತ್ ವಿಭನೆ

31) ಸ್ಥಾನಪಲ್ಲಟ ಕ್ರಿಯೆ ಎಂದರೇನು?

ಉತ್ತರ:– ಹೆಚ್ಚು ಕ್ರಿಯಾಪಟುವಾಗಿರುವ ಧಾತುಗಳು ಕಡಿಮೆ ಕ್ರಿಯಾಪಟುತ್ವವುಳ್ಳ ಧಾತುಗಳನ್ನು ವಿಸ್ಥಾಪಿಸುವುದನ್ನು ಒಳಗೊಳ್ಳುವ ರಾಸಾಯನಿಕ ಕ್ರಿಯೆಗಳಿಗೆ ಸ್ಥಾನಪಲ್ಲಟ ಕ್ರಿಯೆಗಳು ಎಂದು ಹೆಸರು,

ಉದಾ:– ಕಬ್ಬಿಣವು ತಾಮ್ರಕ್ಕಿಂತ ಹೆಚ್ಚು ಕ್ರಿಯಾಪಟುತ್ವವುಳ್ಳ ಧಾತು, ಆದ್ದರಿಂದ ತಾಮ್ರದ ಸಲ್ಫೇಟಿನಲ್ಲಿರುವ ತಾಮ್ರವನ್ನು ಕಬ್ಬಿಣವು ಸ್ಥಾನಪಲ್ಲಟಗೊಳಿಸುತ್ತದೆ.

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

PUC - CHEMISTRY

Types of Solutions

Problems:-

1. Calculate the molality of a solution containing 5.3 g of anhydrous NaCO in 200 g of water?

Ans:-

$$\text{Molality (m)} = \frac{\left(\dfrac{\text{Mass of solute in grams}}{\text{molar mass}}\right)}{\left(\dfrac{\text{Mass of solvent in grams}}{1000}\right)}$$

$$\therefore \text{Molality (m)} = \frac{5.3\,g/106\,g\,mol}{200\,g/1000} = \frac{(0.05\,mol)}{(0.2\,kg)} = 0.25\,mol/kg\,(or)\,0.25\,m$$

2. Calculate the molarity of the solution containing 4.9 grams of HSO dissolved in 250 mL of the solution?

Ans:-

$$\text{Molarity (M)} = \frac{\left(\dfrac{\text{Mass of solute in grams}}{\text{molar mass}}\right)}{\left(\dfrac{\text{Volume of solution in mL}}{1000}\right)} = \frac{4.9\,g/98\,g\,mol^{-1}}{250\,mL/1000} = \frac{(0.05\ mol)}{(0.25\ L)} = 0.2\ mol\ L^{-1}\ (or)\ 0.2\,M$$

3. Calculate the normality of a solution containing 0.74 g of $Ca(OH)_2$ dissolved in 200 mL of the solution?

Ans:-

$$\text{Normality (N)} = \frac{\text{Gram equivalents of the solute}}{\text{Volume of solution in litres}}$$

$$\text{Equivalent mass of } Ca(OH)_2 = \frac{\text{Molar mass}}{\text{Acidity}} = \frac{74}{2} = 37\,g\,equiv^{-1}$$

$$\therefore \text{Normality of solution (N)} = \frac{0.74g/37\,g\,equiv^{-1}}{200mL/1000} = 0.1\ equiv/L\,(or)\,0.1N$$

4. The density of 10% by mass of KCl solution is 1.06 g cm^{-3}. Calculate the molarity of the solution.

Ans:- ***I. Calculation of volume of the solution:***

Mass of the solution = 100 g

Density of the solution = 1.06 g cm^{-3}

$$\text{Volume of solution} = \frac{\text{Mass of solution}}{\text{Density}} = \frac{100\,g}{1.06\,g\,cm^{-3}} = 94.34\,cm^3$$

II. Calculation of molarity of the solution:

$$\text{Molarity of solution(M)} = \frac{\left(\dfrac{\text{Mass of KCl}}{\text{Molar mass of KCl}}\right)}{\text{Volume of solution in } dm^3}$$

Mass of the KCl = 10 g

Molar mass of KCl = 39 + 35.5 = 74.5 g mol^{-1}

Volume of the solution = 94.34 cm^3 = 0.0943 dm^3

$$\text{Molarity (M)} = \frac{10g/(74.5\,g\,mol^{-1})}{0.0943\,dm^3} = 1.42\ mol\ dm^{-3} = 1.42\,M$$

5. 3.6 M sulphuric acid solution is 29% H_2SO_4. Calculate the density of the solution.

Soln:- ***I. Calculation of mass of the solution:***

Mass of H_2SO_4 in 3.6 M solution

= (3.6 mol) x (98 g mol^{-1})

= 352.8 g

29% H_2SO_4 means,

29 g of H_2SO_4 are present in solution = 100 g

∴ 352.8 g of H_2SO_4 are present in solution

$$= \frac{100\,g}{29\,g}(352.8\,g) = 1216.5\,g$$

II. Calculation of the density of the solution:

$$\text{Density of the solution} = \frac{\text{Mass of solution}}{\text{Volume of solution}} = \frac{1216.5\,g}{1000\,mL} = 1.22\ g\,mL^{-1}$$

6. The solubility of $Ba(OH)_2 . 8H_2O$ in water at 298 K is 5.6 g per 100 g of water. What is the molality of the hydroxide ions in a saturated solution of barium hydroxide at 298 K? (Atomic mass of Ba = 137, O = 16)

Soln:- ***I. Calculation of molality of the solution:***

$$\text{Molality of solution(m)} = \frac{\left(\dfrac{\text{Mass of solute}}{\text{Molar mass of solute}}\right)}{\text{Mass of solvent in kg}}$$

Mass of solute, $Ba(OH)_2 . 8H_2O$ = 5.6 g

Molar mass of solute, $Ba(OH)_2 . 8H_2O$

= 137 + 2 x (16 + 1) + 8 x 18 = 315 g mol^{-1}

Mass of the solvent (water) = 100 g = 0.1 kg

$$\text{Molality (m)} = \frac{5.6g/(315\,g\,mol^{-1})}{0.1\ kg} = 0.18\ mol\ kg^{-1} = 0.18\,m$$

II. Calculation of molality of the OH^- ions:

Barium hydroxide ionises in water as follows –

$$Ba(OH)_2 \xrightleftharpoons{(aq)} Ba^{2+}(aq) + 2OH^-(aq)$$

This shows that the molality of OH^- ions is twice the molaltiy of $Ba(OH)_2$ = 2 x 0.18 m = 0.36 m

7. A solution has been prepared by dissolving 0.49 g of sulphuric acid in 100 mL of the solution. Calculate normality of the solution.

Soln:- Normality of solution (N)

$$= \frac{\text{No. of gram equivalents of } H_2SO_4}{\text{Volume of solution in litres}}$$

Mass of H_2SO_4 = 0.49 g

Equivalent Mass of H_2SO_4 =

$$= \frac{\text{Molar mass}}{\text{Basicity}} = \frac{98.0}{2} = 49.0\ g\ equiv^{-1}$$

Volume of the solution = 100 mL

$$= \frac{100}{1000} = 0.1\ L$$

$$\text{Normality of solution(N)} = \frac{\left(\dfrac{\text{Mass of } H_2SO_4}{\text{Eq. mass of } H_2SO_4}\right)}{\text{Volume of solution in litres}} = \frac{0.49\,g/49\,g\ equiv^{-1}}{0.1L} = 0.1\,equiv.L^{-1} = 0.1N$$

5. Calculate the number of molecules of oxalic acid ($H_2C_2O_4 . 2H_2O$) in 100 mL of 0.2 N oxalic acid solution.

Soln:- ***I. Calculation of mass of the oxalic acid:***

$$\text{Normality of solution} = \frac{\left(\dfrac{\text{Mass of Oxalic acid}}{\text{Equivalent mass}}\right)}{\text{Volume of solution in litres}} = 0.2\,N = 0.2\ equiv.L^{-1}$$

Equivalent mass of the acid = Molar mass / Basicity

(Contd……)

ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ 259 ಪ್ರಕರಣಗಳು ದಾಖಲು

ಸುಳ್ಳು ಸುದ್ದಿಗಳ ಅಬ್ಬರ; ಶಿಕ್ಷೆಗೆ ಬರ

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸಿದವರ ವಿರುದ್ಧ ರಾಜ್ಯದ ಪೊಲೀಸ್ ಠಾಣೆಗಳಲ್ಲಿ 259 ಪ್ರಕರಣಗಳು ದಾಖಲಾಗಿದ್ದು, 6 ಪ್ರಕರಣಗಳಲ್ಲಷ್ಟೇ ಶಿಕ್ಷೆಯಾಗಿದೆ.

ಅವುಗಳಲ್ಲಿ 75 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿವೆ. ಸುಳ್ಳು ಸುದ್ದಿ ಪ್ರಸಾರದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಯಾವುದೇ ಯೂಟ್ಯೂಬ್ ಚಾನೆಲ್‌ಗಳನ್ನು ಇದುವರೆಗೆ ನಿಷೇಧಿಸಿಲ್ಲ ಎನ್ನುತ್ತವೆ ಗೃಹ ಇಲಾಖೆ ಮೂಲಗಳು.

ಬೆಂಗಳೂರು ನಗರ ಜಿಲ್ಲೆಯಲ್ಲಿ ಹೆಚ್ಚು ಪ್ರಕರಣ ದಾಖಲಾಗಿದ್ದು, ರಾಜ್ಯದಲ್ಲೇ ಮುಂಚೂಣಿಯಲ್ಲಿದೆ. ಉತ್ತರ ಕನ್ನಡ ಮತ್ತು ತುಮಕೂರು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

ಹುಬ್ಬಳ್ಳಿ–ಧಾರವಾಡ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೋಲಾರ, ಚಾಮರಾಜನಗರ, ಧಾರವಾಡ, ಬಾಗಲಕೋಟೆ, ಗದಗ ಜಿಲ್ಲೆಯಲ್ಲಿ ಮಾರ್ಚ್ ಅಂತ್ಯದವರೆಗೆ ಯಾವುದೇ ಪ್ರಕರಣ ದಾಖಲಾಗಿಲ್ಲ. ಮಂಗಳೂರು ನಗರದಲ್ಲಿ 6, ಮಂಡ್ಯದಲ್ಲಿ 3, ಬೆಳಗಾವಿ, ಶಿವಮೊಗ್ಗ ಮತ್ತು ಕಲಬುರ್ಗಿ ಜಿಲ್ಲೆಯಲ್ಲಿ ತಲಾ 2 ಪ್ರಕರಣಗಳು ದಾಖಲಾಗಿವೆ.

ಫ್ಯಾಕ್ಟ್ ಚೆಕ್ ಘಟಕ: 'ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕದಿದ್ದರೆ ಪ್ರಜಾಪ್ರಭುತ್ವ, ಸಂವಿಧಾನ ಹಾಗೂ ಸಾಮಾಜಿಕ ಮೌಲ್ಯಗಳು ಉಳಿಯುವುದು ಕಷ್ಟ. ಧಾರ್ಮಿಕ ಮತ್ತು ಸಾಮಾಜಿಕ ಘರ್ಷಣೆ ಹೆಚ್ಚಲು ಅವೇ ಕಾರಣ. ಹೀಗಾಗಿ ಸುಳ್ಳುಸುದ್ದಿ ಪತ್ತೆಗೆ ಮತ್ತು ಅದನ್ನು ಹರಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ಪೊಲೀಸ್ ಠಾಣೆಗಳಲ್ಲಿ 'ಫ್ಯಾಕ್ಟ್ ಚೆಕ್ ಘಟಕ' ಸ್ಥಾಪಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ವರ್ಷ ಆದೇಶಿಸಿದ್ದರು.

'ಅನುಮಾನಕ್ಕೆಎಡೆ ಮಾಡಿಕೊಡುವ ಸುದ್ದಿಗಳ ಸತ್ಯಾಸತ್ಯತೆಯನ್ನು 'ಕೆ.ಎಸ್.ಪಿ. ಫ್ಯಾಕ್ಟ್‌ಚೆಕ್' ಮೂಲಕ ಪರಿಶೀಲಿಸಿ, ನೈಜ ಮಾಹಿತಿಯನ್ನು ಇಲಾಖೆಯ ಅಧಿಕೃತ ಜಾಲತಾಣದ ಮೂಲಕ ಹಂಚಿಕೊಳ್ಳಲಾಗುತ್ತಿದೆ. ಧರ್ಮ, ಮತ, ಭಾಷೆ, ಪ್ರಾಂತ್ಯ, ವರ್ಣ ಇತ್ಯಾದಿ ಅಂಶಗಳನ್ನು ಬಳಸಿಕೊಂಡು ದ್ವೇಷಪ್ರೇರಿತ ಪೋಸ್ಟ್ ಮಾಡಿರುವುದು ಕಂಡುಬಂದರೆ ಕೂಡಲೇ ದೂರು ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಲಾ ಎನ್‌ಫೋರ್ಸ್‌ಮೆಂಟ್ ಏಜೆನ್ಸಿ ರಿಕ್ವೆಸ್ಟ್ ಪೋರ್ಟಲ್ ಮೂಲಕ ಸಂಬಂಧಪಟ್ಟ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರಂಗಳಿಗೆ ನೋಟಿಸ್ ಮತ್ತು ಮನವಿಗಳ ಮೂಲಕ ಮಾಹಿತಿ ಪಡೆದು ತಪ್ಪಿತಸ್ಥರ ವಿರುದ್ಧ ಬಿಎನ್‌ಎಸ್ ಮತ್ತು ಐಟಿ ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ, ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಅವರು ತಿಳಿಸಿದರು.

ಮುಖ್ಯಾಂಶಗಳು

- ರಾಜ್ಯದ ಏಳು ಜಿಲ್ಲೆಯಲ್ಲಿ ಪ್ರಕರಣಗಳಿಲ್ಲ
- 'ಕೆ.ಎಸ್.ಪಿ. ಫ್ಯಾಕ್ಟ್‌ಚೆಕ್' ಮೂಲಕ ಪರಿಶೀಲನೆ

ಸುಳ್ಳು ಸುದ್ದಿಗಳ ವಿರುದ್ಧ ಹೆಚ್ಚು ಪ್ರಕರಣ ದಾಖಲಾದ ಜಿಲ್ಲೆಗಳು

(2023ರಿಂದ 2025ರ ಮಾರ್ಚ್ ಅಂತ್ಯಕ್ಕೆ)

ಜಿಲ್ಲೆ	ಪ್ರಕರಣಗಳು
ಬೆಂಗಳೂರು ನಗರ	95
ಉತ್ತರ ಕನ್ನಡ	49
ತುಮಕೂರು	27
ಕೊಡಗು	14
ಚಿಕ್ಕಮಗಳೂರು	12
ವರ್ಷ	**ಪ್ರಕರಣ**
2023	107
2024	139
2025	13

> ಸುಳ್ಳು ಸುದ್ದಿ ಹರಡುವವರ ಮೇಲೆ ನಿಗಾ ಇಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅವಹೇಳನಕಾರಿ ಪೋಸ್ಟ್ ಮಾಡಿರುವ ಆರೋಪಿಯನ್ನು ಈಚೆಗೆ ಬಂಧಿಸಿದ್ದೇವೆ
>
> **ಮಲ್ಲಿಕಾರ್ಜುನ ಬಾಲದಂಡಿ**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಮಂಡ್ಯ

> ಸುಳ್ಳು ಸುದ್ದಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರ ಮುತುವರ್ಜಿ ತೋರುತ್ತಿಲ್ಲ. ಪೊಲೀಸ್‌ನವರಿಗೆ ಜವಾಬ್ದಾರಿ ನೀಡಿ, ಸರ್ಕಾರ ನಿದ್ರೆಗೆ ಜಾರಿದೆ
>
> **ಟಿ.ಎಲ್.ಕೃಷ್ಣೇಗೌಡ**
> ಜಿಲ್ಲಾ ಕಾರ್ಯದರ್ಶಿ, ಸಿಪಿಎಂ

2 ಸಾವಿರ ಹೆಕ್ಟೇರ್‌ನಲ್ಲಿ ಆನೆ ಧಾಮ

ಶಾಶ್ವತ ಪರಿಹಾರದ ಬಗ್ಗೆ ತಜ್ಞರ ಸಮಿತಿ ವರದಿಯಂತೆ ಕ್ರಮ

ಪ್ರಜಾವಾಣಿ ವಾರ್ತೆ

ಹಾಸನ: 'ಕಾಡಾನೆ ಸಮಸ್ಯೆಗೆ ಶಾಶ್ವತ ಪರಿಹಾರದ ಬಗ್ಗೆ ತಜ್ಞರ ಸಮಿತಿ ವರದಿ ಬಂದಿದ್ದು, ಭದ್ರಾ ಅರಣ್ಯ ವ್ಯಾಪ್ತಿಯಲ್ಲಿ ಸುಮಾರು 2 ಸಾವಿರ ಹೆಕ್ಟೇರ್‌ನಲ್ಲಿ ಆನೆಗಳ ವಿಹಾರ ಧಾಮ (ಎಲಿಫೆಂಟ್ ಸಾಫ್ಟ್ ರಿಲೀಸ್ ಸೆಂಟರ್) ಮಾಡಲು ವಿಸ್ತೃತ ವರದಿ ತರಿಸಿಕೊಳ್ಳಲಾಗುತ್ತಿದೆ' ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದರು.

ಜಿಲ್ಲೆಯ ಬೇಲೂರು ತಾಲ್ಲೂಕಿನ ಬಿಕ್ಕೋಡು ಗ್ರಾಮದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, '₹53 ಕೋಟಿ ಅನುದಾನ ಮಂಜೂರಾಗಿದ್ದು, 15 ದಿನದಲ್ಲಿ ಟೆಂಡರ್ ಕರೆದು, ಎರಡು ತಿಂಗಳೊಳಗೆ ಕಾಮಗಾರಿಗೆ ಶಂಕುಸ್ಥಾಪನೆ ಮಾಡಲಾಗುವುದು' ಎಂದು ತಿಳಿಸಿದರು.

ಈಶ್ವರ್ ಖಂಡ್ರೆ

'ಕಾಡಾನೆ ಸಮಸ್ಯೆಗೆ ಶೀಘ್ರದಲ್ಲಿ ಶಾಶ್ವತ ಪರಿಹಾರ ಕಂಡು ಕೊಳ್ಳಲಾಗುವುದು. ಈ ಸಂಬಂಧ ಚರ್ಚಿಸಲು ಮುಖ್ಯಮಂತ್ರಿಯವರು ಕರೆದಿದ್ದ ಸಭೆಯನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಲಾಗಿದೆ' ಎಂದು ತಿಳಿಸಿದರು.

'ರಾಜ್ಯ ಸರ್ಕಾರ ಎರಡು ವರ್ಷ ಪೂರೈಸಿದೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮಾರ್ಗದರ್ಶನದಲ್ಲಿ ಎಲ್ಲರನ್ನೂ ಜೊತೆಗೂಡಿಸಿಕೊಂಡು, ಕೊಟ್ಟ ಮಾತಿನಂತೆ ಉತ್ತಮ ಆಡಳಿತ ನೀಡಿದ್ದೇವೆ. ಇನ್ನೂ ಉತ್ತಮವಾಗಿ ಆಡಳಿತ ನೀಡಲಿದ್ದೇವೆ' ಎಂದರು.

ಇದೇ ವೇಳೆ ಅವರು, ಬಿಕ್ಕೋಡು ಗ್ರಾಮದ ಸಸ್ಯಕ್ಷೇತ್ರದಲ್ಲಿ ಆನೆ ಕಾರ್ಯಪಡೆ ಜಿಲ್ಲಾ ಕೇಂದ್ರ ಕಚೇರಿ ನಿರ್ಮಾಣಕ್ಕೆ ಭೂಮಿಪೂಜೆ ಮಾಡಿದರು. 'ಕಾಡಾನೆಗಳ ಮೇಲೆ 24x7 ಮೇಲ್ವಿಚಾರಣೆ ಮಾಡಲು, ಎಸಿಎಫ್, ಡಿಸಿಎಫ್, ಆರ್‌ಎಫ್‌ಒಗಳು ಸ್ಥಳದಲ್ಲೇ ಇರುವಂತೆ ಮಾಡಲು ₹40 ಲಕ್ಷ ವೆಚ್ಚದಲ್ಲಿ ಕಚೇರಿ ನಿರ್ಮಿಸಲಾಗುತ್ತಿದೆ' ಎಂದರು.

ಕೆರೆಯಲ್ಲಿ ಮುಳುಗಿ ಇಬ್ಬರು ನೀರುಪಾಲು

ಹಾನಗಲ್ (ಹಾವೇರಿ): ಚಿಕ್ಕಾಂಶಿ ಗ್ರಾಮದಲ್ಲಿ ಮಂಗಳವಾರ ಕೆರೆಯಲ್ಲಿ ಮೀನು ಹಿಡಿಯಲು ಹೋಗಿದ್ದ ಬಸವರಾಜ ಬಡಕಣ್ಣನವರ (38), ಮಾಲತೇಶ ಕುರುಬರ (19) ನೀರುಪಾಲಾಗಿದ್ದಾರೆ. ಮಾಲತೇಶ ಮೃತದೇಹ ಪತ್ತೆಯಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಮಂಡ್ಯಕ್ಕೆ ಬರಲು ಜೋಶಿಗೆ ಭಯವೇಕೆ?'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕಸಾಪ ಅಧ್ಯಕ್ಷ ಮಹೇಶ ಜೋಶಿಯವರು ಮಂಡ್ಯದಲ್ಲಿ ಈಚೆಗೆ ಏರ್ಪಡಿಸಿದ್ದ ಸ್ಮರಣ ಸಂಚಿಕೆ ಸಮಾಲೋಚನಾ ಸಭೆಗೆ ಗೈರಾಗಿದ್ದಾರೆ. ನಾವು ಕಪ್ಪುಪಟ್ಟಿ ಧರಿಸಿ, ಧಿಕ್ಕಾರ ಕೂಗಿ ಪ್ರತಿಭಟಿಸಲಷ್ಟೇ ಸಜ್ಜಾಗಿದ್ದೆವು. ಅವರ ಮೇಲೆ ಹಲ್ಲೆ ನಡೆಸುವ ಉದ್ದೇಶ ಖಂಡಿತ ನಮಗಿಲ್ಲ. ಮಂಡ್ಯದವರು ಕೊಲೆಗಡುಕರಲ್ಲ. ಇಲ್ಲಿಗೆ ಬರಲು ಜೋಶಿಯವರಿಗೆ ಜೀವಭಯವೇಕೆ' ಎಂದು ರೈತ ನಾಯಕಿ ಸುನಂದಾ ಜಯರಾಂ ಪ್ರಶ್ನಿಸಿದರು.

ಕನ್ನಡ ನಾಡುನುಡಿ ಜಾಗೃತಿ ಸಮಿತಿಯು ಮಂಗಳವಾರ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಪರಮಾಧಿಕಾರಕ್ಕಾಗಿ ಪರಿಷತ್ತಿನ ಬೈಲಾ ತಿದ್ದುಪಡಿ, ಸಮ್ಮೇಳನದ ₹2.50 ಕೋಟಿ ಲೆಕ್ಕ ಕೊಡದಿರುವುದು ಹಾಗೂ ಪ್ರಶ್ನಿಸಿದವರ ಸದಸ್ಯತ್ವ ರದ್ದು ಮಾಡಿರುವ ವಿರುದ್ಧವಷ್ಟೇ ನಮ್ಮ ವಿರೋಧವಿದೆ. ಜೋಶಿಯವರು ಆರೋಪಗಳಿಂದ ಮುಕ್ತರಾಗುವವರೆಗೂ, ಲೆಕ್ಕ ಕೊಡುವವರೆಗೂ ಪ್ರತಿಭಟನೆ ಮಾಡುತ್ತೇವೆ' ಎಂದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶಗೌಡ ಮಾತನಾಡಿ, 'ಜೋಶಿಯವರ ಪ್ರಜಾಪ್ರಭುತ್ವ ವಿರೋಧಿ ನಡೆಯ ಬಗ್ಗೆಯಷ್ಟೇ ನಮ್ಮ ತಕಾರರಿದೆ. ಅಧ್ಯಕ್ಷರಾದವರು ಸಮ್ಮೇಳನಕ್ಕಷ್ಟೇ ಸೀಮಿತರಾಗಬಾರದು. ಗಡಿನಾಡಲ್ಲಿ ಕನ್ನಡ ಅಭಿವೃದ್ಧಿ, ಶಿಕ್ಷಣ ಮಾಧ್ಯಮ, ಹೊರ ರಾಜ್ಯದವರ ದಬ್ಬಾಳಿಕೆ ವಿರುದ್ಧ ಇದುವರೆಗೂ ಮಾತನಾಡಿಲ್ಲ' ಎಂ ದರು.

ನಾಲ್ವರ ಹತ್ಯೆ: ಮಗನಿಗೆ ಗಲ್ಲು, ತಂದೆಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಕಾರವಾರ: ಆಸ್ತಿ ವಿಷಯಕ್ಕೆ ಮಗಳ ಪತಿಯ ಮನೆಯ ನಾಲ್ವರನ್ನು ಹತ್ಯೆಗೈದಿದ್ದು ಸಾಬೀತಾದ ಕಾರಣ ಭಟ್ಕಳ ತಾಲ್ಲೂಕು ಹಲ್ಯಾಣಿಯ ವಿನಯ ಭಟ್ಟ (40) ಎಂಬಾತನಿಗೆ ಮರಣ ದಂಡನೆ ಮತ್ತು ಆತನ ತಂದೆ ಶ್ರೀಧರ ಭಟ್ಟ ಎಂಬಾತನಿಗೆ ಜೀವಾವಧಿ ಶಿಕ್ಷೆ ವಿಧಿಸಿ ಇಲ್ಲಿನ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಮಂಗಳವಾರ ಆದೇಶಿಸಿದೆ.

2023ರ ಫೆಬ್ರುವರಿ 24ರಂದು ಭಟ್ಕಳ ತಾಲ್ಲೂಕಿನ ಓಣಿಬಾಗಿಲು ಗ್ರಾಮದ ಕೃಷಿಕ ಶಂಭು ಭಟ್ಟ (70), ಅವರ ಪತ್ನಿ ಮಾದೇವಿ (60), ಪುತ್ರ ರಾಘವೇಂದ್ರ ಯಾನೆ ರಾಜು ಭಟ್ (40) ಹಾಗೂ ಸೊಸೆ ಕುಸುಮಾ (35) ಎಂಬುವರನ್ನು ಮಾರಕಾಸ್ತ್ರಗಳಿಂದ ಹತ್ಯೆ ಮಾಡಲಾಗಿತ್ತು. ಹತ್ಯೆಯಾದ ಶಂಭು ಭಟ್ಟ ಹಾಗೂ ಅಪರಾಧಿ ಶ್ರೀಧರ ಭಟ್ಟ ಬೀಗರಾಗಿದ್ದು, ಅಪರಾಧಿಯ ಪುತ್ರಿ ವಿದ್ಯಾ ಭಟ್ಟ ಪಾಲಿನ ಆಸ್ತಿ ಕಲಹದಿಂದಾಗಿ ಹತ್ಯೆ ನಡೆದಿತ್ತು ಎಂಬುದು ಸಾಬೀತಾಗಿದೆ.

ಶಂಭು ಭಟ್ಟ, ಅವರ ಪುತ್ರ ರಾಜು ಮತ್ತು ಸೊಸೆ ಕುಸುಮಾ ಅವರನ್ನು ಹತ್ಯೆಗೈದ ವಿನಯ ಭಟ್ಟನಿಗೆ ಮರಣ ದಂಡನೆ ಶಿಕ್ಷೆ ಮತ್ತು ಮಾದೇವಿ ಅವರನ್ನು ಹತ್ಯೆಗೈದ ಶ್ರೀಧರ ಭಟ್ಟನಿಗೆ ಜೀವಾವಧಿ ಶಿಕ್ಷೆ ಹಾಗೂ ₹2.10 ಲಕ್ಷ ದಂಡ ವಿಧಿಸಿ ಜಿಲ್ಲಾ ಸೆಷನ್ಸ್ ನ್ಯಾಯಾಧೀಶ ಡಿ.ಎಸ್.ವಿಜಯಕುಮಾರ್ ಅವರು ಆದೇಶಿಸಿದ್ದಾರೆ.

ಶ್ರೀಧರ ಭಟ್ಟ

ವಿನಯ ಭಟ್ಟ

ಹತ್ಯೆ ನಡೆದ ದಿನ ಮನೆಯೊಳಗೆ ಮಲಗಿದ್ದ ಸಣ್ಣ ಮಗು ಮತ್ತು ಪಕ್ಕದ ಮನೆಗೆ ಆಡಲು ಹೋಗಿದ್ದ ಇನ್ನೊಬ್ಬ ಮಗ ಪಾರಾಗಿದ್ದರು. ಇಬ್ಬರೂ ಮಕ್ಕಳು ಅನಾಥರಾಗಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ಭಟ್ಕಳ ಗ್ರಾಮೀಣ ಠಾಣೆ ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ಹಿರಿಯ ಸರ್ಕಾರಿ ಅಭಿಯೋಜಕಿ ತನುಜಾ ಬಿ.ಹೊಸಪಟ್ಟಣ ವಾದ ಮಂಡಿಸಿದ್ದರು.

ದೇಗುಲದಿಂದ ದಲಿತ ಯುವಕನ ಹೊರಕ್ಕೆ ಕಳುಹಿಸಿದ ಪ್ರಕರಣ: ಹತ್ತು ಜನರ ವಿರುದ್ಧ ದೂರು ದಾಖಲು

ಪ್ರಜಾವಾಣಿ ವಾರ್ತೆ

ಮಧುಗಿರಿ (ತುಮಕೂರು): ತಾಲ್ಲೂಕಿನ ಕವಣದಾಲ ಗ್ರಾಮದಲ್ಲಿ ಪೂಜೆ ಮಾಡಿಸಲು ರಾಮಾಂಜನೇಯ ದೇವಾಲಯ ಪ್ರವೇಶಿಸಿದ್ದ ಪರಿಶಿಷ್ಟ ಜಾತಿ ಯುವಕನನ್ನು ಹೊರಗಡೆ ಕಳುಹಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಮಹಿಳೆಯರು ಸೇರಿ 10 ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

ಯುವಕ ನೀಡಿದ ದೂರಿನ ಮೇರೆಗೆ ಕವಣದಾಲ ಗ್ರಾಮಸ್ಥರಾದ ಗಿರಿಯಣ್ಣಗೌಡ, ಅನಂತ, ಶಿವಾನಂದ, ಯೋಗೀಶ, ಶಿವಮ್ಮ, ನಿಂಗಮ್ಮ, ಮಂಜುನಾಥ, ಮಹಾಂತೇಶ, ವೀರೇಶ, ಯಶೋದಮ್ಮ ವಿರುದ್ಧ ಬಿಎನ್‌ಎಸ್ 191 (2) (ದೊಂಬಿ), 351 (ಬೆದರಿಕೆ), 351 (2) (ಶಾಂತಿ ಭಂಗ, ಉದ್ದೇಶ ಪೂರ್ವಕವಾಗಿ ಅವಮಾನ) ಸೇರಿ ವಿವಿಧ ಕಲಂ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

'ನೀನು ದೇವಸ್ಥಾನದ ಒಳಗಡೆ ಇದ್ದರೆ ಮೈಲಿಗೆಯಾಗುತ್ತದೆ, ಹೊರಗಡೆ ಹೋಗು. ಇಲ್ಲದಿದ್ದರೆ ನಿನ್ನ ಕೊಲೆ ಮಾಡುತ್ತೇವೆ. ನಿನ್ನ ಮುಗಿಸಿ ಬಿಡುತ್ತೇವೆ' ಎಂದು ಬೆದರಿಕೆ ಹಾಕಿದ್ದರು ಎಂದು ಯುವಕ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ನಿನ್ನ ಜಾತಿಯವರು ಎಂದೂ ದೇಗುಲದ ಒಳಗೆ ಬಂದಿಲ್ಲ. ನೀನೊಬ್ಬನೇ ಬಂದಿರುವುದು' ಎಂದು ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿದ್ದಾರೆ.

ಆಗಿದ್ದೇನು?: ಯುವಕ ಮೇ 10ರಂದು ಸಂಜೆ ಪೂಜೆ ಮಾಡಿಸಲು ದೇವಸ್ಥಾನಕ್ಕೆ ಹೋಗಿದ್ದರು. ಈ ವೇಳೆ ಸ್ಥಳದಲ್ಲಿದ್ದ ಒಕ್ಕಲಿಗ ಸಮುದಾಯದವರು ಯುವಕನನ್ನು ಹೊರಗಡೆ ಕಳುಹಿಸಿದ್ದರು. ಇದೇ ವಿಚಾರವಾಗಿ ದೇಗುಲದ ಮುಂಭಾಗದಲ್ಲಿ ಮಾತಿನ ಚಕಮಕಿ ನಡೆದಿತ್ತು.

ಗಲಾಟೆ ಕುರಿತ ವಿಡಿಯೊ ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡಿತ್ತು. ಮೇ 11ರಂದು ಪೊಲೀಸರು, ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಶಾಂತಿ ಸಭೆ ನಡೆಸಿದ್ದರು. ಮುಂದಿನ ದಿನಗಳಲ್ಲಿ ದೇವಾಲಯಕ್ಕೆ ಹೋಗಲು ಯಾರಿಗೂ ನಿರ್ಬಂಧ ವಿಧಿಸದಂತೆ ಸೂಚಿಸಿದ್ದರು.

ನಿಧನ ವಾರ್ತೆ

ವೈ.ಪ್ರೀತಿ

ಬಳ್ಳಾರಿ: ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ ಅವರ ಪತ್ನಿ ವೈ.ಪ್ರೀತಿ (51) ಸೋಮವಾರ ರಾತ್ರಿ ಬೆಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಇದ್ದಾರೆ. ಮೃತರ ಅಂತ್ಯಕ್ರಿಯೆಯು ಬೆಂಗಳೂರಿನ ಯಲಹಂಕದ ಎಂ.ಎಸ್.ಪಾಳ್ಯದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿತು.

ವೈ ಪ್ರೀತಿ

18ರಿಂದ ಸರ್ಕಾರಿ ನೌಕರರ ಕ್ರೀಡಾಕೂಟ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ರಾಜ್ಯ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ಮೇ 18ರಿಂದ 20ರವರೆಗೆ ಶಿವಮೊಗ್ಗದಲ್ಲಿ ನಡೆಯಲಿವೆ. 15,000 ನೌಕರರು ಈ ಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 18ರಂದು ಸಂಜೆ ಇಲ್ಲಿನ ನೆಹರೂ ಕ್ರೀಡಾಂಗಣದಲ್ಲಿ ಕ್ರೀಡಾಕೂಟಕ್ಕೆ ಚಾಲನೆ ನೀಡಲಿದ್ದಾರೆಎಂದರು.

ರಾಜ್ಯ ಚುನಾವಣಾ ಆಯೋಗ, ಕರ್ನಾಟಕ
ನಂ. 16, 2ನೇ ಮತ್ತು 3ನೇ ಮಹಡಿ, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು – 560 080. ದೂರವಾಣಿ : 080–2220 5189/93, ಇ–ಮೇಲ್ : karsec@gmail.com
ಸಂಖ್ಯೆ : ರಾ.ಚು.ಆ.ಕ./ಆಡಳಿತ/ಇ–ಟೆಂಡರ್/01/2025–ಆರ್.ಎಲ್.ಬಿ.
ದಿನಾಂಕ : 09–05–2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ಕಛೇರಿಯಿಂದ ಮತದಾರರ ಪಟ್ಟಿ ತಯಾರಿಕೆ, ಮುದ್ರಣ ಮತ್ತು ಇತರೆ ಮುದ್ರಣಗಳಿಗೆ ಸಂಬಂಧಿಸಿದ ಸೇವೆಯನ್ನು ಪಡೆಯಲು ಕೆಪಿಪಿ. ಪೋರ್ಟಲ್ ಮುಖಾಂತರ ಇ–ಟೆಂಡರ್‌ನ್ನು (ಟೆಂಡರ್ ಸಂ. : KSEC/2025-26/SEOOO2) ಕರೆಯಲಾಗಿದ್ದು, ಇ–ಪೋರ್ಟಲ್ ಮೂಲಕ ಟೆಂಡರ್‌ನ್ನು ದಿನಾಂಕ : 23–05–2025 ರಂದು ಸಂಜೆ 5.30 ರ ಒಳಗೆ ಸಲ್ಲಿಸಬಹುದಾಗಿರುತ್ತದೆ.
ಟೆಂಡರ್‌ಗೆ ಸಂಬಂಧಿಸಿದ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ https://kpp.karnataka.gov.in ಪಡೆಯಬಹುದಾಗಿರುತ್ತದೆ. ಅಥವಾ ಕಛೇರಿ ವೇಳೆಯಲ್ಲಿ ಆಯೋಗದ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.
ಸಹಿ/– ಅಧೀನ ಕಾರ್ಯದರ್ಶಿಗಳು, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.
ವಾಸಾಇ/ಬೆಂ.ನ./601/ಮಣಿಪಾಲ್/2025–26

TUNGABHADRA BOARD: TB DAM
e-Procurement Short Term Tender Notice IFB Nos.03/2.025-26 to 30/2025-26 Dt.13.05.2025
Tender for **28 Nos. of Works** in respect of HW & HLC Division, TB Dam and LLC Division, Ballari under 'Works Category" are invited through `e-Procurement'.

Bid Document downloading Start Date & Time:	14.05.2025 at 11:00 AM
Bid Document downloading End Date & Time:	21.05.2025 at 3:00 PM
Bid Submission End Date & Time:	21.05.2025 at 5:30 PM
Date of opening of Commercial Stage: (upto Rs.50.00 Lakhs)	21.05.2025 at 6:00 PM
Date of opening of PQ Stage: (above Rs.50.00 Lakhs)	21.05.2025 at 6:00 PM
Date of opening of Commercial Stage: (Above Rs.50.00 Lakhs)	23.05.2025 at 11:00 AM

Further details can be seen @ https://tender.apeprocurement.gov.in
Ph: 08394 - 259114
Email: seibtbb@yahoo.com
Sd/- Superintending Engineer, I.B, TB Board, TB Dam

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಜಂಟಿ ಆಯುಕ್ತರ ಕಛೇರಿ, ಯಲಹಂಕ ವಲಯ, ಅಮೃತಹಳ್ಳಿ ಮುಖ್ಯರಸ್ತೆ, ಬ್ಯಾಟರಾಯನಪುರ, ಬೆಂಗಳೂರು – 560092.
ಸಂಖ್ಯೆ:ಬಿಬಿಎಂಪಿ/ಜೆಸಿ/ವೈಎನ್‌ಕೆ.ಝಡ್/ಟೆಂಡರ್/02/2025–26 ದಿನಾಂಕ: 12–05–2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕೆಲಸಕ್ಕಾಗಿ ಅರ್ಹ ಬಿಡ್ಡುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕಾಮಗಾರಿಯ ಹೆಸರು
1	ಬಿಬಿಎಂಪಿಯ ಯಲಹಂಕ ವಲಯದ ಕಛೇರಿಗಳಿಗೆ ಡಾಟಾ ಎಂಟ್ರಿ ಆಪರೇಟರ್‌ಗಳು / ಕಂಪ್ಯೂಟರ್ ಆಪರೇಟರ್‌ಗಳನ್ನು ಒದಗಿಸುವುದು. **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 208.14, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 3.13**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು (ಆನ್‌ಲೈನ್ ಮೂಲಕ ಮಾತ್ರ) ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 16–05–2025 ರಂದು ಮಧ್ಯಾಹ್ನ 3.00 ಗಂಟೆವರೆಗೆ. 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 21–05–2025 ರಂದು ಸಂಜೆ 4.00 ಗಂಟೆವರೆಗೆ. 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 22–05–2025 ರಂದು ಸಂಜೆ 4.30 ಗಂಟೆಗೆ (ಸಾಧ್ಯವಾದಲ್ಲಿ, ಮುಂದಿನ ಕೆಲಸದ ದಿನದಂದು). 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 23–05–2025 ರಂದು ಸಂಜೆ 4.00 ಗಂಟೆಗೆ (ಸಾಧ್ಯವಾದಲ್ಲಿ). ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 //ವಿ.ವಿ.ಲೆ.ಶಿ /ಟೆಂಡರು /2025–26/145 ದಿನಾಂಕ 12–05–2025

ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2023–24 ನೇ ಸಾಲಿನ 5054 ರಸ್ತೆ ನಿರ್ಮಾಣ ಯೋಜನೆ, 2023–24 ನೇ ಸಾಲಿನ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಮತ್ತು 2022–23 ನೇ ಸಾಲಿನ ಸಮಾಜ ಕಲ್ಯಾಣ ಯೋಜನೆ ಒಟ್ಟು 11 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಕೆ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ. ಸದರಿ ಕಾಮಗಾರಿಗಳಲ್ಲಿ **ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 02, ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ 01 ಕೆಟಗರಿ II A- 02 ಮತ್ತು ಕೆಟಗರಿ I - 01 ಕಾಮಗಾರಿಗಳನ್ನು** ಕಾಯ್ದಿರಿಸಲಾಗಿದೆ.
ಟೆಂಡರ್ ನಮೂನೆಗಳನ್ನು https://kppp.karnataka.gov.in ಅಂತರ್ಜಾಲದಲ್ಲಿ ದಿನಾಂಕ 12–05–2025 ರಿಂದ ದಿನಾಂಕ 29–05–2025 ರಂದು ಸಂಜೆ 4.30 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ ದಿನಾಂಕ: 29–05–2025 ರ 16.30 ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ಆನ್ ಲೈನ್‌ನಲ್ಲಿ ದಿನಾಂಕ: 30–05–2025 ರಂದು 17.30 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (https://kppp.karnataka.gov.in) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/98/ಕೆಎಸ್‌ಎಂಸಿಎ/2025–26

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
CIN No. U75112KA1976SGC003055
ಮೊದಲ ಮಹಡಿ ಸಂಖ್ಯೆ 59, ಕುಮಾರ ಪಾರ್ಕ್ ಪಶ್ಚಿಮ ವಿಸ್ತರಣೆ, ರೈಲ್ವೆ ಪ್ಯಾರಲಲ್ ರೋಡ್, ಶೇಷಾದ್ರಿಪುರಂ, ಬೆಂಗಳೂರು 560020
ಸಂಖ್ಯೆ: KSEDC/ITS/GOODS-002/16/2025-26 ದಿನಾಂಕ: 13.05.2025

ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), 1. Empanelment of vendors for supply of ICT Goods- UPS, 2. Empanelment of vendors for supply of ICT Goods- Printers ಸಂಸ್ಥೆಗಳನ್ನು ಆಯ್ಕೆ ಮಾಡಲು 15 ದಿನಗಳ ಅವಧಿಗೆ ಓಪನ್ ಇ–ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್ ದಾರರು ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್: http://kppp.karnataka.gov.in ನಲ್ಲಿ ವಿವರವನ್ನು ಪಡೆಯಬಹುದು, ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645)

ಕ್ರ.ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ
1	KEONICS/2025-26/IND0290	Empanelment of vendors for supply of ICT Goods- UPS	26.05.2025
2	KEONICS/2025-26/IND0289	Empanelment of vendors for supply of ICT Goods-Printers	26.05.2025

DIPR/CP/SA/646/2025-26
ಸಹಿ/– ನಿರ್ದೇಶಕರು (ಹಣಕಾಸು)

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
ಸಂಖ್ಯೆ:ಕಾಅ:ಪಂರಾಇಂವಿ:ಮಂಡ್ಯ:ಸಇಂ–1:ಮಾಸಂಸೇ:ಟೆಂಪ:05/2025–26 ದಿ:08.05.2025

ಟೆಂಡರ್ ಪ್ರಕಟಣೆ ಸಂಖ್ಯೆ : 05/2025–26
(ದ್ವಿಲಕೋಟೆ ಪದ್ಧತಿ/Two cover system)
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರಿಂದ, ಮಂಡ್ಯ ಜಿಲ್ಲಾ ಪಂಚಾಯತ್ ಕಛೇರಿಗೆ ಅಗತ್ಯವಿರುವ ಮಾನವ ಸಂಪನ್ಮೂಲ ಸೇವೆಯನ್ನು 2025–26ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ನೊಂದಾಯಿತ ಅರ್ಹ ಏಜನ್ಸಿದಾರರು/ಸಂಸ್ಥೆಗಳಿಂದ ಪೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯಂತೆ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ:23.05.2025 ಸಂಜೆ 4.00 ಗಂಟೆವರೆಗೆ. ಟೆಂಡರಿಗೆ ಇಡಲಾದ (Approximate) ಮೊತ್ತ ರೂ. 98,50,000–00., ಇ.ಎಂ.ಡಿ. ರೂ. 1,97,000.00. ಟೆಂಡರ್ ದಾಖಲಾತಿಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ಪೋರ್ಟಲ್‌ನಲ್ಲಿ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.
ಸಹಿ/–ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/91/2025–26

ಕರ್ನಾಟಕ ಸರ್ಕಾರ
ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.
ಸಂಖ್ಯೆ:ಸಅಸಂ/ಟೆಂಡರ್/ಸಿಆರ್–01/2025–26 ದಿನಾಂಕ: 09.05.2025

ಅಲ್ಪಾವದಿ ಮರು ಇ–ಟೆಂಡರ್ ಕಾಲ್ –2 ಪ್ರಕಟಣೆ.
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
2025–26 ನೇ ಸಾಲಿನಲ್ಲಿ ಅನುದಾನ ನಿರೀಕ್ಷೆ ಮೇರೆಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಮತ್ತು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಕಾಮಗಾರಿ ನಿರ್ವಹಿಸುವ ಸ್ಥಳಗಳ ಬದಲಾವಣೆ ಒಳಗೊಂಡಂತೆ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ "ಮುಂಗಡ ಕಾಮಗಾರಿ" (ಸಸಿಗಳನ್ನು ಬೆಳೆಸುವುದು ಸೇರಿದಂತೆ) ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2024–25 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರು ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:24.05.2025 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಆಯನೂರು ಉಪ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/63/05/224

ತುಮಕೂರು ಮಹಾನಗರಪಾಲಿಕೆ, ತುಮಕೂರು
ವೆಬ್‌ಸೈಟ್ : www.tumkurucity.mrc.gov.in
ಇಮೇಲ್: itstaff_ulb_tumkur@yahoo.com
ದೂರವಾಣಿ : 2278480, ಫ್ಯಾಕ್ಸ್ 2275106, ಸಾರ್ವಜನಿಕ : 0816–2271200, 2272200
ಸಂಖ್ಯೆ:ತುಮಪಾ/ಆಶಾ/ಸಿಆರ್–92/2025–26 ದಿನಾಂಕ: 08.05.2025

ಅಲ್ಪಾವಧಿ ಮರು ಟೆಂಡರ್ ಪಕಟಣೆ (4ನೇ ಕರೆ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆದ್ಯಾದೇಶ 1999–2000 2000ರಂತೆ ಈ ಕೆಳಕಂಡ ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು kppp.gov.inನಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಪಾಲಿಕೆಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
01	ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 50 ಟಿ.ಪಿ.ಡಿ ಸಾಮರ್ಥ್ಯದ ಎಂ.ಆರ್.ಎಫ್ ಪ್ಲಾಂಟ್‌ಗೆ ಅವಶ್ಯಕವಿರುವ ಯಂತ್ರಗಳನ್ನು ಖರೀದಿಸಿ ಅಳವಡಿಸುವ ಕಾಮಗಾರಿ,	2,33,50,000

ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ
1. ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 09.05.2025 ರಿಂದ 23.05.2025 ರವರೆಗೆ.
2. ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: 23.05.2025 ರಂದು ಸಾಯಂಕಾಲ 4.30 ಗಂಟೆವರೆಗೆ.
3. ಬಿಡ್‌ನ್ನು ತೆರೆಯುವ ದಿನಾಂಕ: 26.05.2025 ಬೆಳಗ್ಗೆ 11.30 ಗಂಟೆ

ಸಹಿ/– ಕಾರ್ಯಪಾಲಕ ಅಭಿಯಂತರರು, ತುಮಕೂರು ಮಹಾನಗರ ಪಾಲಿಕೆ ತುಮಕೂರು.
DIPR/TUM/RO-16/25-26/Oysters

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಗಲಕೋಟೆ
ಮುಚಖಂಡಿ ರಸ್ತೆ, ನವನಗರ, ಬಾಗಲಕೋಟೆ – 587 103.
ಜಿಲ್ಲೆ: ಬಾಗಲಕೋಟೆ, ದೂರವಾಣಿ : 08354 – 235370,
ಇ–ಮೇಲ್: apmcbagalkot@rediffmail.com & apmcbagalkote@gmail.com
ಸಂಖ್ಯೆ : ಕೃ.ಉ.ಮಾ.ಸ.(ಬಾ)/ಭಸಿ/96/2025–26 ದಿನಾಂಕ : 06–05–2025

ಇ-ಟೆಂಡರ್ ಪ್ರಕಟಣೆ
2025–26 ನೇ ಸಾಲಿನ ಅವಧಿಗೆ (ಕೆಲಸದ ಆದೇಶ ನೀಡಿದ ದಿನಾಂಕದಿಂದ 31–05–2026 ರವರೆಗೆ) ಈ ಸಮಿತಿಯ ಭದ್ರತಾ ವ್ಯವಸ್ಥೆಗಾಗಿ ಅರ್ಹ ಹಾಗೂ ಅನುಭವ ಹೊಂದಿದ ಮತ್ತು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಸಂಸ್ಥೆ / ಏಜೆನ್ಸಿಯವರಿಂದ ಕನಿಷ್ಠ ವೇತನ ಕಾಯ್ದೆಯನ್ವಯ ವಿವಿಧ 09 ಜನ ಭದ್ರತಾ ಸಿಬ್ಬಂದಿ ಸೇವೆ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಇ–ವೆಬ್‌ಸೈಟ್ : https://kppp.karnataka.gov.in ಪೋರ್ಟಲ್‌ನಲ್ಲಿ ದ್ವಿ–ಲಕೋಟೆ ಪದ್ದತಿಯಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಭದ್ರತಾ ಠೇವಣಿ ರೂ. 1,50,000/–, Indent No. : APMC/2025-26/SE 0598 ಆಸಕ್ತಿ ಉಳ್ಳ ಸಂಸ್ಥೆ / ಏಜೆನ್ಸಿಯವರು ಪಡೆಯಲಿಚ್ಚಿಸುವ ಮಾಸಿಕ ಸೇವಾ ಶುಲ್ಕದ ಪ್ರತಿಶತ ದರವನ್ನು ಮಾತ್ರ ನಮೂದಿಸಬೇಕು. ಭರ್ತಿ ಮಾಡಿದ ಟೆಂಡರ್‌ನ್ನು ದಿನಾಂಕ : 30–05–2025 ರ ಸಂಜೆ 4.00 ಗಂಟೆಯೊಳಗಾಗಿ ಸಲ್ಲಿಸುವುದು. ದಿನಾಂಕ : 31–05–2025 ರ ಸಂಜೆ 5.00 ಗಂಟೆಗೆ ತಾಂತ್ರಿಕ ಬಿಡ್‌ನ್ನು ಹಾಗೂ ದಿನಾಂಕ : 05–06–2025 ರ ಬೆಳಿಗ್ಗೆ 11.00 ಗಂಟೆಗೆ (ಸಾದ್ಯವಾದಲ್ಲಿ) ಆರ್ಥಿಕ ಬಿಡನ್ನು ತರೆಯಲಾಗುವುದು.
ಟೆಂಡರ್ ಷರತ್ತು–ವ–ನಿಬಂಧನೆಗಳನ್ನು ಇ–ಪೋರ್ಟಲ್ ಮೂಲಕ ಹಾಗೂ ಸಮಿತಿಯು ಕಛೇರಿ ದೂರವಾಣಿ : 94481 00779 ರ ಮೂಲಕ ಪಡೆಯಬಹುದಾಗಿದೆ. ಯಾವುದೇ ಕಾರಣ ನೀಡದೆ ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದೇ ಟೆಂಡರ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.
ಸಹಿ/– ವಿ. ಡಿ. ಪಾಟೀಲ, ಕಾರ್ಯದರ್ಶಿ, ಕೃ.ಉ.ಮಾ. ಸಮಿತಿ, ಬಾಗಲಕೋಟೆ.
ಸಹಿ/– ಅಮರೇಶ ಪಮ್ಮಾರ. ಆಡಳಿತಾಧಿಕಾರಿಗಳು, ಕೃ.ಉ.ಮಾ. ಸಮಿತಿ, ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/62/ಮಣಿಪಾಲ್/2025–26

ಅಲ್ಪಸಂಖ್ಯಾತರ ನಿರ್ದೇಶನಾಲಯ
ನಂ.16ಸಿ, ಮೌಲಾನಾ ಅಜಾದ್ ಭವನ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.
ಸಂಖ್ಯೆ: ಅಸಂನಿ/ಅ/ಮೌಶಾ/ಸಮವಸ್ತ್ರ/ಸಿಆರ್–03/2025–26 ದಿನಾಂಕ: 13.05.2025

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ
2025–26ನೇ ಶೈಕ್ಷಣಿಕ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದ ಮೌಲಾನಾ ಅಜಾದ್ ಮಾದರಿ ಶಾಲೆಗಳ ವಿದ್ಯಾರ್ಥಿಗಳಿಗೆ ಎರಡು ಜೊತೆ ಸಮವಸ್ತ್ರ(ಒಂದು ಜೊತೆ ಬಣ್ಣದ ಮತ್ತು ಒಂದು ಜೊತೆ ಬಿಳಿ ಬಣ್ಣದ), ಎರಡು ಜೊತೆ ಸಾಕ್ಸ್, ಟೈ & ಬೆಲ್ಟ್‌ಗಳನ್ನು ಸರಬರಾಜುದಾರರಿಂದ ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ನಲ್ಲಿ ಅಲ್ಪಾವಧಿ ಮರು–ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ.	ವಿವರಗಳು	ದಿನಾಂಕ/ಸಮಯ
1.	ಟೆಂಡರ್ ಪ್ರಕಟಣೆಯ ದಿನಾಂಕ:	13.05.2025.
2.	ಟೆಂಡರ್ ಮೊತ್ತ:	ರೂ.853.09 ಲಕ್ಷಗಳು.
3.	ಇಎಂಡಿ ಮೊತ್ತ	ರೂ.12,79,646/–
4.	ಟೆಂಡರ್ ಕುರಿತು ಪೂರ್ವಭಾವಿ ಸಭೆ:	16.05.2025 ಬೆಳಿಗ್ಗೆ 11:30 ಗಂಟೆಗೆ.
5.	ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ:	21.05.2025 ಸಂಜೆ 5:30 ಗಂಟೆಯೊಳಗೆ.
6.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	23.05.2025 ಬೆಳಿಗ್ಗೆ 10:30 ಗಂಟೆಗೆ.
7.	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	26.05.2025 ಬೆಳಿಗ್ಗೆ 11:30 ಗಂಟೆಗೆ.
8.	ಟೆಂಡರ್ ತೆರೆಯವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ:	ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.
9.	ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ	080–22535902/901 080–22535919.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.inನಲ್ಲಿ ಪಡೆಯಬಹುದಾಗಿದೆ.
ಸಹಿ/– ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/635/25–26

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/26096910 Email: purchase@kmf.coop
ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–781/2025–26 ದಿನಾಂಕ: 13.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಸೇವಾದಾರರನ್ನು ಗುರುತಿಸಲು ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Sl. No.	Description	Approximate Nos.	Nominal EMD (Rs.)
1	Providing health Insurance coverage for the following 1. KMF Employees and their direct dependents, 2. Workmen Compensation policy covering casual and contract labours at all units of KMF, 3. Group Personnel Accident Policy covering KMF employees and 4. Public Liability Policy covering KMF and Its Units.	As per tender document	1,000/-

ಟೆಂಡರ್ ಪ್ರಾರಂಭವಾಗುವ ದಿನಾಂಕ : 14.05.2025 ರಿಂದ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 21.05.2025 ರಂದು ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 28.05.2025 ರ ಸಂಜೆ 5.15 ಗಂಟೆ ಒಳಗಾಗಿ. ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : 29.05.2025 ರಂದು ಸಂಜೆ 5.20 ಗಂಟೆಗೆ. ವಾಣಿಜ್ಯ ಟೆಂಡರ್ ತೆರಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ
ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ ಸಹಿ/– ನಿರ್ದೇಶಕರು (ಖರೀದಿ)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಅಪಮಾನವನ್ನು ಸಹಿಸಿಕೊಳ್ಳುವುದು ಕಷ್ಟವಲ್ಲ, ಆದರೆ ಅದನ್ನು ಸಹಿಸಿಕೊಳ್ಳುವುದು ಅನ್ಯಾಯ.

-ರವೀಂದ್ರನಾಥ ಟ್ಯಾಗೋರ್

ಭಯೋತ್ಪಾದನೆ: ಭಾರತದ ನಿಲುವು ದೃಢ ಕೆಲವು ಪ್ರಶ್ನೆಗಳಿಗೆ ಉತ್ತರ ಸಿಗಬೇಕಿದೆ

ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರವನ್ನು ಉದ್ದೇಶಿಸಿ ಸೋಮವಾರ ಮಾತನಾಡಿ ಭಯೋತ್ಪಾದನೆಗೆ ಸಂಬಂಧಿಸಿ ದೇಶದ ನಿಲುವು ಏನು ಎಂಬುದನ್ನು ಪುನರುಚ್ಚರಿಸಿದ್ದಾರೆ. ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದಕರ ದಾಳಿ, ಅದರ ಬಳಿಕ ಪಾಕಿಸ್ತಾನದ ಜೊತೆಗೆ ನಡೆದ ಘರ್ಷಣೆ ಮತ್ತು ಮುಂದಿನ ದಿನಗಳಲ್ಲಿ ಇಂತಹುದೇ ಪರಿಸ್ಥಿತಿ ಮರುಕಳಿಸಬಹುದಾದ ಸಾಧ್ಯತೆಯ ಕಾರಣದಿಂದ ಈ ನಿಲುವು ನಮಗೆ ಮುಖ್ಯ ಎನಿಸುತ್ತದೆ. 'ಭಯೋತ್ಪಾದನೆ ಮತ್ತು ಮಾತುಕತೆ, ಭಯೋತ್ಪಾದನೆ ಮತ್ತು ವ್ಯಾಪಾರ ಜೊತೆಯಾಗಿ ಸಾಗಲು ಸಾಧ್ಯವಿಲ್ಲ. ಅಂತೆಯೇ, ನೀರು ಮತ್ತು ರಕ್ತ ಜೊತೆಯಾಗಿ ಹರಿಯಲು ಸಾಧ್ಯವಿಲ್ಲ' ಎಂದು ಪ್ರಧಾನಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ಭಾರತದ ನಿಲುವು ಏನು ಎಂಬುದರ ಘೋಷಣೆಯು ಪಾಕಿಸ್ತಾನವನ್ನು ಉದ್ದೇಶಿಸಿದ್ದು ಮಾತ್ರವಲ್ಲ, ಅಂತರರಾಷ್ಟ್ರೀಯ ಸಮುದಾಯಕ್ಕೂ ಇದರಿಂದ ಸಂದೇಶ ಹೋಗಿದೆ. ಪಾಕಿಸ್ತಾನವು ಭಯೋತ್ಪಾದನೆಗೆ ಬೆಂಬಲ ಮತ್ತು ಪ್ರಾಯೋಜಕತ್ವ ನೀಡುವುದನ್ನು ನಿಲ್ಲಿಸುವವರೆಗೆ ಆ ದೇಶದ ಜೊತೆಗೆ ಯಾವುದೇ ರೀತಿಯ ಮಾತುಕತೆಗೆ ಅವಕಾಶವೇ ಇಲ್ಲ ಎಂಬುದನ್ನು ಭಾರತವು ಸ್ಪಷ್ಟಪಡಿಸಿದೆ. ಈ ಹಿಂದೆ ಹಲವು ಬಾರಿ ಹೇಳಿದ್ದ ನಿಲುವನ್ನು ಪುನರುಚ್ಚರಿಸಲಾಗಿದೆ.

ಭಯೋತ್ಪಾದನೆ ಇದ್ದರೂ ಜೊತೆಗೆ ರಾಜತಾಂತ್ರಿಕ ಸಂಬಂಧವನ್ನು ಮುಂದುವರಿಸಿಕೊಂಡು ಹೋಗುವ ಹಳೆಯ ನಿಯಮವನ್ನು ಭಾರತ ಇನ್ನು ಮುಂದೆ ಅನುಸರಿಸುವುದಿಲ್ಲ ಎಂಬುದನ್ನು ಪ್ರಧಾನಿ ದೃಢಪಡಿಸಿದ್ದಾರೆ. ಭದ್ರತೆಗೆ ಸಂಬಂಧಿಸಿ ಭಾರತದ ನಿಲುವಿನಲ್ಲಿ ಆಗಿರುವ ಪಲ್ಲಟವನ್ನು 'ಆಪರೇಷನ್ ಸಿಂಧೂರ' ಎತ್ತಿತೋರಿಸಿದೆ. ಭಯೋತ್ಪಾದನೆಯನ್ನು ಎದುರಿಸುವಲ್ಲಿ ಭಾರತವು ಹೊಸ ನಿಲುವನ್ನು ತಳೆದಿದೆ. ಭಯೋತ್ಪಾದಕರು ಮತ್ತು ಅವರ ನಿರ್ವಾಹಕರ ನಡುವೆ ಭಾರತವು ಯಾವ ವ್ಯತ್ಯಾಸವನ್ನೂ ಕಾಣುವುದಿಲ್ಲ ಎಂದು ಮೋದಿ ದೃಢವಾಗಿ ಹೇಳಿದ್ದಾರೆ. ಸದ್ಯದ ಸಂಘರ್ಷ ಶಮನವು ಶಾಶ್ವತವಾದುದೇನಲ್ಲ. ಪಾಕಿಸ್ತಾನದ ಮುಂದಿನ ದಿನಗಳ ನಡವಳಿಕೆಯನ್ನು ನೋಡಿಕೊಂಡು ಯಾವ ಕ್ರಮ ಕೈಗೊಳ್ಳಬೇಕು ಎಂಬುದನ್ನು ನಿರ್ಧರಿಸಲಾಗುವುದು ಎಂಬುದನ್ನು ಸಶಸ್ತ್ರ ಪಡೆಗಳ ಮುಖ್ಯಸ್ಥರು ಹೇಳಿದ್ದಾರೆ. ಪ್ರಧಾನಿಯವರು ಅದನ್ನು ಅನುಮೋದಿಸಿದ್ದಾರೆ. 'ಅಣ್ವಸ್ತ್ರ ಬೆದರಿಕೆಯನ್ನು ಭಾರತವು ಸಹಿಸುವುದಿಲ್ಲ; ಭಯೋತ್ಪಾದನೆಯ ವಿರುದ್ಧ ಕೈಗೊಂಡ ಕ್ರಮಗಳು ಭಯೋತ್ಪಾದನೆಯ ವಿರುದ್ಧ ಭಾರತದ ನಿಲುವು ಏನು ಎಂಬುದನ್ನು ದೃಢಪಡಿಸಿವೆ; ಪಾಕಿಸ್ತಾನದ ದುಸ್ಸಾಹಸವನ್ನು ಯಾವ ಬೆಲೆ ತೆತ್ತಾದರೂ ತಡೆಯಲಾಗುವುದು' ಎಂಬುದನ್ನು ಈಗಿನ ಕಾರ್ಯಾಚರಣೆಯು ದೃಢಪಡಿಸಿದೆ. ಆದರೆ, ವಾಸ್ತವದಲ್ಲಿ ಈ ನಿಲುವು ಬಹುದೊಡ್ಡ ಸವಾಲನ್ನು ಹೊಂದಿದೆ. ಅಣ್ವಸ್ತ್ರವನ್ನು ತೋರಿಸಿ ಬೆದರಿಸುವುದು ಮತ್ತು ಅಣ್ವಸ್ತ್ರವನ್ನು ಬಳಸುವುದರ ನಡುವಣ ವ್ಯತ್ಯಾಸವನ್ನು ಗ್ರಹಿಸುವುದು ಸುಲಭವಲ್ಲ. ಈಗ ಇರುವ ವಿಷಮ ಪರಿಸ್ಥಿತಿಯಲ್ಲಿ ಯಾವುದನ್ನೂ ಲಘುವಾಗಿ ತೆಗೆದುಕೊಳ್ಳುವುದು ಸಾಧ್ಯವಿಲ್ಲ.

ಕೆಲವು ವಿಚಾರಗಳನ್ನು ಪ್ರಧಾನಿ ದೃಢವಾಗಿ ಹೇಳಿರುವುದು ಸ್ವಾಗತಾರ್ಹ. ಆದರೆ, ಅವರು ಹೇಳದೇ ಬಿಟ್ಟಿರುವ ವಿಚಾರಗಳು ಹಲವು ಇವೆ ಎಂಬುದು ಗಮನಾರ್ಹ

ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಹಲವು ಪ್ರಶ್ನೆಗಳಿಗೆ ಉತ್ತರ ಹೇಳಿಲ್ಲ. ಕದನ ವಿರಾಮಕ್ಕೆ ಸಂಬಂಧಿಸಿದ ವಿವರಗಳನ್ನು ಬಹಿರಂಗಪಡಿಸಿಲ್ಲ. ತಮ್ಮ ಮಧ್ಯಸ್ಥಿಕೆಯಿಂದಾಗಿ ಕದನ ವಿರಾಮ ಸಾಧ್ಯವಾಗಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ಬಗ್ಗೆಯೂ ಮೋದಿ ಅವರು ಏನನ್ನೂ ಹೇಳಿಲ್ಲ. ಪಾಕಿಸ್ತಾನದ ಕೋರಿಕೆಯಂತೆ ಕದನ ವಿರಾಮದ ನಿರ್ಧಾರ ಕೈಗೊಳ್ಳಲಾಗಿದೆಯೇ ಹೊರತು ಅಂತರರಾಷ್ಟ್ರೀಯ ಒತ್ತಡದಿಂದ ಅಲ್ಲ ಎಂದು ಮೋದಿ ಹೇಳಿದ್ದಾರೆ. [illegible] ಕಾಶ್ಮೀರಕ್ಕೆ ಸಂಬಂಧಿಸಿ [illegible] ವಿಚಾರವನ್ನೂ ಉಲ್ಲೇಖಿಸಿದೆ. ಕಾಶ್ಮೀರದ ಕುರಿತು ಭಾರತದ ನಿಲುವು ಏನು ಎಂಬುದನ್ನು ಪ್ರಧಾನಿಯವರು ಸ್ಪಷ್ಟಪಡಿಸಿದ್ದಾರೆ. ಪಾಕಿಸ್ತಾನದ ಜೊತೆಗೆ ಭಯೋತ್ಪಾದನೆ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಹಿಂದಿರುಗಿಸುವಿಕೆಯನ್ನು ಬಿಟ್ಟು ಬೇರೆ ಯಾವುದರ ಬಗ್ಗೆಯೂ ಮಾತುಕತೆ ಇಲ್ಲ ಎಂದು ಮೋದಿಯವರು ಹೇಳಿದ್ದಾರೆ. ಪಾಕಿಸ್ತಾನದ ಜೊತೆಗಿನ ಸಂಬಂಧದ ನಿಯಮಗಳನ್ನು 'ಆಪರೇಷನ್ ಸಿಂಧೂರ' ಹೊಸದಾಗಿ ರೂಪಿಸಿದೆ. ಭಾರತದ ನಿಲುವು ಹೆಚ್ಚು ದೃಢವಾಗಿದೆ. ಪ್ರಧಾನಿಯವರು ಕೆಲವು ವಿಚಾರಗಳನ್ನು ದೃಢವಾಗಿ ಹೇಳಿದ್ದಾರೆ ಎಂಬುದು ಸ್ವಾಗತಾರ್ಹ. ಆದರೆ, ಅವರು ಹೇಳದೇ ಬಿಟ್ಟಿರುವ ವಿಚಾರಗಳು ಹಲವು ಇವೆ ಎಂಬುದನ್ನು ಗಮನಿಸದೇ ಇರಲು ಆಗದು.

ದಿನದ ಟ್ವೀಟ್

ಅನುವಾದ ಮಾಡುವುದಿಲ್ಲವೇಕೆ?

ನಮ್ಮ ಪ್ರೀತಿಪಾತ್ರ ಪ್ರಧಾನಿ ಮೋದಿ ನಿನ್ನೆ ಏನು ಹೇಳಿದರು ಅನ್ನುವುದನ್ನು ಅರ್ಥ ಮಾಡಿಕೊಳ್ಳಲು ಇಂದಿನ ವೃತ್ತಪತ್ರಿಕೆ ಬರುವವರೆಗೂ ಕಾಯಬೇಕಾಯಿತು! ಸರ್ಕಾರವು ತಂತ್ರಜ್ಞಾನವನ್ನು ಬಳಸಿ ಅವರ ಭಾಷಣವನ್ನು ಎಲ್ಲ ಪ್ರಾದೇಶಿಕ ಭಾಷೆಗಳಲ್ಲೂ ತಕ್ಷಣ ಪ್ರಸಾರವಾಗುವಂತೆ ಮಾಡಬಾರದೇಕೆ? 5– 10 ನಿಮಿಷಗಳ ವಿಳಂಬವಾದರೆ ಸರಿ. ಸದಾ ಎರಡನೇ ದರ್ಜೆಯ ಪ್ರಜೆ ಎಂಬಂತೆ ಭಾಸವಾಗುತ್ತದೆ!

#StopHindiImposition

ಎ.ವಿರೂಪಾಕ್ಷ

ಕಿಡಿನುಡಿ

ಇಂತಹ ಭಟ್ಟಂಗಿತನಕ್ಕೆ ಮದ್ದಿಲ್ಲ!

(ಆಪರೇಷನ್ ಸಿಂಧೂರ ಹಾಗೂ ಪಾಕಿಸ್ತಾನದ ಜೊತೆಗಿನ ಕದನ ವಿರಾಮದ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಿದ ಮರುದಿನ, ಪಾಕಿಸ್ತಾನದ ಜೊತೆಗಿನ ಯುದ್ಧ ಮತ್ತು ಅಮೆರಿಕದ ಮಧ್ಯಸ್ಥಿಕೆ ಕುರಿತು ಇಂದಿರಾ ಗಾಂಧಿ ಅವರ ನಿಲುವನ್ನು ಒಳಗೊಂಡ ಪೋಸ್ಟರ್‌ಗಳನ್ನು ಕರ್ನಾಟಕದ ಕಾಂಗ್ರೆಸ್ ಕಾರ್ಯಕರ್ತರು ಬೆಂಗಳೂರಿನಾದ್ಯಂತ ಹಾಕಿದ್ದಕ್ಕೆ ಪ್ರತಿಕ್ರಿಯೆ)

ರಾಮಚಂದ್ರ ಎಂ., ಬರಹಗಾರ

25 ವರ್ಷಗಳ ಹಿಂದೆ

ಭಾನುವಾರ, 14-5-2000

● ಬೆಂಗಳೂರು ಹುಡುಗಿ ಭುವನದ ಬೆಡಗಿ

ನಿಕೋಸಿಯ, ಮೇ 13 (ರಾಯಿಟರ್ಸ್)– ಎಪ್ಪತ್ತೆಂಟು ದೇಶಗಳ ಸುಂದರಿಯರನ್ನು ಬದಿಗೆ ಸರಿಸಿ ಭಾರತ ಸುಂದರಿ ಕುಮಾರಿ ಲಾರಾ ದತ್ತ ಅವರು ವಿಶ್ವಸುಂದರಿ ಪಟ್ಟವನ್ನು ತಮ್ಮದಾಗಿಸಿಕೊಂಡರು.

ಸೈಪ್ರಸ್ ದ್ವೀಪದ ರಾಜಧಾನಿಯಾದ ನಿಕೋಸಿಯದಲ್ಲಿ ಧಾರ್ಮಿಕ ಗುಂಪುಗಳು ಈ ಸ್ಪರ್ಧೆಯನ್ನು ವಿರೋಧಿಸಿ ಪ್ರತಿಭಟನಾ ಪ್ರದರ್ಶನ ನಡೆಸಿ ಈ ವರ್ಣರಂಜಿತ ಸಮಾರಂಭದ ಪ್ರಾರಂಭವನ್ನು ವಿಳಂಬ ಗೊಳಿಸಿದರು. ವಿಶ್ವಸುಂದರಿಯಾಗಿ ಆಯ್ಕೆಗೊಂಡ ಸಂದರ್ಭದಲ್ಲಿ ಲಾರಾ ಅವರು ಸ್ಪರ್ಧೆಯನ್ನು ಸಮರ್ಥಿಸಿ ಹೇಳಿಕೆ ನೀಡಿದರು.

ಭಾರತದ ಸುಷ್ಮಿತಾ ಸೇನ್ ಈ ಹಿಂದೆ ವಿಶ್ವಸುಂದರಿ ಪಟ್ಟವನ್ನು ಗೆದ್ದಿರುವುದನ್ನು ಇಲ್ಲಿ ಸ್ಮರಿಸಬಹುದು. ಮೂಲತಃ ಬೆಂಗಳೂರಿನವರಾದ ಲಾರಾ ಅವರ ತಂದೆ ಪಂಜಾಬಿ ಹಾಗೂ ತಾಯಿ ಅಂಶಿಕಾ ಐರೋಪ್ಯರು.

● ಎಸ್ಮಾ ನೆರಳಿನಲ್ಲಿ ಮೌಲ್ಯಮಾಪನ

ಬೆಂಗಳೂರು, ಮೇ 13– ಅಗತ್ಯ ಸೇವಾ ನಿರ್ವಹಣೆ ಕಾಯ್ದೆ (ಎಸ್ಮಾ) ಭಯದ ನೆರಳಲ್ಲಿ, ರಾಜ್ಯದ ಎಲ್ಲ 22 ಮೌಲ್ಯಮಾಪನ ಕೇಂದ್ರಗಳಲ್ಲಿ ಇಂದು ಪಿಯುಸಿ ಉತ್ತರಪತ್ರಿಕೆ ಮೌಲ್ಯಮಾಪನ ಪ್ರಕ್ರಿಯೆ ಆರಂಭವಾಯಿತು.

ಜತೆಗೆ ಎಸ್ಮಾ ಅನ್ವಯ ರಾಜ್ಯ ಪದವಿ ಪೂರ್ವ ಶಿಕ್ಷಣ ಅಧಿಕಾರಿಗಳ, ಪ್ರಾಚಾರ್ಯರ, ಉಪನ್ಯಾಸಕರ ಮತ್ತು ಬೋಧಕೇತರ ಒಕ್ಕೂಟದ ಕೆಲವು ಪದಾಧಿಕಾರಿಗಳನ್ನು ಪೊಲೀಸರು ಬೆಳಿಗ್ಗೆ ಬಂಧಿಸುವುದರೊಂದಿಗೆ ಎಸ್ಮಾ ಬಿಸಿ ಉಪನ್ಯಾಸಕರಿಗೆ ತಟ್ಟತೊಡಗಿದೆ.

ಪೊಲೀಸ್ ಮೂಲಗಳ ಪ್ರಕಾರ ಈವರೆಗೆ ರಾಜ್ಯದಲ್ಲಿ 16 ಪದಾಧಿಕಾರಿಗಳನ್ನು ಬಂಧಿಸಲಾಗಿದೆ. ಒಟ್ಟು 54 ಮಂದಿಯನ್ನು ಬಂಧಿಸಲು ಸರ್ಕಾರದಿಂದ ಪೊಲೀಸ್ ಇಲಾಖೆಗೆ ಸೂಚನೆ ಬಂದಿದೆ ಎನ್ನಲಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 14-5-1975

● ರಾಜ್ಯಗಳ ನಾಯಕತ್ವ ಬದಲಾವಣೆ ಇಲ್ಲ: ಹೈಕಮಾಂಡ್ ನಿರ್ಧಾರ

ನವದೆಹಲಿ, ಮೇ 13– ಮುಂದಿನ ವರ್ಷದ ಆದಿಯಲ್ಲಿ ಲೋಕಸಭೆ ಚುನಾವಣೆ ನಡೆಯುವ ತನಕ ಯಾವುದೇ ರಾಜ್ಯ ಸರ್ಕಾರದ ನಾಯಕತ್ವದಲ್ಲಿ ಬದಲಾವಣೆ ಮಾಡಕೂಡದು ಎಂದು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ಯಾವೊಂದು ಗುಂಪಿನ ನಾಯಕರಾಗದೆ, ಪಕ್ಷದ ನಾಯಕರಾಗಿ ವರ್ತಿಸಿ ಎಂದು ಎಚ್.ಎನ್. ಬಹುಗುಣ ಅವರಿಗೆ ಸಲಹೆ ಮಾಡಿ, ಉತ್ತರ ಪ್ರದೇಶದ ಬಿಕ್ಕಟ್ಟನ್ನು ಪ್ರಧಾನಿ ಅವರು ನಿನ್ನೆ ಶಾಂತಗೊಳಿಸಿದ್ದೇ ಸರ್ಕಾರದ ಈ ನೀತಿಯನ್ನು ವ್ಯಕ್ತಪಡಿಸಿತು.

ಕರ್ನಾಟಕ ಮುಖ್ಯಮಂತ್ರಿ ದೇವರಾಜ ಅರಸು ಅವರ ಬೆಂಬಲಿಗರು ಎನ್ನಲಾದ ಏಳು ಮಂದಿ ಕಾಂಗ್ರೆಸ್ಸಿಗರು ಇಂದು ಪ್ರಧಾನಿ ಅವರನ್ನು ಭೇಟಿ ಮಾಡಿದ ಮೇಲೆ ಸರ್ಕಾರದ ಈ ನೀತಿ ಮತ್ತಷ್ಟು ಖಚಿತಪಟ್ಟಿತು.

ಪ್ರಧಾನಿ ಅವರನ್ನು ಭೇಟಿ ಮಾಡಿದವರು ಜಾಫರ್ ಷರೀಫ್, ಎಚ್.ಎಸ್. ನರಸಯ್ಯ, ಮಕ್ಸೂದ್ ಅಲಿ ಖಾನ್, ಜಿ.ವೈ. ಕೃಷ್ಣನ್, ಮಾರ್ಗರೆಟ್ ಆಳ್ವಾ, ಬಿ. ರಾಚಯ್ಯ ಮತ್ತು ಸಿದ್ದರಾಮರೆಡ್ಡಿ.

ಕರ್ನಾಟಕದ ನಾಯಕತ್ವದಲ್ಲಿ ಬದಲಾವಣೆ ಆಗಬೇಕೆಂಬ ರಾಜ್ಯದ ಎಂ.ಪಿ.ಗಳ ಒತ್ತಾಯವನ್ನು ಪ್ರಧಾನಿ ಜತೆ ಅವರು ಪ್ರಸ್ತಾಪಿಸಿದರು.

ನಾನಾ ಸಮಸ್ಯೆಗಳನ್ನು ಬಗೆಹರಿಸುವ ಮಾರ್ಗದಲ್ಲಿ ಕಾಲ–ಕಾಲಕ್ಕೆ ಭಿನ್ನಾಭಿಪ್ರಾಯ ಉಂಟಾಗುತ್ತದೆ. ಆದರೆ, ಪಕ್ಷವು ಅದನ್ನು ಚರ್ಚೆ ಹಾಗೂ ಒಗ್ಗಟ್ಟಿನ ಮೂಲಕ ಬಗೆಹರಿಸಬೇಕು ಎಂದೂ ಪ್ರಧಾನಿ ಅವರು ಹೇಳಿದರು.

ಪೌರುಷದ ಅಟ್ಟಹಾಸದ ಮಾತಿನ ಬೀಜಗಳೊಳಗೆ ವಿಷಮತೆಯ ಕುಡಿಗಳಿವೆ, ಸುಖದ ನೆಲೆಗಳಿಲ್ಲ

ಹುಸಿ ಯುದ್ಧಗಳ ಬಲೆಯಲ್ಲಿ ಬಿದ್ದಿರುವೆವು

ವಿಶ್ಲೇಷಣೆ

ಸಬಿತಾ ಬನ್ನಾಡಿ

'ನಮ್ಮನ್ನೂ ಕೊಂದುಬಿಡಿ'.

'ಹೆಂಗಸರು, ಮಕ್ಕಳನ್ನು ನಾವು ಕೊಲ್ಲುವುದಿಲ್ಲ'.

ಪಹಲ್ಗಾಮ್‌ನಲ್ಲಿ ತಮ್ಮ ಗಂಡಂದಿರನ್ನು ಕೊಂದಾಗ ಹೆಂಡತಿಯರ ಆಕ್ರೋಶದ ನುಡಿಗಳಿಗೆ ಭಯೋತ್ಪಾದಕರು ಆಡಿದ ಮಾತುಗಳಿವು. ಅದರರ್ಥ ಹೆಂಗಸರು, ಮಕ್ಕಳನ್ನು ಕೊಲ್ಲುವುದು ತಮ್ಮ ಪೌರುಷಕ್ಕೆ ಸಮನಲ್ಲ ಎಂದು ಅವರು ಭಾವಿಸಿರುವುದು!

ಶಸ್ತ್ರವಿಲ್ಲದೆ ವಿಹಾರದಲ್ಲಿ ಇರುವವರನ್ನು ಮೋಸದಿಂದ ಕೊಲ್ಲುವುದು ಯಾವ ಸೀಮೆ ಪೌರುಷವೋ? ಆದರೆ, ಹೆಂಗಸನ್ನು ಮತ್ತು ಹೆಂಗಸಿಗೆ ಸಮನಾದ ಮಕ್ಕಳನ್ನು ಗಂಡಸರ ಅಧೀನ ಎಂದು ಯೋಚಿಸುವ ಈ ಯೋಚನಾ ಕ್ರಮಕ್ಕೂ ಜಗತ್ತಿನಾದ್ಯಂತದ ಎಲ್ಲಾ ಆಕ್ರಮಣ, ಸಂಘರ್ಷಗಳಿಗೂ ನೇರವಾದ ಸಂಬಂಧವಿದೆ. ಪ್ರೀತಿ, ಮಮತೆ, ಹಂಚಿ ಉಣ್ಣುವ ಸರಳತೆ, ಪೋಷಣೆ, ಕರುಣೆ, ಪರಾನುಭೂತಿಯನ್ನು ಹೆಣ್ಣಿನ ಗುಣಗಳು ಎಂದು ತಾತ್ಸಾರ ಮಾಡಿದಾಗಲೂ, ಅವನ್ನು ಹೃದಯದಲ್ಲಿ ಹೊತ್ತು, ಅವು ಮನುಷ್ಯರೆಲ್ಲರ ಗುಣಗಳಾದಾಗ ಮಾತ್ರ ಮನುಷ್ಯ ಮತ್ತು ಜಗತ್ತು ನಿಜವಾದ ಸುಖವನ್ನು ಅನುಭವಿಸಲು ಸಾಧ್ಯ ಎಂದು ಬುದ್ಧನೂ ಸೇರಿದಂತೆ ಹಲವು ಪುರುಷರೂ ಆಗಾಗ ಹೇಳುತ್ತಲೇ ಬಂದಿದ್ದಾರೆ. ಆ ಮೂಲಕ ಮನುಕುಲವನ್ನು ಇಂದಿಗೂ ಕಾಪಿಟ್ಟಿದ್ದಾರೆ.

ಆದರೆ ಅದಕ್ಕೆ ವಿರುದ್ಧವಾಗಿ 'ಪುರುಷ ಮಾತ್ರ ಪ್ರಧಾನ' ಎಂದು ಹೇಳುತ್ತಾ ಅವನ ಲಕ್ಷಣಗಳನ್ನು ಯುದ್ಧ, ಆಕ್ರಮಣ, ಹಿಂಸೆ, ದೌರ್ಜನ್ಯ, ಲಗಾಮಿಲ್ಲದವನು ಎಂದೆಲ್ಲಾ ತಳಕು ಹಾಕಿ, ಹುಡುಗರನ್ನು ಹಾಗೆ ಬೆಳೆಸುವುದು ಮನೆಯೊಳಗೂ ಹೊರಗೂ ಇನ್ನಿಲ್ಲದ ಕ್ಷೋಭೆಗಳನ್ನು ಸೃಷ್ಟಿಸಿದೆ. ಕೃತಕ ಗಡಿಗಳನ್ನು ಮನುಷ್ಯತ್ವಕ್ಕಿಂತ ಮಿಗಿಲಾದವು ಎಂದು ತಲೆಗೆ ತುಂಬಿಸಿಕೊಂಡಿರುವ ಎಲ್ಲಾ ಗಂಡು– ಹೆಣ್ಣುಗಳು ಈ ಉನ್ಮಾದದಲ್ಲಿ ಹೂಂಕರಿಸುತ್ತಿರುತ್ತಾರೆ. ಹೀಗೆ ಜೊತೆಯ ಜೀವವಾದ ಹೆಣ್ಣಿನ ಮೇಲೆಯೇ ಮಾಡುವ ಸವಾರಿಯ ವಿಸ್ತರಿತ ರೂಪಗಳೇ ಇನ್ನೆಲ್ಲಾ ಸವಾರಿಗಳಾಗಿರುತ್ತವೆ. ಭಯೋತ್ಪಾದನೆಯಿರಲಿ, ಹಲವೊಮ್ಮೆ ಯುದ್ಧಗಳೇ ಇರಲಿ- ಇವೆಲ್ಲವೂ ತನ್ನ ಸಾಮ್ರಾಜ್ಯ, ತನ್ನ ನಿಲುವುಗಳು, ತನ್ನ ಧರ್ಮ, ತನ್ನ ಸಿದ್ಧಾಂತಗಳನ್ನು ವಿಸ್ತರಿಸುವುದಕ್ಕೆ ತನಗಿಂತ ದುರ್ಬಲರ ಮೇಲೆ ತಾನು ಹೂಡುವ ಆಟ, ಕೂಟಗಳಿಗೆ ಎಲ್ಲೆ ಮೀರಿದ ಹಿಂಸೆಯನ್ನು ಬಳಸಲು ತಾನೇ ಕೊಟ್ಟುಕೊಂಡಿರುವ ಅಪ್ಪಣೆಗಳಾಗಿವೆ.

ನಾವು ಕ್ರೌರ್ಯದ ಮೂಲಬೇರನ್ನು ಹುಡುಕಿ ನಾಶ ಮಾಡುವ ಯುದ್ಧವನ್ನು ಮಾಡಬೇಕಿದೆ. ಆದರೆ ನಾವೆಲ್ಲರೂ ಹುಸಿಯುದ್ಧಗಳನ್ನು ಮಾಡುತ್ತಲೇ ಇದ್ದೇವೆ. ಈ ಒಂದು ತಿಂಗಳಿನಿಂದ ಫೇಸ್‌ಬುಕ್‌ನಲ್ಲಿ ಹೆಣ್ಣುಮಕ್ಕಳ ವಿರುದ್ಧದ ಟ್ರೋಲ್‌ಗಳಲ್ಲಿ ಬಳಕೆಯಾದ ಅಸಹ್ಯ ಭಾಷೆಯನ್ನು ನೋಡಿದಾಗ, ಇಷ್ಟು ನಿರ್ಲಜ್ಜೆಯಿಂದ ಸಾರ್ವಜನಿಕವಾಗಿ ಹೀಗೆಲ್ಲಾ ಮಾತಾಡುವ ಇವರು ಮುಖ ಮುಚ್ಚಿಕೊಂಡವರೇ ಅಥವಾ ಮುಖ ಇರುವವರೇ ಎನ್ನುವುದಕ್ಕಿಂತ ಹೀಗೆ ಹೆಣ್ಣುಮಕ್ಕಳ ಮೇಲೆ ದಾಳಿ ಮಾಡುತ್ತಿರುವವರ ಗುರಿ ಏನು ಎಂದು ಯೋಚಿಸುತ್ತಿದ್ದೆ. ನಮಗೀಗ ನಮ್ಮ ಮೊಬೈಲ್ ಫೋನ್‌ನಲ್ಲಿ ಡಾಕ್ಯುಮೆಂಟನ್ನು ಕೂಡ ನಿರುಮ್ಮಳವಾಗಿ ಓಪನ್ ಮಾಡಲು ಸಾಧ್ಯವಾಗುತ್ತಿಲ್ಲ. ಧುತ್ತೆಂದು ಜಾಹೀರಾತು ಬರುತ್ತದೆ. ಕೃತಕ ಬುದ್ಧಿಮತ್ತೆ (ಎ.ಐ) ಮೂಲಕ ಚಿಕ್ಕ ಚಿಕ್ಕ ವಯಸ್ಸಿನ ಹುಡುಗಿಯರನ್ನು ಸೃಷ್ಟಿಸಿ ಲೈಂಗಿಕ ಸನ್ನೆಗಳನ್ನು ಮಾಡುತ್ತಿರುವಂತಹ ವಿಡಿಯೊಗಳು ಎಗ್ಗಿಲ್ಲದೆ ಹರಿದಾಡುತ್ತಿವೆ. ಇವು ಯಾರ‍್ಯಾರ ಮೇಲೆ ಏನೇನು ಪರಿಣಾಮ ಬೀರುತ್ತಿರಬಹುದು ಎಂಬ ಬಗ್ಗೆ ಚರ್ಚೆಯಾಗುವುದಿಲ್ಲ. ಅವುಗಳನ್ನು ನಿಯಂತ್ರಿಸಲು ಸರ್ಕಾರಗಳು ಏನು ಮಾಡಬಹುದು ಎಂಬ ಬಗ್ಗೆ ಚಿಂತಿಸುತ್ತಿಲ್ಲ.

ಸೆಕ್ಸ್ ವಿಡಿಯೊಗಳನ್ನು ನಿಯಂತ್ರಿಸುವಂತೆ ಸುಪ್ರೀಂ ಕೋರ್ಟ್ ಈಚೆಗೆ ಕೇಂದ್ರ ಸರ್ಕಾರಕ್ಕೆ ತಾಕೀತು ಮಾಡಿತು. ಆದರೆ ತಮಗೆ ಬೇಡದ ಯೂಟ್ಯೂಬ್ ಚಾನೆಲ್‌ಗಳನ್ನು ನಿಯಂತ್ರಿಸಬಲ್ಲ ಸರ್ಕಾರಕ್ಕೆ ಸೆಕ್ಸ್ ವಿಡಿಯೊಗಳು ಸಲೀಸಾಗಿ ಸಿಗುವ ಬಗ್ಗೆ, ಸೈಬರ್ ಅಪರಾಧಗಳನ್ನು ನಿಯಂತ್ರಿಸುವ ಬಗ್ಗೆ ಆಸಕ್ತಿ ಇಲ್ಲ. ಪ್ರಜೆಗಳೂ ಅವರಿಂದ ಅದನ್ನು ನಿರೀಕ್ಷಿಸುತ್ತಿಲ್ಲ. ಆದರೆ ಮಹಿಳೆಯರ ಕವಿಗೋಷ್ಠಿಯೊಂದರ ಭಾಷೆಯ ವಿರುದ್ಧ ಮುಗಿಬಿದ್ದಿದ್ದು ಹಾಸ್ಯಾಸ್ಪದವಾಗಿತ್ತು. ಅಯ್ಯೋ ಮರ್ಯಾದೆಯೇ ಹೋಯ್ತು ಎಂದು ಗಾಬರಿಯಾಗಿ, ಮರ್ಯಾದೆ ಉಳಿಸಲು ಹೋರಾಡುತ್ತಿರುವ ಉಗ್ರ ವೀರರು ತಾವು ಎಂಬ ಭ್ರಮೆಯಲ್ಲಿ ಸಮಾಧಾನ ತಾಳಲಾಯಿತು.

ಕವಿತೆಗಳಲ್ಲಿ ದೇಹದ ಅಂಗಾಂಗಗಳನ್ನು ಉಲ್ಲೇಖಿಸದೆ ಮುಚ್ಚಿಡುವುದರಿಂದ ಸಮಸ್ಯೆ ಪರಿಹಾರ ಆಗುವುದಾದರೆ ಈ ಮೊದಲೇ ಆಗಬೇಕಿತ್ತಲ್ಲವೇ? ಹೆಣ್ಣೊಬ್ಬಳು ನಿರ್ಭಿಡೆಯಿಂದ ಮಾತಾಡಿದರೆ ನಮ್ಮ ನಿಯಂತ್ರಣದಿಂದ ತಪ್ಪಿಸಿಕೊಳ್ಳುತ್ತಿದ್ದಾಳೆ ಎಂಬ ಆತಂಕವೇ ಆಕೆಯನ್ನು ಟ್ರೋಲ್ ಮಾಡುವುದರ ಉದ್ದೇಶ ಎಂಬುದು ನಮ್ಮ ಹೆಣ್ಣುಮಕ್ಕಳಿಗೇ ಗೋಚರವಾಗುವುದಿಲ್ಲ. ಯಾಕೆಂದರೆ, ಪುರುಷನೇ ಪ್ರಧಾನ ಎಂಬುದನ್ನು ತಮಗೆ ಗೊತ್ತಿಲ್ಲದೇ ಅಂತರ್ಗತ ಮಾಡಿಕೊಂಡಿರುವ ಹೆಂಗಸರು, ಹೀಗೆಲ್ಲಾ ಅವನ ಮುಂದೆ ಹೇಳುವುದು ನಾಚಿಕೆಗೇಡು ಎಂದು ಮುಜುಗರಕ್ಕೆ ಒಳಗಾಗುತ್ತಾರೆ. ಮಾತೆತ್ತಿದರೆ ಹೆಣ್ಣನ್ನು ಅಂಗಾಂಗಕ್ಕೆ ಸೀಮಿತಗೊಳಿಸಿ ಬಯ್ಗುಳ ಸೃಷ್ಟಿಸಿದವರ ಮಾತುಗಳ ವಿರುದ್ಧ ಯುದ್ಧ ಮಾಡದೆ, ಪ್ರತಿಭಟಿಸಿದವರ ಮೇಲೇ ಯುದ್ಧ ಮಾಡುವ ವೈಚಿತ್ರ್ಯವಿದು.

ಇನ್ನೊಂದೆಡೆ, ಹೇಳಬೇಕಾದ್ದನ್ನು ಹೇಳಿದರೆ, 'ದೇಶಭಕ್ತ'ರೆಂದು ಕರೆದುಕೊಳ್ಳುವವರ ಉಗ್ರಭಾಷೆಯ ಪೌರುಷ. ಇದೂ ಹೆಣ್ಣಿನ ಬಾಯಿ ಮುಚ್ಚಿಸುವ ಮೂಲ ಉದ್ದೇಶವನ್ನೇ ಹೊಂದಿರುತ್ತದೆ. ಭೂಲೋಕದ ಸ್ವರ್ಗದಲ್ಲಿ ನಾವಿದ್ದೇವೆ ಎಂಬ ಸಾರ್ಥಕತೆಯಲ್ಲಿ ಮಿಂದುಂಡು ಸಂತೋಷದ ಶಿಖರದಲ್ಲಿರುವಾಗ, ರೆಪ್ಪೆ ಮುಚ್ಚಿ ತೆರೆಯುವಷ್ಟರಲ್ಲಿ ದುಃಖದ ಕಣಿವೆಯ ಪ್ರಪಾತಕ್ಕೆ ಬಿದ್ದು, ಆಘಾತದಿಂದ ಮಂಜುಗಡ್ಡೆಯಂತೆ ಕಣ್ಣೀರು ಕಲ್ಲಾದವರನ್ನು ಸಮಾಧಾನ ಮಾಡುವ ಬದಲು ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳಲಾಗುತ್ತದೆ. ಬರೆದಿಟ್ಟ ಸ್ಕ್ರಿಪ್ಟನ್ನು ಅಮೋಘವಾಗಿ ಅಭಿನಯಿಸಬೇಕು ಎಂಬಂತೆ 'ಅವರು ಧರ್ಮ ಕೇಳಿದರಾ?' ಎಂದ ತಕ್ಷಣವೇ ಇವರು 'ಹೌದು, ಕೇಳಿ ಕೇಳಿ ಕೊಂದರು' ಎನ್ನುತ್ತಾ ಗೋಳೋ ಎಂದು ಅಳಬೇಕು. ಅದು ಬಿಟ್ಟು ಕಠಿಣ ಸನ್ನಿವೇಶದಲ್ಲಿ ಧೈರ್ಯ ತೋರಿಸುವ ಹೆಂಗಸರು ಸವಾಲಿನಂತೆ ಕಾಣಿಸುತ್ತಾರೆ. ಕೆಲವರು ಕೇಳಿದ್ದು ನಿಜ ಎಂದರು. ಕೆಲವರು ತಮ್ಮನ್ನು ಕೇಳಿಲ್ಲ ಅಂದರು. ಅವರ ಅನುಭವದ ನುಡಿಗಳಿಗೆ ಗೌರವ ಕೊಡಬೇಕು ತಾನೇ? ಮತ್ತೆ ಮತ್ತೆ ಕೇಳಿದಾಗಲೂ 'ಸ್ಥಳೀಯರು ಧರ್ಮ ಮೀರಿ ಸಹಾಯ ಮಾಡಿದರು, ನಾವಲ್ಲಿ ಅನಾಥರಾಗಿದ್ದೆವು, ನಮಗೆ ಯಾವುದೇ ರಕ್ಷಣೆ ಇರಲಿಲ್ಲ' ಎಂದು ನಿಜ ಹೇಳಿದವರ ಮೇಲೆ ಮುಗಿಬಿದ್ದ ಟ್ರೋಲ್ ಪಡೆಗಳು ಏನನ್ನು ಹೇಳುತ್ತಿದ್ದವು? 'ಅವಳ ಕಣ್ಣಲ್ಲಿ ನೀರಿರಲಿಲ್ಲ', 'ಅವಳಿಗೆ ಗಂಡ ಸತ್ತಿದ್ದೇ ಒಳ್ಳೆಯದು ಅನ್ನಿಸಿರಬೇಕು' ಎಂಬಲ್ಲಿಂದ ಹಿಡಿದು ಊಹಾತೀತ ಕಾಮೆಂಟ್‌ಗಳು.

ಕಣ್ಣಮುಂದೇ ತಮ್ಮವರನ್ನು ಕಳೆದುಕೊಂಡವರು, ಅಪಾಯಕಾರಿ ಪ್ರದೇಶಗಳಲ್ಲಿ ಪ್ರವಾಸೋದ್ಯಮಕ್ಕೆ ಅನುಮತಿ ಕೊಟ್ಟ ಸರ್ಕಾರವನ್ನು ಬಯ್ದರೆ ಆ ಕ್ಷಣಕ್ಕೆ ಅದು ಅತ್ಯಂತ ಸಹಜ. ಆದರೆ ಸತ್ತರೂ 'ನಮ್ಮವರ' ಸರ್ಕಾರವನ್ನು ಬಯ್ಯಬಾರದು ಎಂಬ ಫತ್ವಾ ಹೊರಡಿಸುವವರ ಮನಃಸ್ಥಿತಿ ಉಗ್ರಗಾಮಿಗಳಿಗಿಂತ ಬೇರೆಯಾದುದೇ? ಬಲಿಯಾದವರ ಮೇಲೇ ಯುದ್ಧ ಮಾಡುವ ವಿಪರ್ಯಾಸವಿದು.

ಇನ್ನೊಂದು ಸಂದರ್ಭದಲ್ಲಿ, ಬಾಂಬೆ ಹೈಕೋರ್ಟ್ 'ದಾಂಪತ್ಯದೊಳಗೆ ಕೂಡ ಸಮ್ಮತಿ ಇಲ್ಲದ ಸಂಬಂಧ ಅತ್ಯಾಚಾರಕ್ಕೆ ಸಮ' ಎಂದಿತು. ಇದಕ್ಕೆ ಬಂದ ಕಾಮೆಂಟ್‌ಗಳನ್ನು ಅವರವರ ಹೆಂಡತಿಯರು ನೋಡಿದರೆ ಮರುಕ್ಷಣ ತಮ್ಮ ಗಂಡಂದಿರ ಬಗೆಗೆ ಹೇವರಿಕೆ ಹುಟ್ಟಬಹುದು. ಇಂತಹ ಹಲವು ಸಂದರ್ಭಗಳಲ್ಲಿ ಹೆಣ್ಣನ್ನು 'ನೋಡುವ' ದೃಷ್ಟಿಯು ಸಾವಿರಾರು ವರ್ಷಗಳಿಂದಲೂ ಚೂರೂ ಬದಲೇ ಆಗದಿರುವುದನ್ನು ಹೇಳುತ್ತದೆ. ಹೆಣ್ಣನ್ನು ಸಾರ್ವಜನಿಕ ವಲಯದಿಂದ ಬೇರ್ಪಡಿಸಿ ಕೂಡಿಹಾಕುವವರಿಗೂ, ಇವರಿಗೂ ಚಿಂತನೆಯಲ್ಲಿ ಬಹಳ ವ್ಯತ್ಯಾಸವೇನೂ ಇಲ್ಲ. ಅಲ್ಲಿ ನೇರ ನಿಯಂತ್ರಣ ಇದೆ. ಇಲ್ಲಿ ಹೆಣ್ಣೇ ಸ್ವನಿಯಂತ್ರಣದಲ್ಲಿ, ತಾನೇ ಅಂಕೆಯೊಳಗೆ ಇರಬೇಕು ಎಂಬ ಹದ್ದಿನ ಕಣ್ಣು ಇದೆ. ಸ್ವಲ್ಪ ಉದಾರವಾಗಿ ಯೋಚಿಸುವ, ನಡೆದುಕೊಳ್ಳುವ ಪುರುಷರನ್ನೂ ಇವರು ಬಿಡುವುದಿಲ್ಲ. ನಮ್ಮದೇ ಅಕ್ಕ ತಂಗಿಯರು, ಅಣ್ಣ ತಮ್ಮಂದಿರ ಮೇಲೆ ಮಾತಿನಿಂದ ಇರಿದು ಯುದ್ಧ ಮಾಡುವ ದೌರ್ಭಾಗ್ಯವಿದು.

ಇದೀಗ ಕದನ ವಿರಾಮ ಘೋಷಣೆಯಾದಾಗ ಇಂದಿರಾ ಗಾಂಧಿಯವರೊಂದಿಗೆ ಹೋಲಿಸುತ್ತಾ ಇಂದಿನವರನ್ನು ಆಡಿಕೊಳ್ಳುತ್ತಿರುವ ಮಾತುಗಳಲ್ಲಿಯೂ...

ಹೌದು, ವಿಚಿತ್ರ ಅನ್ನಿಸಬಹುದು. ಆದರೆ ಈ ಎಲ್ಲಾ ಮನಃಸ್ಥಿತಿಗಳ ಮೂಲ, ಪೌರುಷಕ್ಕೆ ಆರೋಪಿಸಿರುವ ತಪ್ಪು ಗುಣಗಳ ಆರಾಧನೆಯೇ ಆಗಿದೆ.

ಚುರುಮುರಿ

ಯುದ್ಧ ಎಂದರೆ...

● ಮಣ್ಣೆ ರಾಜು

'ಅಬ್ಬಾ!... ಯುದ್ಧ ಇಷ್ಟೊಂದು ಭಯಂಕರವಾಗಿ ಇರುತ್ತದಾ?!' ಟಿ.ವಿ. ನ್ಯೂಸ್ ನೋಡುತ್ತಾ ಕುಳಿತಿದ್ದ ಮಗ ಬೆಚ್ಚುತ್ತಾ ಕೇಳಿದ.

'ಅದು ಯುದ್ಧ ಅಲ್ಲ, ಸಂಘರ್ಷ ಅಷ್ಟೇ' ಅಂದ ಶಂಕ್ರಿ.

'ಭಾರತ ಮತ್ತು ಪಾಕಿಸ್ತಾನದ ನಡುವೆ ನಡೆಯುವ ಕ್ರಿಕೆಟ್ ಮ್ಯಾಚನ್ನೇ ಯುದ್ಧ ಅಂತ ಅಂದುಕೊಂಡಿದ್ದೆ. ಯುದ್ಧವೆಂದರೆ ಕ್ರಿಕೆಟ್ ಸ್ಟೇಡಿಯಂನಲ್ಲಿ ರನ್ ಹೊಡೆಯೋದಲ್ಲ, ಗುಂಡು ಹೊಡೆಯೋದು' ಅಂದಳು ಮಗಳು.

'ಕ್ರಿಕೆಟ್‌ನಲ್ಲಿ ಔಟಾದರೆ ಅಥವಾ ಡೌಟಾದರೆ ಥರ್ಡ್ ಅಂಪೈರ್ ಡಿಸಿಷನ್ ಕೇಳಬಹುದು. ಆದರೆ ಯುದ್ಧದಲ್ಲಿ ಔಟಾದರೆ ಹೆಣ ಎತ್ತಬೇಕು ಅಷ್ಟೆ' ಶಂಕ್ರಿ ಹೇಳಿದ.

'ಕ್ರಿಕೆಟ್‌ನಲ್ಲಿ ಮ್ಯಾಚ್ ಗೆಲ್ಲಲು ಬೆವರು ಹರಿಸಬೇಕು, ಯುದ್ಧದಲ್ಲಿ ರಕ್ತ ಹರಿಸಬೇಕು' ಎಂದಳು ಸುಮಿ.

'ನಮ್ಮ ದೇಶದಲ್ಲಿ ಯುದ್ಧಗಳು ಬಹಳಷ್ಟು ಆಗಿಹೋಗಿವೆ, ಶತಶತಮಾನಗಳಿಂದ ಲೆಕ್ಕವಿಲ್ಲದಷ್ಟು ಯುದ್ಧಗಳು ನಡೆದಿವೆ. ಈಗಿನ ಕ್ರಿಕೆಟ್ ಸ್ಟೇಡಿಯಂಗಳಿಗಿಂತ ಆಗ ಯುದ್ಧಭೂಮಿಗಳ ಸಂಖ್ಯೆ ಜಾಸ್ತಿ ಇತ್ತು. ರಾಜಮಹಾರಾಜರ ರಾಜ್ಯ ವಿಸ್ತರಣೆಗೆ, ವ್ಯಾಜ್ಯ ನಿವಾರಣೆಗೆ ಯುದ್ಧಗಳಾಗುತ್ತಿದ್ದವು. ಸೈನಿಕರ ರಕ್ತದ ಕೋಡಿ ಹರಿಯುತ್ತಿತ್ತು. ಈ ನೆಲದ ಮಣ್ಣಿನ ಪದರಪದರಗಳಲ್ಲೂ ಯುದ್ಧದ ರಕ್ತದ ಕಲೆ ಇದೆ'.

'ಸಾವುನೋವಿನ ಯುದ್ಧದ ಸಹವಾಸ ಸಾಕು ಎಂದು ಯುದ್ಧಕ್ಕೆ ಕೈ ಮುಗಿದುಬಿಡಬೇಕು' ಎಂದಳು ಸುಮಿ.

'ಮಾತು ಬಿಟ್ಟು ಬೇಗ ತಿಂಡಿ ಮಾಡು ಹೋಗೇ ಸುಮಿ, ನಾನು ಮಾತ್ರೆ ತಗೋಬೇಕು...' ರೂಮಿನಲ್ಲಿ ಮಲಗಿದ್ದ ಅತ್ತೆ ಕೂಗಿ ರೇಗಿದಳು.

'ಮಮ್ಮಿ, ಜಗತ್ತಿನಲ್ಲಿ ಶುರುವಾದ ಮೊದಲ ಯುದ್ಧ ಯಾವುದು?' ಮಗಳು ಕೇಳಿದಳು.

'ಇನ್ಯಾವುದು, ಅತ್ತೆ–ಸೊಸೆ ಜಗಳ' ಎಂದು ಹೇಳಿ ಮೂತಿ ತಿರುವಿಕೊಂಡು ಸುಮಿ ಅಡುಗೆ ಮನೆಗೆ ಹೋದಳು.

'ಜಗತ್ತಿನ ಎಲ್ಲಾ ಯುದ್ಧಗಳು ಮುಗಿದರೂ ಆವೊತ್ತು ಶುರುವಾದ ಅತ್ತೆ, ಸೊಸೆ ಜಗಳ ಮಾತ್ರ ಇವತ್ತಿಗೂ ನಿಂತಿಲ್ಲ...' ಶಂಕ್ರಿ ಪಿಸುಗುಟ್ಟಿದ.

ಸಂಗತ

ಕುಟುಂಬ ವ್ಯವಸ್ಥೆ ಎಂಬ ದಿವ್ಯಶಕ್ತಿ

ಇಂದಿನ ಮಹಿಳೆಯರು ಹಾಗೂ ಪುರುಷರು ಕುಟುಂಬ ವ್ಯವಸ್ಥೆಯಿಂದಲೇ ದೂರ ಹೊರಟಿರುವುದು ಮಾನವೀಯತೆಯ ವೃಕ್ಷದ ಬೇರಿಗೆ ಕೊಡಲಿಪೆಟ್ಟು ನೀಡುತ್ತಿರುವಂತಿದೆ

● ಮಾಲತಿ ಪಟ್ಟಣಶೆಟ್ಟಿ

ಪ್ರತಿವರ್ಷ ಮೇ 15ರಂದು ವಿಶ್ವ ಕುಟುಂಬ ದಿನವನ್ನು ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯ ಈ ತೀರ್ಮಾನ ಸೂಕ್ತವೂ ಸಮಯೋಚಿತವೂ ಆಗಿದೆ. ಏಕೆಂದರೆ ಈ ಕಾಲಘಟ್ಟದಲ್ಲಿ 'ಕುಟುಂಬ' ಎಂಬ ಪರಿಕಲ್ಪನೆಗೆ ಗಂಡಾಂತರ ಒದಗಿಬಂದಿದೆ. ಈ ಮೂಲಕ ಇಡೀ ಮಾನವ ಜನಾಂಗದ ಅಸ್ತಿತ್ವಕ್ಕೆ ಕಂಟಕ ಎದುರಾಗಿದೆ.

ಪ್ರೀತಿ, ಸ್ನೇಹ, ಸೌಹಾರ್ದ, ಸೇವೆ ಮತ್ತು ತ್ಯಾಗದ ತಳಹದಿಯ ಮೇಲೆ ನಿರ್ಮಾಣಗೊಂಡ ಕುಟುಂಬ ಎಂಬ ಘಟಕವು ಇತ್ತೀಚೆಗೆ ಛಿದ್ರವಿಚ್ಛಿದ್ರಗೊಳ್ಳುತ್ತಿದೆ. ಇದು ಅತ್ಯಂತ ಕಳವಳಕಾರಿಯಾದ ಸಂಗತಿ. ಕುಟುಂಬದಂತಹ ಸುರಕ್ಷಿತ ಹಾಗೂ ಸುಮಧುರವಾದ ಕೋಟೆಯನ್ನು ಧಿಕ್ಕರಿಸಿ ಮನುಷ್ಯ ಇಂದು ಏಕಾಂಗಿಯಾಗಿ ಬಾಳಲು ಬಯಸುತ್ತಿದ್ದಾನೆ. ಇದನ್ನು ನೋಡಿದರೆ, ಮಾನವೀಯತೆಯ ಅವಸಾನದತ್ತ ಹೆಜ್ಜೆ ಹಾಕುತ್ತಿರುವಂತೆ ತೋರುತ್ತದೆ.

ಇಂದಿನ ಮಹಿಳೆಯರು ಹಾಗೂ ಪುರುಷರು ಕೌಟುಂಬಿಕ ದೌರ್ಜನ್ಯ, ಈ ವ್ಯವಸ್ಥೆಯೊಳಗೆ ಇರಬಹುದಾದ ಅವ್ಯವಸ್ಥೆ, ಆಘಾತಕ್ಕೆ ಬೆದರಿ ಕುಟುಂಬ ವ್ಯವಸ್ಥೆಯಿಂದಲೇ ದೂರ ಹೊರಟಿರುವುದು ಮಾನವೀಯತೆಯ ವೃಕ್ಷದ ಬೇರಿಗೆ ಕೊಡಲಿಪೆಟ್ಟು ನೀಡುತ್ತಿರುವಂತಿದೆ. ಇಂತಹ ಬೆಳವಣಿಗೆಯನ್ನು ತಡೆಯಬೇಕಾದರೆ ಕುಟುಂಬ ಜೀವನಕ್ಕೆ ಇರುವ ಮೌಲ್ಯವೇನು, ಅದರ ಮಹತ್ವವೇನು ಎಂಬುದನ್ನು ನಾವು ವಿವೇಚಿಸಬೇಕಾದ ಅಗತ್ಯ ಇದೆ.

ಒಬ್ಬ ಪುರುಷನೇ ಆಗಿರಲಿ ಅಥವಾ ಮಹಿಳೆಯೇ ಆಗಿರಲಿ ಅವರ ಏಕಾಂಗಿ ಜೀವನವನ್ನು ಕುಟುಂಬ ಜೀವನ ಎಂದು ಕರೆಯಲಾಗದು. ಇವರಿಬ್ಬರೂ ಒಟ್ಟಾಗಿ ಕೂಡಿ ಬಾಳಿದರೆ ಮಾತ್ರ ಅದು ಕುಟುಂಬವಾಗಬಲ್ಲದು. ಗಂಡ–ಹೆಂಡತಿ, ಅಪ್ಪ–ಅವ್ವ, ಅಣ್ಣ–ತಂಗಿ, ಗೆಳೆಯ–ಗೆಳತಿ ಇವರ ಸಹವಾಸದಲ್ಲಿ ಕುಟುಂಬದ ಅಸ್ತಿತ್ವವಿದೆ. ಇಲ್ಲಿ ಪರಸ್ಪರ ಸಹಜವಾದ, ನೈಸರ್ಗಿಕವಾದ ಪ್ರೀತಿ, ಪ್ರೇಮ, ಮಮತೆ, ಸೇವೆ, ತ್ಯಾಗದ ಗುಣಗಳು ವಿನಿಮಯ ಆಗುವುದರಿಂದ ಕುಟುಂಬಗಳು ರೂಪುಗೊಳ್ಳುತ್ತವೆ.

ಈ ಭೂಮಿಯಲ್ಲಿ ಮನುಷ್ಯ ಕಾಣಿಸಿಕೊಂಡಾಗಲೇ ಒಬ್ಬರು ಇನ್ನೊಬ್ಬರ ಆಸರೆಯನ್ನು ಬಯಸಿ ಜತೆಯಲ್ಲಿ ಇರಲು ಬಯಸಿದ್ದು ನಿಸರ್ಗಸಹಜ ಸಂಗತಿ. ಮನುಷ್ಯರಷ್ಟೇ ಅಲ್ಲ ಪ್ರಾಣಿ– ಪಕ್ಷಿ, ಕ್ರಿಮಿ–ಕೀಟಗಳೂ ಸಾಂಗತ್ಯವನ್ನು ಬಯಸಿ ಕುಟುಂಬವನ್ನು ಕಟ್ಟಿಕೊಳ್ಳುತ್ತವೆ.

ಈ ಹಿಂದಿನಿಂದ ನಡೆದುಬಂದಂತೆ, ಮನುಷ್ಯ ಸಮೂಹದಲ್ಲಿ ಹೆಚ್ಚು ಸದಸ್ಯರು ಜೊತೆಗೂಡಿ ಇರುವುದಕ್ಕೆ ಪ್ರೀತಿ, ಔದಾರ್ಯದಂಥ ಗುಣಗಳೇ ಕಾರಣವಾಗಿದ್ದವು. ಅಂದರೆ ಆ ಕುಟುಂಬದ ಸದಸ್ಯರ ಸಂಖ್ಯೆಯನ್ನು ಇಂತಹ ಗುಣಗಳೇ ನಿರ್ಧರಿಸುತ್ತಿದ್ದವು. ಆದರೆ ಎಂದು ಸ್ವಾರ್ಥ, ಸಂಕುಚಿತ ಮನೋಭಾವ ಹುಟ್ಟಿಕೊಂಡವೋ ಅಂದಿನಿಂದ ಕುಟುಂಬಗಳು ಒಡೆಯಲಾರಂಭಿಸಿದವು. ಕಾಲ ಬದಲಾದಂತೆ ಕೌಟುಂಬಿಕ ಪರಿಸರದಲ್ಲಿ ಹೊಂದಿಕೊಂಡು ಬಾಳುವ ಗುಣ ನಶಿಸತೊಡಗಿತು. ಅದರಿಂದ ದೊಡ್ಡ ದೊಡ್ಡ ಕುಟುಂಬಗಳು ಒಡೆದು ಚಿಕ್ಕ ಚಿಕ್ಕ ಕುಟುಂಬಗಳು ರೂಪುಗೊಂಡವು. ಆಧುನಿಕ ವೈಜ್ಞಾನಿಕ ಯುಗದಲ್ಲಿ ಎಷ್ಟೋ ದಂಪತಿ ಒಂದೇ ಮಗುವನ್ನು ಹೊಂದಲು ಬಯಸುತ್ತಾರೆ. ಇದಕ್ಕೆ ಕೆಲವು ಕಾರಣಗಳು ಇದ್ದಿರಬಹುದು. ಇನ್ನು ಕೆಲವು ದಂಪತಿ ತಮಗೆ ಮಕ್ಕಳೇ ಬೇಡವೆಂಬ ನಿರ್ಧಾರಕ್ಕೆ ಬರುವುದೂ ಇದೆ. ಇದಕ್ಕಿಂತ ವಿಚಿತ್ರವಾದ ಸಂಗತಿಯೆಂದರೆ, ಸ್ವತಃ ಮಕ್ಕಳನ್ನು ಪಡೆಯದೆ ಬಾಡಿಗೆ ತಾಯ್ತನದ (ಸರೊಗೆಸಿ) ಮೂಲಕ ಮಗುವನ್ನು ಪಡೆದುಕೊಂಡು ಬೆಳೆಸುವವರಿದ್ದಾರೆ. ಇದೆಲ್ಲ ಇಂದಿನ ವಿಜ್ಞಾನ, ತಂತ್ರಜ್ಞಾನದಲ್ಲಿನ ಪ್ರಗತಿಯ ಕಾರಣದಿಂದ ಬದಲಾದ ಮನೋಭಾವಗಳಿಗೆ ತಕ್ಕಂತೆ ನಿರ್ಮಾಣಗೊಂಡಿರುವ ಸ್ಥಿತಿಗತಿ.



ಇಂತಹ ಸಮಯದಲ್ಲಿಯೇ ತಂದೆ–ತಾಯಿ, ಅಕ್ಕ–ತಂಗಿ, ಅಣ್ಣ–ತಮ್ಮಂದಿರೊಂದಿಗೆ ಸಹ ಇರಲು ಬಯಸದ ಸಂಕುಚಿತ ಮನೋಭಾವ ಗಟ್ಟಿಗೊಂಡು, ಮನುಷ್ಯರನ್ನು ಮಾನವತೆಯ ಅಳಿವಿನತ್ತ ಕರೆದೊಯ್ಯುತ್ತಿರುವ ಸ್ಪಷ್ಟವಾದ ಲಕ್ಷಣಗಳು ಗೋಚರಿಸುತ್ತಿವೆ. ಮದುವೆ ಎಂಬ ಸಂಸ್ಥೆಯೂ ಅಳಿವಿನತ್ತ ಸಾಗುತ್ತಿರುವುದು ಇನ್ನೊಂದು ದೊಡ್ಡ ದುರಂತ. ಹೊಂದಿಕೊಂಡು ಬಾಳುವ ಮನಸ್ಸಿಗೇ ಗ್ರಹಣ ಹಿಡಿದರೆ, ನಾವು ನಾಗರಿಕತೆ, ನೈಸರ್ಗಿಕ ವ್ಯವಸ್ಥೆಯಿಂದ ದೂರವಾಗುತ್ತೇವೆ. ಇದರಿಂದ ಮಾನವೀಯತೆಯನ್ನು ಕಳೆದುಕೊಳ್ಳುತ್ತೇವೆ. ಇಂತಹ ಸ್ಥಿತಿಯಲ್ಲಿ ನಾವು ಮಾನವರಾಗಿ ಉಳಿಯಲು ಸಾಧ್ಯವಾದೀತೆ?

ಯಾವುದೇ ಕಾಲಘಟ್ಟವಿರಲಿ, ಎಂಥದ್ದೇ ಯುಗವಿರಲಿ, ಎಷ್ಟೇ ಪ್ರಗತಿಯ ಸಮಯವಾಗಿರಲಿ ಆಧುನಿಕ ಸಮಾಜಗಳಲ್ಲಿ ಕುಟುಂಬ ಎಂಬ ಘಟಕ ಇರಲೇಬೇಕಾದ ಅನಿವಾರ್ಯ ಸ್ಥಿತಿ ಇದೆ. ಮಾನವರೆಂದು ಕರೆಯಲಾಗುವ ನಮ್ಮಲ್ಲಿ ಮಾನವೀಯ ಗುಣಗಳು ಇರಬೇಕಲ್ಲವೇ? ಮಾನವೀಯತೆ ಎಂಬ ಗುಣದ ಉಗಮವಾಗುವುದು ಕುಟುಂಬ ವ್ಯವಸ್ಥೆಯಲ್ಲಿ! ಈ ವ್ಯವಸ್ಥೆಯಲ್ಲಿ ಕುಟುಂಬವೇ ಗುರು, ಕುಟುಂಬವೇ ತಂದೆ–ತಾಯಿ, ಸಖ, ಸಹೋದರ! ಇಂತಹ ವ್ಯವಸ್ಥೆಯಲ್ಲಿ ಪ್ರೀತಿ, ಪ್ರೇಮ, ಮಮತೆ, ಹೊಂದಾಣಿಕೆಯ ಮನೋಭಾವವು ಕುಟುಂಬವನ್ನು ಕೂಡಿಸಿ ನಡೆಸುವ ದಿವ್ಯಶಕ್ತಿಗಳು. ಕುಟುಂಬ ವ್ಯವಸ್ಥೆಯಲ್ಲೇ ಮನುಷ್ಯನಿಗೆ ಸ್ವರ್ಗವಿದೆ. ಕುಟುಂಬದಲ್ಲಿ ಸದಸ್ಯರ ಉನ್ನತಿ–ಉತ್ಕರ್ಷ ಸಾಧ್ಯವಾಗುವಾಗ ನಾವೇಕೆ ಕುಟುಂಬ ವ್ಯವಸ್ಥೆಯಿಂದ ದೂರ ಹೋಗಬೇಕು?

ಹೌದು, ಕುಟುಂಬ ಜೀವನದಲ್ಲಿ ಸೌಂದರ್ಯವಿದೆ, ಸಾರ್ಥಕತೆ ಇದೆ. ಆದ್ದರಿಂದ ಕುಟುಂಬ ವ್ಯವಸ್ಥೆಯಲ್ಲಿ ಇದ್ದು ಅದನ್ನು ಉಳಿಸಬೇಕು, ಬೆಳೆಸಬೇಕು. ಆ ಮೂಲಕ ಮಾನವತೆಯನ್ನು ರಕ್ಷಿಸಬೇಕು.

ವಾಚಕರ ವಾಣಿ

ಆಸ್ಪತ್ರೆ ಅವ್ಯವಸ್ಥೆ ನಿಯಂತ್ರಣಕ್ಕೆ ಬೇಕು ನಿಯಮ

ಬಹುತೇಕ ಆಸ್ಪತ್ರೆಗಳ ರೀತಿನೀತಿ ಅಪಾರದರ್ಶಕವಾಗಿ ಇರುವುದನ್ನು, ವೈದ್ಯಕೀಯ ಕ್ಷೇತ್ರವು ವ್ಯಾಪಾರೀಕರಣಕ್ಕೆ ಒಳಗಾಗಿರುವುದನ್ನು ಪು.ಸೂ.ಲಕ್ಷ್ಮೀನಾರಾಯಣ ರಾವ್ ತೆರೆದಿಟ್ಟಿದ್ದಾರೆ (ಸಂಗತ, ಮೇ 13). ಬೃಹತ್ ಕಾರ್ಪೊರೇಟ್ ಆಸ್ಪತ್ರೆಗಳಲ್ಲಿನ ಇಂತಹ ನ್ಯೂನತೆಗಳಿಗೆ ಮತ್ತೊಂದು ಪ್ರಮುಖ ಕಾರಣವೂ ಇದೆ. ಜಿಲ್ಲಾ ಕೇಂದ್ರದ ಕಾಲೇಜು ಆಸ್ಪತ್ರೆಗಳು ಹಾಗೂ ಬೆಂಗಳೂರು ನಗರದ ಬೃಹತ್ ಕಾರ್ಪೊರೇಟ್ ಆಸ್ಪತ್ರೆಗಳಿಗೆ ಹಣವಂತರು, ವಿಮೆ ಸೌಲಭ್ಯ ಇರುವವರು ಸಣ್ಣ ಪುಟ್ಟ ಕಾಯಿಲೆಗಳಿಗೂ ಚಿಕಿತ್ಸೆಗಾಗಿ ಬರುತ್ತಾರೆ. ಹೀಗಾಗಿ, ಈ ಆಸ್ಪತ್ರೆಗಳು ಸದಾ ಜನಜಂಗುಳಿಯಿಂದ ಕೂಡಿರುತ್ತವೆ. ವಿಮೆ ಸೌಲಭ್ಯದ ಉಪಯೋಗ ಪಡೆಯುವ ಸಲುವಾಗಿ, ಅವಶ್ಯಕತೆ ಇಲ್ಲದಿದ್ದರೂ ಒಂದೆರಡು ದಿನ ಒಳರೋಗಿಗಳಾಗಿ ಇರಿಸಿಕೊಳ್ಳುವುದು ಸರ್ವೇಸಾಮಾನ್ಯ. ಈ ಕಾರಣದಿಂದ, ಗಂಭೀರ ಸ್ವರೂಪದ ಕಾಯಿಲೆಯಿಂದ ಬಳಲುತ್ತಿರುವವರಿಗೆ ಒಮ್ಮೊಮ್ಮೆ ಹಾಸಿಗೆ ಸಿಗುವುದಿಲ್ಲ. ತಜ್ಞ ವೈದ್ಯರಿಗೆ ಕೆಲಸದ ಒತ್ತಡವೂ ಹೆಚ್ಚಾಗಿ ಅವಶ್ಯಕತೆ ಇರುವ ರೋಗಿಗಳಿಗೆ ಸಮಯ ಮೀಸಲಿಡಲು ಕಷ್ಟವಾಗುತ್ತದೆ.

ಈ ಬೃಹತ್ ಕಾರ್ಪೊರೇಟ್ ಆಸ್ಪತ್ರೆಗಳನ್ನು ಬರೀ ರೆಫರಲ್ ಆಸ್ಪತ್ರೆಗಳಾಗಿ ಪರಿಗಣಿಸಿದರೆ ಈ ಸಮಸ್ಯೆಗೆ ಸ್ವಲ್ಪ ಮಟ್ಟಿಗೆ ಪರಿಹಾರ ಸಿಗಬಹುದು. ತುರ್ತು ಸಂದರ್ಭ ಹೊರತುಪಡಿಸಿ, ಉಳಿದಂತೆ ಕೆಳ ಹಂತದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸಾಧ್ಯವಾಗದೆ ಅವರಿಂದ ಶಿಫಾರಸು ಪತ್ರ ತರುವ ರೋಗಿಗಳಿಗೆ ಮಾತ್ರ ಇಂತಹ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡುವ ಬಗ್ಗೆ ನಿಯಮ ರೂಪಿಸಬೇಕು. ಆಗ ಈ ಆಸ್ಪತ್ರೆಗಳ ಜನಜಂಗುಳಿ ಸ್ವಲ್ಪಮಟ್ಟಿಗೆ ನಿಯಂತ್ರಣಕ್ಕೆ ಬರುತ್ತದೆ. ತಜ್ಞ ವೈದ್ಯರ ಸಮಯವು ಅವಶ್ಯಕತೆ ಇರುವ, ಗಂಭೀರ ಸ್ವರೂಪದ ಕಾಯಿಲೆಯಿಂದ ಬಳಲುತ್ತಿರುವವರಿಗೆ ಲಭ್ಯವಾಗುತ್ತದೆ.

ಟಿ.ಜಯರಾಂ, ಕೋಲಾರ

ವ್ಹೀಲಿ ದುಸ್ಸಾಹಸ: ಆಗಲಿ ಅಪಾಯದ ಮನವರಿಕೆ

ಅಪಾಯಕಾರಿ ವ್ಹೀಲಿಯಂತಹ ದುಸ್ಸಾಹಸ ಚಟುವಟಿಕೆಗಳನ್ನು ತಡೆಗಟ್ಟಲು ಕಠಿಣ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ತಾಕೀತು ಮಾಡಿರುವುದು (ಪ್ರ.ವಾ., ಮೇ 13) ನಿಜಕ್ಕೂ ಸಮಯೋಚಿತ ಮತ್ತು ಕಠಿಣ ಕ್ರಮಕ್ಕೆ ಮುನ್ನುಡಿ ಬರೆದಂತಿದೆ. ಈಗ ವ್ಹೀಲಿಯ ಪಿಡುಗು ನಗರಗಳಲ್ಲಿ ಮಾತ್ರವಲ್ಲದೆ ಸಣ್ಣ ಪಟ್ಟಣ ಹಾಗೂ ಗ್ರಾಮಗಳಿಗೂ ಹಬ್ಬಿದೆ. ಅಷ್ಟು ಮಾತ್ರವಲ್ಲದೆ ಸೈಕಲ್ ಓಡಿಸುವ ಮಕ್ಕಳವರೆಗೂ ಹಬ್ಬಿದೆ ಎಂದರೆ ಇದರ ವ್ಯಾಪ್ತಿ ಹೇಗಿದೆ ಎಂಬುದು ವೇದ್ಯವಾಗುತ್ತದೆ. ನಗರದಲ್ಲಂತೂ ವಾರಾಂತ್ಯದ ರಾತ್ರಿಗಳಲ್ಲಿ ಒಂದೊಂದು ಬಾರಿ ಒಂದೊಂದು ನಿಗದಿತ ಸ್ಥಳದಲ್ಲಿ ವ್ಹೀಲಿ ಮಾಡುವವರನ್ನು ನೋಡುತ್ತಿರುತ್ತೇವೆ. ಇವರಲ್ಲಿ ಹೆಚ್ಚಿನವರು ಪೊಲೀಸರ ಕಣ್ಣಿಗೆ ಬೀಳದಿರುವುದು ಆಶ್ಚರ್ಯಕರ. ನೂರಾರು ಜನ ವ್ಹೀಲಿಯಲ್ಲಿ ತೊಡಗಿದ್ದರೆ ಪೊಲೀಸರು ಹಿಡಿಯುವುದು ಕೆಲವು ಮಂದಿಯನ್ನಷ್ಟೇ. ಅದೂ ಅವರಿಂದ ಸಾರ್ವಜನಿಕರಿಗೆ ಅಪಾಯ ಆದಾಗ ಅಥವಾ ವ್ಹೀಲಿ ಮಾಡುವವರಿಗೆ ಅಪಘಾತ ಆದಾಗ ಮಾತ್ರ.

ವ್ಹೀಲಿ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಂಡು, ಅದನ್ನು ಎಲ್ಲೆಡೆ ಪ್ರಚಾರ ಮಾಡಬೇಕಿದೆ. ಅಷ್ಟೇ ಅಲ್ಲದೆ, ಮಕ್ಕಳು ತಮ್ಮ ಸೈಕಲ್‌ನಲ್ಲಿ ವ್ಹೀಲಿ ಮಾಡುತ್ತಿದ್ದರೆ ಅವರಿಗೆ ತಿಳಿಹೇಳುವ ಕೆಲಸವನ್ನು ಪೋಷಕರು ಹಾಗೂ ಅದನ್ನು ಗಮನಿಸಿದವರು ಮಾಡಬೇಕಾದ ಅಗತ್ಯ ಇದೆ.

ಕಡೂರು ಫಣಿಶಂಕರ್, ಬೆಂಗಳೂರು

'ಅವರ' ಮಕ್ಕಳೂ ಸರ್ಕಾರಿ ಶಾಲೆಯಲ್ಲಿ ಓದಿದ್ದರೆ...

ಸರ್ಕಾರಿ ಶಾಲೆಗಳಿಗೆ ಮಕ್ಕಳ ಪ್ರವೇಶಾತಿ ಕುರಿತ ಮಣ್ಣೆ ರಾಜು ಅವರ 'ಮಕ್ಕಳಿರಲವ್ವ...' ಎಂಬ ವಿಡಂಬನೆಯನ್ನು (ಚುರುಮುರಿ, ಮೇ 7) ಓದಿದಾಗ, ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳ ಶೋಚನೀಯ ಸ್ಥಿತಿ ಕಣ್ಮುಂದೆ ಬಂದಿತು. ಮುಖ್ಯಮಂತ್ರಿಯಿಂದ ಹಿಡಿದು ಎಲ್ಲ ಸ್ತರದ ಸರ್ಕಾರಿ ಸಿಬ್ಬಂದಿ ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಯಲ್ಲಿ ಓದಿಸಿದರೆ ಖಾಸಗಿ ಇಂಗ್ಲಿಷ್ ಮಾಧ್ಯಮ ಕಾನ್ವೆಂಟ್‌ಗಳಿಗೆ ಸಡ್ಡು ಹೊಡೆಯಬಹುದಿತ್ತು. 'ದೊಡ್ಡವರ' ಮಕ್ಕಳು ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳಲ್ಲಿ ಓದುವುದರಿಂದ ಮೂಲಸೌಕರ್ಯಗಳ ಕೊರತೆ ಇರುತ್ತಿರಲಿಲ್ಲ.

ಸರ್ಕಾರಿ ಶಾಲೆಗಳ ಶಿಕ್ಷಕರೇ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಓದಿಸುತ್ತಿದ್ದಾರೆ ಎಂದರೆ, ಅವರೇ ಕಲಿಸುತ್ತಿರುವ ಶಿಕ್ಷಣದ ಗುಣಮಟ್ಟ ಎಷ್ಟು ಕಳಪೆಯಾಗಿದೆ ಎಂಬುದನ್ನು ಊಹಿಸಬಹುದು. ಆರ್ಥಿಕವಾಗಿ ಹೆಚ್ಚು ಚೈತನ್ಯ ಹೊಂದಿಲ್ಲದ ಕುಟುಂಬಗಳ ಮಕ್ಕಳೇ ಹೆಚ್ಚಾಗಿ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕಲಿಯುತ್ತಿರುವವರು. ವೈದ್ಯಕೀಯ, ಎಂಜಿನಿಯರಿಂಗ್ ಸೇರಿ ವಿಜ್ಞಾನ– ತಂತ್ರಜ್ಞಾನಕ್ಕೆ ಸಂಬಂಧಿಸಿದ ಪದವಿ ಶಿಕ್ಷಣವು ಕನ್ನಡ ಮಾಧ್ಯಮದಲ್ಲಿ ಇಲ್ಲದಿರುವುದರಿಂದ, ಜನ ಇಂಗ್ಲಿಷ್ ಮಾಧ್ಯಮದ ಕಡೆ ಆಕರ್ಷಿತರಾಗುತ್ತಿರುವ ವಾಸ್ತವ ಸ್ಥಿತಿಯನ್ನು ಬರಹ ಬಿಂಬಿಸಿದೆ.

ಟಿ.ಶಿವಮೂರ್ತಿ ಉಪ್ಪಾರ, ಕೆಸ್ತೂರು, ಯಳಂದೂರು

ಭಾಷೆಯ ಬಗ್ಗೆ ಅಸಡ್ಡೆ ಏಕೆ?

ಬೆಂಗಳೂರಿನ ಯಲಹಂಕದ ಮದರ್ ಡೈರಿ ವೃತ್ತದ ಸಮೀಪ ಇತ್ತೀಚೆಗೆ ಸಂಜೆ ಹೋಗುತ್ತಿದ್ದಾಗ, ಯಲಹಂಕ ಉಪನಗರಕ್ಕೆ ಹೋಗುತ್ತಿದ್ದ ಬಸ್ ಕಾಣಿಸಿತು. ಅದರಲ್ಲಿನ ಎಲೆಕ್ಟ್ರಾನಿಕ್ ಡಿಸ್‌ಪ್ಲೇ ಬೋರ್ಡ್ ನೋಡಿದಾಗ ಆಶ್ಚರ್ಯವಾಯಿತು. ಆ ಬೋರ್ಡ್‌ನಲ್ಲಿ 'ಜಾಲಹಳ್ಳಿ ಇಂದ ಯಲಹಂಕ ಹಳೆ ಕುಸಿತ' ಎಂದಿತ್ತು. ಇದಾವುದು ಯಲಹಂಕ ಹಳೆ ಕುಸಿತ ಎಂಬುದು ಹೊಳೆಯಲಿಲ್ಲ. ನಂತರ ಇಂಗ್ಲಿಷ್‌ನಲ್ಲಿ ಬಂದ ಹೆಸರು ಯಲಹಂಕ ಓಲ್ಡ್ ಡೌನ್ ಎಂದಿತ್ತು. ನನಗಾಗ ತಿಳಿದಿದ್ದು, ಯಲಹಂಕ ಓಲ್ಡ್ ಟೌನ್ ಎಂಬುದನ್ನು ಮೊದಲು ತಪ್ಪಾಗಿ ಓಲ್ಡ್ ಡೌನ್ ಎಂದು ಬರೆದು, ನಂತರ ಆ ತಪ್ಪನ್ನೇ ಕನ್ನಡಕ್ಕೆ ಬಹುಶಃ ಗೂಗಲ್‌ನಲ್ಲಿ ಅನುವಾದ ಮಾಡಿ ಯಲಹಂಕ 'ಹಳೆ ಕುಸಿತ' ಎಂದು ಬರೆದಿದ್ದಾರೆ ಎಂದು. ಆ ಗಾಢ ತಪ್ಪನ್ನೇ ಹೊತ್ತು ಆ ಬಸ್ ನಗರದಲ್ಲೆಲ್ಲಾ ಸಂಚರಿಸುತ್ತಿದೆ. ಅದನ್ನು ಬರೆದವರಿಗಾಗಲೀ ಬರೆಸಿದವರಿಗಾಗಲೀ ಚಾಲಕ, ನಿರ್ವಾಹಕ, ಕೊನೆಪಕ್ಷ ಮೇಲಧಿಕಾರಿಗಳಿಗಾಗಲೀ ಯಾರಿಗೂ ಈ ತಪ್ಪಿನ ಅರಿವಾಗಲಿಲ್ಲವೇ? ಅಥವಾ ಭಾಷೆಯ ಬಗ್ಗೆ ಅಷ್ಟೊಂದು ಅಸಡ್ಡೆಯೇ?

ಒಂದೆಡೆ ಜನ ಕನ್ನಡದ ಬಳಕೆಯಿಂದ ದೂರ ಸರಿಯುತ್ತಿರುವ ಈ ದಿನಗಳಲ್ಲಿ, ಕರ್ನಾಟಕದ ರಾಜಧಾನಿಯಲ್ಲಿ, ರಾಜ್ಯ ಸರ್ಕಾರದ ಸಂಸ್ಥೆಯೊಂದರಲ್ಲಿಯೇ ಈ ರೀತಿ ಕನ್ನಡದ ಕಗ್ಗೊಲೆಯಾದರೆ ಕನ್ನಡದ ಗತಿ ಏನು?

ಮಂಜುನಾಥ ಎಸ್.ಎಸ್., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

'ಅಮೆರಿಕ ಮೊದಲು' ಎನ್ನುವ ಆಶಯದೊಂದಿಗೆ ವೀಸಾ, ಪೌರತ್ವ, ಉದ್ಯೋಗ ಇತ್ಯಾದಿ ರಂಗಗಳಲ್ಲಿ ಮಹತ್ವದ ಬದಲಾವಣೆಗಳನ್ನು ತಂದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಚಿತ್ತ ಈಗ ಔಷಧ ರಂಗದತ್ತ ಹರಿದಿದೆ. ಅಮೆರಿಕದಲ್ಲಿ ಔಷಧಗಳ ಬೆಲೆಗಳು ಅತಿ ಹೆಚ್ಚಾಗಿದ್ದು, ಅವುಗಳನ್ನು ಕಡಿಮೆ ಮಾಡಬೇಕು ಎನ್ನುವುದು ಟ್ರಂಪ್ ಅವರ ನಿಲುವು. ಈ ದಿಸೆಯಲ್ಲಿ ಅವರು 'ಅತ್ಯಂತ ನೆಚ್ಚಿನ ರಾಷ್ಟ್ರ' ನೀತಿಯನ್ನು ಜಾರಿಗೊಳಿಸಲು ಹೊರಟಿದ್ದಾರೆ. ಟ್ರಂಪ್ ಅವರ ಈ ನೀತಿಯು ಭಾರತದಲ್ಲಿ ಔಷಧ ಉದ್ಯಮದ ಮೇಲೆ ಎಂತಹ ಪರಿಣಾಮ ಬೀರಲಿದೆ ಎನ್ನುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ

ಅಮೆರಿಕದಲ್ಲಿ ಔಷಧಗಳ ಬೆಲೆ ಕಡಿತಕ್ಕೆ ಟ್ರಂಪ್ ಕಾರ್ಯಾದೇಶ

ಭಾರತದಲ್ಲಿ ಏರುವುದೇ ಔಷಧ ಬೆಲೆ?

ಪ್ರಜಾವಾಣಿ ವಾರ್ತೆ

ಅಮೆರಿಕದ ಅಧ್ಯಕ್ಷರಾಗಿ ಎರಡನೇ ಬಾರಿಗೆ ಅಧಿಕಾರ ಸ್ವೀಕರಿಸಿದ ನಂತರ ಡೊನಾಲ್ಡ್ ಟ್ರಂಪ್ ಅವರು ತಮ್ಮ ದೇಶದ ಹಿತಾಸಕ್ತಿಯೇ ಅಂತಿಮ ಎನ್ನುವುದನ್ನು ಬಲವಾಗಿ ಪ್ರತಿಪಾದಿಸುತ್ತಿದ್ದಾರೆ. ಈ ದಿಸೆಯಲ್ಲಿ ಅವರು ಇತ್ತೀಚೆಗೆ ಹೊಸ ನೀತಿಯೊಂದನ್ನು ಜಾರಿಗೊಳಿಸಿದ್ದಾರೆ. ಅಮೆರಿಕದಲ್ಲಿ ವೈದ್ಯರ ಸಲಹೆಯ ಮೇರೆಗೆ ಖರೀದಿಸಲಾಗುವ ಔಷಧಗಳ ಬೆಲೆ ಹೆಚ್ಚಾಗಿದ್ದು, ಅವನ್ನು ತಕ್ಷಣದಿಂದಲೇ ಇಳಿಸಬೇಕು ಎಂದು ಕಂಪನಿಗಳಿಗೆ ಸೂಚಿಸುವ ಕಾರ್ಯಾದೇಶಕ್ಕೆ ಅವರು ಸಹಿ ಹಾಕಿದ್ದಾರೆ. 'ಅಮೆರಿಕದ ಮಟ್ಟಿಗೆ ಇದು ಅತ್ಯಂತ ಪರಿಣಾಮಕಾರಿ ಹಾಗೂ ಚಾರಿತ್ರಿಕವಾದ ನಿರ್ಧಾರ' ಎಂದು ಅವರು ಪ್ರತಿಪಾದಿಸಿದ್ದಾರೆ. ಇದರ ದೂರಗಾಮಿ ಪರಿಣಾಮಗಳಿಂದ ಭಾರತದಲ್ಲಿ ಔಷಧಗಳ ಬೆಲೆ ಹೆಚ್ಚಳವಾಗಬಹುದೆಂದು ಕೆಲವರು ಹೇಳುತ್ತಿದ್ದಾರೆ. ಜತೆಗೆ, ಇದು ಜೆನರಿಕ್ ಔಷಧ ಉದ್ಯಮದ ಮೇಲೆ ಬೀರಬಹುದಾದ ಪರಿಣಾಮಗಳ ಬಗ್ಗೆಯೂ ವಿಶ್ಲೇಷಣೆಗಳು ನಡೆಯುತ್ತಿವೆ.

ಅಮೆರಿಕದಲ್ಲಿ ವಿವಿಧ ಕಾರಣಗಳಿಂದ ಔಷಧಗಳ ಬೆಲೆ ಹೆಚ್ಚಾಗಿದೆ. ಬೃಹತ್ ಖಾಸಗಿ ವಿಮಾ ಉದ್ಯಮ, ಉದ್ಯೋಗಿ ಸಬ್ಸಿಡಿಗಳು, ಬಡವರು ಮತ್ತು ಹಿರಿಯರಿಗಾಗಿ ಸರ್ಕಾರ ನೀಡುವ ಮೆಡಿಕೇರ್ ಮತ್ತು ಮೆಡಿಕ್‌ಏಡ್ ವಿಮಾ ಸೌಲಭ್ಯದಿಂದಾಗಿ ಅಮೆರಿಕದ ಆರೋಗ್ಯ ವ್ಯವಸ್ಥೆ ಅತ್ಯಂತ ಸಂಕೀರ್ಣವಾಗಿದೆ. 2021ರಲ್ಲಿ ಅಮೆರಿಕ ಲೆಕ್ಕಪರಿಶೋಧನಾ ಕಚೇರಿಯು ಅಮೆರಿಕದಲ್ಲಿನ ಔಷಧಗಳ ಬೆಲೆಗಳನ್ನು ಆಸ್ಟ್ರೇಲಿಯಾ, ಕೆನಡಾ, ಫ್ರಾನ್ಸ್‌ನಲ್ಲಿನ ಬೆಲೆಗಳೊಂದಿಗೆ ಹೋಲಿಕೆ ಮಾಡಿದಾಗ, ಅಲ್ಲಿ ಬೆಲೆಗಳು ಎರಡರಿಂದ ನಾಲ್ಕು ಪಟ್ಟು ಹೆಚ್ಚಾಗಿರುವುದು ಕಂಡುಬಂದಿತ್ತು. ಈ ವಿಚಾರ ರಾಜಕೀಯವಾಗಿಯೂ ಮಹತ್ವ ಪಡೆದುಕೊಂಡಿತ್ತು. ಇನ್ಸುಲಿನ್‌ನಂಥ ಜೀವರಕ್ಷಕ ಔಷಧಗಳ ಬೆಲೆಯನ್ನು ಕಡಿಮೆ ಮಾಡಲು ಟ್ರಂಪ್ ಅವರ ಮೊದಲ ಅವಧಿಯಲ್ಲಿ ಮತ್ತು ಜೋ ಬೈಡನ್ ಅವಧಿಯಲ್ಲಿ ಪ್ರಯತ್ನ ಮಾಡಿದರೂ ಫಲ ಸಿಕ್ಕಿರಲಿಲ್ಲ. ಈಗ ಟ್ರಂಪ್ ಕಾರ್ಯಾದೇಶವನ್ನೇ ಹೊರಡಿಸಿದ್ದಾರೆ. ಔಷಧಗಳ ಉದ್ಯಮದ್ದು ದೊಡ್ಡ ಲಾಬಿ ಎಂದಿರುವ ಟ್ರಂಪ್, ಬೆಲೆ ಕಡಿತಗೊಳಿಸಲು ಕಂಪನಿಗಳಿಗೆ 30 ದಿನಗಳ ಗಡುವು ನೀಡಿದ್ದಾರೆ.





ಔಷಧಗಳ ಮಾರಾಟ ಬೆಲೆಯನ್ನು ಅಕಾರಣವಾಗಿ ಇಲ್ಲವೇ ತಾರತಮ್ಯದಿಂದ ಹೆಚ್ಚು ಮಾಡಲಾಗಿದೆಯೇ ಎನ್ನುವುದನ್ನು ಪರಿಶೀಲಿಸಲು ಅಮೆರಿಕದ ಅಧಿಕಾರಿಗಳಿಗೆ ಕಾರ್ಯಾದೇಶದಲ್ಲಿ ಆದೇಶಿಸಲಾಗಿದೆ. ವಿಮಾ ಕಂಪನಿಗಳು ಮತ್ತು ಮಧ್ಯವರ್ತಿಗಳನ್ನು ಬಿಟ್ಟು ನೇರವಾಗಿ ಗ್ರಾಹಕರಿಗೆ ಔಷಧ ಮಾರುವಂತಾಗಬೇಕು ಎಂದೂ ಸೂಚಿಸಲಾಗಿದೆ. ಹಾಗೆಯೇ ಅಮೆರಿಕವನ್ನು 'ಅತ್ಯಂತ ನೆಚ್ಚಿನ ರಾಷ್ಟ್ರ' (ಮೋಸ್ಟ್ ಫೇವರ್ಡ್ ನೇಷನ್–ಎಂಎಫ್‌ಎನ್) ಎಂದು ಪರಿಗಣಿಸಬೇಕು ಎಂದೂ ಆದೇಶದಲ್ಲಿ ಹೇಳಲಾಗಿದೆ. ಅಂದರೆ, ಒಂದು ಕಂಪನಿ ತನ್ನ ಉತ್ಪನ್ನವನ್ನು ಯಾವ ದೇಶದಲ್ಲಿ ಅತಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆಯೋ, ಅದೇ ಬೆಲೆಗೆ ಅಮೆರಿಕಕ್ಕೂ ಮಾರಬೇಕು. ಈ ಎಲ್ಲ ಕ್ರಮಗಳಿಂದ ಅಮೆರಿಕದಲ್ಲಿ ಔಷಧಗಳ ಬೆಲೆಗಳು ಶೇ 30ರಿಂದ ಶೇ 80ರವರೆಗೆ ಕಡಿಮೆ ಆಗುತ್ತವೆ ಎಂದು ಟ್ರಂಪ್ ಹೇಳಿದ್ದಾರೆ.

ಭಾರತದ ಮೇಲೆ ಏನು ಪರಿಣಾಮ?: ಅಮೆರಿಕದಲ್ಲಿ ವೈದ್ಯರ ಸಲಹೆಯ ಮೇರೆಗೆ ಮಾರಾಟವಾಗುವ ಔಷಧಗಳಲ್ಲಿ ಶೇ 90ರಷ್ಟು ಜೆನರಿಕ್ ಔಷಧಗಳು. ಆದರೂ ಮಾರುಕಟ್ಟೆ ಮೌಲ್ಯದಲ್ಲಿ ಅವುಗಳ ಪಾಲು ಶೇ 13 ಮಾತ್ರ. ಭಾರತದ ಜೆನರಿಕ್ ಔಷಧಗಳು ಅಮೆರಿಕದಲ್ಲಿ ಕಡಿಮೆ ಲಾಭಾಂಶದೊಂದಿಗೆ ಮಾರಾಟವಾಗುತ್ತಿರುವುದರಿಂದ ಟ್ರಂಪ್ ಅವರ ಕಾರ್ಯಾದೇಶದಿಂದ ಭಾರತದ ಮೇಲೆ ಹೆಚ್ಚಿನ ಪರಿಣಾಮವೇನೂ ಆಗುವುದಿಲ್ಲ ಎಂದು ಭಾರತೀಯ ಔಷಧ ಒಕ್ಕೂಟ (ಐಪಿಎ) ಅಭಿಪ್ರಾಯಪಟ್ಟಿದೆ.

ಐಪಿಎ 23 ಪ್ರಮುಖ ಔಷಧ ತಯಾರಕರನ್ನು ಒಳಗೊಂಡಿದ್ದು, ಅವರಲ್ಲಿ ಹೆಚ್ಚಿನವರು ಅಮೆರಿಕದ ರಫ್ತುದಾರರಾಗಿದ್ದಾರೆ. ಭಾರತದಲ್ಲಿ 60 ವಿವಿಧ ವಿಭಾಗಗಳಲ್ಲಿ 60 ಸಾವಿರ ಜೆನರಿಕ್ ಔಷಧ ಬ್ರ್ಯಾಂಡ್‌ಗಳು ತಯಾರಾಗುತ್ತಿದ್ದು, ಜಗತ್ತಿನ ಶೇ 20ರಷ್ಟು ಜೆನರಿಕ್ ಔಷಧಗಳು ದೇಶದಿಂದ ಪೂರೈಕೆಯಾಗುತ್ತಿವೆ. ಅವು ಜಪಾನ್, ಆಸ್ಟ್ರೇಲಿಯಾ, ಪಶ್ಚಿಮ ಯುರೋಪ್, ಅಮೆರಿಕ ಸೇರಿದಂತೆ ಜಗತ್ತಿನ 200 ದೇಶಗಳಿಗೆ ರಫ್ತಾಗುತ್ತಿವೆ. ಅಮೆರಿಕದಿಂದ ಹೊರಗೆ, ಅಲ್ಲಿನ ಆಹಾರ ಮತ್ತು ಔಷಧ ಆಡಳಿತದಿಂದ (ಯುಎಸ್‌ಎಫ್‌ಡಿಎ) ನೋಂದಾಯಿತವಾಗಿರುವ ಅತಿ ಹೆಚ್ಚು ಔಷಧ ತಯಾರಿಕಾ ಘಟಕಗಳು (ಶೇ 12.5) ಇರುವುದು ಭಾರತದಲ್ಲಿಯೇ.

ಔಷಧಗಳ ಬೆಲೆ ಇಳಿಕೆಯಿಂದ ಅಮೆರಿಕದ ಗ್ರಾಹಕರಿಗೆ ಲಾಭವಾಗಬಹುದಾದರೂ ಇದರಿಂದ ಜಾಗತಿಕ ಮಟ್ಟದಲ್ಲಿ ಔಷಧ ಸಂಬಂಧ ಹಕ್ಕುಸ್ವಾಮ್ಯ ನೀತಿ, ಜೆನರಿಕ್ ಔಷಧ ಉದ್ಯಮದ ಮೇಲೆ ಪರಿಣಾಮವಾಗಲಿದೆ. ಅಮೆರಿಕದಲ್ಲಿ ಆಗುವ ನಷ್ಟವನ್ನು ಸರಿದೂಗಿಸಿಕೊಳ್ಳಲು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಯ ವೆಚ್ಚಗಳನ್ನು ಭರಿಸಲು ಭಾರತದ ಕಂಪನಿಗಳು ತಮ್ಮ ಔಷಧಗಳ ಬೆಲೆಯನ್ನು ಈಗ ಕಡಿಮೆ ಬೆಲೆಗೆ ಮಾರುತ್ತಿರುವ ದೇಶಗಳಲ್ಲಿಯೂ ಏರಿಸಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಭಾರತದ ಔಷಧ ಉದ್ಯಮದ ಮೇಲೆ ಅಮೆರಿಕವೂ ಸೇರಿದಂತೆ ವಿಶ್ವದ ದೊಡ್ಡ ಕಂಪನಿಗಳ ಪ್ರಭಾವ/ಒತ್ತಡ ಹೆಚ್ಚಬಹುದು ಎನ್ನಲಾಗಿದೆ.

ಆಧಾರ: ಪಿಟಿಐ, ಬಿಬಿಸಿ, ಫಾರ್ಮಸ್ಯೂಟಿಕಲ್ಸ್ ಎಕ್ಸ್‌ಪೋರ್ಟ್ ಪ್ರಮೋಷನ್ ಕೌನ್ಸಿಲ್ ಆಫ್ ಇಂಡಿಯಾ





ಭಾರತದಂತಹ ರಾಷ್ಟ್ರಗಳ ಮೇಲೆ ಒತ್ತಡ

ಅಮೆರಿಕದ ಈ ಕ್ರಮವು ಜಾಗತಿಕ ಮಟ್ಟದಲ್ಲಿ ಔಷಧಗಳ ಬೆಲೆ ಹೊಂದಾಣಿಕೆ ಮಾಡುವುದಕ್ಕೆ ಕಾರಣವಾಗಬಹುದು. ಹೀಗಾದ ಪಕ್ಷದಲ್ಲಿ ಭಾರತ ಸೇರಿದಂತೆ ಔಷಧಗಳ ಬೆಲೆ ಕಡಿಮೆ ಇರುವ ರಾಷ್ಟ್ರಗಳ ಮೇಲೆ ಬೆಲೆಯನ್ನು ಹೆಚ್ಚಿಸುವಂತೆ ಜಾಗತಿಕ ಮಟ್ಟದ ಕಂಪನಿಗಳು ಒತ್ತಡ ಹಾಕಬಹುದು ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಅಭಿಪ್ರಾಯ ಪಟ್ಟಿದೆ.

'ಟ್ರಂಪ್ ಅವರ ಅತ್ಯಂತ ನೆಚ್ಚಿನ ರಾಷ್ಟ್ರ (ಎಂಎಫ್‌ಎನ್) ಬೆಲೆ ನಿಗದಿ ನೀತಿಯು ಎಚ್ಚರಿಕೆಯ ಗಂಟೆಯಾಗಿದೆ. ಇದರಿಂದಾಗಿ ಪಶ್ಚಿಮದ ರಾಷ್ಟ್ರಗಳ ಔಷಧ ಕಂಪನಿಗಳು ಬೆಲೆ ನಿಗದಿಗೆ ಸಂಬಂಧಿಸಿದ ಕಠಿಣ ನಿಯಮಗಳನ್ನು ಎದುರಿಸಬೇಕಾಗುತ್ತದೆ. ಹಾಗಾದಾಗ, ಭಾರತದಂತಹ ಮಾರುಕಟ್ಟೆಯಲ್ಲಿ ಔಷಧಗಳ ಬೆಲೆ ಹೆಚ್ಚಿಸುವುದಕ್ಕೆ ಈ ಕಂಪನಿಗಳು ಎಲ್ಲ ರೀತಿಯಲ್ಲೂ ಶ್ರಮ ಹಾಕಲಿವೆ' ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾತ್ಸವ ಹೇಳಿದ್ದಾರೆ.

ಔಷಧಗಳ ಬೆಲೆ ನಿಗದಿಯು ಕಾನೂನಿನ ವಿಷಯ ಮಾತ್ರವಾಗಿರದೆ, ವ್ಯಾಪಾರದ ಮಾತುಕತೆಯ ವಿಚಾರವಾಗಿ ಬದಲಾಗಿದೆ. ಇದರಿಂದಾಗಿ ಭಾರತದ ಹಕ್ಕುಸ್ವಾಮ್ಯ ನೀತಿಗಳಲ್ಲಿ ಬದಲಾವಣೆ ಆಗುವ ಸಾಧ್ಯತೆ ಇದ್ದು, ಔಷಧ ಬೆಲೆಗಳು ಹೆಚ್ಚಾಗಲಿವೆ ಎಂದು ಹೇಳಲಾಗುತ್ತಿದೆ.

ಉದ್ಯಮ ಏನು ಹೇಳುತ್ತದೆ?

ಟ್ರಂಪ್ ಕಾರ್ಯಾದೇಶಕ್ಕೆ ಸಹಿ ಹಾಕುತ್ತಿದ್ದಂತೆಯೇ ಭಾರತವೂ ಸೇರಿದಂತೆ ವಿವಿಧ ದೇಶಗಳಲ್ಲಿ ಔಷಧ ಕಂಪನಿಗಳ ಷೇರು ಬೆಲೆಗಳು ಕುಸಿದವು. ಅಮೆರಿಕದ ಷೇರುಪೇಟೆಯಲ್ಲಿ ಆರಂಭದಲ್ಲಿ ಕುಸಿತ ಕಂಡಿದ್ದ ಷೇರುಗಳ ಮೌಲ್ಯ ನಂತರ ಚೇತರಿಸಿತು.

ಅಮೆರಿಕದಲ್ಲಿ ಔಷಧ ತಯಾರಿಕೆ, ಮಾರಾಟ ಸೇರಿದಂತೆ ಈ ವಲಯದಲ್ಲಿ ತೊಡಗಿಕೊಂಡಿರುವ ಉದ್ದಿಮೆಗಳು ಟ್ರಂಪ್ ಆದೇಶವನ್ನು ವಿರೋಧಿಸಿವೆ. ಆದೇಶದಿಂದಾಗಿ ದುಬಾರಿ ಔಷಧಗಳ ಬೆಲೆಯಲ್ಲಿ ದೊಡ್ಡ ಮಟ್ಟದ ಇಳಿಕೆಯಾಗದು. ಆದರೆ, ಔಷಧಗಳ ಪೂರೈಕೆ ಮತ್ತು ಸಂಶೋಧನೆಗೆ ನೀಡಲಾಗುವ ಹಣಕಾಸಿನ ನೆರವಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು ಎಂದು ಹೇಳಿವೆ.

ಈ ಪ್ರಸ್ತಾವವು ಅಮೆರಿಕದ ಸಣ್ಣ ಮತ್ತು ಮಧ್ಯಮ ಗಾತ್ರದ ಬಯೊಟೆಕ್ ಕಂಪನಿಗಳನ್ನು ಮುಚ್ಚುವ ಸ್ಥಿತಿಗೆ ತರಲಿದೆ ಎಂಬ ಕಳವಳವನ್ನು ಕೆಲವು ಉದ್ಯಮಿಗಳು ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ

ಪೊಲ್ಲಾಚಿ ಲೈಂಗಿಕ ದೌರ್ಜನ್ಯ ಪ್ರಕರಣ

9 ಅಪರಾಧಿಗಳಿಗೆ ಜೀವನಪೂರ್ತಿ ಜೈಲು

ಮುಖ್ಯಾಂಶಗಳು

- 2019ರಲ್ಲಿ ಬೆಳಕಿಗೆ ಬಂದಿದ್ದ ಪ್ರಕರಣ
- ಎಂಟು ಸಂತ್ರಸ್ತೆಯರಿಗೆ ₹85 ಲಕ್ಷ ಪರಿಹಾರ
- ಕೊಯಮತ್ತೂರು ಮಹಿಳಾ ನ್ಯಾಯಾಲಯ ಆದೇಶ

ಕೊಯಮತ್ತೂರು (ತಮಿಳುನಾಡು) (ಪಿಟಿಐ): ಪೊಲ್ಲಾಚಿ ಲೈಂಗಿಕ ದೌರ್ಜನ್ಯ ಮತ್ತು ಸುಲಿಗೆ ಪ್ರಕರಣದಲ್ಲಿ ಬಂಧಿತರಾಗಿದ್ದ ಒಂಬತ್ತು ಆರೋಪಿಗಳು ತಪ್ಪಿತಸ್ಥರು ಎಂದು ಘೋಷಿಸಿರುವ ಇಲ್ಲಿನ ಮಹಿಳಾ ನ್ಯಾಯಾಲಯ, ಎಲ್ಲರೂ ಜೀವ ಇರುವವರೆಗೆ ಜೈಲು ಶಿಕ್ಷೆ ಅನುಭವಿಸಬೇಕು ಎಂದು ಮಂಗಳವಾರ ಆದೇಶಿಸಿದೆ.

ತಮಿಳುನಾಡಿನಾದ್ಯಂತ ಭಾರಿ ಸಂಚಲನ ಮೂಡಿಸಿದ್ದ ಈ ಪ್ರಕರಣ ಬೆಳಕಿಗೆ ಬಂದ ಆರು ವರ್ಷಗಳ ಬಳಿಕ ನ್ಯಾಯಾಲಯದ ತೀರ್ಪು ಹೊರಬಿದ್ದಿದೆ. ಶಿಕ್ಷೆಯ ಪ್ರಮಾಣ ಪ್ರಕಟಿಸಿದ ನ್ಯಾಯಾಧೀಶರಾದ ಆರ್.ನಂದಿನಿ ದೇವಿ ಅವರು ಎಂಟು ಸಂತ್ರಸ್ತೆಯರಿಗೆ ₹85 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿದರು.

ಅಪರಾಧಿಗಳಾದ ರಿಶ್ವಂತ್ ಅಲಿಯಾಸ್ ಎನ್. ಶಬರಿರಾಜನ್, ಕೆ. ತಿರುನವಕ್ಕರಸು, ಎಂ. ಸತೀಶ್, ಟಿ. ವಸಂತಕುಮಾರ್, ಆರ್. ಮಣಿವಣ್ಣನ್, ಪಿ. ಬಾಬು, ಕೆ. ಅರುಳನಂತಮ್, ಟಿ. ಹರೋನಿಮಸ್ ಪಾಲ್ ಮತ್ತು ಎಂ. ಅರುಣ್‌ಕುಮಾರ್ ಅವರು 30ರಿಂದ 39 ವರ್ಷ ವಯಸ್ಸಿನವರು.

ಅರುಳನಂತಮ್ ಎಐಎಡಿಎಂಕೆ ಮಾಜಿ ಕಾರ್ಯಕರ್ತನಾಗಿದ್ದು, ಅಪರಾಧದಲ್ಲಿ ಭಾಗಿಯಾಗಿದ್ದಾನೆ ಎಂಬ ಆರೋಪ ಕೇಳಿಬಂದ ಬೆನ್ನಲ್ಲೇ ಆತನನ್ನು ಪಕ್ಷದಿಂದ ಹೊರಹಾಕಲಾಗಿತ್ತು.

ಬಂಧಿತರ ಮೇಲಿದ್ದ ಕ್ರಿಮಿನಲ್ ಪಿತೂರಿ, ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಸಾಮೂಹಿಕ ಅತ್ಯಾಚಾರ ಮತ್ತು ಸುಲಿಗೆ ಆರೋಪಗಳು ಸಾಬೀತಾಗಿದ್ದು, ಸಾಯುವವರೆಗೂ ಜೈಲುಶಿಕ್ಷೆ ವಿಧಿಸಲಾಗಿದೆ ಎಂದು ಸಿಬಿಐ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಸುರೇಂದ್ರ ಮೋಹನ್ ಸುದ್ದಿಗಾರರಿಗೆ ತಿಳಿಸಿದರು. ತಮಿಳುನಾಡು ವಿಧಾನ ಸಭೆಯಲ್ಲಿ ಪ್ರತಿಧ್ವನಿಸಿದ್ದ ಈ ಪ್ರಕರಣದ ವಿಚಾರಣೆಯನ್ನು ಸಿಬಿಐ ನಡೆಸಿದೆ.

2016ರಿಂದ 2018ರ ಅವಧಿಯಲ್ಲಿ ಕಾಲೇಜು ಹುಡುಗಿಯರು ಸೇರಿದಂತೆ ಎಂಟು ಮಂದಿಗೆ ಲೈಂಗಿಕ ಕಿರುಕುಳ ನೀಡಿ, ಅದನ್ನು ವಿಡಿಯೊ ಮಾಡಿ ಹಣಕ್ಕಾಗಿ ಬೇಡಿಕೆ ಇಟ್ಟಿದ್ದ ಈ ಪ್ರಕರಣ 2019ರಲ್ಲಿ ಬೆಳಕಿಗೆ ಬಂದಿತ್ತು. ಸಂತ್ರಸ್ತೆಯರಿಗೆ ನ್ಯಾಯ ದೊರಕಿ ಸಿಕೊಡು ವಂತೆ ಆಗ್ರಹಿಸಿ ತಮಿಳುನಾಡಿನಲ್ಲಿ ಪ್ರತಿಭಟನೆ ನಡೆದಿದ್ದವು.

ಆರಂಭದಲ್ಲಿ ಸ್ಥಳೀಯ ಪೊಲೀಸರು ಈ ಪ್ರಕರಣದ ತನಿಖೆ ಕೈಗೆತ್ತಿಕೊಂಡರೂ ಬಳಿಕ ಸಿಐಡಿಗೆ ವರ್ಗಾಯಿಸಲಾಯಿತು. ಅನಂತರ ಪ್ರಕರಣವನ್ನು ಸಿಬಿಐಗೆ ವಹಿಸಲಾಯಿತು.

₹1,500 ಕೋಟಿ ಅನುದಾನ ತಡೆ ಹಿಡಿದ ಕೇಂದ್ರ: ಕೇರಳ ಆರೋಪ

ತಿರುವನಂತಪುರ (ಪಿಟಿಐ): 'ಪಿಎಂಶ್ರೀ ಯೋಜನೆಯನ್ನು ವಿರೋಧಿಸಿದ್ದಕ್ಕಾಗಿ ವಿವಿಧ ಯೋಜನೆಗಳ ಅಡಿಯಲ್ಲಿ ರಾಜ್ಯಕ್ಕೆ ಬರಬೇಕಾದ ₹1,500 ಕೋಟಿಗೂ ಹೆಚ್ಚಿನ ಅನುದಾನವನ್ನು ಕೇಂದ್ರ ಸರ್ಕಾರವು ತಡೆಹಿಡಿದಿದೆ' ಎಂದು ಕೇರಳ ಸರ್ಕಾರ ಮಂಗಳವಾರ ಆರೋಪಿಸಿದೆ.

ಕೇಂದ್ರದ ಈ ಕ್ರಮದ ವಿರುದ್ಧ ಕಾನೂನಾತ್ಮಕ ಹೋರಾಟ ನಡೆಸುವುದಾಗಿ ರಾಜ್ಯ ಸರ್ಕಾರ ಹೇಳಿದೆ. ಕೇಂದ್ರದ ಮೇಲೆ ಒತ್ತಡ ಹೇರಲು ಪ್ರತಿಭಟನೆಯ ದಾರಿಯನ್ನು ಹಿಡಿಯುವುದಾಗಿಯೂ ಹೇಳಿದೆ. ಈ ಬಗ್ಗೆ ಶಿಕ್ಷಣ ಸಚಿವ ವಿ. ಶಿವನ್‌ಕುಟ್ಟಿ ಅವರು ಮಾಹಿತಿ ನೀಡಿದರು.

'ತಮಿಳುನಾಡು ಸರ್ಕಾರ ದಾಖಲಿಸಿದ್ದ ಅರ್ಜಿಯ ಕುರಿತು ಇತ್ತೀಚೆಗಷ್ಟೇ ತೀರ್ಪು ನೀಡಿದ ಸುಪ್ರೀಂ ಕೋರ್ಟ್, 'ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎಇಪಿ) ಜಾರಿ ಮಾಡಲೇಬೇಕು ಎನ್ನುವ ಕಡ್ಡಾಯ ರಾಜ್ಯಗಳಿಗೆ ಇಲ್ಲ' ಎಂದಿದೆ. ಇದೇ ತೀರ್ಪನ್ನು ಇಟ್ಟುಕೊಂಡು ನಾವು ಕೂಡ ಸುಪ್ರೀಂ ಕೋರ್ಟ್ ಮೆಟ್ಟಿಲೇರುತ್ತೇವೆ' ಎಂದು ಶಿವನ್‌ಕುಟ್ಟಿ ಹೇಳಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಭಾರತ ಮತ್ತು ಪಾಕಿಸ್ತಾನದ ನಡುವಿನ ಸೇನಾ ಸಂಘರ್ಷದ ಸಮಯದಲ್ಲಿ ಪಾಕಿಸ್ತಾನದ ಸೇನೆಯು ಭಾರತೀಯ ವಾಯು ಪಡೆಯ ಮಹಿಳಾ ಪೈಲಟ್ ಒಬ್ಬರನ್ನು ಸೆರೆಹಿಡಿದಿದೆ ಎಂದು ಹೇಳಿಕೊಂಡು ಮಹಿಳಾ ಪೈಲಟ್ ಒಬ್ಬರು ನೆಲದಲ್ಲಿ ಮಲಗಿರುವ ಫೋಟೊವೊಂದನ್ನು ಪಾಕಿಸ್ತಾನದ ಬಳಕೆದಾರರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು.

ಆ ಫೋಟೊ ಪಾಕಿಸ್ತಾನದ್ದಲ್ಲ, ಇತ್ತೀಚಿನದ್ದೂ ಅಲ್ಲ. 2023ರ ಜೂನ್ 1ರಂದು ಚಾಮರಾಜನಗರ ಜಿಲ್ಲೆಯ ಭೋಗಾಪುರದ ಬಳಿ ಭಾರತೀಯ ವಾಯುಪಡೆಯ ತರಬೇತಿ ವಿಮಾನ ಪತನಗೊಂಡಿತ್ತು. ತರಬೇತಿ ಪಡೆಯುತ್ತಿದ್ದ ಮಹಿಳಾ ಪೈಲಟ್ ಭೂಮಿಕಾ ಮತ್ತು ವಿಂಗ್ ಕಮಾಂಡರ್ ವಿಂಗ್ ಕಮಾಂಡರ್ ತೇಜ್ ಪಾಲ್ ಅವರು ಪ್ಯಾರಾಚೂಟ್ ಮೂಲಕ ಸುರಕ್ಷಿತವಾಗಿ ಭೂಮಿಗೆ ಇಳಿದಿದ್ದರು. 'ಪ್ರಜಾವಾಣಿ' ಸೇರಿದಂತೆ ಎಲ್ಲ ಮಾಧ್ಯಮಗಳು ಈ ಘಟನೆಯ ವರದಿಯನ್ನು ಮಾಡಿದ್ದವು. ಸಣ್ಣ ಪುಟ್ಟ ಗಾಯಗಳಾಗಿದ್ದ ಇಬ್ಬರೂ ಪೈಲಟ್‌ಗಳು ನೆಲದಲ್ಲಿ ಮಲಗಿದ್ದ ಚಿತ್ರದಲ್ಲಿ ಮಹಿಳಾ ಪೈಲಟ್ ಚಿತ್ರವನ್ನು ಮಾತ್ರ ಕ್ರಾಪ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಗುತ್ತಿದೆ. ಈ ಪೋಸ್ಟ್ ಬಗ್ಗೆ ಚಾಮರಾಜನಗರ ಜಿಲ್ಲಾ ಪೊಲೀಸ್ ಇಲಾಖೆ ಕೂಡ ತನ್ನ ಫೇಸ್ ಬುಕ್ ಪುಟದಲ್ಲಿ ಸ್ಪಷ್ಟನೆ ನೀಡಿದ್ದು, 2023ರ ಜೂನ್ 1ರಂದು ಸಂಭವಿಸಿದ್ದ ತರಬೇತಿ ವಿಮಾನ ಪತನದ ಸುದ್ದಿಯನ್ನು ತಪ್ಪಾಗಿ ಈಗ ಹಂಚಲಾಗುತ್ತಿದೆ ಎಂದು ಹೇಳಿದೆ. ತನ್ನ ಪೋಸ್ಟ್‌ನಲ್ಲಿ 'ಡೆಕ್ಕನ್ ಹೆರಾಲ್ಡ್' ಪ್ರಕಟಿಸಿದ ವರದಿಯನ್ನೂ ಅದು ಉಲ್ಲೇಖಿಸಿದೆ.

ಗುಂಡಣ್ಣ

ಇಂದ್ರಿಯಗಳ ಒಳಗೆ ಇರುವ ದೇವ!

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

194

ಮನುಷ್ಯನಿಗೆ ಅನಾದಿ ಕಾಲದಿಂದಲೂ ಒಂದು ಜಿಜ್ಞಾಸೆ; ದೇವನನ್ನು ಅರಿಯಬೇಕು, ಅನುಭವಿಸಬೇಕು, ಆನಂದಿಸಬೇಕು, ಆರಾಧಿಸಬೇಕು ಎಂದು. ಆನಂದದ ಆರಾಧನೆಯೇ ನಿಜವಾದ ಜೀವನ. ನಿಸರ್ಗವನ್ನು ನೋಡಿ. ಎಷ್ಟು ಆನಂದಭರಿತವಾಗಿದೆ. ನಿಸರ್ಗದಲ್ಲಿ ಕಾಣುವ ಆನಂದ ಮನುಷ್ಯನಲ್ಲಿ ಯಾಕೆ ಕೊರತೆಯಾಯಿತು? ನಿಮ್ಮ ಮನೆಯಲ್ಲಿ ಇರುವ ದನಗಳಿಗೆ ನೀವು ಕಸ ಹಾಕುತ್ತೀರಿ. ನೀವು ಹಾಕಿದ ಕಸ ತಿಂದು ಸಂತೋಷ ಪಡುತ್ತವೆ ದನಗಳು. ಕಸ ತಿಂದು ಸಂತೋಷ ಪಡುವ ದನಗಳು ಒಂದು ಕಡೆಯಾದರೆ, ರಸ ತಿಂದು ದುಃಖ ಪಡುವ ಮನುಷ್ಯರು ಒಂದು ಕಡೆ. ನಾವು ಕಬ್ಬಿನ ರಸವನ್ನೇ ಕುಡಿಯುತ್ತೇವೆ. ಆದರೂ ನಮಗೆ ಸಂತೋಷ ಇಲ್ಲ. ಮಾವಿನ ಗಿಡಕ್ಕೆ ಚಿಗುರು ಬಂದಿರುತ್ತದೆ. ಕೋಗಿಲೆಗಳು ಮಾವಿನ ಹಣ್ಣು ತಿನ್ನುವುದಿಲ್ಲ. ಸುಮ್ಮನೆ ಒಂದಿಷ್ಟು ಮಾವಿನ ಚಿಗುರು ತಿಂದು ಹಾಡುತ್ತವೆ. ಒಂದು ದಿನ ಮಾವಿನ ಗಿಡ ಸಪ್ಪಗೆ ಇತ್ತು. ಆಗ ಕೋಗಿಲೆ ಮಾವಿನ ಗಿಡಕ್ಕೆ 'ಯಾಕೆ ಸ್ವಲ್ಪ ಸಪ್ಪಗಿದ್ದೀಯಲ್ಲ' ಎಂದು ಕೇಳಿತು. ಅದಕ್ಕೆ ಮಾವಿನ ಗಿಡ 'ಏನಿಲ್ಲಪ, ನಿನಗೆ ನಾನು ಬರೀ ಚಿಗುರು ಕೊಟ್ಟಿದ್ದೇನೆ. ಚಿಗುರು ತಿಂದು ಇಷ್ಟು ಹಾಡ್ತಿ. ಈ ಮನುಷ್ಯ ಬಂದಿದ್ದ. ಅವನಿಗೆ ನಿನ್ನೆ ಎರಡು ಹಣ್ಣು ಕೊಟ್ಟಿದ್ದೆ. ಇಂದು ಲಾರಿಯನ್ನೇ ತಂದು ನಿಲ್ಲಿಸಿದ್ದಾನೆ ಅವನು. ಚಿಗುರು ತಿಂದು ಹಾಡುವ ನೀವೆಲ್ಲಿ. ನಮ್ಮದೇ ಹಣ್ಣು ತಿಂದು ನಮ್ಮದೇ ಟೊಂಗೆ ಮುರಿದು ಕಾವು ಮಾಡಿಕೊಂಡು ನಮ್ಮ ಬುಡಕ್ಕೇ ಕೊಡಲಿ ಹಾಕುವ ಮನುಷ್ಯರೆಲ್ಲಿ' ಎಂದು ಹೇಳಿತು.

ನಿಸರ್ಗ ಸಣ್ಣ ಸಣ್ಣ ವಿಷಯದಲ್ಲಿಯೂ ಸಂತೋಷ ಪಡತ್ತೈತಿ. ನಿಸರ್ಗ ಎಲ್ಲವನ್ನೂ ಕರುಣಿಸಿದರೂ ಮನುಷ್ಯನಿಗೆ ಯಾಕೆ ದುಃಖ ಆತು ಅಂದರೆ, ಮನುಷ್ಯನಿಗೆ ಸತ್ಯದ ವಿಸ್ಮರಣೆಯಾಗಿದೆ. ದೇವರ ವಿಸ್ಮರಣೆ ಮನುಷ್ಯನಿಗೆ ದುಃಖ ಕೊಟ್ಟಿದೆ. ಮನುಷ್ಯನ ತಲೆಯಲ್ಲಿ ನನ್ನದು ಎನ್ನುವುದು ಬಹಳ ತುಂಬಿದೆ. ಮನುಷ್ಯನೇ ಒಂದು ಕ್ಷಣ ವಿಚಾರ ಮಾಡು. ಈ ಜಗತ್ತನ್ನು ನೋಡಿ, ಈ ಜೀವನವನ್ನು ನೋಡಿ ವಿಚಾರ ಮಾಡು. ನನ್ನ ಹೊಲ, ನನ್ನ ಸಂಪತ್ತು ಎಲ್ಲವನ್ನೂ ಕೊಟ್ಟವರಾರು? ನನ್ನ ಜೀವನವನ್ನು ನಡೆಸಿದವರು ಯಾರು? ನಾನು ನಡೆಸಿದ್ದೇನೆ ಎಂದು ತಲೆಯಲ್ಲಿ ತುಂಬಿಕೊಂಡಿದ್ದರಿಂದ ದುಃಖವಾಗುತ್ತಿದೆ. ನಾನು ಉಣ್ಣುತ್ತೇನೆ, ನಾನು ತಿನ್ನುತ್ತೇನೆ, ನಾನು ಕೇಳುತ್ತೀನಿ ಎಂದು ಹೇಳುತ್ತೀರಿ. ಕೇಳುವ ಕಿವಿ, ನೋಡುವ ಕಣ್ಣು, ತಿನ್ನುವ ನಾಲಿಗೆ ಎಲ್ಲವೂ ಜಡ. ಕಿವಿಯಿಂದ ಕೇಳಿದ್ದೇನೆ, ಕಣ್ಣಿನಿಂದ ನೋಡಿದ್ದೇನೆ, ನಾಲಿಗೆಯಿಂದ ತಿಂದಿದ್ದೇನೆ, ಕೈಯಿಂದ ಮಾಡಿದ್ದೇನೆ ಎಂದು ನಮಗೆ ಅನ್ನಿಸುತ್ತದೆ ಅಷ್ಟೇ. ಕಿವಿಯೇ ಕೇಳುತ್ತಿದ್ದರೆ, ಕಣ್ಣು ನೋಡುತ್ತಿದ್ದರೆ, ಸತ್ತಾಗ ಹೆಣದ ಮುಂದೆ ಸಂಬಂಧಿಕರು ಅಳುವುದನ್ನು ಕಿವಿ ಕೇಳಿಸಿಕೊಳ್ಳಬೇಕಿತ್ತಲ್ಲ, ಕಣ್ಣು ನೋಡಬೇಕಿತ್ತಲ್ಲ. ಅದು ಆಗಲ್ಲ ಅಲ್ವಾ. ಅಂದರೆ ಕಣ್ಣು ನೋಡಿಲ್ಲ. ಕಿವಿ ಕೇಳಿಲ್ಲ. ಕಣ್ಣಿನ ಮುಖಾಂತರ ನೋಡಿದ್ದೇವೆ, ಕಿವಿಯ ಮುಖಾಂತರ ಕೇಳಿದ್ದೇವೆ, ನಾಲಿಗೆ ಮುಖಾಂತರ ತಿಂದಿದ್ದೇವೆ ಅಷ್ಟೇ.

ಕಣ್ಣು, ಕಿವಿ, ಮೂಗು, ನಾಲಿಗೆ ಮುಂತಾದ ಇಂದ್ರಿಯಗಳ ಮೂಲಕ ರುಚಿ ಕಾಣಲು ಅವುಗಳ ಒಳಗೆ ದೇವನಿದ್ದಾನೆ ಎಂಬ ಸತ್ಯ ನಮಗೆ ಗೊತ್ತಿಲ್ಲ. ಒಳಗಿನ ದೇವ ಹೊರಗೆ ಹೋದರೆ ದೇಹ ಬರೀ ಹೆಣ ಅಷ್ಟೇ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮೇ 14, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ದ್ವಿತೀಯ ಗಂ. 26-30 ನಕ್ಷತ್ರ: ಅನುರಾಧ ಗಂ. 11-47 ಯೋಗ: ಪರಿಘ ಗಂ. 6-34, ಕರಣ: ತೈತಿಲ ಗಂ. 13-35, ಮೇಷ ಮಾಸದ 31 ನೇ ದಿನ.

ರಾಹುಕಾಲ: ಮಧ್ಯಾಹ್ನ 12-00 – 01-30

ಸೂರ್ಯೋದಯ: 06-08 **ಸೂರ್ಯಾಸ್ತ:** 06-45

ಮುಸ್ಲಿಂ ದಿನಾಂಕ: 15 ಜುಲ್ಖಾಯದ್

ದಿನ ವಿಶೇಷ: ವೃಷಭ ಸಂಕ್ರಮಣ, ಅದೃಷ್ಟ ಸಂಖ್ಯೆ: 5, 12

ಮೇಷ: ವಂಚನೆಯ ಕಡೆಗೆ ಕರೆದೊಯ್ಯುವ ಪ್ರಯತ್ನ ಸ್ನೇಹಿತರ ಬಳಗದಲ್ಲಿ ನಡೆಯಲಿದೆ. ಆರ್ಥಿಕ ಸ್ಥಿತಿಯಲ್ಲಿ ಯಾವುದೇ ತಾಪತ್ರಯಗಳಿಲ್ಲದೆ ವ್ಯವಹಾರ ಹಂತ ಹಂತವಾಗಿ ಅಭಿವೃದ್ಧಿಯಾಗಲಿದೆ.

ವೃಷಭ: ಜೀವನದ ಬಗ್ಗೆ ನಿರುತ್ಸಾಹ ತಾಳದಿರಿ. ಲೇವಾದೇವಿ ವ್ಯವಹಾರದಲ್ಲಿ ಭಾಗಶಃ ಅನುಕೂಲವಿದೆ. ರೈತರು ಪ್ರಾಯೋಗಿಕವಾಗಿ ಬೆಳೆದ ಬೆಳೆಯಿಂದ ಸಂತೋಷವನ್ನು ಹೊಂದುವರು.

ಮಿಥುನ: ಮಸಾಲೆ ಪದಾರ್ಥ ಅಥವಾ ಖಾದ್ಯ ವಸ್ತುಗಳ ಮಾರಾಟದಿಂದ ನೆಮ್ಮದಿ ಕಾಣಬಹುದು. ಮಕ್ಕಳ ಅಗತ್ಯಗಳನ್ನು ಪೂರೈಸಿ. ನೂತನ ವಾಹನ ಖರೀದಿಯ ಆಲೋಚನೆ ಮುಂದೂಡುವುದು ಉತ್ತಮ.

ಕರ್ಕಾಟಕ: ಬಹಳ ದಿನದ ಹುಡುಕಾಟದ ನಂತರ ಖಾಸಗಿ ಕಂಪನಿಯೊಂದರಲ್ಲಿ ನೌಕರಿ ಪ್ರಾಪ್ತಿಯಾಗಿ ಮನೆಯಲ್ಲಿ ಸಂತಸ ಮೂಡಲಿದೆ. ರಾಜಕೀಯ ರಂಗದಲ್ಲಿ ಸೇವಾಮನೋಭಾವವನ್ನು ಬೆಳೆಸಿಕೊಂಡರೆ ಯಶಸ್ಸು ದೊರೆಯಲಿದೆ.

ಸಿಂಹ: ಪ್ರಯತ್ನ ಪಟ್ಟ ಕೆಲಸಗಳು ಫಲ ನೀಡಲಿವೆ. ಧಾರ್ಮಿಕ ವ್ಯಕ್ತಿಯ ಸ್ನೇಹ ಸಂಬಂಧ ಅಥವಾ ಧಾರ್ಮಿಕ ಉಪನ್ಯಾಸಗಳಿಂದ ಜೀವನ ಶೈಲಿ ಬದಲಾಗಲಿದೆ. ಮನೆಯವರ ಆರೋಗ್ಯ ಸುಧಾರಣೆಯಾಗುತ್ತದೆ.

ಕನ್ಯಾ: ಕೌಟುಂಬಿಕ ಸುಖದೊಂದಿಗೆ ಸರ್ವತೋಮುಖ ಅಭಿವೃದ್ಧಿ ಪಡೆಯುವಿರಿ. ಹೊಸ ಕೆಲಸಗಳ ಬಗ್ಗೆ ಯೋಜನೆಗಳನ್ನು ರೂಪಿಸಿಕೊಳ್ಳಬಹುದು. ಮೆಕಾನಿಕಲ್ ವಿದ್ಯಾರ್ಥಿಗಳಿಗೆ ಓದಿನಲ್ಲಿ ಪರಿಶ್ರಮ ಅಗತ್ಯ. ಶ್ರೀವಿಷ್ಣು ಸಹಸ್ರನಾಮ ಪಠಿಸಿರಿ.

ತುಲಾ: ಮಕ್ಕಳ ಮಾನಸಿಕ ಬೆಳವಣಿಗೆಯ ಬಗ್ಗೆ ಪೋಷಕರು ಗಮನವಹಿಸಿ. ನೂತನ ಕೆಲಸ ಕಾರ್ಯಗಳ ಆರಂಭಕ್ಕೆ ಮತ್ತು ಒಡಂಬಡಿಕೆಗಳಿಗೆ ಇಂದು ಸೂಕ್ತ ಕಾಲ. ಖಾದಿ ಉದ್ಯಮದವರು ಸರ್ಕಾರದಿಂದ ಸಹಾಯ ಅಪೇಕ್ಷಿಸಬಹುದು.

ವೃಶ್ಚಿಕ: ಕೋರ್ಟು ವ್ಯವಹಾರಗಳನ್ನು ಇತ್ಯರ್ಥಗೊಳಿಸಿಕೊಳ್ಳುವ ಬಗ್ಗೆ ಪ್ರಯತ್ನ-ವಿರಲಿ. ಒಬ್ಬೊಬ್ಬರ ಮುಂದೆ ಒಂದೊಂದು ರೀತಿಯಲ್ಲಿ ಮುಖಸ್ತುತಿ ಮಾಡುವ ಬದಲು ಸತ್ಯವನ್ನಾಡುವ ತೀರ್ಮಾನ ಮಾಡಿ.

ಧನು: ಕಾರ್ಮಿಕ ವರ್ಗದವರಲ್ಲಿ ಜನ ಸಂಪತ್ತಿನ ಕೊರತೆಯ ಕಾರಣದಿಂದಾಗಿ ಅಧಿಕ ಶ್ರಮ ಉಂಟಾಗುವುದು. ಪುಸ್ತಕ ಪ್ರಕಾಶಕರಿಗೆ ಏಕಾಗ್ರತೆ ಕೊರತೆಯಿಂದಾಗಿ ಹಲವು ಅಡಚಣೆಗಳು ಎದುರಾಗಲಿವೆ.

ಮಕರ: ಸಂಶೋಧನಾ ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಮುನ್ನಡೆ ಸಾಧಿಸುವರು. ಕೃಷಿ ಕೆಲಸಗಳಿಗೆ ಸಹೋದರರಿಂದ, ಮಕ್ಕಳಿಂದ ಆರ್ಥಿಕ ಸಹಾಯ ಪಡೆಯುವ ಬದಲು ಸಂಘ ಸಂಸ್ಥೆಯಲ್ಲಿ ಸಾಲ ತೆಗೆದುಕೊಳ್ಳುವುದು ಉತ್ತಮ.

ಕುಂಭ: ಕ್ರೀಡೆಯಲ್ಲಿ ಅಥವಾ ಮನರಂಜನೆಯ ಕಾರ್ಯಕ್ರಮದಲ್ಲಿ ಸಮಯ ಕಳೆಯುವಿರಿ. ಹಿರಿಯರ ಇಚ್ಛೆಯಂತೆ ಮನೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳುವುದು ಸಂತೋಷಕ್ಕೆ ಕಾರಣವಾಗುತ್ತದೆ.

ಮೀನ: ಶ್ರಮಕ್ಕೆ ತಕ್ಕ ಪ್ರತಿಫಲ ದೊರೆತು ಸಂತಸ ಮೂಡಲಿದೆ. ರಾಜಕೀಯ ವಿಷಯಗಳಿಗಾಗಿ ದಿಢೀರ್ ಪ್ರಯಾಣದ ಸಂಭವವಿದೆ. ಈ ದಿನದ ನಿಮ್ಮ ಜೀವನ ಶೈಲಿಯ ಬದಲಾಗಲಿದೆ.

ಪದಬಂಧ 6042

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಂತೋಷ ಹೀಗೆ ಬಂದಿದೆ (3)
3.ದೂರವನ್ನು ಅಳೆಯುವ ಒಂದು ಪ್ರಮಾಣ (3)
5.ಅಭಿಪ್ರಾಯ ಭೇದವಿದು (5)
7.ಇದಂತೂ ತೀರಾ ನಿಕೃಷ್ಟವಾದುದು (3)
8.ಉದ್ದವಾಗಿ ಬಾಗಿರುವ ತುತ್ತೂರಿ (3)
9.ಸಮವಯಸ್ಕರನ್ನು ಹೀಗೆನ್ನಿ (3)
11.ತಿಗರಿಯ ಹತ್ತಿರವಿರುವ ಪತಿವ್ರತೆ (3)
13.ಕರೆ ಈ ರೀತಿ ಬಂದಿದೆ (3)
15.ಕುಯುಕ್ತಿಯಿಂದ ಎಗರಿಸಿದ ಕಪ್ಪೆ ಚಿಪ್ಪು! (3)
16.ಲೋಹದ ಹಕ್ಕಿಯಲ್ಲಿನ ಪಯಣ (5)
17.ಲಾಂದ್ರವನ್ನು ಹೀಗೂ ಹೇಳುವರು (3)
18.ಕರು ತಿನ್ನುತ್ತಿರುವ ಧಾನ್ಯದ ತೆನೆ (3)

ಮೇಲಿಂದ ಕೆಳಕ್ಕೆ

2.ಸಭೆಯಲ್ಲಿ ಕುಳಿತಿರುವವನು (3)
3.ಈತ ಹಾಡುಗಾರ (3)
6.ಭಿಕ್ಷೆ ಬೇಡುವವ ಇಲ್ಲಿದ್ದಾನೆ (3)
9.ಓಲಗಶಾಲೆಯಲ್ಲಿ ವಾಚಕ ಕಾಣಿಸಿದನಲ್ಲಾ! (3)
10.ಸ್ನೇಹಿತೆ ಇಲ್ಲಿದ್ದಾಳೆ (3)
12.ದ್ರವ ಒಸರುತ್ತಿರುವ ಜಿಹ್ವೆ (3)
14.ನಮ್ಮ ರಾಷ್ಟ್ರ ಪಕ್ಷಿ (3)
15.ನಾಯಿ ಇಲ್ಲಿಗೆ ಬಂದಿದೆಯಲ್ಲಾ? (3)



6041ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4.ನವಸಾಗರ 5.ಕೋರಿಕೆ 7.ಮಟ್ಟಸ 9.ರಮಣ 10.ಮಾರುತ 11.ತರಂಗ 12.ಮಧುರ 14.ಪ್ರಾಕಾರ 15.ರಜತೋತ್ಸವ

ಮೇಲಿಂದ ಕೆಳಕ್ಕೆ: 1.ನವಸುಮ 2.ವರ 3.ಪರಿಮಾಣ 6.ತರತಮ 8.ಸಮಾಗಮ 11.ತರಕಾರಿ 13.ರಥೋತ್ಸವ 15.ರವಿ

ಸುಡೊಕು 6426

						8	2	
8		9						5
	6	5				3		7
	8			1			5	
9		3	5		8	4		6
	5			3			8	
5		4		8			7	
2	9		1		7	5		4
		6		4			9	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6425 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ಸಚಿವರ ಕೈಗೆ ಜಾತಿಗಳ ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ವಿವರ, 18 ಗುಣಲಕ್ಷಣಗಳ ಪಟ್ಟಿ

ಜಾತಿಗಳ 'ಹಿಂದುಳಿದಿರುವಿಕೆ' ಅಂಕ ಬಹಿರಂಗ

● ರಾಜೇಶ್ ರೈ ಚಟ್ಲ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗವು 2015ರಲ್ಲಿ ನಡೆಸಿದ್ದ ಸಮೀಕ್ಷೆ (ಜಾತಿ ಜನಗಣತಿ) ಸಂದರ್ಭದಲ್ಲಿ ಪ್ರತಿ ಜಾತಿಯ ಸಾಮಾಜಿಕ, ಶೈಕ್ಷಣಿಕ ಮತ್ತು ಜೀವನೋಪಾಯ ಈ ಮೂರು ಸೂಚಕಗಳನ್ನು ಮಾನದಂಡವಾಗಿ ಪರಿಗಣಿಸಿ ಜಾತಿಗಳ 'ಹಿಂದುಳಿದಿರುವಿಕೆ'ಯನ್ನು ಗುರುತಿಸಿದೆ. ಅದರ ಆಧಾರದಲ್ಲಿ ಪ್ರವರ್ಗವಾರು ಜಾತಿಗಳ ಮರು ವರ್ಗೀಕರಣ ಮಾಡಿದೆ.

ಪ್ರತಿಯೊಂದು ಜಾತಿಯ ಒಟ್ಟು ಜನಸಂಖ್ಯೆ, ಈ ಮೂರು ಮಾನದಂಡಗಳಿಗೆ ನಿಗದಿಪಡಿಸಿದ್ದ ಒಟ್ಟು 200 ಅಂಕಗಳಲ್ಲಿ ಜಾತಿಗಳು ಗಳಿಸಿದ ಅಂಕಗಳ ವಿವರಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಎಲ್ಲ ಸಚಿವರಿಗೆ ನೀಡಿದೆ. ಈ ವಿವರಗಳು 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಮಾನದಂಡಗಳಿಗೆ ನಿಗದಿಪಡಿಸಿದ್ದ 200ರಲ್ಲಿ 90ಕ್ಕಿಂತ ಹೆಚ್ಚು ಅಂಕ ಪಡೆದ ಜಾತಿಗಳನ್ನು 'ಅತ್ಯಂತ ಹೆಚ್ಚು ಹಿಂದುಳಿದಿದೆ' ಎಂದು ನಿರ್ಧರಿಸಿ, 'ಪ್ರವರ್ಗ 1'ರಲ್ಲಿ ಆಯೋಗ ಪಟ್ಟಿ ಮಾಡಿದೆ. ಈ ಪೈಕಿ ಉಪ್ಪಾರ 134.88 ಅಂಕ ಪಡೆದರೆ, ಬೆಸ್ತ 129.45, ಕುರುಬ 123.50, ಅಗಸ 120.76, ಕುಂಬಾರ 111.09 ಅಂಕ ಪಡೆದಿವೆ. ಹೀಗಾಗಿ, ಈ ಜಾತಿಗಳನ್ನು 'ಅತ್ಯಂತ ಹಿಂದುಳಿದ' (ಪ್ರವರ್ಗ 1) ಪಟ್ಟಿಯಲ್ಲಿ ಸೇರಿಸಲಾಗಿದೆ.

ಒಕ್ಕಲಿಗರು 42.60 ಅಂಕ, ಲಿಂಗಾಯತ/ವೀರಶೈವ ಸಮುದಾಯ 41.58 ಅಂಕ ಪಡೆದ ಕಾರಣ 'ಹಿಂದುಳಿದ' (ಪ್ರವರ್ಗ 3) ಎಂದು ಪಟ್ಟಿ ಮಾಡಲಾಗಿದೆ ಎಂದು ಆಯೋಗವು ವರದಿಯಲ್ಲಿ ಸಮರ್ಥಿಸಿದೆ.

ಪ್ರತಿ ಜಾತಿಯ ಒಟ್ಟು ಕುಟುಂಬಗಳೆಷ್ಟು, ಜಾತಿವಾರು ಜನಸಂಖ್ಯೆಯಲ್ಲಿ ಪುರುಷರೆಷ್ಟು, ಮಹಿಳೆಯರೆಷ್ಟು, ಲೈಂಗಿಕ ಅಲ್ಪಸಂಖ್ಯಾತರೆಷ್ಟು, ಎಷ್ಟು ಮಂದಿ ಯಾವ ಭಾಷೆ ಮಾತನಾಡುತ್ತಾರೆ, ಆಧಾರ್, ಮತದಾರರ ಗುರುತಿನ ಚೀಟಿ, ಬ್ಯಾಂಕ್ ಖಾತೆ ಹೊಂದಿರುವವರೆಷ್ಟು, ಮದುವೆಯಾದವರು, ವಿಧವೆಯರು, ವಿಧುರರು ಎಷ್ಟು, ಶಿಕ್ಷಣ ಪಡೆದವರೆಷ್ಟು, ಸಾಕ್ಷರತಾ ಮಟ್ಟ, ಉದ್ಯೋಗಿಗಳು, ನಿರುದ್ಯೋಗಿಗಳು, ಸಾಂಪ್ರದಾಯಿಕ ವೃತ್ತಿ, ಭೂಮಿ ಹೊಂದಿದವರು, ಸಾಮಾಜಿಕ ಕಲ್ಯಾಣ ಯೋಜನೆಗಳ ಸೌಲಭ್ಯ ಪಡೆಯುವವರು, ವಸತಿ ರಹಿತರೆಷ್ಟು, ವಸತಿ ಇದ್ದರೆ ಎಂತಹ ಮನೆ, ಅಡುಗೆ ವಿಧಾನ ಹೀಗೆ ಪ್ರತಿಯೊಂದು ಜಾತಿಯ 18 ಗುಣಲಕ್ಷಣಗಳನ್ನು ಪಟ್ಟಿ ಮಾಡಿ ತಲಾ ಮೂರು ಪುಟಗಳಲ್ಲಿ ಸಚಿವರಿಗೆ ನೀಡಲಾಗಿದೆ.

ಜಾತಿಗಳ ಸಾಮಾಜಿಕ ಸ್ಥಿತಿಗೆ 100 ಅಂಕ, ಶಿಕ್ಷಣಕ್ಕೆ 68, ಜೀವನೋಪಾಯಕ್ಕೆ 32 ಅಂಕ ಹೀಗೆ ಒಟ್ಟು 200 ಅಂಕಗಳಲ್ಲಿ ಹಿಂದುಳಿದಿರುವಿಕೆಯನ್ನು ನಿರ್ಧರಿಸಲಾಗಿದೆ. ಅಂಕಗಳ ವ್ಯಾಪ್ತಿ12ರಿಂದ 147 ಆಗಿದ್ದು, 90 ಅಂಕವನ್ನು ಕಟ್ ಆಫ್ ಎಂದು ತೆಗೆದುಕೊಂಡು, 90ಕ್ಕಿಂತ ಹೆಚ್ಚು ಅಂಕ ಪಡೆದ ಜಾತಿಗಳು 'ಅತ್ಯಂತ ಹಿಂದುಳಿದ' (ಪ್ರವರ್ಗ 1), 50ರಿಂದ 89 ಅಂಕ ಪಡೆದ ಜಾತಿಗಳು 'ಅತಿ ಹಿಂದುಳಿದ' (ಪ್ರವರ್ಗ 2), 20ರಿಂದ 49 ಅಂಕ ಪಡೆದ ಜಾತಿಗಳನ್ನು 'ಹಿಂದುಳಿದ' (ಪ್ರವರ್ಗ 3) 20ಕ್ಕಿಂತ ಕಡಿಮೆ ಅಂಕ ಪಡೆದ ಜಾತಿಗಳನ್ನು 'ಸಾಮಾನ್ಯ' ಎಂದು ಆಯೋಗ ಪಟ್ಟಿ ಮಾಡಿದೆ.

ಪ್ರವರ್ಗವಾರು ವರ್ಗೀಕರಣ

- ಪ್ರವರ್ಗ 1ಎ: ಸಾಮಾಜಿಕ, ಶೈಕ್ಷಣಿಕ, ಜೀವನೋಪಾಯ ಮಾನದಂಡಗಳಲ್ಲಿ ಒಟ್ಟು 200 ಅಂಕಗಳಲ್ಲಿ 125 ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದ ಜಾತಿಗಳು (ಅಲೆಮಾರಿ, ಅರೆ ಅಲೆಮಾರಿಗಳು ಸೇರಿದಂತೆ)
- ಪ್ರವರ್ಗ 1ಬಿ: 90ರಿಂದ 124 ಅಂಕಗಳನ್ನು ಪಡೆದ ಜಾತಿಗಳು (ಈಗಾಗಲೇ ಪ್ರವರ್ಗ 1ರಲ್ಲಿ ನಮೂದಾಗಿರುವ ಜಾತಿಗಳು)
- ಪ್ರವರ್ಗ 2ಎ: 50ರಿಂದ 89 ಅಂಕಗಳನ್ನು ಪಡೆದ ಜಾತಿಗಳು (ಈಗಾಗಲೇ ಪ್ರವರ್ಗ 2ಎಯಲ್ಲಿ ನಮೂದಾಗಿರುವ ಜಾತಿಗಳು)
- ಪ್ರವರ್ಗ 2ಬಿ: ಮುಸ್ಲಿಂ ಮತ್ತು ಅದರ ಉಪ ಜಾತಿಗಳು
- ಪ್ರವರ್ಗ 3ಎ: 20ರಿಂದ 49 ಅಂಕಗಳನ್ನು ಪಡೆದ ಜಾತಿಗಳು (ಈಗಾಗಲೇ ಪ್ರವರ್ಗ 3ಎಯಲ್ಲಿ ನಮೂದಾಗಿರುವ ಜಾತಿಗಳು)
- ಪ್ರವರ್ಗ 3ಬಿ: 20ರಿಂದ 49 ಅಂಕಗಳನ್ನು ಪಡೆದ ಜಾತಿಗಳು (ಈಗಾಗಲೇ ಪ್ರವರ್ಗ 3ಬಿಯಲ್ಲಿ ನಮೂದಾಗಿರುವ ಜಾತಿಗಳು)

2015ರ ಸಮೀಕ್ಷೆಯ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆ – 5,98,14,942

ಜಾತಿ/ ಸಮುದಾಯ	ಜನಸಂಖ್ಯೆ	ರಾಜ್ಯದ ಒಟ್ಟು ಜನಸಂಖ್ಯೆಗೆ ಶೇಕಡಾ	ಸಾಮಾಜಿಕ (100ರಲ್ಲಿ)	ಶೈಕ್ಷಣಿಕ (68ರಲ್ಲಿ)	ಜೀವನೋಪಾಯ (32ರಲ್ಲಿ)	ಒಟ್ಟು (200ರಲ್ಲಿ)
ಉಪ್ಪಾರ	8,50,052	1.42	65.74	47.21	21.93	134.88
ಬೆಸ್ತ	14,33,309	2.40	55.98	49.87	23.60	129.45
ಕುರುಬ	43,72,847	7.31	58.69	47.83	16.98	123.50
ಅಗಸ	6,33,894	1.06	43.93	53.36	23.47	120.76
ಕುಂಬಾರ	4,83,724	0.81	44.73	43.63	22.73	111.09
ಸವಿತಾ/ನಾಯಿಂದ	4,57,340	0.76	35.62	41.45	20.97	98.03
ಯಾದವ (ಗೊಲ್ಲ)	10,31,014	1.72	38.04	35.38	19.78	93.20
ಮರಾಠ	14,76,894	2.47	36.71	29.12	19.82	85.65
ತಿಗಳ	6,06,487	1.01	21.41	39.22	24.66	85.29
ಗಾಣಿಗ	7,08,613	1.18	35.52	28.61	15.06	79.19
ಈಡಿಗ	14,12,493	2.36	29.56	24.95	17.18	71.69
ದೇವಾಡಿಗ	1,28,237	0.21	24.15	26.07	14.56	64.78
ವಿಶ್ವಕರ್ಮ/ಪಾಂಚಾಲ	12,27,171	2.05	22.26	24.80	16.40	63.47
ಕ್ಷತ್ರಿಯ	1,94,127	0.32	30.78	6.65	17.24	54.68
ನೇಯ್ಗಿ	4,52,543	0.76	17.48	12.38	14.09	43.95
ಒಕ್ಕಲಿಗ	61,68,652	10.31	13.01	20.65	8.94	42.60
ದೇವಾಂಗ	4,83,094	0.81	19.44	13.38	8.78	41.59
ಲಿಂಗಾಯತ/ವೀರಶೈವ	66,35,233	11.09	18.10	18.63	4.85	41.58
ಜೈನ	4,19,375	0.70	19.73	12.17	3.10	34.99
ಬಂಟ್	3,22,371	0.54	22.84	0.00	8.97	31.81
ಕ್ರಿಶ್ಚಿಯನ್	9,47,994	1.58	11.29	2.36	11.02	24.68
ಬ್ರಾಹ್ಮಣ	15,64,741	2.62	1.12	1.19	8.98	11.29

ಸುದ್ದಿ 2 ನಿಮಿಷ

ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ: ಇಬ್ಬರು ವಶಕ್ಕೆ

ಬೆಳಗಾವಿ: ಬಾಲಕಿಯನ್ನು ಪುಸಲಾಯಿಸಿ, ನಗರ ಹೊರವಲಯದ ಪ್ರದೇಶಕ್ಕೆ ಕರೆದೊಯ್ದ ಮೂವರು ಬಾಲಕರು, ಪಾರ್ಟಿ ಬಳಿಕ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ. ಘಟನೆ ಮೇ 6ರಂದು ನಡೆದಿದ್ದು, ಸೋಮವಾರ ಬಾಲಕಿಯ ಪಾಲಕರು ಠಾಣೆಗೆ ದೂರು ನೀಡಿದ್ದಾರೆ.

ಈ ಮೂವರು ಬಾಲಕರ ಪೈಕಿ ಇಬ್ಬರನ್ನು ವಶಕ್ಕೆ ಪಡೆದಿರುವ ಪೊಲೀಸರು, ಬಾಲಮಂದಿರಕ್ಕೆ ಸೇರಿಸಿದ್ದಾರೆ. ಇನ್ನೊಬ್ಬನಿಗಾಗಿ ಹುಡುಕಾಟ ನಡೆದಿದೆ.

'ವಿದ್ಯಾರ್ಥಿನಿ ಮನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಹುಡುಗರು ಕೆಲಸ ಮಾಡಿಕೊಂಡಿದ್ದರು. ಪರಿಚಯ ಮಾಡಿಕೊಂಡು, ಪ್ರೇಮ ಬೆಳೆಸಿಕೊಂಡಿದ್ದರು. ಮೇ 6ರಂದು ನಗರ ಹೊರವಲಯದ ಪ್ರದೇಶಕ್ಕೆ ಹೋಗಿ ಎಲ್ಲರೂ ಪಾರ್ಟಿ ಮಾಡಿದ್ದರು. ನಂತರ ಸಾಮೂಹಿಕ ಅತ್ಯಾಚಾರ ನಡೆದಿತ್ತು. ಮೇ 12ಕ್ಕೆ ಬಾಲಕಿಯ ಪಾಲಕರಿಗೆ ಅನುಮಾನ ಬಂದಿದ್ದರಿಂದ ದೂರು ದಾಖಲಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಗೋಡೆ ಒಡೆದು 9 ಮಂದಿ ರಕ್ಷಣೆ

ಕಲಬುರಗಿ: ಇಲ್ಲಿನ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಜಿಮ್ಸ್) ಆಸ್ಪತ್ರೆಯಲ್ಲಿ ಮಂಗಳವಾರ ಬೆಳಿಗ್ಗೆ ತಾಂತ್ರಿಕ ದೋಷದಿಂದ ಲಿಫ್ಟ್ ಮೂರನೇ ಮಹಡಿಯಲ್ಲೇ ನಿಂತಿದ್ದು, ಸುಮಾರು ಒಂದೂವರೆ ಗಂಟೆ ಒಂಬತ್ತು ಮಂದಿ ಲಿಫ್ಟ್‌ನಲ್ಲಿ ಸಿಲುಕಿಕೊಂಡು ಪರದಾಡಿದರು. ಕೊನೆಗೆ ಗೋಡೆ ಒಡೆದು ಅವರನ್ನು ರಕ್ಷಿಸಲಾಯಿತು.

ಆಸ್ಪತ್ರೆಯ ಬೆಳಗಿನ ಶಿಫ್ಟ್‌ಗೆ ಕೆಲಸಕ್ಕೆ ಹಾಜರಾಗುತ್ತಿದ್ದ ಜಿಮ್ಸ್‌ನ ಏಳು ಸಿಬ್ಬಂದಿ ಹಾಗೂ ರೋಗಿಗಳ ಇಬ್ಬರು ಸಂಬಂಧಿಕರು ಲಿಫ್ಟ್‌ನಲ್ಲಿ ಸಿಲುಕಿದರು. ಮೇಲೆ–ಕೆಳಗೆ ಬಾರದೆ ಬಾಗಿಲು ತೆಗೆಯಲಾಗದ ಸ್ಥಿತಿಯಲ್ಲಿ 3ನೇ ಮಹಡಿಯಲ್ಲಿ ನಿಂತಿತು. ಕಟ್ಟಡ ಕಾರ್ಮಿಕರು ಗೋಡೆಯನ್ನು ಒಡೆದು ಸುರಕ್ಷಿತವಾಗಿ ಕರೆ ತಂದರು.

'ಮೂರನೇ ಮಹಡಿಯನ್ನು ಈ ಹಿಂದೆ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ಆಸ್ಪತ್ರೆಗೆ ನೀಡಲಾಗಿತ್ತು. ಜಯದೇವ ಆಸ್ಪತ್ರೆ ಸ್ಥಳಾಂತರವಾದ ಬಳಿಕ ಅದನ್ನು ತಾಯಿ ಮತ್ತು ಮಕ್ಕಳಿಗಾಗಿ ಬಳಸುತ್ತಿದ್ದು, ಎರಡು ಕಡೆ ನಾಲ್ಕು ಲಿಫ್ಟ್‌ಗಳಿವೆ. ಅವುಗಳಲ್ಲಿ ಉತ್ತರ ಭಾಗದ ಲಿಫ್ಟ್‌ನಲ್ಲಿ ಒಂಬತ್ತು ಮಂದಿ ಕೆಳಗಿನಿಂದ ಮೇಲೆ ಹೋಗುತ್ತಿದ್ದರು. ಏಕಾಏಕಿ ಲಿಫ್ಟ್ ಸ್ಥಗಿತವಾಗಿ 3ನೇ ಮಹಡಿಯಲ್ಲಿ ನಿಲುಗಡೆಯಾಯಿತು' ಎಂದು ವೈದ್ಯಕೀಯ ಅಧೀಕ್ಷಕ ಡಾ.ಶಿವಕುಮಾರ ಸಿ.ಎಸ್. 'ಪ್ರಜಾವಾಣಿ'ಗೆ ತಿಳಿಸಿದರು.

ನೀರಾವರಿ ಯೋಜನೆ: ಬಿಡುಗಡೆಯಾಗದ ಅನುದಾನ

ಕೇಂದ್ರ ಅನುದಾನ ಬಿಡುಗಡೆ ಮಾಹಿತಿ ಕುರಿತು ವಿಧಾನಸೌಧದಲ್ಲಿ ಹಿರಿಯ ಅಧಿಕಾರಿಗಳ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ವಿವಿಧ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಅನುದಾನ ಹಂಚಿಕೆ ಮಾಡುತ್ತಿದ್ದರೂ, ಜಲಸಂಪನ್ಮೂಲ, ಸಣ್ಣನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಯೋಜನೆಗಳಿಗೆ ಘೋಷಿತ ಅನುದಾನ ಬಿಡುಗಡೆ ಆಗುತ್ತಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

2024–25 ಮತ್ತು 2025–26ನೇ ಸಾಲಿನ ಅಭಿವೃದ್ಧಿ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದ ಅನುದಾನ ಬಿಡುಗಡೆ ಮಾಹಿತಿ ಕುರಿತು ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಮತ್ತು ರಾಜ್ಯ ನೀತಿ ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ ನೇತೃತ್ವದಲ್ಲಿ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳ ಸಭೆ ಮಂಗಳವಾರ ನಡೆಯಿತು.

ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ ಮಾತನಾಡಿ, ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರದ ಘೋಷಿತ ಅನುದಾನ ಬಿಡುಗಡೆ ಆಗುತ್ತಿಲ್ಲ. ಹೀಗಾಗಿ, ರಾಜ್ಯದ ನೀರಾವರಿ ಯೋಜನೆಗಳು ಬಹಳ ವರ್ಷಗಳಿಂದ ನನೆಗುದಿಗೆ ಬಿದ್ದಿವೆ ಎಂದರು.

ಬಿ.ಆರ್.ಪಾಟೀಲ ಮತ್ತು ಟಿ.ಬಿ.ಜಯಚಂದ್ರ ಅವರು ವಿಧಾನಸೌಧದಲ್ಲಿ ಹಿರಿಯ ಅಧಿಕಾರಿಗಳ ಸಭೆ ನಡೆಸಿದರು

ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಕೇಂದ್ರ ಸರ್ಕಾರ ಘೋಷಣೆ ಮಾಡಿದ್ದರೂ, ₹5,600 ಕೋಟಿಯಲ್ಲಿ ಒಂದು ರೂಪಾಯಿಯನ್ನೂ ಈವರೆಗೆ ಬಿಡುಗಡೆ ಮಾಡಿಲ್ಲ ಎಂದು ಅವರು ಹೇಳಿದರು.

ಕೃಷ್ಣಾ ಮತ್ತು ತುಂಗಭದ್ರಾ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ನೆರೆಯ ತೆಲಂಗಾಣ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆ. ಆದರೆ, ಆಂಧ್ರ ಪ್ರದೇಶ ಸರ್ಕಾರ ನಕರಾತ್ಮಕ ಧೋರಣೆ ತಾಳಿದೆ. ಹೀಗಾಗಿ ನೀರಾವರಿ ಯೋಜನೆ ವಿಳಂಬವಾಗಿದೆ. ಕೇಂದ್ರ ಜಲ ಸಂಪನ್ಮೂಲ ಸಚಿವರು ಸಭೆ ಕರೆದರೂ ಆಂಧ್ರಪ್ರದೇಶದಿಂದ ಯಾರೂ ಭಾಗ ವಹಿಸುತ್ತಿಲ್ಲ. ತಮಿಳುನಾಡು ಕೂಡಾ ಕರ್ನಾಟಕದ ಯೋಜನೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿಲ್ಲ. ಮುಂದಿನ ದಿನಗಳಲ್ಲಿ ಕೇಂದ್ರದ ಮೇಲೆ ಒತ್ತಡ ಹೇರಿ, ಆಂಧ್ರ ಮತ್ತು ತಮಿಳುನಾಡು ಸರ್ಕಾರಗಳು ರಾಜ್ಯದ ಯೋಜನೆಗಳಿಗೆ ಒಪ್ಪಿಗೆ ಸೂಚಿಸುವಂತೆ ಮಾಡಬೇಕು ಎಂದು ತಿಳಿಸಿದರು.

ರಾಜ್ಯದ ರೈಲ್ವೆ ಯೋಜನೆಗಳಿಗೆ ಹಣಕಾಸಿನ ಕೊರತೆ ಆಗುತ್ತಿಲ್ಲ. ಕೇಂದ್ರ ಭೂಸಾರಿಗೆ ಮತ್ತು ರಸ್ತೆ ಅಭಿವೃದ್ಧಿ ಇಲಾಖೆಯೂ ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ಮೇಲ್ದರ್ಜೆಗೇರಿಸಲು ಅಗತ್ಯವಿರುವಷ್ಟು ಹಣ ಬಿಡುಗಡೆ ಮಾಡುತ್ತಿದೆ ಎಂದರು.

ಸಣ್ಣ ನೀರಾವರಿ ಇಲಾಖೆ ಕಾರ್ಯದರ್ಶಿ ಬಿ.ಕೆ. ಪವಿತ್ರ ಮಾತನಾಡಿ, ಪಿಎಂಕೆಎಸ್‌ವೈ ಯೋಜನೆಯಡಿ 1036 ಯೋಜನೆಗಳಿಗೆ ₹2434 ಕೋಟಿಯನ್ನು ಕೇಂದ್ರ ನೀಡಬೇಕು. ರಾಜ್ಯದ ಪ್ರಸ್ತಾವಿತ 172 ಹೊಸ ಯೋಜನೆಗಳಿಗೆ ₹475 ಕೋಟಿ ನೀಡಬೇಕಾಗಿದೆ ಎಂದರು.

ರಾಜ್ಯದಲ್ಲಿ 28 ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಪ್ರಗತಿಯಲ್ಲಿವೆ. 13 ಕೈಗಾರಿಕಾ ವಲಯಗಳಿಗೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಇದಕ್ಕೆ ಸಕಾಲದಲ್ಲಿ ಕೇಂದ್ರದಿಂದ ಹಣ ಬಿಡುಗಡೆ ಆಗುತ್ತಿದೆ. ಕೆಲವೆಡೆ ಭೂಸ್ವಾಧೀನ ಸಮಸ್ಯೆ ಆಗಿದ್ದು, ಇದರಿಂದ ತಡವಾಗುತ್ತಿದೆ ಎಂದು ಲೋಕೋಪಯೋಗಿ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಶಾಂತಕುಮಾರ್ ಮಾಹಿತಿ ನೀಡಿದರು.

> ರಾಜ್ಯದಲ್ಲಿ ನಿರ್ಮಾಣಗೊಳ್ಳುತ್ತಿರುವ 5 ಫುಡ್ ಪಾರ್ಕ್‌ಗಳಿಗೆ ಹಣಕಾಸಿನ ನೆರವು ನೀಡಿ ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು
> **ಟಿ.ಬಿ.ಜಯಚಂದ್ರ**, ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ

> ರಾಜ್ಯದ ಗಡಿ ಪ್ರದೇಶಗಳಿಗೆ ಹೊಂದಿಕೊಂಡಿರುವ ಎಲ್ಲ ರಾಷ್ಟ್ರೀಯ ಹೆದ್ದಾರಿಗಳನ್ನು ನಿಗದಿತ ಕಾಲಮಿತಿಯಲ್ಲಿ ಅಭಿವೃದ್ಧಿಪಡಿಸಬೇಕು
> **ಬಿ.ಆರ್.ಪಾಟೀಲ,** ಉಪಾಧ್ಯಕ್ಷ ರಾಜ್ಯ ನೀತಿ ಹಾಗೂ ಯೋಜನಾ ಆಯೋಗ

'ಗುತ್ತಿಗೆದಾರರಿಗೆ ಬಾಕಿ ಹಣ ಶೀಘ್ರ ಬಿಡುಗಡೆ'

ಬೆಂಗಳೂರು: 'ಸರ್ಕಾರದಿಂದ ಗುತ್ತಿಗೆದಾರರಿಗೆ ಒಟ್ಟು ₹ 32 ಸಾವಿರ ಕೋಟಿ ಬಿಡುಗಡೆಗೆ ಬಾಕಿಯಿದೆ. 2–3 ತಿಂಗಳಲ್ಲಿ ಈ ಹಣವನ್ನು ಬಿಡುಗಡೆ ಮಾಡುವುದಾಗಿ' ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮನ್ನು ಭೇಟಿ ಮಾಡಿದ ಗುತ್ತಿಗೆದಾರರ ಸಂಘದ ನಿಯೋಗಕ್ಕೆ ಮಂಗಳವಾರ ಭರವಸೆ ನೀಡಿದ್ದಾರೆ.

'ನಾವು ಕಾದು ನೋಡುತ್ತೇವೆ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಅವರು ಹೇಳಿದರು.

ಹಲವೆಡೆ ಗುಡುಗು ಸಹಿತ ಮಳೆ

ಒಂದನೇ ಪುಟದಿಂದ...

ಮುಳ್ಳಯ್ಯನಗಿರಿ ವ್ಯಾಪ್ತಿಯಲ್ಲಿ ಸಂಜೆ ಶುರುವಾದ ಮಳೆ ಭೋರ್ಗರೆದು ಅಬ್ಬರಿಸಿತು. ಚಿಕ್ಕಮಗಳೂರು ನಗರದಲ್ಲೂ ಅರ್ಧ ಗಂಟೆಗೂ ಹೆಚ್ಚು ಕಾಲ ಸುರಿಯಿತು. ನರಸಿಂಹರಾಜಪುರ ತಾಲ್ಲೂಕಿನ ಹಂದೂರಿನಲ್ಲಿ ಭಾರಿ ಮಳೆ ಸುರಿದಿದ್ದು, ಬಿರುಗಾಳಿಗೆ ಮರ ಬಿದ್ದು ಬೈಕ್ ಜಖಂ ಆಗಿದೆ. ಹಲವು ಮರಗಳು ಉರುಳಿವೆ.

ರಾಯಚೂರು ಜಿಲ್ಲೆಯ ಸಿಂಧನೂರು, ಲಿಂಗಸುಗೂರು, ಮುದಗಲ್, ಕವಿತಾಳ, ಬೀದರ್ ನಗರ, ಔರಾದ್, ಚಿಟಗುಪ್ಪ ಹಾಗೂ ಹುಮನಾಬಾದ್ ತಾಲ್ಲೂಕಿನ ಕೆಲವೆಡೆ ಮಳೆ ಬಿದ್ದಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಗುಡುಗು ಸಿಡಿಲು, ಆಲಿಕಲ್ಲು ಸಹಿತ ಮಳೆಯಾಗಿದೆ. ಬಳ್ಳಾರಿ ನಗರದಲ್ಲಿ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿತ್ತು. ಬಳ್ಳಾರಿ ತಾಲ್ಲೂಕಿನ ಸಂಜೀವರಾಯನ ಕೋಟೆಯಲ್ಲಿ ಮನೆಗೆ ಹಾನಿಯಾಗಿದೆ.

ವಿಜಯಪುರ, ನಾಲತವಾಡದಲ್ಲಿ ಗುಡುಗು, ಸಿಡಿಲಿನೊಂದಿಗೆ ಧಾರಾಕಾರ ಮಳೆಯಾಗಿದೆ. ಆಲಮಟ್ಟಿಯಲ್ಲಿ ವಿದ್ಯುತ್ ಗೋಪುರ ಮತ್ತು ಕಂಬಗಳು ಉರುಳಿದ್ದು, ಬಹುತೇಕ ಕಡೆ ತಗಡಿನ ಶೆಡ್‌ಗಳು ಹಾರಿಹೋಗಿವೆ. ಗಾಳಿ, ಮಳೆಗೆ ಮರಗಳು ನೆಲಕ್ಕುರುಳಿವೆ.

ಬೆಳಗಾವಿಯಲ್ಲಿ ಸಾಧಾರಣ ಮಳೆಯಾದರೆ, ಜಿಲ್ಲೆಯ ರಾಮದುರ್ಗದಲ್ಲಿ ಒಂದು ಗಂಟೆ ಧಾರಾಕಾರ ಮಳೆ ಸುರಿದಿದೆ. ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗ ಹಾಗೂ ಘಟ್ಟದ ಮೇಲಿನ ಕೆಲ ತಾಲ್ಲೂಕುಗಳಲ್ಲಿ ಮಳೆ ಸುರಿದಿದೆ.

ಬಾಗಲಕೋಟೆ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಗುಡುಗು, ಸಿಡಿಲು ಸಹಿತ ಮಳೆ ಆಗಿದೆ. ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನಲ್ಲಿ ಒಂದು ತಾಸು ಮಳೆಯಾಗಿದೆ. ಹುಬ್ಬಳ್ಳಿಯಲ್ಲಿ ರಾತ್ರಿ ಧಾರಾಕಾರ ಮಳೆಯಾಗಿದೆ.

ದಾವಣಗೆರೆ ವರದಿ: ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಸಿಡಿಲು–ಗುಡುಗು ಸಹಿತ ಜೋರು ಮಳೆ ಸುರಿಯಿತು. ಜಿಲ್ಲೆಯ ಜಗಳೂರು ತಾಲ್ಲೂಕಿನಲ್ಲಿ ಬೆಳಿಗ್ಗೆ ಹದವಾದ ಮಳೆ ಸುರಿದ ಕಾರಣ ಹಳ್ಳ- ಕೊಳ್ಳಗಳಲ್ಲಿ ನೀರು ತುಂಬಿ ಹರಿಯಿತು. ನ್ಯಾಮತಿ ತಾಲ್ಲೂಕಿನಲ್ಲಿ ಗುಡುಗು, ಗಾಳಿ ಸಮೇತ ಉತ್ತಮ ಮಳೆ ಸುರಿಯಿತು. ಚನ್ನಗಿರಿ, ಸಂತೇಬೆನ್ನೂರು ಸುತ್ತಮುತ್ತಲಿನ ಹಳ್ಳಿಗಳಲ್ಲೂ ಮಳೆರಾಯ ಆರ್ಭಟಿಸಿದ.

ಚಿತ್ರದುರ್ಗ ಜಿಲ್ಲೆಯ ಚಿಕ್ಕಜಾಜೂರಿನಲ್ಲಿ ಗುಡುಗು ಸಿಡಿಲು ಸಹಿತ 20 ನಿಮಿಷ ಹದವಾದ ಮಳೆ ಸುರಿಯಿತು. ಶಿವಮೊಗ್ಗ ಜಿಲ್ಲೆಯ ರಿಪ್ಪನ್‌ಪೇಟೆ, ಕೋಣಂದೂರು ಹಾಗೂ ಅನವಟ್ಟಿ ಸುತ್ತಮುತ್ತಲಿನ ಭಾಗದಲ್ಲಿ ಉತ್ತಮ ಮಳೆಯಾಯಿತು.

ಉಡುಪಿ ವರದಿ: ಜಿಲ್ಲೆಯ ವಿವಿಧೆಡೆ ಮಂಗಳವಾರ ರಾತ್ರಿ ಸುಮಾರು ಅರ್ಧಗಂಟೆಗೂ ಹೆಚ್ಚು ಗುಡುಗು ಸಹಿತ ಮಳೆಯಾಗಿದೆ. ಕುಂದಾಪುರ ನಗರ ಹಾಗೂ ಸುತ್ತಮತ್ತಲಿನ ಪ್ರದೇಶದಲ್ಲಿ ಗುಡುಗು ಸಹಿತ ಜೋರಾಗಿ ಮಳೆ ಸುರಿದಿದೆ. ಉಡುಪಿ ನಗರ ವ್ಯಾಪ್ತಿಯಲ್ಲಿ ಸಾಧಾರಣ ಮಳೆಯಾಗಿದೆ.

ಸಿಡಿಲಿಗೆ 11 ಮಂದಿ ಸಾವು

ಒಂದನೇ ಪುಟದಿಂದ...

ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಹರ್ವಾಪುರ ಗ್ರಾಮದ ಹತ್ತಿರ ಜಮೀನಿನಲ್ಲಿ ಸಿಡಿಲು ಬಡಿದು ಲಿಂಗಪ್ಪ ರಾಮಣ್ಣ ಹಿರೇಕುರುಬರ (35) ಎಂಬವರು ಮೃತಪಟ್ಟಿದ್ದಾರೆ. ಅವರಿಗೆ ಸೇರಿದ ಎತ್ತೂ ಮೃತಪಟ್ಟಿದೆ.

ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ಹುಲಿಹೈದರ ಗ್ರಾಮದಲ್ಲಿ ಸಿಡಿಲು ಬಡಿದು ರೈತ ಯಂಕಪ್ಪ ಜಾಡಿ (45) ಮೃತಪಟ್ಟಿದ್ದಾರೆ. ವ್ಯಕ್ತಿ ಜತೆಗೆ ಅಂದಾಜು ₹1 ಲಕ್ಷ ಮೌಲ್ಯದ ಎತ್ತು ಕೂಡ ಮೃತಪಟ್ಟಿದೆ.

ಕಾರಟಗಿ ತಾಲ್ಲೂಕಿನ ಮೈಲಾಪುರದಲ್ಲಿ ಬಸನಗೌಡ ಮುದಕನಗೌಡ ಅಂಚಿನಮನಿ (40) ಎಂಬ ರೈತ ಸಿಡಿಲಿನಿಂದ ಸಾವಿಗೀಡಾದರು.

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಗೆದ್ಲಹಳ್ಳಿಯಲ್ಲಿ ಸಿಡಿಲು ಬಡಿದು ಲೋಕೇಶಪ್ಪ (48) ಎಂಬವರು ಮೃತಪಟ್ಟಿದ್ದಾರೆ. ಕುರಿ ಮೇಯಿಸಲು ಹೋಗಿದ್ದ ಲೋಕೇಶಪ್ಪ ಅವರಿಗೆ ಹೊಲದ ಬಳಿ ಸಿಡಿಲು ಬಡಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬೆಳಗಾವಿ
ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ
E-mail:preckdee@gmail.com ಕಚೇರಿ ದೂರವಾಣಿ/ಫ್ಯಾಕ್ಸ್ ಸಂಖ್ಯೆ: 08338–272131

ಕ್ರ.ಸಂ:ಕಾನಿಅ/ಪಂರಾಇಂ/ಚಿವಿ/ಡಿಬಿ/ಕೆಪಿಪಿಪಿ/2024–25/654 ದಿನಾಂಕ: 09.05.2025

(ಕೆಪಿಪಿಪಿ ಅಲ್ಪಾವಧಿ ಟೆಂಡರ ಪ್ರಕಟಣೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಚಿಕ್ಕೋಡಿ ಇವರು KW-1, KW-2, KW-3, KW-4 (Standard Tender Document) ನಿಬಂಧನೆಗೊಳಪಟ್ಟಂತೆ ಪಂಚಾಯತ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ಸಿವ್ಹಿಲ್ ನೋಂದಾಯಿತ ಹಾಗೂ ಇ-ಗುತ್ತಿಗೆ ಕುರಿತು ಕೆಪಿಪಿಪಿ ಇವರಿಂದ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿಧ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ-ಟೆಂಡರ ಆಹ್ವಾನಿಸಲಾಗಿದೆ.

1)	Last date of request for issue of blank e-bid document through e-procurement Date: Other works	09.05.2025 TO 20.05.2025
2)	Bid Closing & Submission Date	20.05.2025 AT 4.00 PM
3)	Financial Bid Opening Date:	22.05.2025 AT 11.00 AM
4)	Pre-Bid Meeting Date: (KW-3 Works Only)	21.05.2025 AT 5.00 PM
5)	Technical Bid Opening Date: (KW-3 Works Only)	22.05.2025 AT 11.00 AM
6)	Financial Bid Opening Date : (KW-3 Works only)	24.05.2025 AT 11.00 AM

General Works Indent No's	14291. 14296. 14290, 14324, 14323, 13777, 13778, 13779, 14315, 13843 13862, 13845, 13852, 13725, 13724, 13794, 13824, 10729, 13900, 7988 7985, 10952, 8002, 7986, 7992, 7993
SC Works Indent No's	14301, 14299, ,13372, 14325, 13858, 13823
ST Works Indent No's	14297, 13308, 12944, 13801
Category 1 Works Indent No's	14314, 13800,
Category 2 A Works Indent No's	14293, 12962, 13860, 13723, 13822, 13164, 13167

RDPR/2024-25/IND4866, 9th Call	RDPR/2024-25/IND4839, 9th Call	RDPR/2024-25/IND4906, 9th Call
RDPR/2024-25/IND4908, 9th Call	RDPR/2024-25/IND4914, 9th Call	RDPR/2024-25/IND4899, 9th Call
RDPR/2024-25/IND4896, 9th Call	RDPR/2024-25/IND5281, 7th Call	RDPR/2024-25/IND5282, 8th Call
RDPR/2024-25/IND8882	RDPR/2024-25/SE2265, 3rd Call	

1)	Last date of request for issue of blank e-bid document through e-procurement Date: Other works	09.05.2025 to 26.05.2025
2)	Bid Closing & Submission Date	26.05.2025 AT 04.00 PM
3)	Financial Bid Opening Date:	28.05.2025 AT 11.00 AM
4)	Pre-Bid Meeting Date: (KW-3 Works Only)	23.05.2025 AT 05.00 PM
5)	Technical Bid Opening Date: (KW-3 Works Only)	28.05.2025 AT 11.00 AM
6)	Financial Bid Opening Date : (KW-3 Works only)	30.05.2025 AT 11.00 AM

General Works Indent No's	14490, 14502, 14497, 14492, 14501, 14491, 14499, 14036, 14456, 14454 14455, 14590, 14461, 13351
SC Works Indent No's	14493, 14500, 14034, 14035
ST Works Indent No's	14498, 13566
Category 1 Works Indent No's	
Category 2 A Works Indent No's	14489, 14494, 14486, 14038

ಕಾಮಗಾರಿಗಳ ವಿವರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ್ https://kppp.karnataka.giv.in/ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಪಂ ರಾಜ್.ಇಂ. ವಿಭಾಗ, ಚಿಕ್ಕೋಡಿ

DIPO/RO NO. 226/2025-26

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಧಾರವಾಡ
ಫೋ: (0836)2213838 Email: eedharwad@gmail.com

ನಂ.ಎಚ್.ಡಿಎಂಸಿ/66/07/02/2025–26 ದಿನಾಂಕ:– 13–05–2025

ಇ–ಟೆಂಡರ ಅಧಿಸೂಚನೆ

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸನ್ 2024–25 ಹಾಗೂ 2025–26ನೇ ಸಾಲಿನ ಪಾಲಿಕೆ ಸದಸ್ಯರ ಹಾಗೂ ಮಹಾಪೌರರ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಟೆಂಡರ ಆಹ್ವಾನಿಸಲಾಗಿದ್ದು, PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಈ ಕೆಳಕಂಡ ಕಾಮಗಾರಿಗಳ ಟೆಂಡರನಲ್ಲಿ ಭಾಗವಹಿಸಬಹುದು.

ಮಹಾಪೌರರ ಅನುದಾನ
1) ಇಂಡೆಂಟ ನಂ: 37947/4.20ಲಕ್ಷ/ಸಾಮಾನ್ಯ 2) ಇಂಡೆಂಟ ನಂ: 37871/12.00ಲಕ್ಷ/ ಪರಿಶಿಷ್ಟ ಪಂಗಡ
ವಾರ್ಡ ಸದಸ್ಯರ ಅನುದಾನ
3) ಇಂಡೆಂಟ ನಂ: 31984/14.00 ಲಕ್ಷ/ ಸಾಮಾನ್ಯ 4) ಇಂಡೆಂಟ ನಂ: 30752/6.50 ಲಕ್ಷ/ಸಾಮಾನ್ಯ
5) ಇಂಡೆಂಟ ನಂ: 12614/ 5.20 ಲಕ್ಷ/ಸಾಮಾನ್ಯ 6) ಇಂಡೆಂಟ ನಂ: 30753/9.00 ಲಕ್ಷ/ಸಾಮಾನ್ಯ
7) ಇಂಡೆಂಟ ನಂ: 30751/8.00 ಲಕ್ಷ/ಸಾಮಾನ್ಯ 8) ಇಂಡೆಂಟ ನಂ: 35869/10.00 ಲಕ್ಷ/ಸಾಮಾನ್ಯ
9) ಇಂಡೆಂಟ ನಂ: 38581/16.00 ಲಕ್ಷ/ಸಾಮಾನ್ಯ 10) ಇಂಡೆಂಟ ನಂ: 38594/7.00 ಲಕ್ಷ/ಸಾಮಾನ್ಯ
11) ಇಂಡೆಂಟ ನಂ: 38564/ 8.80 ಲಕ್ಷ/ಪ್ರವರ್ಗ–2ಎ 12) ಇಂಡೆಂಟ ನಂ: 38565/6.90 ಲಕ್ಷ/ಸಾಮಾನ್ಯ
13) ಇಂಡೆಂಟ ನಂ: 33613/2.60 ಲಕ್ಷ/ಸಾಮಾನ್ಯ 14) ಇಂಡೆಂಟ ನಂ. 38575/4.00 ಲಕ್ಷ/ಸಾಮಾನ್ಯ
15) ಇಂಡೆಂಟ ನಂ: 38570/25.00 ಲಕ್ಷ/ಸಾಮಾನ್ಯ 16) ಇಂಡೆಂಟ ನಂ: 34046/4.80 ಲಕ್ಷ/ಸಾಮಾನ್ಯ
17) ಇಂಡೆಂಟ ನಂ: 38496/4.33 ಲಕ್ಷ/ಪ್ರವರ್ಗ–2ಎ 18) ಇಂಡೆಂಟ ನಂ: 38493/2.12 ಲಕ್ಷ/ಸಾಮಾನ್ಯ
19) ಇಂಡೆಂಟ ನಂ: 33733/5.00 ಲಕ್ಷ/ಸಾಮಾನ್ಯ 20) ಇಂಡೆಂಟ ನಂ. 38587/35.15 ಲಕ್ಷ/ಪ್ರವರ್ಗ–2ಎ
21) ಇಂಡೆಂಟ ನಂ: 38597/23.51 ಲಕ್ಷ/ಪರಿಶಿಷ್ಟ ಜಾತಿ 22) ಇಂಡೆಂಟ ನಂ: 34925/30.00 ಲಕ್ಷ/ಸಾಮಾನ್ಯ
23) ಇಂಡೆಂಟ ನಂ: 30551/4.90 ಲಕ್ಷ/ಸಾಮಾನ್ಯ 24) ಇಂಡೆಂಟ ನಂ: 31894 / 7.68 ಲಕ್ಷ/ಸಾಮಾನ್ಯ
25) ಇಂಡೆಂಟ ನಂ: 4184/14.52 ಲಕ್ಷ/ಸಾಮಾನ್ಯ 26) ಇಂಡೆಂಟ ನಂ: 36975/22.29 ಲಕ್ಷ/ಪರಿಶಿಷ್ಟ ಪಂಗಡ
27) ಇಂಡೆಂಟ ನಂ: 4391/6.00 ಲಕ್ಷ/ಸಾಮಾನ್ಯ 28) ಇಂಡೆಂಟ ನಂ: 32469/10.35 ಲಕ್ಷ/ಸಾಮಾನ್ಯ
29) ಇಂಡೆಂಟ ನಂ: 25574/4.19 ಲಕ್ಷ/ಸಾಮಾನ್ಯ 30) ಇಂಡೆಂಟ ನಂ: 29092/26.00 ಲಕ್ಷ/ಸಾಮಾನ್ಯ
31) ಇಂಡೆಂಟ ನಂ: 38288/23.53 ಲಕ್ಷ/ಸಾಮಾನ್ಯ 32) ಇಂಡೆಂಟ ನಂ: 29094/26.00 ಲಕ್ಷ/ಸಾಮಾನ್ಯ
33) ಇಂಡೆಂಟ ನಂ: 39876/15.00 ಲಕ್ಷ/ಸಾಮಾನ್ಯ 34) ಇಂಡೆಂಟ ನಂ: 39861/10.00 ಲಕ್ಷ/ಸಾಮಾನ್ಯ
35)ಇಂಡೆಂಟ ನಂ: 38479/4.00 ಲಕ್ಷ/ಸಾಮಾನ್ಯ 36) ಇಂಡೆಂಟ ನಂ: DMA/2024-25/PREQUAL_ TENDER_NUMBER_104/161.5ಲಕ್ಷ/ಸಾಮಾನ್ಯ 37) ಇಂಡೆಂಟ ನಂ: DMA/2024-25/SE4449 130.00 ಲಕ್ಷ/ಸಾಮಾನ್ಯ.

ಒಟ್ಟು 37 ಕಾಮಗಾರಿಗಳು **ಮೊತ್ತ ರೂ. 710.07 ಲಕ್ಷಗಳಿಗೆ** ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು ಧಾರವಾಡ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. **ದೂರವಾಣಿ ಸಂಖ್ಯೆ: 0836–2213838** ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://www.kppp.karnataka.gov.in ರಲ್ಲಿ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ–ಪ್ರೊಕ್ಯೂರಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರ ಇ–ಪ್ರೊಕ್ಯೂರಮೆಂಟ್‌ನಲ್ಲಿ **ಅ.ನಂ. 1 ರಿಂದ 37** ರವರೆಗೆ **ದಿನಾಂಕ: 14–05–2025** ರಿಂದ ಪಡೆಯಬಹುದಾಗಿದೆ.

ಈ ಮೇಲಿನ ಕಾಮಗಾರಿಗಳಿಗೆ (1 ರಿಂದ 34)
(1) ಟೆಂಡರ ಸ್ವೀಕರಿಸುವ ಕೊನೆಯ **ದಿನಾಂಕ: 30–05–2025** ಸಂಜೆ **5:00** ಗಂಟೆ (2) ಟೆಂಡರ ತೆರೆಯುವ **ದಿನಾಂಕ: 31–05–2025** ಸಂಜೆ **5:30** ಗಂಟೆ
ಈ ಮೇಲಿನ ಕಾಮಗಾರಿಗಳಿಗೆ (35 ರಿಂದ 37 ಕ್ಕೆ)
(1) ಟೆಂಡರ ಸ್ವೀಕರಿಸುವ ಕೊನೆಯ **ದಿನಾಂಕ: 21–5–2025** ಸಂಜೆ **5:00** ಗಂಟೆ (2) ಟೆಂಡರ ತೆರೆಯುವ **ದಿನಾಂಕ: 22–5–2025** ಸಂಜೆ **5:30** ಗಂಟೆ (3) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 23–05–2025** ಸಂಜೆ **5:00** ಗಂಟೆ

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಧಾರವಾಡ.

ವಾ.ಸಾ.ಇ/ಧಾರವಾಡ/155/ದೇಶಪಾಂಡೆಪಬ್ಲಿಸಿಟಿ/2025–26

ವಿಷಯುಕ್ತ ಮದ್ಯ ಕುಡಿದು 21 ಜನರ ಸಾವು

ಅಮೃತಸರದ ಮರಾರಿ ಕಲಾನ್ ಗ್ರಾಮದಲ್ಲಿ ವಿಷಯುಕ್ತ ಮದ್ಯ ಕುಡಿದು ಸಾವಿಗೀಡಾದ ವ್ಯಕ್ತಿಯೊಬ್ಬರ ಕುಟುಂಬದ ಸದಸ್ಯರ ರೋದನ ಪಿಟಿಐ ಚಿತ್ರ

ಚಂಡೀಗಢ/ಅಮೃತಸರ (ಪಿಟಿಐ): ಪಂಜಾಬ್‌ನ ಅಮೃತಸರ ಜಿಲ್ಲೆಯ ಮಜೀಠಿಯಾ ಪ್ರದೇಶದಲ್ಲಿ ವಿಷಯುಕ್ತ ಮದ್ಯ ಕುಡಿದು 21 ಮಂದಿ ಮೃತಪಟ್ಟಿದ್ದಾರೆ.

ಸಾವಿಗೀಡಾದವರಲ್ಲಿ ಬಹುತೇಕರು ದಿನಗೂಲಿ ಕಾರ್ಮಿಕರು. ವಿಷಯುಕ್ತ ಮದ್ಯ ಸೇವಿಸಿ ಅಸ್ವಸ್ಥಗೊಂಡ ಹಲವರನ್ನು ಆಸ್ಪತ್ರೆಗೆ ದಾಖಲಿಸಾಗಿದೆ. ದುರಂತಕ್ಕೆ ಸಂಬಂಧಿಸಿದಂತೆ 10 ಆರೋಪಿಗಳನ್ನು ಬಂಧಿಸಲಾಗಿದೆ.

ಎಥೆನಾಲ್ ಬದಲಿಗೆ ಕಡಿಮೆ ಬೆಲೆಯಲ್ಲಿ ಸಿಗುವ ಮೆಥೆನಾಲ್ ಅನ್ನು ಆನ್‌ಲೈನ್ ಮೂಲಕ ಖರೀದಿಸಿ ಮದ್ಯ ತಯಾರಿಸಲು ಬಳಸಲಾಗಿತ್ತು. ಇದರಿಂದಲೇ ಜನರ ಸಾವು ಸಂಭವಿಸಿವೆ ಎಂದು ಪೊಲೀಸರ ತನಿಖೆಯಲ್ಲಿ ಗೊತ್ತಾಗಿದೆ. ಸೂತ್ರಧಾರಿ ಸಾಹಿಬ್ ಸಿಂಗ್ ಮೆಥೆನಾಲ್ ಪೂರೈಕೆ ಮಾಡಿದ್ದರು. ನಿರ್ಲಕ್ಷ್ಯ ಆರೋಪದ ಮೇಲೆ ಡಿಎಸ್‌ಪಿ, ಸಬ್‌ಇನ್‌ಸ್ಪೆಕ್ಟರ್ ಅವರನ್ನು ಅಮಾನತು ಮಾಡಲಾಗಿದೆ ಎಂದು ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ತಿಳಿಸಿದ್ದಾರೆ. ದುರಂತದ ಸ್ಥಳಗಳಿಗೆ ವೈದ್ಯಕೀಯ ತಂಡಗಳನ್ನು ನಿಯೋಜಿಸಲಾಗಿದೆ.

ದುರಂತ ಸ್ಥಳಕ್ಕೆ ಭೇಟಿ ನೀಡಿದ ನಂತರ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್, 'ಇವು ಸಾವಲ್ಲ, ಕೊಲೆಗಳು. ಅಮಾಯಕರ ಸಾವಿಗೆ ಕಾರಣರಾದವರ ವಿರುದ್ಧ ಕ್ರಮಕೈಗೊಳ್ಳುತ್ತೇವೆ' ಎಂದು ಹೇಳಿದ್ದಾರೆ.

ಆಮ್ ಆದ್ಮಿ ಸರ್ಕಾರ ನಕಲಿ ಮದ್ಯದ ಜಾಲ ಮಟ್ಟಹಾಕುವಲ್ಲಿ ವಿಫಲವಾಗಿದೆ. ದುರಂತದ ಹೊಣೆ ಹೊತ್ತು ಮುಖ್ಯಮಂತ್ರಿ ಭಗವಂತ ಮಾನ್, ಅಬಕಾರಿ ಸಚಿವ ಹರ್ಪಲ್ ಸಿಂಗ್ ಚೀಮಾ ರಾಜೀನಾಮೆ ಕೊಡಬೇಕು ಎಂದು ವಿರೋಧ ಪಕ್ಷಗಳು ಆಗ್ರಹಿಸಿವೆ.

ಒಂದು ವರ್ಷದಲ್ಲಿ ಇದು ಎರಡನೇ ದೊಡ್ಡ ವಿಷಯುಕ್ತ ಮದ್ಯ ದುರಂತ. 2024ರ ಮಾರ್ಚ್‌ನಲ್ಲಿ 20 ಜನರು ಸಂಗ್ರೂರ್‌ನಲ್ಲಿ ಸಾವಿಗೀಡಾಗಿದ್ದರು.

ಆಂಧ್ರ ಪ್ರದೇಶ ಅಬಕಾರಿ ಹಗರಣ: ಯಳಂದೂರಿನಲ್ಲಿ ಆರೋಪಿ ಬಂಧನ

ಹೈದರಾಬಾದ್/ಚಾಮರಾಜನಗರ: ಆಂಧ್ರ ಪ್ರದೇಶದ ವೈಎಸ್‌ಆರ್‌ಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಅಬಕಾರಿ ಹಗರಣದ ಪ್ರಮುಖ ಆರೋಪಿ ಬಾಲಾಜಿ ಗೋವಿಂದಪ್ಪ ಅವರನ್ನು ಯಳಂದೂರು ತಾಲ್ಲೂಕಿನ ರೆಸಾರ್ಟ್‌ವೊಂದರಲ್ಲಿ ಆಂಧ್ರಪ್ರದೇಶ ಎಸ್‌ಐಟಿ ಮಂಗಳವಾರ ಬಂಧಿಸಿದೆ.

'ಆರೋಪಿಯನ್ನು ಯಳಂದೂರು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಹೆಚ್ಚಿನ ವಿಚಾರಣೆಗಾಗಿ ಆರೋಪಿಯನ್ನು ಎಸ್‌ಐಟಿ ವಶಕ್ಕೆ ನೀಡಿ ಕೋರ್ಟ್ ಆದೇಶಿಸಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ವೈಎಸ್‌ಆರ್‌ಪಿ ಮುಖ್ಯಸ್ಥ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಅವರ ಪತ್ನಿ ವೈ.ಎಸ್. ಭಾರತಿ ಅಧ್ಯಕ್ಷರಾಗಿರುವ ಭಾರತಿ ಸಿಮೆಂಟ್ ಪ್ರೈ.ಲಿ.ನ ಲೆಕ್ಕಪರಿಶೋಧಕ ಮತ್ತು ನಿರ್ದೇಶಕರಾಗಿ ಗೋವಿಂದಪ್ಪ ಕಾರ್ಯನಿರ್ವಹಿಸುತ್ತಿದ್ದಾರೆ.

ಜಗನ್ ಅವರ ವಿಶೇಷ ಕರ್ತವ್ಯಧಿಕಾರಿಯಾಗಿದ್ದ ಬಿ. ಕೃಷ್ಣಮೋಹನ್ ರೆಡ್ಡಿ, ಮುಖ್ಯ ಕಾರ್ಯದರ್ಶಿಯಾಗಿದ್ದ ಧನಂಜಯ್ ರೆಡ್ಡಿ ಮತ್ತು ಆಪ್ತರಾಗಿದ್ದ ಗೋವಿಂದಪ್ಪ ಅವರ ಹೆಸರನ್ನು ಎಸ್‌ಐಟಿ ಮೂರು ದಿನಗಳ ಮೊದಲು ಪ್ರಕರಣದಲ್ಲಿ ಸೇರಿಸಿ, ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿತ್ತು. ಆದರೆ ಮೂವರು ವಿಚಾರಣೆಗೆ ಹಾಜರಾಗಿರಲಿಲ್ಲ.

ಹವಾಮಾನ ಮುನ್ಸೂಚನೆ: ಮಂಗಳೂರಿನ ರೇಡಾರ್ ನೆರವು

ತಿರುವನಂತಪುರ(ಪಿಟಿಐ): ವಯನಾಡ್‌ನಲ್ಲಿ ಕಳೆದ ವರ್ಷ ಭಾರಿ ಮಳೆಗೆ ಭೂಕುಸಿತ ಸಂಭವಿಸಿ ಅಪಾರ ಹಾನಿಯಾಗಿದ್ದು ಜನರ ಮನದಿಂದ ಇನ್ನೂ ಮಾಸಿಲ್ಲ. ಭವಿಷ್ಯದಲ್ಲಿ ಇಂತಹ ಅವಘಡಗಳನ್ನು ತಡೆಯುವ ಉದ್ದೇಶದಿಂದ ಕರ್ನಾಟಕದ ಮಂಗಳೂರಿನಲ್ಲಿ ಹೊಸದಾಗಿ ಸ್ಥಾಪಿಸಿರುವ ರೇಡಾರ್‌ನ ನೆರವು ಪಡೆಯಲು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಮುಂದಾಗಿದೆ.

ವಯನಾಡ್ ಹಾಗೂ ಸುತ್ತಮುತ್ತಲ ಪ್ರದೇಶಕ್ಕೆ ಸಂಬಂಧಿಸಿ ಹವಾಮಾನ ಮುನ್ಸೂಚನೆ ವ್ಯವಸ್ಥೆಯನ್ನು ಮತ್ತಷ್ಟು ಉತ್ತಮಗೊಳಿಸುವುದು ಮಂಗಳೂರಿನಲ್ಲಿರುವ ರೇಡಾರ್ ಅನ್ನು ಬಳಸುವ ಉದ್ದೇಶವಾಗಿದೆ ಎಂದು ಇಲಾಖೆ ಮೂಲಗಳು ಹೇಳಿವೆ.

'ಸದ್ಯ 'ನೌಕಾಸ್ಟ್' ವ್ಯವಸ್ಥೆಯಡಿ ಹವಾಮಾನ ಕುರಿತು ಮಾಹಿತಿ ನೀಡಲಾಗುತ್ತಿದೆ. ಆಯಾ ಜಿಲ್ಲೆಗೆ ಸಂಬಂಧಪಟ್ಟಂತೆ ಮುನ್ಸೂಚನೆಗಳನ್ನು ನೀಡಲಾಗುವುದು. ಈ ನೂತನ ವ್ಯವಸ್ಥೆಯಿಂದ ನಿರ್ದಿಷ್ಟ ಸ್ಥಳ ಕುರಿತ ನಿಖರ ಮುನ್ಸೂಚನೆ ಸಾಧ್ಯವಾಗಲಿದೆ' ಎಂದು ಐಎಂಡಿಯ ಪ್ರಾದೇಶಿಕ ನಿರ್ದೇಶಕಿ ನೀತಾ ಕೆ.ಗೋಪಾಲ್ ಮಂಗಳವಾರ ಹೇಳಿದ್ದಾರೆ.

'ಕಾಸರಗೋಡು, ಕಣ್ಣೂರು, ಕೋಯಿಕ್ಕೋಡ್ ಹಾಗೂ ವಯನಾಡ್‌ನ ಕೆಲ ಭಾಗಗಳು ಸೇರಿ ಇಡೀ ಕೇರಳದ ಉತ್ತರ ಭಾಗಕ್ಕೆ ಸಂಬಂಧಿಸಿದ ಹವಾಮಾನ ವೈಪರೀತ್ಯ ಕುರಿತ ಮುನ್ಸೂಚನೆಯನ್ನು ಮಂಗಳೂರಿನಲ್ಲಿನ ರೇಡಾರ್ ಬಳಸಿ ನೀಡಲಾಗುವುದು. ಮಾಹಿತಿಯನ್ನು ಇಂಗ್ಲಿಷ್ ಹಾಗೂ ಮಲಯಾಳದಲ್ಲಿ ನೀಡಲಾಗುವುದು' ಎಂದೂ ಅವರು ಹೇಳಿದ್ದಾರೆ.

ನೈರುತ್ಯ ಮುಂಗಾರು ಚುರುಕು

ನವದೆಹಲಿ(ಪಿಟಿಐ): ಬಂಗಾಳ ಕೊಲ್ಲಿ, ನಿಕೋಬಾರ್ ದ್ವೀಪಗಳ ದಕ್ಷಿಣ ಭಾಗ ಹಾಗೂ ಅಂಡಮಾನ್ ದ್ವೀಪಗಳ ಉತ್ತರ ಭಾಗದಲ್ಲಿ ನೈರುತ್ಯ ಮುಂಗಾರು ಮಂಗಳವಾರ ಚುರುಕಾಗಿದೆ. ಇದರ ಪರಿಣಾಮ, ನಿಕೋಬಾರ್ ದ್ವೀಪಗಳಲ್ಲಿ ಕಳೆದ ಎರಡು ದಿನಗಳಲ್ಲಿ ಸಾಧಾರಣದಿಂದ ಭಾರಿ ಮಳೆ ಬಿದ್ದಿದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ತಿಳಿಸಿದೆ.

ನೈರುತ್ಯ ಮುಂಗಾರು ತೀವ್ರಗೊಳ್ಳಲು ಅನುಕೂಲವಾದ ಪರಿಸ್ಥಿತಿ ಸೃಷ್ಟಿಯಾಗಿದೆ. ವಾಡಿಕೆಯ ಜೂನ್ 1ರ ಬದಲಾಗಿ ಮೇ 27ರಂದೇ ನೈರುತ್ಯ ಮುಂಗಾರು ಕೇರಳ ಕರಾವಳಿ ಪ್ರವೇಶಿಸುವ ಸಾಧ್ಯತೆ ಹೆಚ್ಚಾಗಿದೆ ಎಂದು ಇಲಾಖೆ ಹೇಳಿದೆ.

ಬಂಗಾಳ ಕೊಲ್ಲಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಮೇಲೆ ಬೀಸುತ್ತಿರುವ ಪಶ್ಚಿಮಾಭಿಮುಖಿ ಮಾರುತಗಳು ಬಲ ಪಡೆದುಕೊಂಡಿವೆ. ಸಮುದ್ರ ಮಟ್ಟದಿಂದ 1.5 ಕಿ.ಮೀ ಎತ್ತರದಲ್ಲಿ ಗಂಟೆಗೆ 20 ನಾಟ್ಸ್ ವೇಗದಿಂದ ಬೀಸುತ್ತಿರುವ ಗಾಳಿ, ಕೆಲ ಪ್ರದೇಶಗಳಲ್ಲಿ 4.5 ಕಿ.ಮೀ ದಷ್ಟು ಎತ್ತರದಲ್ಲಿ ಬೀಸುತ್ತಿರುವುದು ಕಂಡುಬಂದಿದೆ.

ಈ ಪ್ರದೇಶದಲ್ಲಿ ಒಎಲ್‌ಆರ್ ಸೂಚ್ಯಂಕದಲ್ಲಿ ಇಳಿಕೆ ಕಂಡು ಬಂದಿದೆ. ಒಎಲ್‌ಆರ್, ಮೋಡಗಳು ರೂಪುಗೊಳ್ಳುವುದನ್ನು ಸೂಚಿಸುತ್ತದೆ. ಈ ಸೂಚ್ಯಂಕದಲ್ಲಿನ ಇಳಿಕೆಯು ಮುಂಗಾರು ಆರಂಭಕ್ಕೆ ಅನುಕೂಲಕರ ಸನ್ನಿವೇಶ ನಿರ್ಮಾಣವಾಗಿರುವುದನ್ನು ಹೇಳುತ್ತದೆ ಎಂದು ಇಲಾಖೆ ತಿಳಿಸಿದೆ.

ಈ ಎಲ್ಲ ವಿದ್ಯಮಾನಗಳ ಫಲವಾಗಿ, ಅರಬ್ಬಿ ಸಮುದ್ರದ ದಕ್ಷಿಣ ಭಾಗ, ಮಾಲ್ದೀವ್ಸ್ ಹಾಗೂ ಕೊಮೊರಿನ್ ಪ್ರದೇಶದತ್ತ ಮುಂಗಾರು ಮಾರುತಗಳು ಬೀಸುವುದಕ್ಕೆ ಅನುಕೂಲಕರ ಪರಿಸ್ಥಿತಿ ನಿರ್ಮಾಣವಾಗಿದೆ. ಬಂಗಾಳ ಕೊಲ್ಲಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಅಂಡಮಾನ್ ಸಾಗರದ ಉಳಿದ ಭಾಗದಲ್ಲಿ ಮುಂದಿನ 3–4 ದಿನಗಳಲ್ಲಿ ಮುಂಗಾರು ಮತ್ತಷ್ಟು ಚುರುಕಾಗಲಿದೆ ಎಂದಿದೆ.

ವಾಡಿಕೆಗಿಂತ ಮೊದಲೇ ಸಿಂಚನ

ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ, ಈ ಬಾರಿ ಮೇ 27ರಂದೇ ನೈರುತ್ಯ ಮುಂಗಾರು ಕೇರಳ ಪ್ರವೇಶಿಸುವ ಸಾಧ್ಯತೆ ಇದೆ. ಈ ಮುನ್ಸೂಚನೆಯಂತೆಯೇ ಸಂಭವಿಸಿದಲ್ಲಿ , 2009ರ ನಂತರ ದೇಶದ ಪ್ರಮುಖ ಭೂಭಾಗದಲ್ಲಿ ವಾಡಿಕೆಗಿಂತ ಮೊದಲೇ ಮುಂಗಾರು ಪ್ರವೇಶವಾದಂತಾಗಲಿದೆ. 2009ರಲ್ಲಿ ಮೇ 23ರಂದೇ ಮುಂಗಾರು ಕೇರಳ ಕರಾವಳಿ ಪ್ರವೇಶಿಸಿತ್ತು ಎಂದು ಇಲಾಖೆ ದತ್ತಾಂಶ ಹೇಳುತ್ತವೆ.

ಕಾಶ್ಮೀರ ವಿವಾದ: ನಿಲುವಿನಲ್ಲಿ ಬದಲಾವಣೆ ಇಲ್ಲ–ಭಾರತ

ನವದೆಹಲಿ (ಪಿಟಿಐ): 'ಕಾಶ್ಮೀರವು ಭಾರತ ಮತ್ತು ಪಾಕಿಸ್ತಾನದ ನಡುವಣ ವಿವಾದವಾಗಿದ್ದು, ಈ ಕುರಿತು ದ್ವಿಪಕ್ಷೀಯ ಚರ್ಚೆ ಮಾತ್ರ ಸಾಧ್ಯ. ಈ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಭಾರತ ಮಂಗಳವಾರ ಮತ್ತೆ ಪುನರುಚ್ಚರಿಸಿದೆ.

ಕಾಶ್ಮೀರ ವಿವಾದ ಇತ್ಯರ್ಥಕ್ಕೆ ಮಧ್ಯಸ್ಥಿಕೆ ವಹಿಸಲು ಸಿದ್ಧ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆಗೆ ಭಾರತ ಈ ಪ್ರತಿಕ್ರಿಯೆ ನೀಡಿದೆ.

'ಕಾಶ್ಮೀರ ವಿವಾದಕ್ಕೆ ಸಂಬಂಧಿಸಿ ಭಾರತ– ಪಾಕಿಸ್ತಾನವೇ ದ್ವಿಪಕ್ಷೀಯ ಚರ್ಚೆ ನಡೆಸಬೇಕು ಎಂಬುದು ಭಾರತದ ದೀರ್ಘ ಕಾಲದ ನಿಲುವು. ಇದರಲ್ಲಿ ಬದಲಾವಣೆ ಇಲ್ಲ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದರು.

ಅಣ್ವಸ್ತ್ರ ಯುದ್ಧ ಕುರಿತ ಟ್ರಂಪ್ ಅವರ ಹೇಳಿಕೆಗೆ ಜೈಸ್ವಾಲ್ ಅವರು, 'ಪಾಕಿಸ್ತಾನದ ವಿದೇಶಾಂಗ ಸಚಿವರೂ ಕೂಡಾ ಅಣ್ವಸ್ತ್ರ ಯುದ್ಧ ಕುರಿತ ಆಯಾಮವನ್ನು ಅಧಿಕೃತವಾಗಿಯೇ ತಳ್ಳಿಹಾಕಿದ್ದಾರೆ' ಎಂದು ಪ್ರತಿಕ್ರಿಯಿಸಿದರು.

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ–583101.
ದೂರವಾಣಿ ಸಂಖ್ಯೆ : 08392–273479 /278168
ಫ್ಯಾಕ್ಸ್ : 08392–273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂ:ಮನಪಾಬ/ಆ.ಶಾ/ವಾ.ವಿ/ಜೆಟ್ಟಿಂಗ್/ಬಿ.ಭಾ/ಖರೀದಿ/2025–26 ದಿನಾಂಕ: .05.2025

ಪತ್ರಿಕಾ ಪ್ರಕಟಣೆ

ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ಕೆಲಸಗಳ ನಿರ್ವಹಣೆಗಾಗಿ ಬಳಸುವ ವಾಹನಗಳಿಗೆ ಅವಶ್ಯವಿರುವ Sewer Jetting Hose ಹೊಸ ಪೈಪ್‌ಗಳನ್ನು ಈ ಕೆಳಕಂಡಂತೆ ಒದಗಿಸಲು ದಿನಾಂಕ: 13.05.2025ರ ಬೆಳಿಗ್ಗೆ 10.00 ಗಂಟೆಯಿಂದ ದಿನಾಂಕ:19.05.2025ರ ಸಂಜೆ 05:30 ಗಂಟೆ ಒಳಗಾಗಿ ತಲುಪುವಂತೆ ಕೊಟೇಶನ್ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ	ವಿವರ	ಪರಿಮಾಣ
1	1 Inch 60 Meeter Sewer jet Hose pipes	12
2	1 Inch nozzle for Sewer jet Hose pipes	12
3	¾ Inch 60 Meeter Sewer jet Hose pipes	12
4	¾ Inch nozzle for Sewer jet Hose pipes	12
	Total	48

ಷರತ್ತುಗಳು : 1. ಕೊಟೇಶನ್‌ಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು. 2. ದರಗಳನ್ನು ಎಲ್ಲಾ ತೆರಿಗೆಗಳು ಸೇರಿ ಸಲ್ಲಿಸತಕ್ಕದ್ದು. 3. ಅವಧಿ ಮೀರಿ ಬಂದ ಕೊಟೇಶನ್‌ಗಳನ್ನು ಪರಗಣಿಸಲಾಗುವುದಿಲ್ಲ 4. ಕೊಟೇಶನ್‌ಗಳನ್ನು ಒಪ್ಪುವ ಅಥವಾ ತಿರಿಸ್ಕರಿಸುವ ಅಧಿಕಾರ ಆಯುಕ್ತರು, ಮಹಾನಗರಪಾಲಿಕೆ ಬಳ್ಳಾರಿ ಇವರಿಗೆ ಇರುತ್ತದೆ. 5. ವಿಸ್ತೃತ ತಾಂತ್ರಿಕ ನಿರ್ಧಿಷ್ಟತೆಗಳಿಗಾಗಿ ಕಛೇರಿಯ ಇ–ಮೇಲ್: ka.ballari.cc@gmail.com ಅಥವಾ ಶ್ರೀ ಕಿರಣ್ ಕುಮಾರ್ ಪರಿಸರ ಅಭಿಯಂತರರು ಬಳ್ಳಾರಿ ಮಹಾನಗರಪಾಲಿಕೆ ಬಳ್ಳಾರಿ. (ದೂರವಾಣಿ ಸಂಖ್ಯೆ:9620095318) ರವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಆಯುಕ್ತರು
ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 26096832/26096910 ಇಮೇಲ್: purchase@kmf.coop

ಟೆಂಡರ್ ಪ್ರಕಟಣೆಗಳು (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ತನ್ನ ಘಟಕಗಳಲ್ಲಿನ ತುಂಡು ಗುತ್ತಿಗೆ ಕೆಲಸಗಳ ನಿರ್ವಹಣೆಗೆ ಎರಡು ವರ್ಷದ ಅವಧಿಗೆ ಗುತ್ತಿಗೆ ಕಾರ್ಮಿಕರನ್ನು ಒದಗಿಸಲು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.inಗೆ ಭೇಟಿ ನೀಡಿ ಪಡೆಯಬಹುದಾಗಿದೆ.

ಕ್ರ. ಸಂ.	ಟೆಂಡರ್ ಅಧಿಸೂಚನೆ ಸಂಖ್ಯೆ	ಘಟಕದ ಹೆಸರು	ಇ.ಎಂ.ಡಿ. (ರೂ.)
1	KMF/PUR/Tender-754/2025-26	ಪಶು ಆಹಾರ ಘಟಕ, ರಾಜಾನುಕುಂಟೆ	12,65,000/-
2	KMF/PUR/Tender-755/2025-26	ಪಶು ಆಹಾರ ಘಟಕ, ಗುಬ್ಬಿ	15,00,000/-
3	KMF/PUR/Tender-756/2025-26	ಪಶು ಆಹಾರ ಘಟಕ, ಹಾಸನ	15,73,000/-
4	KMF/PUR/Tender-757/2025-26	ಪಶು ಆಹಾರ ಘಟಕ, ಧಾರವಾಡ	12,36,000/-

1) ಟೆಂಡರ್ ಪ್ರಾರಂಭವಾಗುವ ದಿನಾಂಕ : 17.05.2025 ರಿಂದ. 2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 31.05.2025 ಬೆಳಿಗ್ಗೆ 11.00 ಗಂಟೆಗೆ. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 16.06.2025 ಸಂಜೆ 5.30 ಗಂಟೆಯ ಒಳಗಾಗಿ. 4) ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : 18.06.2025 ಬೆಳಿಗ್ಗೆ 11.00 ಗಂಟೆಗೆ. 5) ವಾಣಿಜ್ಯ ಟೆಂಡರ್ ತೆರಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ
YADGIRI INSTITUTE OF MEDICAL SCIENCES, YADGIRI-585 202
(Government of Karnataka, Autonomous Institution)
E-mail id: directorymsyadgir@gmail.com Mob:9481623299

ಸಂಖ್ಯೆ :ಯಿಮ್ಸ್/ ಆಡಳಿತ/ಟೆಂಡರ್//2025–26 ದಿನಾಂಕ:12–05–2025

::ಅಲ್ಪಾವಧಿ ಟೆಂಡರ್ ಪ್ರಕಟಣೆ ::ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್

ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2025–26ನೇ ಸಾಲೀನ ಟೆಂಡರ್.ಸಂ.1. ಮಾನವ ಸಂಪನ್ಮೂಲ 50 ಸ್ಟಾಫ್ ನರ್ಸ್ ಮತ್ತು 3 ಡಾಟಾ ಎಂಟ್ರಿ ಸಿಬ್ಬಂದಿಗಳನ್ನು ಒದಗಿಸಲು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಒದಗಿಸಲು ದಿನಾಂಕ:09–05–2025 ರಿಂದ 23–05–2025 ರವರೆಗೆ ಟೆಂಡರ್ ಕರೆಯಲಾಗಿದ್ದು ಟೆಂಡರ್.ಸಂ.2.ಯಿಮ್ಸ್ ಆಸ್ಪತ್ರೆಗೆ 70 ವಿವಿಧ ಗ್ರೂಪ್–ಸಿ ಹಾಗೂ ಗ್ರೂಪ್–ಡಿ ಸಿಬ್ಬಂದಿಗಳನ್ನು ಒದಗಿಸಲು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಒದಗಿಸಲು ದಿನಾಂಕ:12–05–2025 ರಿಂದ 26–05–2025ವರೆಗೆ ಟೆಂಡರ್ ಕರೆಯಲಾಗಿದ್ದು, ಅಲ್ಪಾವಧಿ ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಲ್ಲಿ – ದ್ವಿ ಲಕೋಟೆಯಲ್ಲಿ ಆಹ್ವಾನಿಸಿರುವ ಬಗ್ಗೆ.

ಕ್ರ ಸಂ	ಸಂಸ್ಥೆ	ವಿವರ	ಟೆಂಡರ್‌ನ ಅಂದಾಜು ಮೊತ್ತ ರೂ.	ಇ.ಎಂ.ಡಿ.ಮೊತ್ತ (2.5%)ರೂ.
1	ಡೀನ್ & ನಿರ್ದೇಶಕರು, ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ	DME/2025-26/SE0463 SHORT TERM TENDER FOR MAN POWER 53 YIMS, YADGIRI.	ರೂ. 1,40,00,000.00	ರೂ. 3,50,000.00
2	ಡೀನ್ & ನಿರ್ದೇಶಕರು, ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ	DME/2025-26/SE0464 SHORT TERM TENDER FOR MAN POWER 70 YIMS, YADGIRI	ರೂ. 1,40,00,000.00	ರೂ. 3,50,000.00

ಟೆಂಡರ್ ಪ್ರಕ್ರಿಯೆ ವಿವರ: ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka. gov.in ನಲ್ಲಿ ಪಡೆಯಬಹುದು.

ಸಹಿ/– ಡೀನ್ ಮತ್ತು ನಿರ್ದೇಶಕರು
ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/64/ಕೆ.ಎಸ್.ಎಂ.ಸಿ.&ಎ/2025–26

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 26096832/26096910 ಇಮೇಲ್: purchase@kmf.coop

ಟೆಂಡರ್ ಪ್ರಕಟಣೆಗಳು (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ತನ್ನ ಘಟಕಗಳಲ್ಲಿನ ತುಂಡು ಗುತ್ತಿಗೆ ಕೆಲಸಗಳ ನಿರ್ವಹಣೆಗೆ ಎರಡು ವರ್ಷದ ಅವಧಿಗೆ ಗುತ್ತಿಗೆ ಕಾರ್ಮಿಕರನ್ನು ಒದಗಿಸಲು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

ಕ್ರ. ಸಂ.	ಟೆಂಡರ್ ಅಧಿಸೂಚನೆ ಸಂಖ್ಯೆ	ಘಟಕದ ಹೆಸರು	ಇ.ಎಂ.ಡಿ. (ರೂ.)
1	KMF/PUR/Tender-745/2024-25	ಕಹಾಮ ಕೇಂದ್ರ ಕಛೇರಿ, ಬೆಂಗಳೂರು ಮಾರಾಟ ಮಳಿಗೆ ಮತ್ತು ನಂದಿನಿ ಹೈನುಗಾರಿಕೆ ವಸತಿ ನಿಲಯ	9,66,000/–
2	KMF/PUR/Tender-746/2025-26	ಮದರ್ ಡೇರಿ	40,03,000/–
3	KMF/PUR/Tender-747/2025-26	NHMPP, ರಾಮನಗರ	15,00,000/–
4	KMF/PUR/Tender-748/2025-26	NHPP, ಚನ್ನರಾಯಪಟ್ಟಣ	15,00,000/–
5	KMF/PUR/Tender-749/2025-26	ಕೇಂದ್ರೀಯ ತರಬೇತಿ ಸಂಸ್ಥೆ	1,63,000/–
6	KMF/PUR/Tender-750/2025-26	ತರಬೇತಿ ಕೇಂದ್ರ, ಮೈಸೂರು	1,48,000/–
7	KMF/PUR/Tender-751/2025-26	ತರಬೇತಿ ಕೇಂದ್ರ, ಧಾರವಾಡ	1,53,000/–
8	KMF/PUR/Tender-752/2025-26	ತರಬೇತಿ ಕೇಂದ್ರ, ಕಲಬುರಗಿ	65,000/–
9	KMF/PUR/Tender-753/2025-26	ಐಸ್‌ಕ್ರೀಮ್ ಘಟಕ, ಬಳ್ಳಾರಿ	6,83,000/–

1) ಟೆಂಡರ್ ಪ್ರಾರಂಭವಾಗುವ ದಿನಾಂಕ : 22.05.2025 ರಿಂದ. 2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 05.06.2025 ಬೆಳಿಗ್ಗೆ 11.00 ಗಂಟೆಗೆ. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 20.06.2025 ಸಂಜೆ 5.30 ಗಂಟೆಯ ಒಳಗಾಗಿ. 4) ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : 23.06.2025 ಬೆಳಿಗ್ಗೆ 11.00 ಗಂಟೆಗೆ. 5) ವಾಣಿಜ್ಯ ಟೆಂಡರ್ ತೆರಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಪುರಸಭೆ ಕಾರ್ಯಾಲಯ ಮಾನವಿ.
Town Municipal Council, Manvi
Website: http//:www.manvitown.mrc.gov.inDistrict:Raichur,Karnataka, Pin: 584123
Email: itstaff_ulb_manvi@yahoo.co.in, Phone no: 08538-220700

ಸಂಖ್ಯೆ/ಪುಸಮಾ/ತಾಂತ್ರಿಕ/05/2025–26 ದಿನಾಂಕ:09–05–2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಈ ಮೂಲಕ ಲೋಕೋಪಯೋಗಿ ನೊಂದಾಯಿತ ಸರಬರಾಜುದಾರರು/ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂ: 40011 ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಪದ್ದತಿ ಅಡಿಯಲ್ಲಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಸರಬರಾಜುದಾರರು/ಗುತ್ತಿಗೆ ದಾರರು www.kppp.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಪುರಸಭೆ ವೆಬ್‌ಸೈಟ್ www.manvitown.mrc.gov.in ರಲ್ಲಿ ಮಾಹಿತಿಯನ್ನು ಪಡೆಯ ಬಹುದಾಗಿದೆ.

ಕ್ರ.ಸಂ: 1) ಅನುದಾನದ ವಿವರ: 2025-26/ 15TH FC UNTIED GRANT. ಇಂಡೆಂಟ್ ನಂಬರ: DMA/2025-26/OW/WORK_INDENT:40011.ಕಾಮಗಾರಿ ವಿವರ: Construction of Scientific Sanitary Landfill at Old SWM site in Manvi Town.ಅಂದಾಜು ಮೊತ್ತ ರೂ(ಲಕ್ಷಗಳಲ್ಲಿ): 92.1 ಇ,ಎಂ,ಡಿ ವಿವರ: 155835. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 31/05/2025 5:30 PM.

ಸಹಿ/– ಮುಖ್ಯಾಧಿಕಾರಿ,
ಪುರಸಭೆ ಮಾನವಿ.

DIP/RCR/97/KSMCA/97/2025-26

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.

ಟೆಂಡರ್ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರು ಹಾಗೂ ಪಡೆಯಲಿಚ್ಚಿಸುವ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರನ್ನು ಕರೆಯಲಾಗಿದೆ ವಿವರಗಳು ಕೆಳಕಂಡಂತಿವೆ.

ಕ್ರ. ಸಂ.	ಕಾಮಗಾರಿಯ ಹೆಸರು	ವರ್ಕ್ ಇಂಡೆಂಟ್ ಮತ್ತು ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ)	ಬಿಡ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ
1.	ನಬಾರ್ಡ್ ಆರ್.ಐ.ಡಿ.ಎಫ್. ಟ್ರಾಂಚ್–30ರ ಯೋಜನೆಯಡಿ ಬೆಳಗಾವಿ ಜಿಲ್ಲೆ ಅನಗೋಳದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ. (BCWD-1607).	Tender Reference Number: KHB/2024-25/BD/ WORK_INDENT 540/CALL-2 & IFT No.311/2024-25, Date: 09.05.2025	3,77,94,745/-,	09.06.2025 ಸಂಜೆ 4:00 ಗಂಟೆಗೆ
2.	ನಬಾರ್ಡ್ ಆರ್.ಐ.ಡಿ.ಎಫ್. ಟ್ರಾಂಚ್–30ರ ಯೋಜನೆಯಡಿ ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕು, ಬೈರಿದೇವರಕೊಪ್ಪದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ. (BCWD-1968).	Tender Reference Number: KHB/2025-26/BD/ WORK_INDENT 590 & IFT No.41/2025-26, Date: 12.05.2025	3,73,15,444/-,	10.06.2025 ಸಂಜೆ 4:00 ಗಂಟೆಗೆ

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ.
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.
ದೂರವಾಣಿ: 080-22273511/080-22100077 website:https:// kppp.karnataka.gov.in

DIPR/CP/RO638/AAPL/2025-26 ಸಹಿ/– ಕಾರ್ಯಪಾಲಕ ಅಭಿಯಂತರರು, ಕಗೃಮಂ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ಇಲಾಖೆ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 03 ದಿನಾಂಕ: 13/05/2025

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು ಮಾಡಲು / ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ (ಪೂರ್ವ ಅರ್ಹತೆ ಮತ್ತು ಅಥವಾ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇ–ಪೋರ್ಟಲ್‌ನ ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ @17.00 ಗಂಟೆ
KSRTC/2025-26/IND0211	ಬಸ್ ಬಾಡಿ ಬಿಲ್ಡಿಂಗ್ ವೆಲ್ಡಿಂಗ್ ವಸ್ತುಗಳ ಖರೀದಿ	0.49	26/05/2025
KSRTC/2025-26/IND0212	ಆಟೋಮೋಟಿವ್ ಬಲ್ಬ್‌ಗಳ ಖರೀದಿ	1.33	26/05/2025
KSRTC/2025-26/IND0214	ಸಪ್ಲೈ, ಇನ್ಸ್ಟಲೇಶನ್ & ಕಮೀಶನಿಂಗ್ ಆಫ್ ಸ್ಕ್ರ್ಯೂ ಟೈಪ್ ಏರ್ ಕಂಪ್ರೆಸರ್ ಮತ್ತು ನೈಟ್ರೋಜನ್ ಜನರೇಶನ್ ಇನಫ್ಲೇಟರ್ ಸುಟೆಬಲ್‌ಫಾರ್ ಟೈರ್ ಫಿಲ್ಲಿಂಗ್ ಆಫ್ ಪ್ಯಾಸೆಂಜರ್ ಬಸ್ (ಟರ್ನ್ ಕೀ ಆಧಾರದ ಮೇಲೆ)	2.00	26/05/2025
ಅಲ್ಪಾವಧಿ ಟೆಂಡರ್			
KSRTC/2025-26/IND0213	ವ್ಹೀಲ್ ಬೋಲ್ಟ್ಸ್, ನಟ್ಸ್‌ಗಳ ಮತ್ತು ಆಕ್ಸೆಲ್ ಸ್ಟಡ್ಸ್‌ಗಳ ಖರೀದಿ	0.56	21/05/2025

ತಿದ್ದುಪಡಿ : ಎನ್.ಐ.ಟಿ ಸಂಖ್ಯೆ 02 ದಿ:28/04/2025 ರಲ್ಲಿ ಟೆಂಡರ್ ಸಂಖ್ಯೆ IND209 & IND210 ನ್ನು IND0209 & IND0210 ಎಂದು ಓದಿಕೊಳ್ಳುವುದು.
ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ, ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿ ಸಲಾಗುವುದು.
ಸೂಚನೆ:–ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ಅಥವಾ ದೂರವಾಣಿ ಸಂಖ್ಯೆ: 080–46010000/080–68948777, ಕರೆಮಾಡಿ support@eprochelpdesk.com ಮೇಲ್ ಮಾಡಿ ಮಾಹಿತಿ ಪಡೆಯ ಬಹುದಾಗಿರುತ್ತದೆ. ಬಿಡ್ಡುದಾರರಿಗೆ ಟೆಂಡರ್ ಸಂಬಂಧ ಯಾವುದೇ ಮಾಹಿತಿ ಅಗತ್ಯವಿದ್ದರೆ cosp@ksrtc.orgನಲ್ಲಿ ಸಂಪರ್ಕಿಸಬಹುದಾಗಿದೆ. (ಸಂಪರ್ಕಿಸಿ: 7760990225, 7760990224)

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)

ವಾಸಾಸಂಇ/ವಾಪ್ರ/ಜಿಎ/627/2025–26

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 26096832/26096910 ಇಮೇಲ್: purchase@kmf.coop

ಟೆಂಡರ್ ಪ್ರಕಟಣೆಗಳು (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ತನ್ನ ಘಟಕಗಳಲ್ಲಿನ ಭದ್ರತಾ ಕೆಲಸಗಳ ನಿರ್ವಹಣೆಗೆ ಎರಡು ವರ್ಷದ ಅವಧಿಗೆ ಭದ್ರತಾ ರಕ್ಷಕರನ್ನು ಗುತ್ತಿಗೆ ಆಧಾರದಲ್ಲಿ ಒದಗಿಸಲು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

ಕ್ರ. ಸಂ.	ಟೆಂಡರ್ ಅಧಿಸೂಚನೆ ಸಂಖ್ಯೆ	ಘಟಕದ ಹೆಸರು	ಇ.ಎಂ.ಡಿ. (ರೂ.)
1	KMF/PUR/Tender-758/2025-26	ಕಹಾಮ ಕೇಂದ್ರ ಕಛೇರಿ, ಬೆಂಗಳೂರು ಮಾರಾಟ ಮಳಿಗೆ ಮತ್ತು ನಂದಿನಿ ಹೈನುಗಾರಿಕೆ ವಸತಿ ನಿಲಯ	2,55,000/-
2	KMF/PUR/Tender-759/2025-26	ಮದರ್ ಡೇರಿ,	4,32,000/-
3	KMF/PUR/Tender-760/2025-26	NHMPP, ರಾಮನಗರ	1,76,000/-
4	KMF/PUR/Tender-761/2025-26	NHPP, ಚನ್ನರಾಯಪಟ್ಟಣ	2,02,000/-
5	KMF/PUR/Tender-762/2025-26	ಪಶು ಆಹಾರ ಘಟಕ ರಾಜಾನುಕುಂಟೆ	1,96,000/-
6	KMF/PUR/Tender-763/2025-26	ಪಶು ಆಹಾರ ಘಟಕ, ಗುಬ್ಬಿ	1,75,000/-
7	KMF/PUR/Tender-764/2025-26	ಪಶು ಆಹಾರ ಘಟಕ, ಹಾಸನ	2,27,000/-
8	KMF/PUR/Tender-765/2025-26	ಪಶು ಆಹಾರ ಘಟಕ, ಧಾರವಾಡ	1,98,000/-
9	KMF/PUR/Tender-766/2025-26	ಪಶು ಆಹಾರ ಘಟಕ, ಶಿಕಾರಿಪುರ	1,67,000/-
10	KMF/PUR/Tender-767/2025-26	ಕೇಂದ್ರೀಯ ತರಬೇತಿ ಸಂಸ್ಥೆ	50,000/-
11	KMF/PUR/Tender-768/2025-26	ತರಬೇತಿ ಕೇಂದ್ರ, ಮೈಸೂರು	51,000/-
12	KMF/PUR/Tender-769/2025-26	ತರಬೇತಿ ಕೇಂದ್ರ, ಧಾರವಾಡ	51,000/-
13	KMF/PUR/Tender-770/2025-26	ತರಬೇತಿ ಕೇಂದ್ರ, ಕಲಬುರಗಿ	50,000/-
14	KMF/PUR/Tender-771/2025-26	NMP, ಬೆಂಗಳೂರು	1,31,000/-
15	KMF/PUR/Tender-772/2025-26	NSS, ಬೆಂಗಳೂರು	1,57,000/-
16	KMF/PUR/Tender-773/2025-26	NPFP, ಬೆಂಗಳೂರು	79,000/-
17	KMF/PUR/Tender-774/2025-26	ಐಸ್‌ಕ್ರೀಮ್ ಘಟಕ, ಬಳ್ಳಾರಿ	51,000/-

1) ಟೆಂಡರ್ ಪ್ರಾರಂಭವಾಗುವ ದಿನಾಂಕ : 26.05.2025 ರಿಂದ. 2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 09.06.2025 ಬೆಳಿಗ್ಗೆ 11.00 ಗಂಟೆಗೆ. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 24.06.2025 ಸಂಜೆ 5.30 ಗಂಟೆಯ ಒಳಗಾಗಿ. 4) ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : 26.06.2025 ಬೆಳಿಗ್ಗೆ 11.00 ಗಂಟೆಗೆ. 5) ವಾಣಿಜ್ಯ ಟೆಂಡರ್ ತೆರಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,924
ಇಂದಿನ ಅಂತ್ಯ	24,578
▼	346
ದಿನದ ಕನಿಷ್ಠ	24,547

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹565
12 ಕ್ಕೆ	₹75
ಮೈಸೂರು	
100ಕ್ಕೆ	₹578

ವಿನಿಮಯ ದರ

$ ಡಾಲರ್	85.36
£ ಪೌಂಡ್	112.78
€ ಯುರೊ	94.83
¥ ಯೆನ್ (100ಕ್ಕೆ)	58

ಮುದ್ರಮನೆ ಕಾಫಿ (50 ಕೆಜಿಗೆ)

ಎಪಿ	₹27500
ಎಸಿ	₹16100
ಆರ್‌ಪಿ	₹21400
ಆರ್‌ಸಿ	₹11900

ಧಾರವಾಡದಲ್ಲಿ ಮಂಗಳವಾರ ಮಾವು ಮೇಳದಲ್ಲಿ ಪ್ರದರ್ಶಿಸಿರುವ 'ಮಿಯಾ ಜಾಕಿ' ಮಾವು ಪ್ರಜಾವಾಣಿ ಚಿತ್ರ

ಒಂದು 'ಮಿಯಾ ಜಾಕಿ' ಮಾವಿಗೆ ₹10 ಸಾವಿರ

ಪ್ರಜಾವಾಣಿ ವಾರ್ತೆ

ಧಾರವಾಡ: ನಗರದ ತೋಟಗಾರಿಕೆ ಇಲಾಖೆ ಆವರಣದಲ್ಲಿ ಮಂಗಳವಾರ ಮಾವು ಮೇಳ ಆರಂಭವಾಗಿದ್ದು, 'ಮಿಯಾ ಜಾಕಿ' ಮಾವಿನ ಹಣ್ಣನ್ನು ಪ್ರದರ್ಶನಕ್ಕಿಡಲಾಗಿದೆ.

ಒಂದು ಹಣ್ಣಿನ ಬೆಲೆ ₹10 ಸಾವಿರ. ಜಪಾನ್ ದೇಶದ ತಳಿಯಾದ ಈ ಹಣ್ಣನ್ನು ರೈತ ಪ್ರಮೋದ ಗಾಂವ್ಕರ ಅವರು ಕಲಕೇರಿಯ ತೋಟದಲ್ಲಿ ಬೆಳೆದಿದ್ದಾರೆ.

'2012ರಲ್ಲಿ ಮಹಾರಾಷ್ಟ್ರದ ರತ್ನಗಿರಿಯ ನರ್ಸರಿಯಿಂದ ಎರಡು ಗಿಡ ತಂದು ಬೆಳೆಸಿದ್ದೇನೆ. ಈ ವರ್ಷ 25 ಮಾವಿನ ಕಾಯಿ ಫಸಲು ಇದೆ. ಕಾಯಿ ಚೆನ್ನಾಗಿ ಬಲಿಯಲು 150 ದಿನ ಬೇಕು. ಹಣ್ಣು ಒಂದು ತಿಂಗಳವರೆಗೆ ಹಾಳಾಗುವುದಿಲ್ಲ' ಎಂದು ಪ್ರಮೋದ ಗಾಂವ್ಕರ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಹಣ್ಣು ಬಹಳ ಸಿಹಿಯಾಗಿದೆ. ಮುಂಬೈ, ಪುಣೆ ಮೊದಲಾದ ಕಡೆ ಗ್ರಾಹಕರು ಆನ್‌ಲೈನ್‌ನಲ್ಲಿ ಬುಕ್ ಮಾಡಿ, ಹಣ್ಣು ಖರೀದಿಸುತ್ತಾರೆ. ಧಾರವಾಡ ಭಾಗದ ಹವಾಮಾನಕ್ಕೆ ಈ ತಳಿಯ ಗಿಡಗಳು ಚೆನ್ನಾಗಿ ಬೆಳೆಯುತ್ತವೆ' ಎಂದರು.

6 ವರ್ಷದ ಕನಿಷ್ಠ: ಮತ್ತೆ ರೆಪೊ ದರ ಕಡಿತಕ್ಕೆ ಹಾದಿ ಸುಗಮ

ತಗ್ಗಿದ ಚಿಲ್ಲರೆ ಹಣದುಬ್ಬರ

ನವದೆಹಲಿ (ಪಿಟಿಐ): ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರವು ಆರು ವರ್ಷದ ಕನಿಷ್ಠ ಮಟ್ಟವಾದ ಶೇ 3.16ರಷ್ಟು ದಾಖಲಾಗಿದೆ. ತರಕಾರಿ, ಹಣ್ಣು, ದ್ವಿದಳ ಧಾನ್ಯಗಳ ಬೆಲೆಯಲ್ಲಿನ ಇಳಿಕೆಯೇ ಇದಕ್ಕೆ ಕಾರಣ ಎಂದು ಕೇಂದ್ರ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಮಂಗಳವಾರ ತಿಳಿಸಿದೆ.

2019ರ ಜುಲೈ ಬಳಿಕ ದಾಖಲಾದ ಕನಿಷ್ಠ ಮಟ್ಟ ಇದಾಗಿದೆ. ಮಾರ್ಚ್‌ನಲ್ಲಿ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧರಿತ ಹಣದುಬ್ಬರವು ಶೇ 3.34ರಷ್ಟು ದಾಖಲಾಗಿತ್ತು.

ಹಣಕಾಸು ನೀತಿಗೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕೈಗೊಳ್ಳುವ ನಿರ್ಧಾರದಲ್ಲಿ ಚಿಲ್ಲರೆ ಹಣದುಬ್ಬರವು ನಿರ್ಣಾಯಕವಾಗಿದೆ.

ಸದ್ಯ ಈ ಹಣದುಬ್ಬರವು ಆರ್‌ಬಿಐ ನಿಗದಿಪಡಿಸಿರುವ ಶೇ 4ರ ಸರಾಸರಿ ಗುರಿಗಿಂತ ಕಡಿಮೆ ದಾಖಲಾಗಿದೆ.

ಹಾಗಾಗಿ, ಜೂನ್‌ನಲ್ಲಿ ನಡೆಯುವ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯಲ್ಲಿ ಮೂರನೇ ಬಾರಿಗೆ ರೆಪೊ ದರ ಕಡಿತಗೊಳಿಸುವ ಸಾಧ್ಯತೆಯಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಮಾರ್ಚ್‌ಗೆ ಹೋಲಿಸಿದರೆ ಏಪ್ರಿಲ್‌ನಲ್ಲಿ ಆಹಾರ ಹಣದುಬ್ಬರದಲ್ಲಿ ಶೇ 0.91ರಷ್ಟು ಇಳಿಕೆಯಾಗಿದೆ. 2021ರ ಅಕ್ಟೋಬರ್ ಬಳಿಕ ಆಹಾರ ಪದಾರ್ಥಗಳ ಬೆಲೆ ಕಡಿಮೆಯಾಗಿರುವ ತಿಂಗಳು ಇದಾಗಿದೆ.

ಮಾರ್ಚ್‌ನಲ್ಲಿ ಶೇ 2.69ರಷ್ಟಿದ್ದ ಆಹಾರ ಪದಾರ್ಥಗಳ ಬೆಲೆಯು ಏಪ್ರಿಲ್‌ನಲ್ಲಿ ಶೇ 1.78ಕ್ಕೆ ತಗ್ಗಿದೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ ಶೇ 8.70ರಷ್ಟಿತ್ತು ಎಂದು ಎನ್‌ಎಸ್‌ಒ ತಿಳಿಸಿದೆ.

ತರಕಾರಿಗಳು, ದ್ವಿದಳಧಾನ್ಯ, ಏಕದಳ ಧಾನ್ಯ, ಹಣ್ಣುಗಳು, ಮಾಂಸ ಮತ್ತು ಮೀನು, ವೈಯಕ್ತಿಕ ಆರೈಕೆ ಉತ್ಪನ್ನಗಳ ಬೆಲೆಯಲ್ಲಿ ಇಳಿಕೆಯಾಗಿದೆ ಎಂದು ಹೇಳಿದೆ.

ಕರ್ನಾಟಕ: ದೇಶದ ಸರಾಸರಿಗಿಂತ ಅಧಿಕ

ರಾಜ್ಯವಾರು ಪಟ್ಟಿಯಲ್ಲಿ ಕೇರಳದಲ್ಲಿ ಚಿಲ್ಲರೆ ಹಣದುಬ್ಬರವು ಅತಿಹೆಚ್ಚು ಅಂದರೆ ಶೇ 5.94ರಷ್ಟು ದಾಖಲಾಗಿದೆ. ಕರ್ನಾಟಕದಲ್ಲಿ ಶೇ 4.26ರಷ್ಟು ದಾಖಲಾಗಿದೆ. ಇದು ದೇಶದ ಸರಾಸರಿಗಿಂತಲೂ ಹೆಚ್ಚಿದೆ.

ಹರಿಯಾಣ (ಶೇ 3.51), ಮಹಾರಾಷ್ಟ್ರ (ಶೇ 3.56), ಪಂಜಾಬ್ (ಶೇ 4.09), ತಮಿಳುನಾಡು (ಶೇ 3.41), ಉತ್ತರಾಖಂಡ (ಶೇ 3.81), ಜಮ್ಮು ಮತ್ತು ಕಾಶ್ಮೀರದಲ್ಲೂ (ಶೇ 4.25) ಹೆಚ್ಚು ದಾಖಲಾಗಿದೆ.

ನೆರೆಯ ತೆಲಂಗಾಣದಲ್ಲಿ ಅತಿಕಡಿಮೆ ಅಂದರೆ ಶೇ 1.26ರಷ್ಟು ದಾಖಲಾಗಿದೆ.

ದೇಶದ ಗ್ರಾಮೀಣ ಪ್ರದೇಶದಲ್ಲಿ ಹಣದುಬ್ಬರವು ಶೇ 3.25ರಿಂದ ಶೇ 2.92ಕ್ಕೆ ತಗ್ಗಿದೆ. ನಗರ ಪ್ರದೇಶದಲ್ಲಿ ಶೇ 3.43ರಿಂದ ಶೇ 3.25ಕ್ಕೆ ಇಳಿಕೆಯಾಗಿದೆ ಎಂದು ಕೇಂದ್ರ ಸಾಂಖ್ಯಿಕ ಕಚೇರಿ ತಿಳಿಸಿದೆ.

ಕಳೆದ ವರ್ಷದ ಏಪ್ರಿಲ್‌ನಲ್ಲಿದ್ದ ದರಕ್ಕೆ ಹೋಲಿಸಿದರೆ ಆಲೂಗೆಡ್ಡೆ (ಶೇ 12.7), ಟೊಮೆಟೊ (ಶೇ 33.21), ಕೋಳಿ ಮಾಂಸ (ಶೇ 6.78), ತೊಗರಿ ಬೇಳೆ (ಶೇ 14.27), ಜೀರಿಗೆ (ಶೇ 20.79) ದರದಲ್ಲಿ ಇಳಿಕೆಯಾಗಿದೆ.

'ಪ್ರಸ್ತುತ ಆರ್ಥಿಕ ವರ್ಷದ ಎರಡು ಮತ್ತು ಮೂರನೇ ತ್ರೈಮಾಸಿಕದಲ್ಲಿ ಚಿಲ್ಲರೆ ಹಣದುಬ್ಬರ ಇಳಿಕೆಯಾಗಲಿದೆ ಎಂದು ಆರ್‌ಬಿಐನ ಎಂಪಿಸಿ ಸಭೆ ಅಂದಾಜಿಸಿದೆ. ಕಡಿಮೆ ದಾಖಲಾದರೆ ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ ಹೆಚ್ಚುವರಿಯಾಗಿ ಶೇ 0.75ರಷ್ಟು ರೆಪೊ ದರ ಕಡಿತಗೊಳಿಸುವ ಸಾಧ್ಯತೆಯಿದೆ' ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ತಿಳಿಸಿದ್ದಾರೆ.

'ಏಪ್ರಿಲ್‌ನಲ್ಲಿ ಹಣದುಬ್ಬರ ಇಳಿಕೆಯಾಗಿರುವುದರಿಂದ ಜೂನ್‌ನಲ್ಲಿ ನಡೆಯುವ ಎಂಪಿಸಿ ಸಭೆಯಲ್ಲಿ ಶೇ 0.25ರಷ್ಟು ರೆಪೊ ದರ ಕಡಿತಗೊಳ್ಳುವ ನಿರೀಕ್ಷೆಯಿದೆ' ಎಂದು ಹೇಳಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕಿ)	₹321-546
ದ್ವಿತಳಿ (ಪ್ರ.ಕಿ)	₹339-686

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹16500-16500
ತುಮಕೂರು	₹11000-18000

ಸೆನ್ಸೆಕ್ಸ್ 1,281, ನಿಫ್ಟಿ 346 ಅಂಶ ಇಳಿಕೆ

ಷೇರುಪೇಟೆಯಲ್ಲಿ ಕರಡಿ ಕುಣಿತ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಗೂಳಿ ಮುಗ್ಗರಿಸಿತು. ಕರಡಿ ಕುಣಿತ ಜೋರಾಗಿದ್ದರಿಂದ ಸೂಚ್ಯಂಕಗಳು ಇಳಿಕೆ ಕಂಡಿವೆ.

ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಐ.ಟಿ, ಆಟೊ ಮತ್ತು ಖಾಸಗಿ ವಲಯದ ಬ್ಯಾಂಕ್‌ಗಳ ಷೇರು ಮಾರಾಟಕ್ಕೆ ಮುಂದಾಗಿದ್ದರಿಂದ ಮಾರುಕಟ್ಟೆಯು ಇಳಿಕೆಯ ಹಾದಿ ಹಿಡಿಯಿತು ಎಂದು ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,281 ಅಂಶ ಇಳಿಕೆ ಕಂಡು 81,148 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 346 ಅಂಶ ಇಳಿಕೆ ಕಂಡು, 24,578 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಇನ್ಫೊಸಿಸ್ ಶೇ 3.54, ಪವರ್ ಗ್ರಿಡ್ ಶೇ 3.4, ಎಟರ್ನಲ್ ಶೇ 3.38, ಎಚ್‌ಸಿಎಲ್ ಟೆಕ್ ಶೇ 2.94, ಟಿಸಿಎಸ್ ಶೇ 2.88, ಭಾರ್ತಿ ಏರ್‌ಟೆಲ್ ಷೇರಿನ ಮೌಲ್ಯ ಶೇ 2.74ರಷ್ಟು ಇಳಿಕೆಯಾಗಿದೆ.

ಸನ್ ಫಾರ್ಮಾ, ಅದಾನಿ ಪೋರ್ಟ್ಸ್, ಬಜಾಜ್ ಫೈನಾನ್ಸ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಟೆಕ್ ಮಹೀಂದ್ರ ಷೇರಿನ ಮೌಲ್ಯ ಏರಿಕೆಯಾಗಿದೆ.

ಸೋಮವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹1,246 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಮಂಜುನಾಥ್, ಬೆಂಗಳೂರು.

- **ಪ್ರಶ್ನೆ: ನಾನು ಆನ್‌ಲೈನ್ ಗೇಮ್‌ನಲ್ಲಿ ಬಹುಮಾನ ಗೆದ್ದಿದ್ದೇನೆ. ಇದಕ್ಕೆ ಶೇ 30ರಷ್ಟು ತೆರಿಗೆ ಕಡಿತಗೊಂಡು ಉಳಿದ ಮೊತ್ತ ನನ್ನ ಕೈಸೇರಿದೆ. ಇದು ಸರಿಯೇ? ಸ್ವಲ್ಪ ಹಣವನ್ನು ನನ್ನ ಕುಟುಂಬದ ಸದಸ್ಯರ ಖಾತೆಗೆ ವರ್ಗಾಯಿಸಬೇಕೆಂದು ಯೋಚಿಸಿದ್ದೇನೆ. ಉಳಿದ ಮೊತ್ತವನ್ನು ಹೂಡಿಕೆ ಮಾಡಬೇಕೆಂದು ಯೋಚಿಸಿದ್ದೇನೆ. ಈ ಬಗ್ಗೆ ಮಾಹಿತಿ ನೀಡಿ?**

ಉತ್ತರ: ಆದಾಯ ತೆರಿಗೆ ಸೆಕ್ಷನ್ 194 ಬಿಎ ಅಡಿ ಯಾವುದೇ ಆನ್‌ಲೈನ್ ಗೇಮ್, ರಸಪ್ರಶ್ನೆ ಕಾರ್ಯಕ್ರಮ, ಬೆಟ್ಟಿಂಗ್ ಇತ್ಯಾದಿಯಿಂದ ನಿವ್ವಳ ಮೊತ್ತ ಆದಾಯವಾಗಿ ಬಂದರೂ ಅಂತಹ ಮೊತ್ತಕ್ಕೆ ತೆರಿಗೆ ಕಡಿತ ಇರುತ್ತದೆ. ಈ ತೆರಿಗೆ ಕಡಿತ ಶೇ 30ರ ವಿಶೇಷ ದರದಲ್ಲಿ ಜಾರಿಯಲ್ಲಿರುತ್ತದೆ. ಈ ತೆರಿಗೆ ದರಕ್ಕೂ, ವಿಜೇತ ವ್ಯಕ್ತಿಯ ವೈಯಕ್ತಿಕ ತೆರಿಗೆ ದರಕ್ಕೂ ನೇರ ಸಂಬಂಧ ಇಲ್ಲ. ಉದಾಹರಣೆಗೆ ತೆರಿಗೆದಾರ ತನ್ನ ವೇತನ ಆದಾಯಕ್ಕೆ ಶೂನ್ಯದಿಂದ 30ರ ತೆರಿಗೆ ದರದಲ್ಲಿ ಯಾವುದೇ ದರದ ಅಡಿ ತೆರಿಗೆಗೊಳಪಟ್ಟರೂ ಮೇಲೆ ಹೇಳಿರುವ ಆದಾಯ ಗಳಿಸಿದ ಸಂದರ್ಭದಲ್ಲಿ ಅಂತಹ ಆದಾಯಕ್ಕೆ ಶೇ 30ರಷ್ಟು ಪ್ರತ್ಯೇಕ ತೆರಿಗೆ ದರ ಅನ್ವಯವಾಗುತ್ತದೆ.

ಇಂತಹ ಪಾವತಿ ಮಾಡುವ ಮುನ್ನ ಬಹುಮಾನದ ವಿತರಕರು ಪಾವತಿ ಸಮಯದಲ್ಲಿ ತೆರಿಗೆ ಕಡಿತಗೊಳಿಸಲು ಹೊಣೆಗಾರರಾಗಿರುತ್ತಾರೆ. ಅಂತಹ ಆದಾಯಕ್ಕೆ ಯಾವುದೇ ಇತರ ಕಡಿತ/ ರಿಯಾಯಿತಿ (ಸೆಕ್ಷನ್ 80ಸಿ ಅಥವಾ 80 ಡಿ ಇತ್ಯಾದಿ) ಸಿಗುವುದಿಲ್ಲ.

ಇನ್ನು ನೀವು ಈ ಮೊತ್ತವನ್ನು ನಿಮ್ಮ ಕುಟುಂಬದ ಸದಸ್ಯರ ಖಾತೆಗೆ ವರ್ಗಾಯಿಸುವ ಬಗ್ಗೆ ಕೇಳಿರುತ್ತೀರಿ. ಸಮೀಪದ ಬಂಧು ವರ್ಗದಲ್ಲಿ ಒಳಪಡುವ ವ್ಯಕ್ತಿಗಳಾದ ತಂದೆ-ತಾಯಿ- ಮಕ್ಕಳು, ಗಂಡ-ಹೆಂಡತಿ, ಸಹೋದರ-ಸಹೋದರಿ ಇತ್ಯಾದಿ ವ್ಯಕ್ತಿಗಳೊಳಗಿನ ಹಣಕಾಸು ವ್ಯವಹಾರಕ್ಕೆ ಕೆಲವು ವಿನಾಯಿತಿಗಳಿವೆ. ಹೀಗಾಗಿ ಅಂತಹ ಆರ್ಥಿಕ ವ್ಯವಹಾರ 'ಉಡುಗೊರೆ' ರೂಪದಲ್ಲಿ ಇರಬೇಕು. ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 56(2)ರ ನಿಬಂಧನೆಗಳಂತೆ ಇವನ್ನು ತೆರಿಗೆ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಹೀಗಾಗಿ, ಉಡುಗೊರೆಯಾಗಿ ವರ್ಗಾಯಿಸುವ ಇಂತಹ ಮೊತ್ತಕ್ಕೆ ತೆರಿಗೆ ಇರುವುದಿಲ್ಲ.

ನಿಮ್ಮ ಹೂಡಿಕೆ ನಿರ್ಧಾರದ ಬಗ್ಗೆ ಹೇಳುವುದಾದರೆ ಅದು ನೀವು ತೆಗೆದುಕೊಳ್ಳುವ ಆರ್ಥಿಕ ಅಪಾಯದ (ರಿಸ್ಕ್) ಮೇಲೆ ಅವಲಂಬಿತವಾಗಿದೆ. ಒಂದಷ್ಟು ಮೊತ್ತವನ್ನು ನಿಶ್ಚಿತ ಆದಾಯ ನೀಡುವ ಹೂಡಿಕೆಗಳಾದ ಅಂಚೆ, ಬ್ಯಾಂಕ್ ಠೇವಣಿಯಲ್ಲಿ, ಉತ್ತಮ ಮ್ಯೂಚುವಲ್ ಫಂಡ್, ಷೇರು, ಇಟಿಎಫ್, ಸ್ವರ್ಣ ಬಾಂಡ್‌ಗಳಲ್ಲಿ ಹೂಡಿಕೆ ಮಾಡಬಹುದು. ಪ್ರತಿ ಹೂಡಿಕೆ ಉತ್ಪನ್ನದ ವಿಶಿಷ್ಟತೆ, ಆದಾಯ, ಅಪಾಯ ವಿಭಿನ್ನವಾಗಿರುವುದನ್ನು ಅರಿತು ಹೂಡಿಕೆ ಮಾಡಿ.

ವಿಜಯಾ, ಉಡುಪಿ.

- **ಪ್ರಶ್ನೆ: ನಾನು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಪಿಎಫ್ ಸೌಲಭ್ಯ ಇದೆ. ಇದರ ಭಾಗವಾಗಿ ವೇತನದಿಂದ ₹4,320 ಪಿಎಫ್ ಬಾಬ್ತು ಕಡಿತವಾಗುತ್ತಿದೆ. ಅಷ್ಟೇ ಮೊತ್ತವನ್ನು ನನ್ನ ಕಂಪನಿಯವರೂ ನನ್ನ ಪಿಎಫ್ ಖಾತೆಯಲ್ಲಿ ಜಮೆ ಮಾಡುತ್ತಿದ್ದಾರೆ. ನಾನು ಈ ಹೂಡಿಕೆಯನ್ನು ಇನ್ನಷ್ಟು ಮಾಡಬೇಕೆಂದಿದ್ದೇನೆ. ನನ್ನ ತಿಂಗಳ ವೇತನ ಸುಮಾರು ₹60 ಸಾವಿರ. ಇದರಲ್ಲಿ ಶೇ 60ರಷ್ಟು ನನಗೆ ಮೂಲ ವೇತನ ಹಾಗೂ ಡಿ.ಎ ಸಿಗುತ್ತದೆ. ನನಗೆ ಇನ್ನೂ 25 ವರ್ಷ ಸೇವಾವಧಿ ಇದೆ.**

ನಾನು ಉಳಿತಾಯ ಹೆಚ್ಚಿಸುವ ಈ ಬಗೆ ಸೂಕ್ತವೇ ಅಥವಾ ಬೇರೆ ಮಾರ್ಗಗಳಿವೆಯೇ? ಒಂದು ವೇಳೆ ನಾನು ಹೆಚ್ಚುವರಿ ಪಿಎಫ್ ಹೂಡಿಕೆ ಮಾಡುವುದಿದ್ದರೆ ಗರಿಷ್ಠ ಎಷ್ಟು ಮೊತ್ತ ಹೂಡಿಕೆ ಮಾಡಬಹುದು?

ಉತ್ತರ: ನೀವು ಈಗಾಗಲೇ ಉದ್ಯೋಗದಲ್ಲಿದ್ದು ಹೆಚ್ಚುವರಿ ಉಳಿತಾಯಕ್ಕಾಗಿ ಪಿಎಫ್ ಮೊತ್ತವನ್ನು ಸ್ವಪ್ರೇರಣೆಯಿಂದ ಮಾಡುವ ಉದ್ದೇಶ ಹೊಂದಿದ್ದೀರಿ. ಇದು ಉತ್ತಮ ಯೋಜನೆಯಾಗಿದೆ. ಈ ಕೆಳಗಿನ ಕೆಲವು ಅಂಶಗಳನ್ನು ಗಮನಿಸಿ ನಿರ್ಧಾರ ಕೈಗೊಳ್ಳಿ.

- ಹೂಡಿಕೆಗೆ ಅನೇಕ ಮಾರ್ಗಗಳಿವೆ. ಆದರೆ, ಈ ಹೆಚ್ಚುವರಿ ಹೂಡಿಕೆ ಮೊತ್ತವನ್ನು ಯಾವ ಕಾರಣಕ್ಕಾಗಿ ನೀವು ಆಯ್ಕೆ ಮಾಡುತ್ತಿದ್ದೀರಿ ಎಂಬ ಬಗ್ಗೆ ಖಚಿತ ಅಭಿಪ್ರಾಯ ಇರಲಿ. ವಾರ್ಷಿಕ ಬಡ್ಡಿ ಸುಮಾರು ಶೇ 8.25ರಷ್ಟು ಇರುವ ಉಳಿತಾಯ ಯೋಜನೆ ಇದಾಗಿದೆ. ದೀರ್ಘಾವಧಿಗಾಗಿ ಹಣ ತೊಡಗಿಸುವ ಉದ್ದೇಶ ಇದರಲ್ಲಿ ಅಡಗಿದೆ. ನಿಮ್ಮ ಸೇವಾವಧಿ ಇನ್ನೂ ದೀರ್ಘ ಕಾಲ ಇರುವುದರಿಂದ ಈ ಬಡ್ಡಿ ಮೊತ್ತವು ಸಂಚಿತವಾಗಿ ಹೂಡಿಕೆಯ ಮೊತ್ತ ವರ್ಧಿಸುವುದರಲ್ಲಿ ಸಂದೇಹವಿಲ್ಲ. ಬಡ್ಡಿಗೆ ತೆರಿಗೆ ಇಲ್ಲ ಎಂಬುದು ದೊಡ್ಡ ಧನಾತ್ಮಕ ಅಂಶ.
- ಇಂತಹ ದೀರ್ಘಾವಧಿ ಸ್ವಯಂ ಪ್ರೇರಿತ ಹೂಡಿಕೆಗೆ ನಿಮಗೆ ವರ್ಷಕ್ಕೊಮ್ಮೆ ನಿಮ್ಮ ನಿರ್ಧಾರ ಬದಲಿಸುವ ಅವಕಾಶ ಇದೆ. ಇದನ್ನು ನಿಮ್ಮ ಉದ್ಯೋಗದಾತರಲ್ಲಿ ಲಿಖಿತ ರೂಪದಲ್ಲಿ ನೀಡಬೇಕಾಗುತ್ತದೆ. ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಷ್ಟೇ ಈ ಮೊತ್ತವನ್ನು ನೀವು ನಗದೀಕರಿಸಬಹುದಾದ್ದರಿಂದ ಯೋಜಿತ ನಿರ್ಧಾರ ಕೈಗೊಳ್ಳಿ.
- ನೀವು ಇದೇ ಮೊತ್ತವನ್ನು ನಿಮ್ಮ ಮುಂದಿನ ಅಗತ್ಯ ಹಾಗೂ ಹೆಚ್ಚುವರಿ ಲಾಭದ ಗಳಿಕೆಯ ಅವಕಾಶ ಹಾಗೂ ಆರ್ಥಿಕ ಅಪಾಯಗಳನ್ನು ಪರಿಗಣಿಸಿ ಷೇರು ಹಾಗೂ ಮ್ಯೂಚುವಲ್ ಫಂಡ್‌ಗಳಂತಹ ಆಯ್ಕೆಯನ್ನೂ ಮಾಡಬಹುದು.
- ಪ್ರಸ್ತುತ ನಿಮ್ಮ ವೇತನ ₹60 ಸಾವಿರ ಆಗಿರುವುದರಿಂದ ಇದರ ಶೇ 60ರಷ್ಟು ಮೊತ್ತವನ್ನು ಅಂದರೆ ತಿಂಗಳಿಗೆ ₹36 ಸಾವಿರದಷ್ಟು ಮೊತ್ತವನ್ನು ಹೆಚ್ಚುವರಿ ಪಿಎಫ್ ಖಾತೆಗೆ ಕಟ್ಟುವ ಅವಕಾಶ ಇದೆ. ಆದರೆ, ವಾರ್ಷಿಕವಾಗಿ ಈ ಮೊತ್ತ ₹2.50 ಲಕ್ಷ ಮೀರಿದಾಗ ಬರುವ ಹೆಚ್ಚುವರಿ ಬಡ್ಡಿಗೆ ತೆರಿಗೆ ಅನ್ವಯವಾಗುತ್ತದೆ ಎಂಬುದು ತಿಳಿದಿರಲಿ. ಈ ಬಗ್ಗೆ ನಿಮ್ಮ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗವನ್ನು ಸಂಪರ್ಕಿಸಿ ನಿಮ್ಮ ಸೂಕ್ತ ನಿರ್ಧಾರ ಕೈಗೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in

TRAVEL CORNER

Orchid Travel and Tours
ನಿಮ್ಮ ಪ್ರವಾಸ ನಮ್ಮೊಂದಿಗೆ
No. 98, 1st Floor, D.V.G Road, Basavanagudi, Bengaluru
For Booking Contact : +91 9900080796, +91 9900099252

USA WITH BAHAMAS CRUISE 18 DAYS & 12 DAYS
Special Discount for VISA Holders
• NEW YORK • WASHINGTON DC • BUFFALO • NIAGARA FALLS • ORLANDO • LOS ANGELES • LAS VEGAS • SAN FRANCISCO

Package Includes
• AIRFARES FROM BENGALURU TO NEW YORK - SAN FRANCISO TO BENGALURU
• INTERNAL FLIGHT - ORLANDO TO LAS VEGAS / LOS ANGELES
• ACCOMMODATION - 4 & 3* STAR CATEGORY HOTEL TWIN SHARING
• ALL MEALS AS PER ITINERARY
• ALL TRANSFER, SIGHT SEEING BY A/C COACH
• SIGHT SEEING AS PER THE ITINERARY INCLUDES ENTRY FEES
• SERVICES OF PROFESSIONAL TOUR MANAGER FROM BENGALURU
• TRAVEL INSURANCE UPTO AGE 60 YEARS • GST
Confirmed Group Departure Date 14th June
• UK & EUROPE • SINGAPORE MALAYSIA & THAILAND • BALI • VIETNAM & CAMBODIA • JAPAN • DUBAI • MUKTINATHA • AUSTRALIA & NEW ZEALAND • SRILANKA • LEH LADAKH • CHARDHAM YATRA BY HELICOPTER
Website : www.orchidtours.net

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook
ಅನುಭವವುಳ್ಳ ಸೌತ್ ಇಂಡಿಯನ್ ಚೆಫ್ ಬೇಕಾಗಿದ್ದಾರೆ. ಸಂಪರ್ಕಿಸಿ: +91 9019793857, +91 9986666778. ಗ್ರೀನ್ ಪಾತ್ ರೆಸ್ಟೋರೆಂಟ್, ಮಂತ್ರಿಮಾಲ್ ಮೆಟ್ರೋಸ್ಟೇಷನ್ ಮುಂಭಾಗ, ಮಲ್ಲೇಶ್ವರಂ.

General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Teachers/ Professors
ಮಾತೃ ಶ್ರವಣ ದೋಷವುಳ್ಳ ಮಕ್ಕಳ ವಸತಿ ಶಾಲೆಗೆ ಬೇಕಾಗಿದ್ದಾರೆ.1)ಮುಖ್ಯೋಪಾಧ್ಯಾಯರು- 1 ಹುದ್ದೆ, ವಿದ್ಯಾರ್ಹತೆ: ಎಂ.ಎ/ ಎಂ.ಎಸ್ಸಿ. ಸ್ಪೆಷಲ್ ಬಿ.ಎಡ್/ ಬಿ.ಎಡ್, 2) ವಿಶೇಷ ಶಿಕ್ಷಕರು- 2 ಹುದ್ದೆಗಳು, ವಿದ್ಯಾರ್ಹತೆ : ಪದವಿಯೊಂದಿಗೆ ಸ್ಪೆಷಲ್ ಬಿ.ಎಡ್/ಬಿ.ಎಡ್, 3) ದೈಹಿಕ ಶಿಕ್ಷಕರು- 1 ಹುದ್ದೆ, ವಿದ್ಯಾರ್ಹತೆ : ಬಿ.ಪಿ.ಎಡ್, 4) ವಾರ್ಡನ್ (ಪುರುಷ ಮತ್ತು ಮಹಿಳೆ),ಮಾಹಿತಿಗೆ : 9606272996

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Hassan
ಕಮರ್ಷಿಯಲ್ ನಾರ್ತ್ ಈಸ್ಟ್ ಕಾರ್ನರ್ KHB ಸೈಟ್ ಮಾರಾಟಕ್ಕೆ ಇದೆ, ಹೊಸ ಬಸ್ ನಿಲ್ದಾಣದ ಎದುರು ಹಾಸನ ಸಂಪರ್ಕಿಸಿ 6361444146

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಸಂಕ್ಷಿಪ್ತ ಸುದ್ದಿ

ಚಿನ್ನದ ದರ ₹950 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನದ ದರ ಏರಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹950 ಏರಿಕೆಯಾಗಿದ್ದು, ₹97,500 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ₹1 ಸಾವಿರ ಹೆಚ್ಚಳವಾಗಿದ್ದು, ₹97,100 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಳ್ಳಿ ಧಾರಣೆಯು ಪ್ರತಿ ಕೆ.ಜಿಗೆ ₹250 ಇಳಿಕೆಯಾಗಿದ್ದು, ₹99,450 ಆಗಿದೆ.

'ಅಮೆರಿಕ ಮತ್ತು ಚೀನಾ ನಡುವಿನ ಸುಂಕ ಸಮರಕ್ಕೆ ತಾತ್ಕಾಲಿಕ ತಡೆ ಬಿದ್ದಿರುವ ಪರಿಣಾಮ ಹೂಡಿಕೆದಾರರು ಚಿನ್ನದ ಮೇಲಿನ ಹೂಡಿಕೆಗೆ ಮುಂದಾಗಿದ್ದಾರೆ. ಹಾಗಾಗಿ, ಹಳದಿ ಲೋಹದ ಬೆಲೆಯಲ್ಲಿ ಏರಿಕೆಯಾಗಿದೆ' ಎಂದು ಅಬಾನ್ಸ್ ಫೈನಾನ್ಶಿಯಲ್ ಸರ್ವಿಸಸ್‌ನ ಸಿಇಒ ಚಿಂತನ್ ಮೆಹ್ತಾ ತಿಳಿಸಿದ್ದಾರೆ.

ಶಿವಮೊಗ್ಗ: ಸರಕು ಅಡಿಕೆಗೆ ದಾಖಲೆ ಬೆಲೆ

ಶಿವಮೊಗ್ಗ: ಈ ವರ್ಷ ಸರಕು ಅಡಿಕೆ ಬೆಲೆಯು ದಾಖಲೆ ಮಟ್ಟಕ್ಕೆ ಏರಿಕೆಯಾಗಿದೆ.

ಇಲ್ಲಿನ ಎಪಿಎಂಸಿಯಲ್ಲಿ ಮಂಗಳವಾರ ಸರಕು (ಹಸ) ಅಡಿಕೆ ದರ ಕ್ವಿಂಟಲ್‌ಗೆ ₹98,896, ಬೆಟ್ಟೆ ಕ್ವಿಂಟಲ್‌ಗೆ ₹58,709 ಹಾಗೂ ರಾಶಿ ಅಡಿಕೆ ಕ್ವಿಂಟಲ್‌ಗೆ ₹57,059ಕ್ಕೆ ಮಾರಾಟವಾಗಿದೆ.

ಎಪಿಎಂಸಿಗೆ 9 ಕ್ವಿಂಟಲ್ ಸರಕು ಅಡಿಕೆ, 488 ಕ್ವಿಂಟಲ್ ರಾಶಿ ಅಡಿಕೆ ಹಾಗೂ 231 ಕ್ವಿಂಟಲ್ ಗೊರಬಲು ಹಾಗೂ 26 ಕ್ವಿಂಟಲ್ ಬೆಟ್ಟೆ ಅಡಿಕೆ ಆವಕವಾಗಿತ್ತು.

ಜನವರಿಯಲ್ಲಿ ಕೊಯ್ಲು ಮುಗಿದಿದ್ದು, ಕಳೆದ ವರ್ಷದ ಅಡಿಕೆ ಬಹುತೇಕ ಮಾರಾಟವಾಗಿದೆ. ಬೆಳೆಗಾರರು ಮನೆಯಲ್ಲಿ ಸಂಗ್ರಹಿಸಿಟ್ಟುಕೊಂಡಿದ್ದ ಅಡಿಕೆಯನ್ನು ಈಗ ಮಾರುಕಟ್ಟೆಗೆ ತರುತ್ತಿದ್ದಾರೆ. ಬೇಡಿಕೆಯಷ್ಟು ಪೂರೈಕೆ ಆಗದ ಕಾರಣ ಬೆಲೆ ಏರಿಕೆ ಆಗಿದೆ ಎಂದು ಎಪಿಎಂಸಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪುಟಿನ್ ಜತೆ ಮಾತುಕತೆ: ಉಕ್ರೇನ್

ಕೀವ್ (ರಾಯಿಟರ್ಸ್): ಉಕ್ರೇನ್ ಅಧ್ಯಕ್ಷ ವ್ಲೊಲೊಡಿಮಿರ್ ಝೆಲೆನ್‌ಸ್ಕಿ ಅವರು ಟರ್ಕಿಯಲ್ಲಿ ಗುರುವಾರ ನಡೆಯಲಿರುವ ಮಾತುಕತೆಯ ವೇಳೆ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನು ಮಾತ್ರ ಭೇಟಿಯಾಗಲಿದ್ದಾರೆ. ರಷ್ಯಾದ ನಿಯೋಗದಲ್ಲಿರುವ ಇತರ ಸದಸ್ಯರನ್ನು ಭೇಟಿಯಾಗುವು ದಿಲ್ಲ ಎಂದು ಉಕ್ರೇನ್ ಅಧ್ಯಕ್ಷರ ಸಲಹೆಗಾರರು ಮಂಗಳವಾರ ತಿಳಿಸಿದ್ದಾರೆ.

ಯುದ್ಧವನ್ನು ಕೊನೆಗೊಳಿಸುವ ಸಲುವಾಗಿ ಮಾತುಕತೆ ನಡೆಸಲು ಇಸ್ತಾಂಬುಲ್‌ನಲ್ಲಿ ಪುಟಿನ್ ಅವರನ್ನು ಭೇಟಿ ಮಾಡಲು ಸಿದ್ಧ ಎಂದು ಝೆಲೆನ್‌ಸ್ಕಿ ಹೇಳಿದ್ದಾರೆ. ಪ್ರಸ್ತಾವಿತ ಉಕ್ರೇನ್-ರಷ್ಯಾ ಶಾಂತಿ ಮಾತುಕತೆಯಲ್ಲಿ ಪಾಲ್ಗೊಳ್ಳಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೂ ಮುಂದಾಗಿದ್ದಾರೆ. ಮಾತುಕತೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದಂತೆ ರಷ್ಯಾ ಹೆಚ್ಚಿನ ವಿವರಗಳನ್ನು ಬಿಟ್ಟುಕೊಟ್ಟಿಲ್ಲ.

ಟಾಟಾ ಮೋಟರ್ಸ್ ನಿವ್ವಳ ಲಾಭ ಇಳಿಕೆ

ನವದೆಹಲಿ (ಪಿಟಿಐ): 2024-25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಟಾಟಾ ಮೋಟರ್ಸ್‌ನ ನಿವ್ವಳ ಲಾಭದಲ್ಲಿ ಶೇ 51ರಷ್ಟು ಇಳಿಕೆಯಾಗಿದೆ.

ಈ ತ್ರೈಮಾಸಿಕದಲ್ಲಿ ₹8,556 ಕೋಟಿ ನಿವ್ವಳ ಲಾಭ ಗಳಿಸಿದೆ. 2023–24ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹17,528 ಕೋಟಿ ಲಾಭ ಗಳಿಸಿತ್ತು. ವಾಹನಗಳ ಮಾರಾಟದಲ್ಲಿ ಇಳಿಕೆಯಾಗಿರುವುದು ಮತ್ತು ವರಮಾನದಲ್ಲಿ ಕಡಿಮೆ ಆಗಿರುವುದೇ ಲಾಭದ ಪ್ರಮಾಣ ಇಳಿಕೆಗೆ ಕಾರಣ ಎಂದು ಕಂಪನಿಯು ಮಂಗಳವಾರ ಷೇರುಪೇಟೆಗೆ ತಿಳಿಸಿದೆ.

'ಟ್ರಂಪ್ ಆದೇಶ: ಜೆನೆರಿಕ್ ಉದ್ಯಮಕ್ಕೆ ಬಾಧಿಸಲ್ಲ'

ನವದೆಹಲಿ (ಪಿಟಿಐ): ಔಷಧಗಳ ಬೆಲೆ ಇಳಿಕೆ ಮಾಡುವಂತೆ ಔಷಧ ಕಂಪನಿಗಳಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿರುವ ಗಡುವು ದೇಶೀಯ ಜೆನೆರಿಕ್ ಔಷಧಗಳ ಉದ್ಯಮದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಭಾರತೀಯ ಔಷಧ ತಯಾರಕರ ಒಕ್ಕೂಟ ಹೇಳಿದೆ.

ವೈದ್ಯರ ಸಲಹೆ ಮೇರೆಗೆ (ಪ್ರಿಸ್ಕ್ರಿಪ್ಷನ್ ಡ್ರಗ್ಸ್) ರೋಗಿಗಳಿಗೆ ನೀಡುವ ಔಷಧಗಳ ಬೆಲೆ ಇಳಿಕೆಗೆ ಸಂಬಂಧಿಸಿದ ಕಾರ್ಯಾದೇಶಕ್ಕೆ ಟ್ರಂಪ್ ಸಹಿ ಹಾಕಿದ್ದು, 30 ದಿನಗಳ ಗಡುವು ನೀಡಿದ್ದಾರೆ. ಈ ಆದೇಶವು ಹೊಸ ಔಷಧಗಳನ್ನು ತಯಾರಿಸುವ ಕಂಪನಿಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

'ಜೆನೆರಿಕ್ ಉದ್ಯಮವು ಕಡಿಮೆ ಲಾಭದಲ್ಲಿ ಕಾರ್ಯ ನಿರ್ವಹಿಸುತ್ತದೆ. ಅಮೆರಿಕದಲ್ಲಿ ಈ ಉದ್ಯಮದ ಮಾರುಕಟ್ಟೆ ಮೌಲ್ಯ ಶೇ 13ರಷ್ಟಿದೆ. ಹಾಗಾಗಿ, ಟ್ರಂಪ್ ಆದೇಶವು ಹೆಚ್ಚಿನ ಪರಿಣಾಮ ಬೀರುವುದಿಲ್ಲ' ಎಂದು ಒಕ್ಕೂಟ ತಿಳಿಸಿದೆ.

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1380	(1375)
ಸೋಯಾ (ರಿಫೈನ್ಡ್)	₹1285	(1290)
ಸೂರ್ಯಕಾಂತಿ (ರಿಫೈನ್ಡ್)	₹1390	(1395)
ಪಾಮೋಲಿನ್	₹1240	(1230)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹192
ಆರ್‌ಎಸ್‌ಎಸ್-5	₹187
ಗುಡ್ ಲಾಟ್	₹177

ಮುಂಬೈ ಧಾರಣೆ

ಶೇಂಗಾ

13-05-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1390 (1385)
ಒಂದು ವಾರದ ಡೆಲಿವರಿ	1385 (1380)
ಪಾಮ್ ವಾರದ ಡೆಲಿವರಿ	1238 (1228)
ಸೂರ್ಯಕಾಂತಿ ಎಣ್ಣೆ ಕಚ್ಚಾ	1320 (1330)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ	₹94,050 (92,800)
ಬೆಳ್ಳಿ ಕೆ.ಜಿ	₹96,850 (94,250)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ	
ಅಪಿ	53719-54129
ಬೆಟ್ಟೆ	29249-29699
ಕೆಂಪುಗೋಟು	20409-20810
ರಾಶಿ	53239-53669
ಕಾರ್ಕಳ	
ಹೊಸತು	25000-46000
ಹಳತು	30000-49000
ಪುತ್ತೂರು	
ಕೋಕ	20000-30000
ಹೊಸತು	26000-46000
ಹಳತು	36000-49000
ಸಾಗರ	
ಬಿಳಿಗೋಟು	12099-28011
ಚಾಲಿ	35699-38529
ಕೋಕ	16899-28055
ರಾಶಿ	36699-53099
ಸಿಪ್ಪೆಗೋಟು	10700-17877
ಶಿವಮೊಗ್ಗ	
ಬೆಟ್ಟೆ	51554-58709
ಗೊರಬಲು	18009-30399
ರಾಶಿ	49009-57059
ಸರಕು	60129-98896
ಸಿದ್ದಾಪುರ	
ಬಿಳಿಗೋಟು	25899-32009
ಚಾಲಿ	35089-41299
ಕೋಕ	14699-25699
ಕೆಂಪುಗೋಟು	19609-23119
ರಾಶಿ	42089-46199
ತಟ್ಟಿಬೆಟ್ಟೆ	27909-39619
ಶಿರಸಿ	
ಬೆಟ್ಟೆ	28499-38099
ಬಿಳಿಗೋಟು	18191-31699
ಚಾಲಿ	34218-43001
ಕೆಂಪುಗೋಟು	13666-23699
ರಾಶಿ	40109-47609
ಯಲ್ಲಾಪುರ	
ಅಪಿ	65699-68915
ಬಿಳಿಗೋಟು	16189-32600
ಚಾಲಿ	33099-43711
ಕೋಕ	6810-17000
ಕೆಂಪುಗೋಟು	17699-26375
ರಾಶಿ	39699-54999
ತಟ್ಟಿಬೆಟ್ಟೆ	29800-39496

ಹಲವು ಒಪ್ಪಂದಗಳಿಗೆ ಸಹಿ: ಕತಾರ್, ಯುಎಇಗೂ ಪ್ರವಾಸ

ಸೌದಿ ಅರೇಬಿಯಾಕ್ಕೆ ಬಂದಿಳಿದ ಟ್ರಂಪ್

ರಿಯಾದ್ (ಎಪಿ): ನಾಲ್ಕು ದಿನ ಪಶ್ಚಿಮ ಏಷ್ಯಾ ಪ್ರವಾಸ ಕೈಗೊಂಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಂಗಳವಾರ ಸೌದಿ ಅರೇಬಿಯಾಕ್ಕೆ ಬಂದಿಳಿದರು. ಟ್ರಂಪ್ ಅವರಿಗೆ ವೈಭವೋಪೇತ ಸ್ವಾಗತ ಕೋರಲಾಯಿತು.

ಕಿಂಗ್ ಖಾಲಿದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದ ಟ್ರಂಪ್ ಅವರನ್ನು ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಅವರು ಬರಮಾಡಿಕೊಂಡರು. ಸೌದಿ ಅರೇಬಿಯಾದ ವಾಯುಗಡಿ ಪ್ರವೇಶಿಸಿದ ಟ್ರಂಪ್ ಅವರ ಅಧಿಕೃತ 'ಏರ್ ಫೋರ್ಸ್ ಒನ್' ವಿಮಾನದ ಬೆಂಗಾವಲಿಗೆ ರಾಜಮನೆತನದವರು ಬಳಸುವ ಏರ್ ಫೋರ್ಸ್ ಎಫ್–15 ವಿಮಾನವನ್ನು ನಿಯೋಜಿಸಲಾಗಿತ್ತು.

ಇರಾನ್ ನಡೆಸುತ್ತಿರುವ ಅಣ್ವಸ್ತ್ರ ಯೋಜನೆ ಮತ್ತು ಗಾಜಾದಲ್ಲಿ ಇಸ್ರೇಲ್ ನಡೆಸುತ್ತಿರುವ ಯುದ್ಧದ ವಿಚಾರಗಳೂ ಈ ಭೇಟಿಯಲ್ಲಿ ಪ್ರಮುಖವಾಗಿ ಚರ್ಚೆಯಾಗಲಿವೆ ಎನ್ನಲಾಗಿದೆ. ದೊಡ್ಡ ಮಟ್ಟದಲ್ಲಿ 'ಅಮೆರಿಕ–ಸೌದಿ ಹೂಡಿಕೆ ಸಮಾವೇಶ'ವನ್ನು ಆಯೋಜಿಸಲಾಗಿದೆ.

ಟೆಸ್ಲಾ ಸಂಸ್ಥೆ ಸಿಇಒ ಇಲಾನ್ ಮಸ್ಕ್ ಸೇರಿದಂತೆ ಅಮೆರಿಕದ ದೊಡ್ಡ ದೊಡ್ಡ ಉದ್ಯಮಿಗಳನ್ನು ಟ್ರಂಪ್ ಅವರು ತಮ್ಮೊಂದಿಗೆ ಕರೆದುಕೊಂಡು ಬಂದಿದ್ದಾರೆ. ಸಮಾವೇಶದಲ್ಲಿ ಟ್ರಂಪ್ ಅವರೂ ಭಾಗವಹಿಸಲಿದ್ದಾರೆ. ಸೌದಿ ಅರೇಬಿಯಾದ ದೊಡ್ಡ ಉದ್ಯಮಿಗಳು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಇಸ್ರೇಲ್ ಮತ್ತು ಸೌದಿ ಅರೇಬಿಯಾದ ಮಧ್ಯದ ಹಳಸಿದ ಸಂಬಂಧವನ್ನು ಸರಿಪಡಿಸಲು ಟ್ರಂಪ್ ಅವರು ಯತ್ನ ನಡೆಸಲಿದ್ದಾರೆ ಎಂದೂ ಹೇಳಲಾಗಿದೆ.

ರಿಯಾದ್‌ನಲ್ಲಿರುವ ಅರಮನೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಸೌದಿ ಅರೇಬಿಯಾದ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಅವರು ಮಂಗಳವಾರ ಮಾತುಕತೆ ನಡೆಸಿದರು –ಎಎಫ್‌ಪಿ ಚಿತ್ರ

ಟ್ರಂಪ್ ಮಕ್ಕಳ ರಿಯಲ್ ಎಸ್ಟೇಟ್ ಯೋಜನೆ

ಎರಡನೇ ಬಾರಿಗೆ ಅಧ್ಯಕ್ಷರಾದ ಬಳಿಕ ಟ್ರಂಪ್ ಅವರು ಇದೇ ಮೊದಲ ಬಾರಿಗೆ ವಿದೇಶಗಳಿಗೆ ಭೇಟಿ ನೀಡುತ್ತಿದ್ದಾರೆ. ನಾಲ್ಕು ದಿನಗಳ ತಮ್ಮ ಭೇಟಿಯಲ್ಲಿ ಟ್ರಂಪ್ ಅವರು ಸೌದಿ ಅರೇಬಿಯಾ, ಕತಾರ್ ಮತ್ತು ಯುಎಇಗೆ ಭೇಟಿ ನೀಡಲಿದ್ದಾರೆ.

ಜೆದ್ದಾದಲ್ಲಿ ಟವರ್ ನಿರ್ಮಾಣ, ದುಬೈನಲ್ಲಿ ಐಷಾರಾಮಿ ಹೋಟೆಲ್ ಮತ್ತು ಕತಾರ್‌ನಲ್ಲಿ ಗಾಲ್ಫ್ ಸಂಕೀರ್ಣ ನಿರ್ಮಿಸುವ ಯೋಜನೆಯನ್ನು 'ಟ್ರಂಪ್ ಸಂಸ್ಥೆ' ಮುನ್ನಡೆಸುವ ಟ್ರಂಪ್ ಅವರ ಇಬ್ಬರು ಮಕ್ಕಳು ಈಗಾಗಲೇ ಆರಂಭಿಸಿದ್ದಾರೆ.

ಈ ಮೂರು ದೇಶಗಳ ಜೊತೆ ಕೃತಕ ಬುದ್ಧಿಮತ್ತೆ, ವಿದ್ಯುತ್ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಅಮೆರಿಕವು ಒಪ್ಪಂದ ಮಾಡಿಕೊಳ್ಳುವ ನಿರೀಕ್ಷೆ ಇದೆ ಎನ್ನಲಾಗಿದೆ.

'ಎಂಎಚ್ 17 ವಿಮಾನ ದುರಂತ: ರಷ್ಯಾ ಅಪರಾಧಿ'

ಮೆಲ್ಬರ್ನ್ (ಎಪಿ): 'ಮಲೇಷ್ಯಾ ವಿಮಾನಯಾನ ಸಂಸ್ಥೆಗೆ ಸೇರಿದ ಎಂಎಚ್ 17 ವಿಮಾನವನ್ನು ಉಕ್ರೇನ್‌ನ ಗಡಿ ಭಾಗದಲ್ಲಿರುವ ರಷ್ಯಾ ಬೆಂಬಲಿತ ಪ್ರತ್ಯೇಕತಾವಾದಿಗಳು ಕ್ಷಿಪಣಿ ಮೂಲಕ ದಾಳಿ ನಡೆಸಿ ಹೊಡೆದುರುಳಿಸಿದ್ದರು' ಎಂದು ಕೆನಾಡದ ಮೊಂಟ್ರಾಲ್‌ದಲ್ಲಿರುವ ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆಯು (ಐಸಿಎಒ) ಮಂಗಳವಾರ ತೀರ್ಪು ನೀಡಿದೆ.

ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ ನೀಡುವ ಬಗ್ಗೆ ಮುಂದಿನ ಕೆಲವು ವಾರಗಳಲ್ಲಿ ನಿರ್ಧಾರ ಕೈಗೊಳ್ಳುವುದಾಗಿ ಸಂಸ್ಥೆ ಹೇಳಿದೆ. ಈ ಘಟನೆಯು 2014ರ ಜುಲೈನಲ್ಲಿ ನಡೆದಿತ್ತು ಮತ್ತು ದುರಂತದಲ್ಲಿ ಸುಮಾರು 298 ಮಂದಿ ಮೃತಪಟ್ಟಿದ್ದರು. ತೀರ್ಪಿನ ಕುರಿತು ರಷ್ಯಾವು ಪ್ರತಿಕ್ರಿಯೆ ನೀಡಿಲ್ಲ. ಆದರೆ, ತಮ್ಮ ಮೇಲಿನ ಎಲ್ಲ ಆರೋಪಗಳನ್ನು ರಷ್ಯಾ ಹಿಂದಿನಿಂದ ನಿರಾಕರಿಸುತ್ತಲೇ ಇದೆ.

ನಾಗರಿಕ ವಿಮಾನದ ಮೇಲೆ ಯಾವುದೇ ಕಾರಣಕ್ಕೂ ಸಶಸ್ತ್ರ ದಾಳಿ ನಡೆಸಬಾರದು ಎಂದು ಷಿಕಾಗೊ ಸಮ್ಮೇಳನದಲ್ಲಿ ಮಾಡಿಕೊಂಡ ಒಪ್ಪಂದವನ್ನು ರಷ್ಯಾ ಉಲ್ಲಂಘಿಸಿದೆ ಎಂದು ತೀರ್ಪಿನಲ್ಲಿ ಹೇಳಲಾಗಿದೆ. 193 ಸದಸ್ಯ ರಾಷ್ಟ್ರಗಳಿರುವ ಈ ಸಂಸ್ಥೆಯು ಇತಿಹಾಸದಲ್ಲಿಯೇ ಮೊದಲ ಬಾರಿಗೆ ಪ್ರಕರಣವೊಂದನ್ನು ಇತ್ಯರ್ಥಪಡಿಸಿದೆ.

- 2014ರ ಜುಲೈ 17ರಂದು ನಡೆದಿದ್ದ ದುರಂತ
- 2016ರಲ್ಲಿ ಡಚ್ ದೇಶದ ನೇತೃತ್ವದಲ್ಲಿ ತನಿಖೆ ಆರಂಭ
- 2022ರಲ್ಲಿ ನೆದರ್ಲೆಂಡ್ಸ್ ಮತ್ತು ಆಸ್ಟ್ರೇಲಿಯಾ ಸರ್ಕಾರಗಳು ರಷ್ಯಾದ ವಿರುದ್ಧ ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ ಮುಂದೆ ಪ್ರಕರಣ ದಾಖಲಿಸಿದ್ದವು. ರಷ್ಯಾವು ಅಂತರರಾಷ್ಟ್ರೀಯ ನ್ಯಾಯಾಲಯವನ್ನು ಮಾನ್ಯ ಮಾಡುವುದಿಲ್ಲ. ಈ ಕಾರಣ ದಿಂದ ಈ ಸಂಸ್ಥೆಯ ಮುಂದೆ ಪ್ರಕರಣ ದಾಖಲಿಸಲಾಗಿತ್ತು
- 2025ರಲ್ಲಿ ತೀರ್ಪು ನೀಡಿದ ಅಂತರರಾಷ್ಟ್ರೀಯ ವಿಮಾನಯಾನ ಸಂಸ್ಥೆ

'ಮುಂದಿನ ಕ್ರಮ ಕೈಗೊಳ್ಳುವುದಕ್ಕಾಗಿ ನಿಮ್ಮ ಮುಂದೆ ರಷ್ಯಾವನ್ನು ಹಾಜರಾಗಲು ಆದೇಶಿಸಿ' ಎಂದು ನೆದರ್ಲೆಂಡ್ಸ್ ಮತ್ತು ಆಸ್ಟ್ರೇಲಿಯಾ ಸರ್ಕಾರಗಳು ವಿಮಾನಯಾನ ಸಂಸ್ಥೆಯನ್ನು ಕೋರಿವೆ. ಮಲೇಷ್ಯಾ ಏರ್‌ಲೈನ್ಸ್ ವಿಮಾನವು ಆಮ್‌ಸ್ಟರ್‌ಡ್ಯಾಮ್‌ನಿಂದ ಕೌಲಾಲಂಪುರಕ್ಕೆ ತೆರಳುತ್ತಿತ್ತು.

ಮೂರು ವರ್ಷ ಕಾಯಿಸಲಾರೆ

ಹಲವು ಸ್ಟಾರ್‌ಗಳನ್ನು ಹೊಂದಿರುವ ಸಿನಿಮಾವಾದರೂ, ನಾನು ಮೂರು ವರ್ಷ ತೆಗೆದುಕೊಂಡು ಒಂದು ಸಿನಿಮಾ ಮಾಡುವುದಿಲ್ಲ ಎಂದು ನಿರ್ದೇಶಕ ಲೋಕೇಶ್ ಕನಕರಾಜ್ ಹೇಳಿದ್ದಾರೆ. 'ಕೂಲಿ' ಸೇರಿದಂತೆ ಯಾವುದೇ ಸಿನಿಮಾವಾಗಿದ್ದರೂ ಆರರಿಂದ ಎಂಟು ತಿಂಗಳಲ್ಲಿ ಸಿನಿಮಾ ಮುಗಿಸುತ್ತೇನೆ' ಎಂದವರು ಸಂದರ್ಶನದಲ್ಲಿ ತಿಳಿಸಿದ್ದಾರೆ.

ಐಶ್ವರ್ಯ, ಆಯುಷ್, ಉಪೇಂದ್ರ, ಪ್ರಿಯಾಂಕ ಉಪೇಂದ್ರ

ಬೆಳ್ಳಿತೆರೆಗೆ ಉಪ್ಪಿ ಪುತ್ರ ಆಯುಷ್

ಅಭಿಲಾಷ್ ಪಿ.ಎಸ್.

ನಟ ಉಪೇಂದ್ರ–ನಟಿ ಪ್ರಿಯಾಂಕ ಉಪೇಂದ್ರ ಅವರ ಪುತ್ರ ಆಯುಷ್ ಬೆಳ್ಳಿತೆರೆಗೆ ಹೆಜ್ಜೆ ಇಡಲು ಸಜ್ಜಾಗಿದ್ದಾರೆ. ಯಶ್ ನಟನೆಯ 'ಮೊದಲಾಸಲ' ಸಿನಿಮಾ ನಿರ್ದೇಶಿಸಿದ್ದ ಪುರುಷೋತ್ತಮ್ ಸಿ. ಸೋಮನಾಥಪುರ ನಿರ್ದೇಶಿಸಲಿರುವ ಹೊಸ ಸಿನಿಮಾದಲ್ಲಿ ನಾಯಕನಾಗಿ ಆಯುಷ್ ನಟಿಸಲಿದ್ದಾರೆ. ವಿಶೇಷವೆಂದರೆ ತಾರಾಜೋಡಿಯ ಪುತ್ರಿ ಐಶ್ವರ್ಯ ಉಪೇಂದ್ರ ಈ ಸಿನಿಮಾದಲ್ಲಿ ಸಹಾಯಕ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

ಉಪೇಂದ್ರ ಅವರ ಅಣ್ಣನ ಮಗ ನಿರಂಜನ್ ಸುಧೀಂದ್ರ ಈಗಾಗಲೇ ಚಿತ್ರರಂಗಕ್ಕೆ ಹೆಜ್ಜೆ ಇಟ್ಟಾಗಿದೆ. 'ದೇವಕಿ' ಸಿನಿಮಾದಲ್ಲಿ ಐಶ್ವರ್ಯ ಸಣ್ಣ ಪಾತ್ರವೊಂದನ್ನು ನಿಭಾಯಿಸಿದ್ದರು. ಇದೀಗ ಆಯುಷ್ ಸರದಿ. ಇತ್ತೀಚೆಗಷ್ಟೇ ಮಂತ್ರಾಲಯದಲ್ಲಿ ತಮ್ಮ ಹೊಸ ಸಿನಿಮಾದ ಸ್ಕ್ರಿಪ್ಟ್ ಪೂಜೆಯ ಜೊತೆ ಜೊತೆಗೇ 21ನೇ ಜನ್ಮದಿನವನ್ನು ಕುಟುಂಬದ ಸಮ್ಮುಖದಲ್ಲಿ ಆಯುಷ್ ಆಚರಿಸಿದ್ದಾರೆ. ಕಲ್ಪವೃಕ್ಷ ಮೂವೀ ಮೇಕರ್ಸ್ ಬ್ಯಾನರ್‌ನಡಿ ಅಭಿಷೇಕ್ ಎನ್.ಎಸ್. ಈ ಸಿನಿಮಾವನ್ನು ನಿರ್ಮಾಣ ಮಾಡಲಿದ್ದಾರೆ. ಎಚ್.ಸಿ.ವೇಣು ಅವರ ಛಾಯಾಚಿತ್ರಗ್ರಹಣ ಚಿತ್ರಕ್ಕಿರಲಿದೆ. ಸದ್ಯಕ್ಕೆ ಲೊಕೇಷನ್ ಹುಡುಕಾಟ ಹಾಗೂ ಫೋಟೊಶೂಟ್‌ಗೆ ಸಿದ್ಧತೆ ನಡೆಸಿರುವ ಚಿತ್ರತಂಡ ಮೂರ್ನಾಲ್ಕು ತಿಂಗಳಲ್ಲಿ ಚಿತ್ರೀಕರಣಕ್ಕೆ ಇಳಿಯಲಿದೆ.

'ಅಪ್ಪನ ಬ್ಯಾನರ್‌ನಡಿ ಸಿನಿಮಾ ಮಾಡಲ್ಲ'

'ಆಯುಷ್‌ಗೆ ಮೊದಲಿನಿಂದಲೂ ಕಲೆ ಹಾಗೂ ಸಂಗೀತದ ಬಗ್ಗೆ ಆಸಕ್ತಿ ಇತ್ತು. ನಟನೆಯತ್ತ ಹೆಚ್ಚಿನ ಒಲವು ಇರಲಿಲ್ಲ. ಕಾಲೇಜು ಶಿಕ್ಷಣದ ಬಳಿಕ ಸೃಷ್ಟಿ ಮಣಿಪಾಲ್‌ನಲ್ಲಿ ಫಿಲ್ಮ್ ಮೇಕಿಂಗ್ ಕೋರ್ಸ್ ಮಾಡುತ್ತಿದ್ದಾನೆ. ಇನ್ನೂ ಒಂದು ವರ್ಷದ ಓದು ಬಾಕಿ ಇದೆ. ಐಶ್ವರ್ಯಳೂ ಇದೇ ಕೋರ್ಸ್ ಮಾಡುತ್ತಿದ್ದಾಳೆ. ಈ ಸಂದರ್ಭದಲ್ಲಿ ಎಚ್.ಸಿ.ವೇಣು ಅವರು ಕಥೆಯೊಂದನ್ನು ತಂದರು. ಉಪೇಂದ್ರ ಅವರ 'ಎ' ಸಿನಿಮಾಗೆ, ನನ್ನ 'ದೇವಕಿ' ಸಿನಿಮಾಗೆ ಛಾಯಾಚಿತ್ರಗ್ರಹಣ ಮಾಡಿದ್ದ ವೇಣು ಅವರು ನಮ್ಮ ಕುಟುಂಬದಂತೆ. ಬಹಳ ಕ್ಯೂಟ್ ಆಗಿರುವ ಈ ಪ್ರೇಮಕಥೆ ಆಯುಷ್‌ಗೆ ಸೂಕ್ತವಾಗಿರಲಿದೆ ಎಂದರು. ನಮಗೂ ಕಥೆ ಇಷ್ಟವಾಯಿತು. ಮೊದಲ ಸಿನಿಮಾವನ್ನು ಅಪ್ಪನ ಬ್ಯಾನರ್‌ನಡಿ ಮಾಡುವುದಿಲ್ಲ ಎಂದು ಆಯುಷ್ ನೇರವಾಗಿ ಹೇಳಿದ್ದ. ಸದ್ಯಕ್ಕೆ ಇಂಟರ್ನ್‌ಶಿಪ್ ಮಾಡುತ್ತಿರುವ ಆಯುಷ್ ಸಿನಿಮಾಗೆ ಸಜ್ಜಾಗುತ್ತಿದ್ದಾನೆ' ಎಂದು ಪ್ರಿಯಾಂಕ ಉಪೇಂದ್ರ ಮಾಹಿತಿ ನೀಡಿದರು.

> ಇದೊಂದು ಫ್ರೆಶ್ ಕಾಲೇಜು ಲವ್‌ಸ್ಟೋರಿ. ಇನ್ನೊಂದು ತಿಂಗಳಲ್ಲಿ ಈ ಚಿತ್ರದ ಮುಹೂರ್ತ ನಡೆಯಲಿದೆ. ಸದ್ಯಕ್ಕೆ ಸಿನಿಮಾ ಬೇಡ ಎಂದು ಮಗಳು ಐಶ್ವರ್ಯ ಹೇಳಿದ್ದಾಳೆ. ಮನಃಶಾಸ್ತ್ರದಲ್ಲಿ ಆಕೆಗೆ ಆಸಕ್ತಿ ಇದೆ.
> –ಪ್ರಿಯಾಂಕ ಉಪೇಂದ್ರ, ನಟಿ

'ದೊಡ್ಡ ಜವಾಬ್ದಾರಿ ನಿನ್ನ ಮೇಲಿದೆ. ಒಪ್ಪಿಕೊಂಡ ಮೇಲೆ ಶ್ರಮಪಟ್ಟು ಜವಾಬ್ದಾರಿ ಪೂರ್ಣಗೊಳಿಸಬೇಕು ಎಂಬಿತ್ಯಾದಿ ಸಲಹೆಗಳನ್ನು ನಾನು, ಉಪೇಂದ್ರ ನೀಡಿದ್ದೇವೆ. ಏನೇ ಸಲಹೆ ನೀಡಿದರೂ ಅನುಭವದಿಂದಷ್ಟೇ ಕಲಿಯಲು ಸಾಧ್ಯ. ಆಯುಷ್ ಹಾಗೂ ಐಶ್ವರ್ಯಳ ಆಸಕ್ತಿ ಬೇರೆ ಬೇರೆಯಾಗಿದೆ. ಕೋರ್ಸ್ ಓದುತ್ತಿರುವ ಸಂದರ್ಭದಲ್ಲಿ ಕಿರುಚಿತ್ರ, ಸಾಕ್ಷ್ಯಚಿತ್ರಗಳನ್ನು ಆಯುಷ್ ಮಾಡಿದ್ದಾನೆ. ಅಪ್ಪನ ಸಿನಿಮಾಗಳನ್ನು ನೋಡಿದ್ದಾನೆ. ಸಿನಿಮಾದವರೇ ಆತನ ಸುತ್ತ-ಮುತ್ತಲಿರುವಾಗ ಅದರಿಂದಲೂ ಒಂದಿಷ್ಟು ವಿಷಯಗಳನ್ನು ತಿಳಿದುಕೊಂಡಿದ್ದಾನೆ. ಸಿನಿಮಾ ಕ್ಷೇತ್ರಕ್ಕೆ ಹೆಜ್ಜೆ ಇಡುವಂತೆ ನಮ್ಮ ಒತ್ತಡವಿರಲಿಲ್ಲ. ನಾನೂ ಈ ಕ್ಷೇತ್ರಕ್ಕೆ ಹೆಜ್ಜೆ ಇಡಬಹುದು ಎಂದು ಆತನಿಗೇ ಅನಿಸಿರಬಹುದು. ಆತ ಕಥೆ ಬರೆಯುತ್ತಾನೆ. ನಿರ್ದೇಶನದ ಮೇಲೂ ಆಸಕ್ತಿ ಇದೆ' ಎಂದು ಮಗನ ಮೊದಲ ಹೆಜ್ಜೆಯ ಬಗ್ಗೆ ವಿವರಿಸಿ ಪ್ರಿಯಾಂಕ ಮಾತಿಗೆ ವಿರಾಮವಿತ್ತರು.



ಸಪ್ತಮಿ ಗೌಡ

ನಿತಿನ್‌ಗೆ ಜೋಡಿಯಾದ ಸಪ್ತಮಿ ಗೌಡ

'ಕಾಂತಾರ' ಖ್ಯಾತಿಯ ನಟಿ ಸಪ್ತಮಿ ಗೌಡ ಬಾಲಿವುಡ್ ಬಳಿಕ ಇದೀಗ ಟಾಲಿವುಡ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ತೆಲುಗು ನಟ ನಿತಿನ್‌ಗೆ ನಾಯಕಿಯಾಗಿದ್ದಾರೆ. ಈ ಜೋಡಿಯ 'ಮೂಡ್ ಆಫ್ ತಮ್ಮುಡು' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಶ್ರೀರಾಮ್ ವೇಣು ಈ ಚಿತ್ರವನ್ನು ಬರೆದು ನಿರ್ದೇಶಿಸಿದ್ದಾರೆ. ರತ್ನ ಪಾತ್ರದ ಮೂಲಕ ಹಳ್ಳಿ ಹುಡುಗಿ ಗೆಟಪ್‌ನಲ್ಲಿ ಸಪ್ತಮಿ ಕಾಣಿಸಿಕೊಂಡಿದ್ದು, ಲಂಗ ದಾವಣಿಯೊಂದಿಗೆ ಗಮನ ಸೆಳೆದಿದ್ದಾರೆ. ನಾಯಕ ನಿತಿನ್ ಬಿಲ್ಲು, ಬಾಣದೊಂದಿಗೆ ಆರ್ಚರಿ ಆಟಗಾರನ ಗೆಟಪ್‌ನಲ್ಲಿದ್ದಾರೆ.

ಇವರೊಂದಿಗೆ ಕೊಡಗಿನ ನಟ ವರ್ಷ ಬೊಳ್ಳಮ್ಮ, ಸೌರಭ್ ಸಚ್‌ದೇವ್ ಸೇರಿದಂತೆ ಅನೇಕರು ನಟಿಸಿದ್ದಾರೆ. ದಿಲ್ ರಾಜು ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತವಿರುವ ಚಿತ್ರ ಜುಲೈ 4ರಂದು ತೆರೆಗೆ ಬರಲಿದೆ.

ರಾಮ್ ಪೋತಿನೇನಿ ಜತೆ ಉಪೇಂದ್ರ

'ಯುಐ' ಬಳಿಕ ಉಪೇಂದ್ರ ಬಳಿ ಸಾಲು ಸಾಲು ಚಿತ್ರಗಳಿವೆ. ತಮಿಳಿನ 'ಕೂಲಿ' ಸಿನಿಮಾದಲ್ಲಿ ರಜನಿಕಾಂತ್ ಜತೆ ನಟಿಸಿರುವುದು ಗೊತ್ತೇ ಇದೆ. ಲೋಕೇಶ್ ಕನಕರಾಜ್ ನಿರ್ದೇಶನದ ಈ ಚಿತ್ರ ಆ.14ರಂದು ತೆರೆಗೆ ಬರುತ್ತಿದೆ. ಇದೀಗ ತೆಲುಗಿನ ಇನ್ನೂ ಹೆಸರಿಡದ ಚಿತ್ರವೊಂದರಲ್ಲಿ ಅಭಿನಯಿಸುತ್ತಿದ್ದಾರೆ. ರಾಮ್ ಪೋತಿನೇನಿ ಅವರ 22ನೇ ಸಿನಿಮಾವಿದು. ಸದ್ಯ 'RAPO22' ಎಂಬ ಶೀರ್ಷಿಕೆಯಿದೆ. ಇದರಲ್ಲಿ ಉಪೇಂದ್ರ ಸೂರ್ಯ ಕುಮಾರ್ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಚಿತ್ರತಂಡ ಉಪೇಂದ್ರ ಪಾತ್ರ ಪರಿಚಯಿಸುವ ಪೋಸ್ಟರ್ ಬಿಡುಗಡೆ ಮಾಡಿದೆ.

ಈ ಚಿತ್ರಕ್ಕೆ ಮಹೇಶ್ ಬಾಬು ನಿರ್ದೇಶನವಿದೆ. ಇವರು ಈ ಹಿಂದೆ ತೆಲುಗಿನ ಸೂಪರ್ ಹಿಟ್ 'ಮಿಸ್ ಶೆಟ್ಟಿ ಮಿಸ್ಟರ್ ಪೋಲಿಶೆಟ್ಟಿ' ಚಿತ್ರ ನಿರ್ದೇಶಿಸಿದ್ದರು. ಚಿತ್ರದಲ್ಲಿ ಪೋತಿನೇನಿ ಸಾಗರ್ ಕುಮಾರ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಉಪೇಂದ್ರ, ನಾಯಕನ ಸಹೋದರ ಪಾತ್ರದಲ್ಲಿ ಕಾಣಿಸಿಕೊಂಡಿರಬಹುದು ಎನ್ನಲಾಗಿದೆ.

ಭಾಗ್ಯಶ್ರೀ ಬೋರ್ಸೆ ನಾಯಕಿ. ಸಿನಿಮಾದ ಚಿತ್ರೀಕರಣ ಈಗಾಗಲೇ ಆರಂಭವಾಗಿದ್ದು, ಇದೀಗ ನಟ ಉಪೇಂದ್ರ ಸಿನಿಮಾ ತಂಡ ಸೇರಿಕೊಂಡಿದ್ದಾರೆ. ತೆಲುಗಿನ ಜನಪ್ರಿಯ ನಿರ್ಮಾಣ ಸಂಸ್ಥೆ ಮೈತ್ರಿ ಮೂವಿ ಮೇಕರ್ಸ್ ಬೃಹತ್ ಬಜೆಟ್‌ನಲ್ಲಿ ಈ ಸಿನಿಮಾ ನಿರ್ಮಿಸುತ್ತಿದೆ.

ದಶಕಗಳಿಂದಲೂ ಉಪೇಂದ್ರ ತೆಲುಗು ಚಿತ್ರರಂಗದೊಂದಿಗೆ ನಂಟು ಹೊಂದಿದ್ದಾರೆ. ಅಲ್ಲಿ ಅವರದ್ದೇ ಆದ ಅಭಿಮಾನಿ ಬಳಗವೂ ಇದೆ. ಹೀಗಾಗಿ ಅವರು ತಮ್ಮ 'ಯುಐ' ಚಿತ್ರವನ್ನು ತೆಲುಗಿನಲ್ಲಿಯೂ ಬಹಳ ಮುತುವರ್ಜಿ ವಹಿಸಿ ಬಿಡುಗಡೆ ಮಾಡಿದ್ದರು. 1997ರಲ್ಲಿ 'ಓಂಕಾರ' ಎಂಬ ತೆಲುಗು ಸಿನಿಮಾ ನಿರ್ದೇಶನ ಮಾಡಿದ್ದರು. ಅದು ಕನ್ನಡದ 'ಓಂ' ಸಿನಿಮಾದ ರೀಮೇಕ್. 'ಕನ್ಯಾದಾನಂ', 'ಒಕೇ ಮಾಟ', ಅಲ್ಲು ಅರ್ಜುನ್ ಜತೆ 'ಸನ್ ಆಫ್ ಸತ್ಯಮೂರ್ತಿ' ಮೊದಲಾದ ಚಿತ್ರಗಳಲ್ಲಿ ಉಪೇಂದ್ರ ಕಾಣಿಸಿಕೊಂಡಿದ್ದಾರೆ.

ಸದ್ಯ ಅವರು ಅರ್ಜುನ್ ಜನ್ಯ ನಿರ್ದೇಶನದ '45' ಚಿತ್ರದಲ್ಲಿ ಮಗ್ನರಾಗಿದ್ದಾರೆ. 'ಬುದ್ಧಿವಂತ–2' ಬಿಡುಗಡೆಗೆ ಸಿದ್ಧವಿದೆ. ನಿರ್ದೇಶಕ ನಾಗಣ್ಣ ಜತೆ 'ಭಾರ್ಗವ' ಸಿನಿಮಾ ಮಾಡುತ್ತಿದ್ದಾರೆ.

'ಪೀಟರ್'ಗೆ ಅಜಯ್ ಗೋಗವಾಲೆ ದನಿ

ಅಜಯ್ ಗೋಗವಾಲೆ

ಸುಕೇಶ್ ಶೆಟ್ಟಿ ಆ್ಯಕ್ಷನ್ ಕಟ್ ಹೇಳಿರುವ 'ಪೀಟರ್' ಸಿನಿಮಾ ನಿರ್ಮಾಣ ಹಂತದಲ್ಲಿದೆ. ಈ ಸಿನಿಮಾದ ಹಾಡೊಂದಕ್ಕೆ ಖ್ಯಾತ ಗಾಯಕ ಅಜಯ್ ಗೋಗವಾಲೆ ದನಿಯಾಗಿದ್ದಾರೆ. ಇತ್ತೀಚೆಗೆ ಹಾಡಿನ ರೆಕಾರ್ಡಿಂಗ್ ನಡೆಯಿತು.

ಮಲಯಾಳ ಗಾಯಕ ಪ್ರಣವಂ ಸಸಿಯಿಂದ ಇತ್ತೀಚೆಗಷ್ಟೇ ಚಿತ್ರದ ಹಾಡೊಂದನ್ನು ಹಾಡಿಸಿದ್ದ ಚಿತ್ರತಂಡವೀಗ ಮತ್ತೊಂದು ಹಾಡಿಗೆ ಬಾಲಿವುಡ್ ಗಾಯಕನನ್ನು ಕರೆಸಿದೆ. ಬಾಲಿವುಡ್ ಹಾಗೂ ಮರಾಠಿಯ ಹಲವು ಸಿನಿಮಾಗಳಿಗೆ ಸಂಗೀತ ನಿರ್ದೇಶನ ಮಾಡಿ ದನಿ ನೀಡಿರುವ ಅಜಯ್ ಇದೀಗ ಕನ್ನಡದ ಹಾಡೊಂದನ್ನು ಹಾಡಿದ್ದಾರೆ. ಚಿತ್ರಕ್ಕೆ ರಿತ್ವಿಕ್ ಮುರಳೀಧರ್ ಸಂಗೀತ ನಿರ್ದೇಶನವಿದೆ.

ಮಡಿಕೇರಿಯ ಸುತ್ತಲ ವಾತಾವರಣದಲ್ಲಿ ನಡೆಯುವ ಸಸ್ಪೆನ್ಸ್ ಡ್ರಾಮಾ ಕಥಾಹಂದರವನ್ನು 'ಪೀಟರ್' ಹೊಂದಿದೆ. ಸಿನಿಮಾದಲ್ಲಿ ರಾಜೇಶ್ ಧ್ರುವ, ಜಾಹ್ನವಿ ರಾಯಲ, ರವೀಕ್ಷಾ ಶೆಟ್ಟಿ, ಪ್ರತಿಮಾ ನಾಯಕ್, ರಘು ಪಾಂಡೇಶ್ವರ್, ರಾಮ ನಾಡಗೌಡ, ವರುಣ್ ಪಟೇಲ್ ನಟಿಸಿದ್ದಾರೆ. ರವಿ ಹೀರೆಮಠ್ ಹಾಗೂ ರಾಕೇಶ್ ಹೆಗಡೆ ವೃದ್ಧಿ ಸ್ಟುಡಿಯೊಸ್ ಬ್ಯಾನರ್‌ನಡಿ ಈ ಸಿನಿಮಾ ನಿರ್ಮಿಸಿದ್ದಾರೆ. ಗುರುಪ್ರಸಾದ್ ನರ್ನಾಡ್ ಛಾಯಾಚಿತ್ರಗ್ರಹಣ, ನವೀನ್ ಶೆಟ್ಟಿ ಸಂಕಲನ, ದೇವರಾಜ್ ಕಲಾ ನಿರ್ದೇಶನ ಚಿತ್ರಕ್ಕಿದೆ.

ಸಂಕ್ಷಿಪ್ತ ಸುದ್ದಿ

11 ಸೈನಿಕರ ಸಾವು: ಪಾಕ್

ಇಸ್ಲಾಮಾಬಾದ್ (ಪಿಟಿಐ): ಭಾರತದ ಜತೆಗಿನ ಸೇನಾ ಸಂಘರ್ಷದಲ್ಲಿ ತನ್ನ 11 ಸೈನಿಕರು ಮೃತಪಟ್ಟಿದ್ದು, ಇತರ 78 ಮಂದಿ ಗಾಯಗೊಂಡಿದ್ದಾರೆ ಎಂದು ಪಾಕಿಸ್ತಾನ ಮಂಗಳವಾರ ಹೇಳಿದೆ.

ಮೇ 6 ಮತ್ತು 7ರ ರಾತ್ರಿ ಭಾರತ ನಡೆಸಿದ 'ಅಪ್ರಚೋದಿತ ಮತ್ತು ಹೇಡಿತನದ ದಾಳಿಯಲ್ಲಿ' 40 ನಾಗರಿಕರು ಬಲಿಯಾಗಿದ್ದು, 121 ಜನರು ಗಾಯಗೊಂಡಿದ್ದಾರೆ ಎಂದು ಸೇನೆಯು ಹೇಳಿಕೆಯಲ್ಲಿ ತಿಳಿಸಿದೆ.

ನಾಲ್ಕು ದಿನ ನಡೆದ ಡ್ರೋನ್ ಮತ್ತು ಕ್ಷಿಪಣಿ ದಾಳಿಯ ನಂತರ ಸಂಘರ್ಷವನ್ನು ಕೊನೆಗೊಳಿಸಲು ಭಾರತ ಮತ್ತು ಪಾಕಿಸ್ತಾನ ಶನಿವಾರ ಕದನ ವಿರಾಮ ಒಪ್ಪಂದ ಮಾಡಿಕೊಂಡಿದ್ದವು.

'ತಾಯ್ನೆಲವನ್ನು ರಕ್ಷಿಸಲು ಹೋರಾಟ ನಡೆಸಿದ ಸಂದರ್ಭ ಪಾಕಿಸ್ತಾನದ ಸಶಸ್ತ್ರ ಪಡೆಗಳ 11 ಸಿಬ್ಬಂದಿ ಮೃತಪಟ್ಟಿದ್ದಾರೆ' ಎಂದು ಹೇಳಿಕೆ ತಿಳಿಸಿದೆ.

ಮೃತರಲ್ಲಿ ಪಾಕಿಸ್ತಾನ ವಾಯುಪಡೆಯ ಸ್ಕ್ವಾಡ್ರನ್ ಲೀಡರ್ ಉಸ್ಮಾನ್ ಯೂಸುಫ್, ಮುಖ್ಯ ತಂತ್ರಜ್ಞ ಔರಂಗಜೇಬ್, ಹಿರಿಯ ತಂತ್ರಜ್ಞರಾದ ನಜೀಬ್, ಮುಬಾಶಿರ್ ಮತ್ತು ಫಾರೂಕ್ ಸೇರಿದ್ದಾರೆ ಎಂದು ಮಾಹಿತಿ ನೀಡಿದೆ.

ಭೂಸೇನೆಯ ಯೋಧರಾದ ಅಬ್ದುಲ್ ರಹ್ಮಾನ್, ದಿಲಾವರ್ ಖಾನ್, ಇಕ್ರಮುಲ್ಲಾ, ವಕಾರ್ ಖಾಲಿದ್, ಮುಹಮ್ಮದ್ ಅದೀಲ್ ಅಕ್ಬರ್ ಮತ್ತು ನಿಸಾರ್ ಅವರು ಬಲಿಯಾಗಿದ್ದಾರೆ ಎಂದಿದೆ.

'ಟ್ರಂಪ್ ಹೇಳಿಕೆ ಸರ್ವ ಪಕ್ಷಗಳ ಸಭೆಯಲ್ಲಿ ಪ್ರಶ್ನೆ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಭಾರತ ಮತ್ತು ಪಾಕಿಸ್ತಾನದ ಕದನ ವಿರಾಮಕ್ಕೆ ತಮ್ಮ ಪ್ರಯತ್ನವೇ ಕಾರಣ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿಕೆ ಕೊಡುತ್ತಿದ್ದಾರೆ. ಈ ಬಗ್ಗೆ ಸರ್ವಪಕ್ಷಗಳ ಸಭೆಯಲ್ಲಿ ಪ್ರಸ್ತಾಪ ಮಾಡುತ್ತೇವೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಮಲ್ಲಿಕಾರ್ಜುನ ಖರ್ಗೆ

ಟ್ರಂಪ್ ನೀಡುತ್ತಿರುವ ಹೇಳಿಕೆ ಕುರಿತು ಮಂಗಳವಾರ ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಇದೊಂದು ಸೂಕ್ಷ್ಮ ವಿಚಾರ. ಕೇಂದ್ರ ಸರ್ಕಾರ ಸರ್ವ ಪಕ್ಷಗಳ ಸಭೆ ಕರೆಯಬೇಕು' ಎಂದರು.

'ಕದನ ವಿರಾಮ ಒಪ್ಪಂದದಲ್ಲಿ ಏನೇನು ಷರತ್ತುಗಳಿವೆ? ನಿಮ್ಮ (ಪ್ರಧಾನಿ ಮೋದಿ) ಮತ್ತು ಟ್ರಂಪ್ ದೂರವಾಣಿ ಕರೆಯಲ್ಲಿ ಏನು ಮಾತುಕತೆ ನಡೆಯಿತು ಎಂದು ಕೇಳುತ್ತೇವೆ. ಈಗ ಹೇಳಿದರೆ ಸರಿ ಕಾಣುವುದಿಲ್ಲ. ಸರ್ವ ಪಕ್ಷಗಳ ಸಭೆಯಲ್ಲಿ ಕೇಳುತ್ತೇವೆ' ಎಂದು ಪುನರುಚ್ಚರಿಸಿದರು.

ಸಿಬಿಎಸ್‌ಇ 12ನೇ ತರಗತಿ ಫಲಿತಾಂಶ ಪ್ರಕಟ • ಶೇ 88.39ರಷ್ಟು ವಿದ್ಯಾರ್ಥಿಗಳು ಉತ್ತೀರ್ಣ

ಬಾಲಕಿಯರ ಉತ್ತಮ ಸಾಧನೆ

ಸಿಬಿಎಸ್‌ಇ 12ನೇ ತರಗತಿ ಫಲಿತಾಂಶ ಮಂಗಳವಾರ ಪ್ರಕಟವಾಗಿದ್ದು, ರಾಂಚಿಯ ಶಾಲೆಯೊಂದರ ವಿದ್ಯಾರ್ಥಿಗಳು ಸಂಭ್ರಮಿಸಿದರು –ಪಿಟಿಐ ಚಿತ್ರ

ನವದೆಹಲಿ(ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 12ನೇ ತರಗತಿ ಫಲಿತಾಂಶವನ್ನು ಮಂಗಳವಾರ ಪ್ರಕಟಿಸಿದ್ದು, ಬಾಲಕಿಯರು ಉತ್ತಮ ಸಾಧನೆ ದಾಖಲಿಸಿದ್ದಾರೆ.

ಈ ವರ್ಷ 16,92,794 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಕಳೆದ ವರ್ಷಕ್ಕೆ ಹೋಲಿಸಿದರೆ, ಈ ಬಾರಿ ಶೇ 90ಕ್ಕೂ ಅಧಿಕ ಅಂಕ ಗಳಿಸಿರುವ ವಿದ್ಯಾರ್ಥಿಗಳ ಪ್ರಮಾಣದಲ್ಲಿ ಇಳಿಕೆ ಕಂಡು ಬಂದಿದೆ ಎಂದು ಮಂಡಳಿಯ ಪರೀಕ್ಷಾ ನಿಯಂತ್ರಕರಾದ ಸಂಯಮ್ ಭಾರದ್ವಾಜ್ ಹೇಳಿದ್ದಾರೆ.

ಪರೀಕ್ಷೆಗೆ ಹಾಜರಾಗಿದ್ದವರ ಪೈಕಿ, ಶೇ 88.39ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇದು ಕಳೆದ ವರ್ಷದ ಫಲಿತಾಂಶದ ಪ್ರಮಾಣ ಶೇ 87.98ಕ್ಕೆ ಹೋಲಿಸಿದರೆ, ಅಲ್ಪ ಪ್ರಮಾಣದ ಹೆಚ್ಚಳವಾದಂತಾಗಿದೆ. ಶೇ 91.64ರಷ್ಟು ಬಾಲಕಿಯರು ಹಾಗೂ ಶೇ 85.70ರಷ್ಟು ಬಾಲಕರು ತೇರ್ಗಡೆಯಾಗಿದ್ದಾರೆ ಎಂದೂ ತಿಳಿಸಿದ್ದಾರೆ.

ಪರೀಕ್ಷೆ ಹಾಜರಾಗಿದ್ದ ಲಿಂಗತ್ವ ಅಲ್ಪಸಂಖ್ಯಾತ ವಿದ್ಯಾರ್ಥಿಗಳೆಲ್ಲರೂ ಈ ಬಾರಿ ಉತ್ತೀರ್ಣರಾಗಿದ್ದಾರೆ. 290 'ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳು' (ಸಿಎಸ್‌ಡಬ್ಲ್ಯುಎನ್) ಶೇ 90ಕ್ಕೂ ಅಧಿಕ ಅಂಕ ಗಳಿಸಿ ಗಮನ ಸೆಳೆದಿದ್ದಾರೆ. ಈ ವರ್ಗದ 55 ವಿದ್ಯಾರ್ಥಿಗಳು ಶೇ 95ಕ್ಕೂ ಅಧಿಕ ಅಂಕ ಗಳಿಸಿ ಸಾಧನೆ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಈ ವರ್ಷ, ಒಂದು ಅಥವಾ ಹೆಚ್ಚು ವಿಷಯಗಳಲ್ಲಿ ಅನುತ್ತೀರ್ಣಗೊಂಡಿದ್ದ 1.29 ಲಕ್ಷ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ಕೊಡಲಾಗಿತ್ತು. ಕಳೆದ ವರ್ಷ ಇಂತಹ ವಿದ್ಯಾರ್ಥಿಗಳ ಸಂಖ್ಯೆ 1.22 ಲಕ್ಷ ಇತ್ತು.

ಜವಾಹರ ನವೋದಯ ವಿದ್ಯಾಲಯಗಳು ಶೇ 99.9ರಷ್ಟು ಫಲಿತಾಂಶದೊಂದಿಗೆ ಗರಿಷ್ಠ ತೇರ್ಗಡೆ ಪ್ರಮಾಣ ದಾಖಲಿಸಿದ್ದರೆ, ಖಾಸಗಿ/ಸ್ವತಂತ್ರ ಶಾಲೆಗಳು ಶೇ 87.94ರಷ್ಟು ಫಲಿತಾಂಶದೊಂದಿಗೆ ಅತ್ಯಂತ ಕಡಿಮೆ ಸಾಧನೆ ಮಾಡಿವೆ.

ಅಂಕಿ ಅಂಶಗಳು

24,867 ಶೇ 95ಕ್ಕೂ ಅಧಿಕ ಅಂಕ ಗಳಿಸಿರುವ ವಿದ್ಯಾರ್ಥಿಗಳ ಸಂಖ್ಯೆ

1,11,544 ಶೇ 90ಕ್ಕೂ ಅಧಿಕ ಅಂಕ ಗಳಿಸಿರುವ ವಿದ್ಯಾರ್ಥಿಗಳ ಸಂಖ್ಯೆ

95.84 % ವಿದೇಶಿ ಶಾಲೆಗಳ ಫಲಿತಾಂಶ

ಉತ್ತಮ ಸಾಧನೆ ದಾಖಲಿಸಿರುವ ಪ್ರದೇಶಗಳು

ಪ್ರದೇಶ	ಶೇ. ಅಂಕ	ಸ್ಥಾನ
ವಿಜಯವಾಡ	99.60	ಪ್ರಥಮ
ತಿರುವನಂತಪುರ	99.32	ದ್ವಿತೀಯ

'ಮೆರಿಟ್ ಪಟ್ಟಿ ಘೋಷಣೆ ಇಲ್ಲ'

'ವಿದ್ಯಾರ್ಥಿಗಳಲ್ಲಿ ಅನಾರೋಗ್ಯಕರ ಪೈಪೋಟಿಯನ್ನು ಪ್ರೋತ್ಸಾಹಿಸಬಾರದು ಎಂಬ ದೃಷ್ಟಿಯಿಂದ ಈ ಬಾರಿ, 10 ಹಾಗೂ 12ನೇ ತರಗತಿ ಫಲಿತಾಂಶದಲ್ಲಿ ಮೆರಿಟ್ ಪಟ್ಟಿ ಅಥವಾ ದರ್ಜೆಗಳನ್ನು ಘೋಷಣೆ ಮಾಡಿಲ್ಲ' ಎಂದು ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕ ಸಂಯಮ್ ಭಾರದ್ವಾಜ್ ಹೇಳಿದ್ದಾರೆ.

'ಎಲ್ಲ ವಿಷಯಗಳಲ್ಲಿ ಅತ್ಯಧಿಕ ಅಂಕಗಳನ್ನು ಪಡೆದಿರುವ ಶೇ 0.1ರಷ್ಟು ವಿದ್ಯಾರ್ಥಿಗಳಿಗೆ ಅರ್ಹತಾ ಪ್ರಮಾಣಪತ್ರವನ್ನು ನೀಡಲಾಗುವುದು. ಈ ಪ್ರಮಾಣ ಪತ್ರಗಳು ವಿದ್ಯಾರ್ಥಿಗಳ ಡಿಜಿ ಲಾಕರ್ ಖಾತೆಯಲ್ಲಿ ಲಭ್ಯವಿರುತ್ತವೆ' ಎಂದರು.

ಕೋವಿಡ್–19 ಪಿಡುಗಿನ ಕಾರಣ, 2020 ಹಾಗೂ 2021ರಲ್ಲಿ ಕೆಲ ವಿಷಯಗಳ ಪರೀಕ್ಷೆಯನ್ನು ಮಂಡಳಿ ರದ್ದುಪಡಿಸಿತ್ತು. ಹೀಗಾಗಿ ಈ ಶೈಕ್ಷಣಿಕ ವರ್ಷಗಳಿಗೆ ಸಂಬಂಧಿಸಿ ಮಂಡಳಿಯು ಮೆರಿಟ್ ಪಟ್ಟಿಯನ್ನು ಪ್ರಕಟಿಸಿರಲಿಲ್ಲ. 2022ರಿಂದ ಮೆರಿಟ್ ಪಟ್ಟಿ ಪ್ರಕಟಿಸುವ ನೀತಿಯನ್ನು ಕೈಬಿಡಲಾಗಿದೆ

ಕೆಲ ಶಾಲೆಗಳಿಂದ ಘೋಷಣೆ: ಮೆರಿಟ್ ಪಟ್ಟಿ ಅಥವಾ ವಿದ್ಯಾರ್ಥಿಗಳು ಪಡೆದ ದರ್ಜೆ ಘೋಷಣೆ ಮಾಡುವುದಿಲ್ಲ ಎಂದು ಸಿಬಿಎಸ್‌ಇ ತಿಳಿಸಿದ್ದರೂ, ಕೆಲ ಶಾಲೆಗಳು ಅಗ್ರಸ್ಥಾನ ಪಡೆದ ವಿದ್ಯಾರ್ಥಿಗಳ ಹೆಸರುಗಳನ್ನು ಪ್ರಕಟಿಸಿವೆ.

ಬಾಲಕಿಯರೇ ಮೇಲುಗೈ

ಒಂದನೇ ಪುಟದಿಂದ...

ವಿಜ್ಞಾನ ವಿಭಾಗದಲ್ಲಿ ಪ್ರಾಂಜಲ್ ಪ್ರಣಯ್ ಜೋಶಿ 500 ಕ್ಕೆ 493 ಅಂಕಗಳನ್ನು ಗಳಿಸಿದ್ದಾರೆ.

ದೆಹಲಿ ಪಬ್ಲಿಕ್ ಸ್ಕೂಲ್‌ನ 450 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಯಾಗಿದ್ದಾರೆ. 12ನೇ ತರಗತಿಯ ಮಾನವಿಕ ವಿಭಾಗದಲ್ಲಿ ಹೃತಿಕಾ ಕಿರಣ್ ಶೆಟ್ಟಿ 500ಕ್ಕೆ 496 ಮತ್ತು ವಾಣಿಜ್ಯ ವಿಭಾಗದಲ್ಲಿ ಯಾದ್ವಿ ಬನ್ಸಾಲ್ 500ಕ್ಕೆ 492 ಅಂಕ ಗಳಿಸಿದ್ದಾರೆ. ನಾರಾಯಣ ಗ್ರೂಪ್‌ನ ನಾರಾಯಣ ಒಲಿಂಪಿಯಾಡ್ ಶಾಲೆ ವಿದ್ಯಾರ್ಥಿಗಳಾದ ಅದ್ವಿಕಾ ಪೊತ್ತೂರಿ ಮತ್ತು ಎಸ್. ಪ್ರಣವ್ ಎಸ್. ನಾಯರ್ 10ನೇ ತರಗತಿಯಲ್ಲಿ 500ರಲ್ಲಿ 493 (ಶೇ 98.6) ಅಂಕ ಗಳಿಸಿದ್ದಾರೆ. 12ನೇ ತರಗತಿಯಲ್ಲಿ ಸಹಕಾರ ನಗರ ಕ್ಯಾಂಪಸ್ ವಿದ್ಯಾರ್ಥಿ ರೇಯಾನ್ಷ್ ದೇವ್ನಾನಿ, ಕಸ್ತೂರಿನಗರ ಕ್ಯಾಂಪಸ್‌ನ ಎಸ್. ವೈಖಿನ್ 500ಕ್ಕೆ 495 (ಶೇ 99) ಅಂಕ ಗಳಿಸಿದ್ದಾರೆ.

'ಉಗ್ರರಿಗೆ ಪಾಠ ಕಲಿಸಲು ಅವರ ಸಹೋದರಿಯನ್ನೇ ಕಳುಹಿಸಿದೆವು'

ನವದೆಹಲಿ (ಪಿಟಿಐ): 'ಯಾರು ನಮ್ಮ ಹೆಣ್ಣುಮಕ್ಕಳ ಸಿಂಧೂರವನ್ನು ಅಳಿಸಿದರೊ... ಅವರಿಗೆ ತಕ್ಕ ಪಾಠ ಕಲಿಸಲು ಅವರ ಸಹೋದರಿಯನ್ನೇ ಕಳುಹಿಸಿದೆವು' ಎಂದು ಕರ್ನಲ್ ಸೋಫಿಯಾ ಖುರೇಷಿ ಅವರ ಕುರಿತು ಮಧ್ಯಪ್ರದೇಶದ ಸಚಿವ ವಿಜಯ್ ಶಾ ಅವರು ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ನೀಡಿರುವ ಹೇಳಿಕೆಯು ವಿವಾದ ಸೃಷ್ಟಿಸಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಮಂಗಳವಾರ ಈ ವಿಡಿಯೊವನ್ನು ಭಾರಿ ಸಂಖ್ಯೆಯಲ್ಲಿ ಹಂಚಿಕೊಳ್ಳಲಾಗುತ್ತಿತ್ತು, ವಿಜಯ್ ಅವರ ವಿರುದ್ಧ ಸಾರ್ವಜನಿಕರೂ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ವಿಡಿಯೊವನ್ನು ಕಾಂಗ್ರೆಸ್ ಕೂಡ ಹಂಚಿಕೊಂಡಿದ್ದು ತೀವ್ರವಾಗಿ ಟೀಕಿಸಿದೆ.

ಆದರೆ, 'ತಮ್ಮ ಹೇಳಿಕೆಯನ್ನು ಕೆಲವರು ತಿರುಚಿದ್ದಾರೆ' ಎಂದು ವಿಜಯ್ ಹೇಳಿದ್ದಾರೆ.

'ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಮನಃಸ್ಥಿತಿಯು ಎಂದಿಗೂ ಮಹಿಳಾ ವಿರೋಧಿಯೇ ಆಗಿದೆ. ಉಗ್ರರ ಗುಂಡಿಗೆ ಬಲಿಯಾದ ನೌಕಾ ಪಡೆಯ ಅಧಿಕಾರಿಯ ಪತ್ನಿಯನ್ನು ಮೊದಲಿಗೆ ಟ್ರೋಲ್ ಮಾಡಲಾಯಿತು. ನಂತರ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಅವರ ಮಗಳನ್ನು ಅವಮಾನಿಸಲಾಯಿತು. ಈಗ ಕರ್ನಲ್ ಸೋಫಿಯಾ ಖುರೇಷಿ ಅವರ ಕುರಿತು ಬಿಜೆಪಿ ಸಚಿವರು ಕೀಳು ಮಟ್ಟದಲ್ಲಿ ಮಾತನಾಡುತ್ತಿದ್ದಾರೆ. ಇಂಥ ಸಚಿವನನ್ನು ಪ್ರಧಾನಿ ಮೋದಿ ಅವರು ತಕ್ಷಣವೇ ಅಮಾನತು ಮಾಡಬೇಕು' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದರು.

> **ನಮ್ಮ ಸೇನೆಯ ಮಗಳನ್ನು 'ಭಯೋತ್ಪಾದಕರ ಸಹೋದರಿ' ಎಂದು ಹೇಳಿದ್ದು ಕೇವಲ ನೀಚತನವಲ್ಲ. ಇದು ದೇಶದ್ರೋಹ**
> **ಮೊಹಮ್ಮದ್ ಜಾವೇದ್** ಬಿಹಾರದ ಕಾಂಗ್ರೆಸ್ ಸಂಸದ

> **ನಮ್ಮ ಗೌರವವನ್ನು ಹೆಚ್ಚಿಸಿದ ಸಹೋದರಿ (ಸೋಫಿಯಾ) ಆಕೆ. ಇದನ್ನು ಬೇರೆ ಅರ್ಥ ದಲ್ಲಿ ಪರಿಗಣಿಸಬಾರದು. ಆಕೆ ಮೇಲೆ ಗೌರವವಿದೆ. ಮುಂದೆಯೂ ಇರಲಿದೆ**
> **ವಿಜಯ್ ಶಾ,** ಮಧ್ಯ ಪ್ರದೇಶ ಸಚಿವ

ಸಿಬಿಎಸ್‌ಇ 10ನೇ ತರಗತಿ: 29 ಮಕ್ಕಳಿಗೆ ಶೇ 95 ಅಂಕ

ಆಳ್ವಾಸ್ ವಿದ್ಯಾರ್ಥಿಗಳ ವಿಕ್ರಮ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಸಿಬಿಎಸ್‌ಇ ಹತ್ತನೇ ತರಗತಿ ಪರೀಕ್ಷೆಯಲ್ಲಿ ಮೂಡುಬಿದಿರೆಯ ಆಳ್ವಾಸ್ ಸೆಂಟ್ರಲ್ ಸ್ಕೂಲ್ ಸತತ ಐದನೇ ಬಾರಿಗೆ ಶೇ 100 ಫಲಿತಾಂಶ ದಾಖಲಿಸಿದೆ.

ಸಂಸ್ಥೆಯ 29 ವಿದ್ಯಾರ್ಥಿಗಳು ಶೇ 95ಕ್ಕಿಂತ ಅಧಿಕ ಅಂಕ ಪಡೆದಿದ್ದು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಒಂದೇ ಶಾಲೆಯಿಂದ ಶೇ 95ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಆಳ್ವಾಸ್ ಪ್ರಥಮ ಸ್ಥಾನದಲ್ಲಿದೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಮೋಘ ಬಿಳ್ಳೂರ, ದೀಕ್ಷಾ ಎಚ್.ಕೆ. (ಶೇ 98), ಹರ್ಷಿತಾ ಎಸ್. ಪಾಟೀಲ, ಪ್ರಜ್ವಲ್ ಕುಮಾರ್ ಬಿರಾದಾರ, ಅದಿತಿ ಭಟ್, ಸಂದೀಪ್, ಶಿವಾನಂದ (ಶೇ 97), ಮನಸ್ವಿ, ದರ್ಶ ಧಾರ್ಮಿಕ್, ಚೇತನ್ ಎಸ್., ಚಿನ್ಮಯಿ ಎಂ., ನಿಸರ್ಗ ಎಸ್., ಅನ್ವಿತ್ ಆರ್., ಸಮರ್ಥ ಜೋಶಿ, ತನುಶ್ರೀ ಜಿ.ಆರ್., ಪೂನಮ್ ಸಾತಿ, ಅನುಷಾ ರಾಜೇಂದ್ರ (ಶೇ 96), ಕಿರಣ್ ಸಾರ್ವೆ, ಕಾರ್ತಿಕ್ ಎಸ್., ಅಭಿಜ್ಞಾ ರಾವ್, ಅರುಂಧತಿ ಪಾಟೀಲ, ಸಾಧನಾ ಎಸ್., ಪ್ರಶಾಂತ್ ಹಿರೇಮಠ, ಪೂರ್ವಿಕ್ ಗೌಡ, ವೀರೇಶ್, ದೀಪಿಕಾ ಎಸ್., ರೋಷನ್, ಹೇಮಸ್ವಿ ಸಿ., ಅಕುಲ್ ರವಿ (ಶೇ 95) ಅಂಕ ಪಡೆದು ಸಾಧನೆ ಮಾಡಿದ್ದಾರೆ ಎಂದು ತಿಳಿಸಿದರು.

ಸಂದೀಪ್

ಶಿವಾನಂದ

ದರ್ಶ

ಅದಿತಿ ಭಟ್

ಪ್ರಜ್ವಲ್ ಕುಮಾರ್

ಅಮೋಘ

ದೀಕ್ಷಾ

ಹರ್ಷಿತಾ

ಸಂಸ್ಕೃತದಲ್ಲಿ ನಾಲ್ವರು ವಿದ್ಯಾರ್ಥಿಗಳು, ಕನ್ನಡದಲ್ಲಿ ಮೂವರು, ವಿಜ್ಞಾನದಲ್ಲಿ ಇಬ್ಬರು ಪೂರ್ಣ ಅಂಕ ಗಳಿಸಿದ್ದಾರೆ ಎಂದರು.

ಸಂಸ್ಥೆಯ ಪ್ರಾಂಶುಪಾಲ ಮೊಹಮ್ಮದ್ ಶಫಿ ಶೇಖ್, ಉಪಪ್ರಾಂಶುಪಾಲ ಬಿನೂ ಮ್ಯಾಥ್ಯೂ, ಶೈಕ್ಷಣಿಕ ಸಂಯೋಜಕಿ ಶೈಲಜಾ ರಾವ್, ಆಡಳಿತಾಧಿಕಾರಿ ಪ್ರೀತಂ ಕುಂದರ್ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

10ನೇ ತರಗತಿ: ಶೇ 93.66 ವಿದ್ಯಾರ್ಥಿಗಳು ಉತ್ತೀರ್ಣ

ನವದೆಹಲಿ (ಪಿಟಿಐ): ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆ ಫಲಿತಾಂಶ ಮಂಗಳವಾರ ಪ್ರಕಟವಾಗಿದ್ದು, ಶೇ 93.66ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

12ನೇ ತರಗತಿಯಂತೆ, ಈ ಪರೀಕ್ಷೆಯಲ್ಲಿ ಕೂಡ ಬಾಲಕಿಯರು ಬಾಲಕರನ್ನು ಹಿಂದಿಕ್ಕಿದ್ದಾರೆ. ಈ ಬಾರಿ ಬಾಲಕರಿಗಿಂತ ಬಾಲಕಿಯರ ತೇರ್ಗಡೆ ಪ್ರಮಾಣ ಶೇ 2ರಷ್ಟು ಅಧಿಕ ಇದೆ ಎಂದು ಪರೀಕ್ಷಾ ನಿಯಂತ್ರಕ ಸಂಯಮ್ ಭಾರದ್ವಾಜ್ ಮಂಗಳವಾರ ತಿಳಿಸಿದ್ದಾರೆ.

ಕಳೆದ ವರ್ಷಕ್ಕೆ ಹೋಲಿಸಿದರೆ, ಈ ವರ್ಷ ಒಟ್ಟಾರೆ ಫಲಿತಾಂಶದಲ್ಲಿ ಸುಧಾರಣೆ ಕಂಡುಬಂದಿದೆ. ಕಳೆದ ವರ್ಷದ ಫಲಿತಾಂಶ 93.60ರಷ್ಟು ಇತ್ತು.

23,71,939 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ, ಒಂದು ಅಥವಾ ಹೆಚ್ಚು ವಿಷಯಗಳಲ್ಲಿ ಅನುತ್ತೀರ್ಣಗೊಂಡಿದ್ದ 1.41 ಲಕ್ಷ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿತ್ತು.

ಅಂಕಿ ಅಂಶಗಳು

95% ತೇರ್ಗಡೆಯಾಗಿರುವ ಬಾಲಕಿಯರ ಪ್ರಮಾಣ

92.63% ತೇರ್ಗಡೆಯಾಗಿರುವ ಬಾಲಕರ ಪ್ರಮಾಣ

95 % ತೇರ್ಗಡೆಯಾಗಿರುವ ಲಿಂಗತ್ವ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಪ್ರಮಾಣ

45,516 ಶೇ 95ಕ್ಕಿಂತಲೂ ಅಧಿಕ ಅಂಕ ಗಳಿಸಿರುವ ವಿದ್ಯಾರ್ಥಿಗಳ ಸಂಖ್ಯೆ

1.99 ಲಕ್ಷ ಶೇ 90ಕ್ಕೂ ಅಧಿಕ ಅಂಕ ಗಳಿಸಿರುವ ವಿದ್ಯಾರ್ಥಿಗಳ ಸಂಖ್ಯೆ

ಪಾಕ್‌ಗೆ ಮತ್ತೆ ಮೋದಿ ಎಚ್ಚರಿಕೆ

ಒಂದನೇ ಪುಟದಿಂದ...

'ಪಾಕಿಸ್ತಾನದ ಮನವಿಯ ನಂತರ, ಭಾರತ ತನ್ನ ಸೇನಾ ಕಾರ್ಯಾಚರಣೆ ನಿಲ್ಲಿಸಿದೆ. ಪಾಕಿಸ್ತಾನ ಮತ್ತೆ ಭಯೋತ್ಪಾದಕ ಚಟುವಟಿಕೆಗಳನ್ನು ಅಥವಾ ಸೇನಾ ಕಾರ್ಯಾಚರಣೆ ನಡೆಸುವ ದುಸ್ಸಾಹಸ ತೋರಿಸಿದರೆ, ನಾವು ಸೂಕ್ತ ಉತ್ತರ ನೀಡುತ್ತೇವೆ. ನಾವು ನಮ್ಮದೇ ಆದ ರೀತಿಯಲ್ಲಿ ಈ ಉತ್ತರ ನೀಡುತ್ತೇವೆ' ಎಂದು ಅವರು ಎಚ್ಚರಿಸಿದರು.

'ಈ ಕಾರ್ಯಾಚರಣೆಯ ಮೂಲಕ ಭಾರತ್ ಮಾತಾ ಕಿ ಜೈ ಘೋಷಣೆಯ ತಾಕತ್ತನ್ನು ಇಡೀ ಜಗತ್ತು ನೋಡಿದೆ. ಇದು ಕೇವಲ ಘೋಷಣೆ ಅಲ್ಲ. ಬದಲಾಗಿ, ನಮ್ಮ ಸೈನಿಕರು ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸುವುದಕ್ಕಾಗಿ ಮಾಡಿರುವ ಪ್ರತಿಜ್ಞೆ. ನಿಮ್ಮ ಶೌರ್ಯದ ಕಥೆಗಳು ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುತ್ತವೆ' ಎಂದು ಅವರು ಹೇಳಿದರು.

'ಶತ್ರುಗಳು ಈ ವಾಯುನೆಲೆ ಮತ್ತು ಇತರ ಹಲವಾರು ವಾಯುನೆಲೆಗಳ ಮೇಲೆ ದಾಳಿ ಮಾಡಲು ಹಲವು ಬಾರಿ ಪ್ರಯತ್ನಿಸಿದರು. ಆದರೆ, ಪಾಕಿಸ್ತಾನದ ದುಷ್ಟ ಯೋಜನೆಗಳು ಪ್ರತಿ ಬಾರಿಯೂ ವಿಫಲವಾದವು' ಎಂದು ಅವರು ತಿಳಿಸಿದರು.

ಉದ್ಯೋಗ ವಾಣಿ

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆವರಣ, ಬೆಂಗಳೂರು – 560012

ನಂ: ಕೆ.ಎಸ್.ಸಿ.ಎಸ್.ಟಿ/ನೇರ ನೇಮಕಾತಿ/03/2025–26/57 ದಿನಾಂಕ: 13–05–2025

ಮಂಡಳಿಯಲ್ಲಿ ಕೆಳಕಂಡ ಹುದ್ದೆಗಳಿಗೆ ನೇಮಕಾತಿ ಪ್ರಕಟಣೆ

1. ಮಂಡಳಿಯಲ್ಲಿ **"ಆಡಳಿತಾಧಿಕಾರಿ"** ಹುದ್ದೆಗೆ ನೇರ ನೇಮಕಾತಿ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಮಂಡಳಿಯ ಅಂತರ್ಜಾಲ ತಾಣಗಳನ್ನು ವೀಕ್ಷಿಸಿ. ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ **"google form"** ಮೂಲಕ ಮಾತ್ರ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ದಿನಾಂಕ:– **09–06–2025 ರಂದು** ಅರ್ಜಿ ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ಕೊನೆಯ ದಿನಾಂಕವಾಗಿರುತ್ತದೆ.
2. ಮಂಡಳಿಯಲ್ಲಿ **"ವೈಜ್ಞಾನಿಕ ಅಧಿಕಾರಿ"** ಹುದ್ದೆಗೆ ನಿಯೋಜನೆ (**"Deputation Basis".**) ಮೇಲೆ ನೇಮಕಾತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಮಂಡಳಿಯ ಅಂತರ್ಜಾಲ ತಾಣಗಳನ್ನು ವೀಕ್ಷಿಸಿ. ಆಸಕ್ತ ಅರ್ಹ ಅಭ್ಯರ್ಥಿಗಳು ನೇಮಕಾತಿ ಅಧಿಸೂಚನೆಯಲ್ಲಿ ತಿಳಿಸಿರುವ ವಿಧಾನದ ಮೂಲಕ ಮಾತ್ರ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ದಿನಾಂಕ:– **06–06–2025** ರಂದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ.

ಅಂತರ್ಜಾಲ ತಾಣದ ವಿವರ : **https://www.kscst.org.in/ & https://kscst.karnataka.gov.in/**

DIPR/CP/YC/645/2025-26 ಸಹಿ/– ಕಾರ್ಯನಿರ್ವಾಹಕ ಕಾರ್ಯದರ್ಶಿ, ಕೆ.ಎಸ್.ಸಿ.ಎಸ್.ಟಿ.

ಐಪಿಎಲ್ ಪುನರಾರಂಭಕ್ಕೆ ಸಿದ್ಧತೆ • ಕಮಿನ್ಸ್ ಹಿಂತಿರುಗುವ ಸಾಧ್ಯತೆ • ಸ್ಟೋಯಿನಿಸ್ ಅನುಮಾನ

ವಿದೇಶಿ ಆಟಗಾರರ ಕರೆಸಲು ಯತ್ನ ಜೋರು

ನವದೆಹಲಿ (ಪಿಟಿಐ): ಇದೇ 17 ರಂದು ಇಂಡಿಯನ್ ಪ್ರೀಮಿಯರ್ ಲೀಗ್ ಪುನರಾರಂಭವಾಗಲಿರುವ ಕಾರಣ, ತಮ್ಮ ಆಟಗಾರರನ್ನು ಕಳುಹಿಸಿಕೊಡುವಂತೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮತ್ತು ಐಪಿಎಲ್ ಫ್ರಾಂಚೈಸಿಗಳು ಹೊರದೇಶಗಳ ಕ್ರಿಕೆಟ್ ಮಂಡಳಿಗಳ ಮೇಲೆ ಒತ್ತಡವನ್ನು ತೀವ್ರಗೊಳಿಸಿವೆ.

ವಿದೇಶಿ ಆಟಗಾರರಲ್ಲಿ ಇರುವ ಕಳವಳ ದೂರಮಾಡಿ ಅವರನ್ನು ಭಾರತಕ್ಕೆ ಕರೆಸಿಕೊಳ್ಳುವ ಬಗ್ಗೆ ಕ್ರಿಕೆಟ್ ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಜೊತೆ ವೈಯಕ್ತಿಕವಾಗಿ ಮಾತನಾಡುವಂತೆ ಐಪಿಎಲ್ ಸಿಒಒ ಹೇಮಂಗ್ ಅಮೀನ್ ಅವರಿಗೆ ಬಿಸಿಸಿಐ ಉನ್ನತ ಅಧಿಕಾರಿಗಳು ಸೂಚಿಸಿದ್ದಾರೆ.

ಲೀಗ್ ಪುನರಾರಂಭಕ್ಕೆಸಂಬಂಧಿಸಿದಂತೆ ವೇಳಾಪಟ್ಟಿ ಅಂತಿಮಗೊಂಡಿರುವ ಕಾರಣ, ಎಲ್ಲಾ 10 ಫ್ರಾಂಚೈಸಿಗಳು ತಮ್ಮ ತಮ್ಮ ತಂಡದಲ್ಲಿರುವ ಹೊರದೇಶಗಳ ಆಟಗಾರರನ್ನು ಕರೆಸಲು ಕಾರ್ಯ ಪ್ರವೃತ್ತವಾಗಿವೆ.

ಭಾರತ– ಪಾಕಿಸ್ತಾನ ಸೇನಾ ಸಂಘರ್ಷದ ಕಾರಣ ಮೇ 9ರಂದು ಐಪಿಎಲ್ ಪಂದ್ಯಾವಳಿಯನ್ನು ವಾರದ ಮಟ್ಟಿಗೆ ಸ್ಥಗಿತಗೊಳಿಸಲಾಗಿತ್ತು. ಆದರೆ ಕದನವಿರಾಮ ಘೋಷಣೆಯಿಂದಾಗಿ ಐಪಿಎಲ್ ಪುನರಾರಂಭಕ್ಕೆ ದಾರಿ ಸುಗಮಗೊಂಡಿದೆ.

ಕ್ರಿಕೆಟ್ ಆಸ್ಟ್ರೇಲಿಯಾವು, ಐಪಿಎಲ್‌ನಲ್ಲಿ ಪಾಲ್ಗೊಳ್ಳುವ ವಿಷಯವನ್ನು ಆಟಗಾರರ ವಿವೇಚನೆಗೆ ಬಿಟ್ಟಿದೆ. ಇಂಥ ವಿಷಯದಲ್ಲಿ ಆಟಗಾರರ ಸಂಘಟನೆಯು ಪಾತ್ರವೇ ಪ್ರಮುಖವಾಗಿರುತ್ತದೆ.

ಮಿಚೆಲ್ ಸ್ಟಾರ್ಕ್


ಪ್ಯಾಟ್ ಕಮಿನ್ಸ್

'ಪರಿಷ್ಕೃತ ವೇಳಾಪಟ್ಟಿಯನ್ನು ಸೋಮವಾರ ರಾತ್ರಿ ಪ್ರಕಟಿಸಲಾಗಿದೆ. ನಾವು ವಿದೇಶಿ ಆಟಗಾರರನ್ನು ಸಂಪರ್ಕಿಸಲು ಆರಂಭಿಸಿದ್ದೇವೆ. ಬುಧವಾರ ಬೆಳಿಗ್ಗೆ ಚಿತ್ರಣ ದೊರೆಯಲಿದೆ. ಏನಿದ್ದರೂ ನಮ್ಮ ಪಂದ್ಯ ಇರುವುದು ಮೇ 20ಕ್ಕೆ. ನಮಗೆ ಸಾಕಷ್ಟು ಕಾಲಾವಕಾಶ ಇದೆ' ಎಂದು ಚೆನ್ನೈ ಸೂಪರ್ ಕಿಂಗ್ಸ್ ಸಿಇಒ ಕಾಶಿ ವಿಶ್ವನಾಥನ್ ಹೇಳಿದರು.

ಡೆವಾನ್ ಕಾನ್ವೆ, ರಚಿನ್ ರವೀಂದ್ರ, ಸ್ಯಾಮ್ ಕರನ್, ಜೇಮಿ ಓವರ್ಟನ್, ನೂರ್ ಅಹಮದ್ ಮತ್ತು ಮಥೀಶ ಪಥಿರಾಣ ಸಿಎಸ್‌ಕೆ ತಂಡದಲ್ಲಿರುವ ವಿದೇಶಿ ಆಟಗಾರರಾಗಿದ್ದಾರೆ.

ಸ್ಟೊಯಿನಿಸ್ ಅಲಭ್ಯ?: ಪಂಜಾಬ್ ಕಿಂಗ್ಸ್ ತಂಡದಲ್ಲಿರುವ ಆಸ್ಟ್ರೇಲಿಯಾದ ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್ ಮತ್ತು ಅದೇ ದೇಶದ ವಿಕೆಟ್ ಕೀಪರ್ ಜೋಸ್ ಇಂಗ್ಲಿಸ್ ಅವರು ಮರಳುವ ಸಾಧ್ಯತೆ ಕಡಿಮೆ. ಅವರ ಮನವೊಲಿಕೆಗೆ ಹೆಡ್ ಕೋಚ್ ರಿಕಿ ಪಾಂಟಿಂಗ್ ಪ್ರಯತ್ನಿಸುತ್ತಿದ್ದಾರೆ. ಆಸ್ಟ್ರೇಲಿಯಾದವರೇ ಆದ ಝೇವಿಯರ್ ಬಾರ್ಟ್ಲೆಟ್, ಆರನ್ ಹಾರ್ಡಿ ಮತ್ತು ಅಫ್ಗಾನಿಸ್ತಾನದ ಅಜ್ಮತ್‌ವುಲ್ಲಾ ಒಮರ್‌ಝೈ, ದಕ್ಷಿಣ ಆಫ್ರಿಕಾದ ವೇಗಿ ಮಾರ್ಕೊ ಯಾನ್ಸೆನ್ ಮರಳುವ ನಿರೀಕ್ಷೆಯಿದೆ. ತಂಡವು 2014ರ ನಂತರ ಇದೇ ಮೊದಲ ಬಾರಿ ಪ್ಲೇಆಫ್ ತಲುಪುವ ಹಾದಿಯಲ್ಲಿದೆ.

ಸಿಎಸ್‌ಕೆ ಜೊತೆಗೆ ಸನ್‌ರೈಸರ್ಸ್ ಹೈದರಾಬಾದ್ ತಂಡವೂ ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿದೆ. ಆದರೆ ತಂಡವು ಉಳಿದ ಮೂರು ಪಂದ್ಯಗಳಿಗೆ ನಾಯಕ ಪ್ಯಾಟ್ ಕಮಿನ್ಸ್ ಮತ್ತು ಆಕ್ರಮಣಕಾರಿ ಆರಂಭ ಆಟಗಾರ ಟ್ರಾವಿಸ್ ಹೆಡ್ ಲಭ್ಯರಾಗಬಹುದೆಂಬ ನಿರೀಕ್ಷೆಯಲ್ಲಿದೆ.

ಪ್ಲೇಆಫ್ ರೇಸ್‌ನಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್ ಕೂಡ ತನ್ನ ತಂಡದಲ್ಲಿರುವ ವಿದೇಶಿ ಆಟಗಾರರ ಸಂಪರ್ಕದಲ್ಲಿದೆ. ವೇಗಿ ಮಿಚೆಲ್ ಸ್ಟಾರ್ಕ್ ಅವರು ತಂಡದ ಪ್ರಮುಖ ಬೌಲರ್ ಆಗಿದ್ದಾರೆ.

ಅಲ್ಪಾವಧಿ: ಈ ಹಿಂದಿನ ವೇಳಾಪಟ್ಟಿಯ ಪ್ರಕಾರ ಮೇ 25ರಂದು ಫೈನಲ್ ನಡೆಯಬೇಕಿತ್ತು. ಪರಿಷ್ಕೃತ ವೇಳಾಪಟ್ಟಿಯಂತೆ ಜೂನ್ 3ರಂದು ಫೈನಲ್ ನಿಗದಿಯಾಗಿದೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವೆ ಜೂನ್ 11ರಂದು ಲಾರ್ಡ್ಸ್‌ನಲ್ಲಿ ಆರಂಭವಾಗಲಿದೆ. ಹೀಗಾಗಿ ಲೀಗ್‌ನಲ್ಲಿ ಆಡುವ ಈ ತಂಡಗಳ ಆಟಗಾರರಿಗೆ ಐಪಿಎಲ್ ಮುಗಿಸಿ ತಂಡವನ್ನು ಸೇರಿಕೊಳ್ಳಲು ಅವಧಿ ಕಡಿಮೆಯಿದೆ.

ಜೋಸ್ ಬಟ್ಲರ್‌ಗೆ ದ್ವಂದ್ವ

ಈ ಋತುವಿನಲ್ಲಿ ಗುಜರಾತ್ ಟೈಟನ್ಸ್ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿರುವ ಮೂರನೇ ಕ್ರಮಾಂಕದ ಬ್ಯಾಟರ್ ಜೋಸ್ ಬಟ್ಲರ್ ಈಗ ದ್ವಂದ್ವದಲ್ಲಿದ್ದಾರೆ. ಅವರು ಒಂದೊ ರಾಷ್ಟ್ರೀಯ ತಂಡಕ್ಕೆ ಆಡಬೇಕಾಗಿದೆ, ಇಲ್ಲವೇ ಐಪಿಎಲ್‌ನಲ್ಲಿ ಮುಂದುವರಿಯಬೇಕಾಗುತ್ತದೆ.

ವೆಸ್ಟ್ ಇಂಡೀಸ್ ವಿರುದ್ಧ ಏಕದಿನ ಸರಣಿಗೆ ಇಂಗ್ಲೆಂಡ್ ತಂಡವನ್ನು ಮಂಗಳವಾರ ಪ್ರಕಟಿಸಲಾಗಿದ್ದು, ಇದರಲ್ಲಿ ಬಟ್ಲರ್ ಸ್ಥಾನ ಪಡೆದಿದ್ದಾರೆ. ಸರಣಿಯ ಮೊದಲ ಪಂದ್ಯ ಮೇ 29ರಂದು ನಡೆಯಲಿದೆ.

ಐಪಿಎಲ್‌ನಲ್ಲಿ ಆಡುತ್ತಿರುವ ಎಲ್ಲ ಆಟಗಾರರಿಗೆ ಇಂಗ್ಲೆಂಡ್ ನಿರಾಕ್ಷೇಪಣಾ ಪತ್ರ ನೀಡಿದೆ. ಮೂಲ ವೇಳಾಪಟ್ಟಿಯ ಪ್ರಕಾರ ಐಪಿಎಲ್ ಮೇ 25ರಂದು ಮುಗಿಯಬೇಕಾಗಿತ್ತು. ಆದರೆ ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ ಜೂನ್ 3ರಂದು ಫೈನಲ್ ನಿಗದಿಯಾಗಿರುವುದರಿಂದ ಅವರು ಈಗ ಯೋಚನೆಗೆ ಸಿಲುಕಿದ್ದಾರೆ. ಐಪಿಎಲ್‌ನ ಲೀಗ್ ಹಂತ ಮೇ 27ರಂದು ಮುಕ್ತಾಯಗೊಳ್ಳಲಿದೆ.

ಐಪಿಎಲ್ ಪರಿಷ್ಕೃತ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ	ಸಮಯ
ಮೇ.17	ಆರ್‌ಸಿಬಿ–ಕೋಲ್ಕತ್ತ	ಬೆಂಗಳೂರು	ಸಂಜೆ 7.30
ಮೇ.18	ರಾಜಸ್ಥಾನ–ಪಂಜಾಬ್	ಜೈಪುರ	ಮಧ್ಯಾಹ್ನ 3.30
ಮೇ.18	ಡೆಲ್ಲಿ–ಗುಜರಾತ್	ದೆಹಲಿ	ಸಂಜೆ 7.30
ಮೇ.19	ಲಖನೌ–ಸನ್‌ರೈಸರ್ಸ್	ಲಖನೌ	ಸಂಜೆ 7.30
ಮೇ.20	ಚೆನ್ನೈ–ರಾಜಸ್ಥಾನ	ದೆಹಲಿ	ಸಂಜೆ 7.30
ಮೇ.21	ಮುಂಬೈ–ಡೆಲ್ಲಿ	ವಾಂಖೆಡೆ	ಸಂಜೆ 7.30
ಮೇ.22	ಗುಜರಾತ್–ಲಖನೌ	ಅಹಮದಾಬಾದ್	ಸಂಜೆ 7.30
ಮೇ.23	ಆರ್‌ಸಿಬಿ–ಸನ್‌ರೈಸರ್ಸ್	ಬೆಂಗಳೂರು	ಸಂಜೆ 7.30
ಮೇ.24	ಡೆಲ್ಲಿ–ಪಂಜಾಬ್	ಜೈಪುರ	ಸಂಜೆ 7.30
ಮೇ.25	ಗುಜರಾತ್–ಚೆನ್ನೈ	ಅಹಮದಾಬಾದ್	ಮಧ್ಯಾಹ್ನ 3.30
ಮೇ.25	ಕೋಲ್ಕತ್ತ–ಸನ್‌ರೈಸರ್ಸ್	ದೆಹಲಿ	ಸಂಜೆ 7.30
ಮೇ.26	ಮುಂಬೈ–ಪಂಜಾಬ್	ಜೈಪುರ	ಸಂಜೆ 7.30
ಮೇ.27	ಲಕ್ನೊ–ಆರ್‌ಸಿಬಿ	ಲಖನೌ	ಸಂಜೆ 7.30
ಮೇ.29	ಕ್ವಾಲಿಫೈಯರ್1	--	ಸಂಜೆ 7.30
ಮೇ.30	ಎಲಿಮಿನೇಟರ್	--	ಸಂಜೆ 7.30
ಜೂ.1	ಕ್ವಾಲಿಫೈಯರ್2	--	ಸಂಜೆ 7.30
ಜೂ.3	ಫೈನಲ್	--	ಸಂಜೆ 7.30

'ವೈಟ್ ಜೆರ್ಸಿ ಅಭಿಯಾನ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟಿಂಗ್ ಚಾಂಪಿಯನ್ ವಿರಾಟ್ ಕೊಹ್ಲಿ ಅವರಿಗೂ ಮತ್ತು ಬೆಂಗಳೂರಿಗೆ ವಿಶೇಷ ಸಂಬಂಧವಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮೂಲಕ ಅವರು ಉದ್ಯಾನನಗರಿ ಅಭಿಮಾನಿಗಳ ಕಣ್ಮಣಿಯೇ ಆಗಿದ್ದಾರೆ.

ವಿರಾಟ್ ಸೋಮವಾರ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದಾರೆ. ಅದರ ನಂತರ ಅವರು ಮೊದಲ ಬಾರಿ ಕ್ರಿಕೆಟ್ ಕಣಕ್ಕೆ ಇಳಿಯಲಿರುವುದು ಬೆಂಗಳೂರಿನಲ್ಲಿಯೇ. ಇದೇ 17ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಅವರು ಆಡಲಿದ್ದಾರೆ. ಆದ್ದರಿಂದ ಅವರನ್ನು ಅಭಿನಂದಿಸಲು 'ವೈಟ್ ಜೆರ್ಸಿ' ಗೌರವ ನೀಡಬೇಕು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ಅಭಿಯಾನ ಆರಂಭಿಸಿದ್ದಾರೆ.

ಆ ದಿನ ಕ್ರೀಡಾಂಗಣದಲ್ಲಿ ಸೇರುವ ಪ್ರೇಕ್ಷಕರು ಬಿಳಿ ಬಣ್ಣದ ಪೋಷಾಕು ಧರಿಸಿರಬೇಕು. ಅದರ ಮೇಲೆ '18' ಎಂದು ಬರೆದಿರಬೇಕು ಎಂಬ ಅಭಿಯಾನ ನಡೆದಿದೆ.

ಆದರೆ ಕೆಲವು ತಾಂತ್ರಿಕ ಕಾರಣಗಳಿಂದ ಈ ವೈಟ್ ಜೆರ್ಸಿ ಅಭಿಯಾನ ಕೈಬಿಟ್ಟಿರುವುದಾಗಿ ಆರ್‌ಸಿಬಿ ಫ್ಯಾನ್ ಕ್ಲಬ್‌ನ ಪ್ರತಿನಿಧಿಗಳು ತಿಳಿಸಿದ್ದಾರೆ.

'ಈ ರೀತಿಯಲ್ಲಿ ವಿರಾಟ್ ಅವರಿಗೆ ಅಭಿನಂದನೆ ಸಲ್ಲಿಸುವ ಕುರಿತು ಚಿಂತಿಸಲಾಗಿತ್ತು. ಆದರೆ, ಇದು ರಾತ್ರಿ ಪಂದ್ಯವಾಗಿದೆ. ಹೊನಲು ಬೆಳಕಿನಲ್ಲಿ ನಡೆಯುತ್ತದೆ. ಅಲ್ಲದೇ ಪಂದ್ಯದಲ್ಲಿ ಬಿಳಿ ಬಣ್ಣದ ಚೆಂಡು ಬಳಕೆಯಾಗುತ್ತದೆ.

ಪ್ರೇಕ್ಷಕರ ಗ್ಯಾಲರಿಯಲ್ಲಿ ಎಲ್ಲರೂ ಬಿಳಿ ಪೋಷಾಕು ಧರಿಸಿ ಸೇರಿದರೆ ಆಟಕ್ಕೆ ತೊಂದರೆಯಾಗುತ್ತದೆ. ಬಿಳಿ ಚೆಂಡಿನ ಚಲನೆಯನ್ನು ಗುರುತಿಸುವುದುಆಟಗಾರರಿಗೆ ಕಷ್ಟವಾಗಬಹುದು. ಟೆಸ್ಟ್ ಕ್ರಿಕೆಟ್‌ನಲ್ಲಿ ಕೆಂಪು ಚೆಂಡು ಬಳಸುವುದರಿಂದ ಬಿಳಿ ಪೋಷಾಕು ಸೂಕ್ತ ವಾಗುತ್ತದೆ. ಪಂದ್ಯಕ್ಕೆ ತೊಂದರೆಯಾಗುವುದರಿಂದ ಸದ್ಯಕ್ಕೆ ಈ ಯೋಚನೆಯನ್ನು ಕೈಬಿಡಲಾಗಿದೆ' ಎಂದು ಆರ್‌ಸಿಬಿ ಕ್ಲಬ್‌ನ ಪ್ರೀತಂ ಅವರು 'ಪ್ರಜಾವಾಣಿ'ಗೆ ತಿಳಿಸಿದರು. ಬೆಂಗಳೂರು ತಂಡವು ಆ ದಿನ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಕಣಕ್ಕಿಳಿಯಲಿದೆ.

ಡಬ್ಲ್ಯುಟಿಸಿ ಫೈನಲ್: ದಕ್ಷಿಣ ಆಫ್ರಿಕಾ ತಂಡ

ಜೊಹಾನೆಸ್‌ಬರ್ಗ್ (ಎಎಫ್‌ಪಿ): ಲಂಡನ್‌ನ ಲಾರ್ಡ್ಸ್‌ನಲ್ಲಿ ಜೂನ್ 11 ರಿಂದ 15ರವರೆಗೆ ಆಸ್ಟ್ರೇಲಿಯಾ ವಿರುದ್ಧ ನಡೆಯಲಿರುವ ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್‌ಷಿಪ್ ಫೈನಲ್‌ಗೆ ಮಂಗಳವಾರ ದಕ್ಷಿಣ ಆಫ್ರಿಕಾ ತಂಡವನ್ನು ಪ್ರಕಟಿಸಲಾಗಿದೆ. ಅನುಭವಿ ಕಗಿಸೊ ರಬಾಡ ಅವರು ಗಾಯಾಳುಗಳಿಂದ ದುರ್ಬಲವಾಗಿರುವ ದಕ್ಷಿಣ ಆಫ್ರಿಕಾದ ವೇಗದ ಬೌಲಿಂಗ್ ದಾಳಿಯ ನೇತೃತ್ವ ವಹಿಸಲಿದ್ದಾರೆ.

ವೇಗದ ಬೌಲರ್‌ಗಳಾದ ಆನ್ರಿಚ್ ನಾಕಿಯಾ, ಜೆರಾಲ್ಡ್ ಕೊಟ್ಜಿಯ, ನಾಂಡ್ರೆ ಬರ್ಗರ್ ಅವರು ಗಾಯಾಳಾಗಿದ್ದಾರೆ. ಕೋಚ್ ಶುಕ್ರಿ ಕೊನ್ರಾಡ್ 15 ಮಂದಿಯ ತಂಡ ಪ್ರಕಟಿಸಿದ್ದಾರೆ.

ತಂಡ ಹೀಗಿದೆ: ತೆಂಬಾ ಬವುಮಾ (ನಾಯಕ), ಡೇವಿಡ್ ಬೆಡ್ಡಿಂಗಮ್, ಕಾರ್ಬಿನ್ ಬಾಷ್, ಟೋನಿ ಡಿ ಝೋರ್ಜಿ, ಮಾರ್ಕೊ ಯಾನ್ಸೆನ್, ಕೇಶವ್ ಮಹಾರಾಜ್, ಏಡನ್ ಮರ್ಕರಂ, ವಿಯಾನ್ ಮುಲ್ಡರ್, ಸೆನುರಾನ್ ಮುತ್ತುಸಾಮಿ, ಲುಂಗಿ ಗಿಡಿ, ಡೇನ್ ಪೀಟರ್‌ಸನ್, ಕಗಿಸೊ ರಬಾಡ, ರಯಾನ್ ರಿಕೆಲ್ಟನ್, ಟ್ರಿಸ್ಟನ್ ಸ್ಟಬ್ಸ್, ಕೈಲ್ ವೇರಿಯನ್ (ವಿಕೆಟ್ ಕೀಪರ್).

ಸ್ಯಾಫ್ ಫುಟ್‌ಬಾಲ್: ಭಾರತಕ್ಕೆ ಜಯ

ಯುಬಿಯಾ (ಅರುಣಾಚಲ ಪ್ರದೇಶ), (ಪಿಟಿಐ): ಭಾರತ ತಂಡ, ಸ್ಯಾಫ್ 19 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್ 'ಬಿ' ಗುಂಪಿನ ಕೊನೆಯ ಲೀಗ್ ಪಂದ್ಯದಲ್ಲಿ ಮಂಗಳವಾರ ನೇಪಾಳ ತಂಡವನ್ನು 4–0 ಗೋಲುಗಳಿಂದ ಸೋಲಿಸಿತು.

ಗುಂಪಿನಲ್ಲಿ ಅಗ್ರಸ್ಥಾನ ಪಡೆದ ಭಾರತ ಶುಕ್ರವಾರ ಸೆಮಿಫೈನಲ್ ಪಂದ್ಯದಲ್ಲಿ ಮಾಲ್ದೀವ್ಸ್ ತಂಡವನ್ನು ಎದುರಿಸಲಿದೆ.



ಭಾರತದ ಅದ್ಭುತ ಬ್ಯಾಟ್ಸ್ ಮನ್ ಟೆಸ್ಟ್ ನಿಂದ ನಿವೃತ್ತಿ ಘೋಷಿಸಿದ್ದಾರೆ

ವಿರಾಟ್, ರೋಹಿತ್ ನಿವೃತ್ತಿ: ಕುಂಬ್ಳೆ ಅಚ್ಚರಿ

ನವದೆಹಲಿ (ಪಿಟಿಐ): ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ದಿಢೀರ್ ನಿವೃತ್ತಿಗೆ ಭಾರತ ತಂಡದ ಮಾಜಿ ನಾಯಕ ಅನಿಲ್ ಕುಂಬ್ಳೆ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಅಲ್ಲದೇ ಇತ್ತೀಚೆಗೆ ನಿವೃತ್ತಿ ಘೋಷಿಸಿದ ಆಫ್‌ಸ್ಪಿನ್ನರ್ ಆರ್. ಅಶ್ವಿನ್, ರೋಹಿತ್ ಮತ್ತು ಕೊಹ್ಲಿ ಅವರಿಗೆ ಸೂಕ್ತವಾದ ರೀತಿಯಲ್ಲಿ ಬೀಳ್ಕೊಡುಗೆ ನೀಡಬೇಕು ಎಂದೂ ಸ್ಪಿನ್ ಬೌಲಿಂಗ್ ದಂತಕಥೆ ಕುಂಬ್ಳೆ ಅಭಿಪ್ರಾಯಪಟ್ಟಿದ್ದಾರೆ.

ಹೋದ ಗುರುವಾರ ರೋಹಿತ್ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತಿಯಾಗಿದ್ದರು. ಸೋಮವಾರ ಕೊಹ್ಲಿ ಕೂಡ ವಿದಾಯ ಘೋಷಿಸಿದರು.

'ಇದು ಬಹಳ ದೊಡ್ಡ ಅಚ್ಚರಿ. ಇಬ್ಬರು ಮಹಾನ್ ಆಟಗಾರರು ಕೆಲವೇ ದಿನಗಳ ಅಂತರದಲ್ಲಿ ಒಬ್ಬರ ಹಿಂದೊಬ್ಬರು ನಿವೃತ್ತರಾಗಿದ್ದಾರೆ. ಇದು ನನ್ನನ್ನು ದಿಗ್ಭ್ರಮೆಗೊಳಿಸಿದೆ. ಅವರಿಗೆ ಇನ್ನೂ ಕೆಲವು ವರ್ಷಗಳವರೆಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ಆಡುವ ಸಾಮರ್ಥ್ಯ ಇತ್ತು' ಎಂದು ಕುಂಬ್ಳೆ ಅವರು ಇಎಸ್‌ಪಿಎನ್ ಕ್ರಿಕ್‌ಇನ್ಫೊ ಡಾಟ್ ಕಾಮ್ ಗೆ ಹೇಳಿದ್ದಾರೆ.

ಅನಿಲ್ ಕುಂಬ್ಳೆ

'ಎಲ್ಲ ಆಟಗಾರರಿಗೂ ತಮ್ಮ ಇಚ್ಛೆಗೆ ಅನುಸಾರವಾಗಿ ನಿವೃತ್ತಿ ಕೈಗೊಳ್ಳುವ ಹಕ್ಕು ಇದೆ. ಆದರೆ ಅವರು ಕ್ರೀಡಾಂಗಣದಲ್ಲಿ (ಪಂದ್ಯ ಅಥವಾ ಸರಣಿ ಆಡಿದ ಮೇಲೆ) ವಿದಾಯ ಹೇಳುವುದು ಹೆಚ್ಚು ಸಮರ್ಪಕವಾಗುತ್ತದೆ. ಈಚೆಗೆ ಆಸ್ಟ್ರೇಲಿಯಾದಲ್ಲಿ ಸರಣಿಯ ಮಧ್ಯದಲ್ಲಿ ಅಶ್ವಿನ್ ನಿವೃತ್ತರಾಗಿದ್ದರು. ಕೆಲ ದಿನಗಳ ಹಿಂದೆ ರೋಹಿತ್ ಶರ್ಮಾ ಮತ್ತು ಈಗ ವಿರಾಟ್ ಕೊಹ್ಲಿ ಕೂಡ ನಿವೃತ್ತಿ ಹೇಳಿದ್ದಾರೆ. ಈ ಮೂವರಿಗೂ ಗೌರವಯುತವಾದ ಬೀಳ್ಕೊಡುಗೆ ನೀಡಬೇಕು. ಅವರು ತಮ್ಮ ಅಭಿಮಾನಿಗಳ ಸಮ್ಮುಖದಲ್ಲಿಯೇ ವಿದಾಯ ಹೇಳಬೇಕು. ಈ ಕುರಿತು ಸಂಬಂಧಪಟ್ಟವರು ಯೋಚಿಸಬೇಕು' ಎಂದು ಕುಂಬ್ಳೆ ಹೇಳಿದ್ದಾರೆ. ಭಾರತ ತಂಡವು ಜೂನ್ 20ರಿಂದ ಇಂಗ್ಲೆಂಡ್‌ನಲ್ಲಿ ಐದು ಟೆಸ್ಟ್‌ಗಳ ಸರಣಿಯಲ್ಲಿ ಆಡಲಿದೆ.

'ರೋಹಿತ್ ಅವರು ಕೆಲವು ವರ್ಷಗಳಿಂದ ಭಾರತ ತಂಡಕ್ಕೆ ನಾಯಕರಾಗಿದ್ದರು. ವಿರಾಟ್ ಅವರು ತಂಡದ ಪರಿಪೂರ್ಣ ನಾಯಕರಾಗಿದ್ದವರು. ಅವರಲ್ಲಿ ಒಬ್ಬರಾದರೂ ಇಂಗ್ಲೆಂಡ್ ಸರಣಿಯಲ್ಲಿ ಆಡಬೇಕಿತ್ತು. ಐದು ಟೆಸ್ಟ್ ಸರಣಿಯು ಬಹಳ ಕಠಿಣ ಸವಾಲಾಗಿದೆ. ಆಟಗಾರರ ನಿವೃತ್ತಿಗೆ ಆಯ್ಕೆ ಸಮಿತಿ ಕೂಡ ಅಚ್ಚರಿಗೊಂಡಿತು' ಎಂದರು.

'ಡ್ರೆಸ್ಸಿಂಗ್ ರೂಮ್ ಮೊದಲಿನಂತಿರಲ್ಲ'

'ಭಾರತ ತಂಡದ ಡ್ರೆಸ್ಸಿಂಗ್ ಕೋಣೆಯು ಇನ್ನು ಮುಂದೆ ಬದಲಾಗಬಹುದು' ಎಂದು ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಎಕ್ಸ್‌ನಲ್ಲಿ ಬರೆದಿದ್ದಾರೆ.

ವಿರಾಟ್ ಕೊಹ್ಲಿ ಅವರು ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ಹಿನ್ನೆಲೆಯಲ್ಲಿ ಅವರು ಈ ಸಂದೇಶ ಹಾಕಿದ್ದಾರೆ. 'ಕ್ರಿಕೆಟ್‌ನಲ್ಲಿ ನೀವು ಸುಂದರವಾದ ಇನಿಂಗ್ಸ್ ಕಟ್ಟಿದ್ದೀರಿ ಅಣ್ಣಾ. ಅಭಿನಂದನೆಗಳು. ಯುವ ಜನಾಂಗವನ್ನು ತಾವು ಪ್ರಭಾವಿಸಿದ್ದೀರಿ. ನಿಮ್ಮ ಸಾಧನೆಗಳು ನಮಗೆ ದಾರಿದೀಪ. ನೀವಿಲ್ಲದ ಡ್ರೆಸಿಂಗ್ ರೂಮ್ ಮೊದಲಿನಂತಿರದು' ಎಂದು ಸಿರಾಜ್ ಹೇಳಿದ್ದಾರೆ.

ಕೊಹ್ಲಿ ದಂಪತಿಯಿಂದ ಪ್ರೇಮಾನಂದ ಜೀ ಭೇಟಿ

ಮಥುರಾ (ಪಿಟಿಐ): ಸೋಮವಾರವಷ್ಟೇ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದ ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಮಂಗಳವಾರ ವೃಂದಾವನದ ಧರ್ಮಗುರು ಪ್ರೇಮಾನಂದ ಗೋವಿಂದ ಶರಣ ಜೀ ಮಹಾರಾಜ್ ಅವರನ್ನು ಭೇಟಿಯಾದರು.

ವಿರಾಟ್ ಮತ್ತು ಅವರ ಪತ್ನಿ ಅನುಷ್ಕಾ ಶರ್ಮಾ ಅವರು ಪ್ರೇಮಾನಂದಜೀ ಅವರಿಂದ ಆಶೀರ್ವಾದ ಪಡೆಯುತ್ತಿರುವ ವಿಡಿಯೊ ತುಣುಕನ್ನು 'ಎಕ್ಸ್'ನಲ್ಲಿ ಹಾಕಲಾಗಿದೆ.

'ಸಂತೋಷವಾಗಿದ್ದೀರಾ' ಎಂದು ಪ್ರೇಮಾನಂದಜೀ ಅವರು ಕೊಹ್ಲಿ ದಂಪತಿಯ ಕುಶಲೋಪರಿಯನ್ನು ಕೇಳಿದ್ದಾರೆ. ನಂತರ ಹಿತವಚನ ನೀಡಿದರು. ವರಾಹ ಘಾಟ್‌ನಲ್ಲಿರುವ ಶ್ರೀ ರಾಧಾ ಕೇಲಿಕುಂಜ್ ಆಶ್ರಮದಲ್ಲಿ ಸುಮಾರು ಮೂರು ಗಂಟೆಗಳವರೆಗೆ ಕೊಹ್ಲಿ ದಂಪತಿ ಇದ್ದರು. ಇಲ್ಲಿಗೆ ಸಮೀಪದ ಗೌರಂಗಿ ಶರಣ್ ಮಹಾರಾಜ್ ಆಶ್ರಮಕ್ಕೂ ಭೇಟಿ ನೀಡಿದ್ದರು.

ಕೊಹ್ಲಿ ಅವರು ಈ ಸ್ಥಳಕ್ಕೆ ಭೇಟಿ ನೀಡುತ್ತಿರುವುದು ಇದು ಮೂರನೇ ಸಲ. 2023ರ ಜನವರಿ 4 ಮತ್ತು ಈ ವರ್ಷದ ಜನವರಿ 10ರಂದೂ ಭೇಟಿ ನೀಡಿದ್ದರು.

ಮಥುರಾದ ವೃಂದಾವನದಲ್ಲಿರುವ ಧರ್ಮಗುರು ಪ್ರೇಮಾನಂದ ಜಿ ಮಹಾರಾಜ್ ಅವರನ್ನು ಮಂಗಳವಾರ ಭೇಟಿಯಾದ ಕ್ರಿಕೆಟಿಗ ವಿರಾಟ್ ಕೊಹ್ಲಿ ಮತ್ತು ಅವರ ಪತ್ನಿ, ಬಾಲಿವುಡ್ ನಟಿ ಅನುಷ್ಕಾ ಶರ್ಮಾ –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

17ರಿಂದ ಪಿಎಸ್‌ಎಲ್

ಕರಾಚಿ (ಎಎಫ್‌ಪಿ): ಗಡಿಯಲ್ಲಿ ಘರ್ಷಣೆಯ ಕಾರಣ ಮುಂದಕ್ಕೆ ಹೋಗಿದ್ದ ಪಾಕಿಸ್ತಾನ ಟಿ20 ಕ್ರಿಕೆಟ್ ಲೀಗ್ (ಪಿಎಸ್‌ಎಲ್) ಶನಿವಾರ ಆರಂಭವಾಗಲಿದೆ. ಲೀಗ್‌ನಲ್ಲಿ ಆಡುತ್ತಿರುವ ಆಸ್ಟ್ರೇಲಿಯಾದ ಡೇವಿಡ್ ವಾರ್ನರ್ ಅವರೂ ಮರಳಲಿದ್ದಾರೆ.

ಮೇ 8ರಂದು ರಾವಲ್ಪಿಂಡಿ ಕ್ರೀಡಾಂಗಣದ ಬದಿಯ ರಸ್ತೆ ಡ್ರೋನ್ ದಾಳಿಯಿಂದ ಹಾನಿಗೀಡಾಗಿತ್ತು. ಹೀಗಾಗಿ ಉಳಿದ ಪಂದ್ಯಗಳನ್ನು ಯುಎಇಯಲ್ಲಿ ಆಡಿಸಲು ನಿರ್ಧರಿಸಲಾಗಿತ್ತು. ನಂತರ ನಿರ್ಧಾರ ಬದಲಿಸಿ ಲೀಗ್‌ಅನ್ನು ಮುಂದಕ್ಕೆ ಹಾಕಲಾಗಿತ್ತು. ಲೀಗ್‌ನಲ್ಲಿ ಆರು ತಂಡಗಳಿವೆ. ಮೇ 17 ರಿಂದ ಪಿಎಸ್‌ಎಲ್ ಆರಂಭವಾಗಲಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಅಧ್ಯಕ್ಷ ಮೊಹ್ಸಿನ್ ನಕ್ವಿ ಎಕ್ಸ್‌ನಲ್ಲಿ ಪೋಸ್ಟ್ ಹಾಕಿದ್ದಾರೆ.

ಬ್ಲಿಟ್ಝ್ ಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ಬ್ಲಿಟ್ಝ್ ಎಫ್‌ಸಿ ತಂಡವು ಬಿಡಿಎಫ್‌ಎ ಎ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಮಂಗಳವಾರ ಶ್ರೀ ಗಜಾನನ ಎಫ್‌ಸಿ ತಂಡದ ಮೇಲೆ 3–2 ಗೋಲುಗಳಿಂದ ಗೆಲುವು ಸಾಧಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬ್ಲಿಟ್ಝ್ ಎಫ್‌ಸಿ ಪರ ರಾಹುಲ್ ಚಕ್ರವರ್ತಿ (5ನೇ ಗೋಲು), ಮಾನ್‌ಟೊಂಗ್ ಜೆಮ್‌ಫಾಂಗ್ (19ನೇ ನಿ.) ಮತ್ತು ವಿವೇಕ್ ಸಿಂಗ್ (55ನೇ ನಿ.) ಗೋಲು ಗಳಿಸಿದರು. ಗಜಾನನ ತಂಡದ ಪರ ಸುಶೀಲ್ ಕುಮಾರ್ (55ನೇ ನಿ.) ಮತ್ತು ಜೋನ್ಸ್ ಮುತ್ತುರಾಜ್ (69ನೇ ನಿ.) ಗೋಲು ಹೊಡೆದರು.

ಸಿ ಡಿವಿಷನ್ ಲೀಗ್‌ನಲ್ಲಿ ಅಗರಮ್ ಎಫ್‌ಸಿ ತಂಡ 3–0 ಗೋಲುಗಳಿಂದ ರೋವರ್ಸ್ ಎಫ್‌ಸಿ ತಂಡವನ್ನು ಮಣಿಸಿತು. ವಿಜೇತ ತಂಡದ ಪರ ರಘುರಾಮ್ ವಿ, ಪ್ರಶಾಂತ್ ವಿ. ಮತ್ತು ನರೇಂದ್ರನ್ ಗೋಲು ಗಳಿಸಿದರು.

ಬೋಪಣ್ಣ– ಪಾವ್ಲಾಸೆಕ್ ಸವಾಲು ಅಂತ್ಯ

ರೋಮ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಅವರ ಝೆಕ್ ರಿಪಬ್ಲಿಕ್ ಜೊತೆಗಾರ ಆ್ಯಡಂ ಪಾವ್ಲಾಸೆಕ್ ಅವರು ರೋಮ್ ಮಾಸ್ಟರ್ಸ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನಿಂದ ಮಂಗಳವಾರ ಹೊರಬಿದ್ದರು.

ಎರಡನೇ ಸುತ್ತಿನ ಪಂದ್ಯದಲ್ಲಿ ಬ್ರಿಟನ್‌ನ ಜೋ ಸ್ಯಾಲಿಸ್ಬರಿ ಮತ್ತು ನೀಲ್ ಸ್ಕುಪ್‌ಸ್ಕಿ ಜೋಡಿ ಮಂಗಳವಾರ 6–3, 6–3ರಲ್ಲಿ ನೇರ ಸೆಟ್‌ಗಳಿಂದ ಬೋಪಣ್ಣ– ಪಾವ್ಲಾಸೆಕ್ ಜೋಡಿಯನ್ನು 68 ನಿಮಿಷಗಳಲ್ಲಿ ಸೋಲಿಸಿತು.

ಭಾರತ ಟೆಸ್ಟ್ ತಂಡಕ್ಕೆ ಆಯ್ಕೆಯ ನಿರೀಕ್ಷೆಯಲ್ಲಿ ಕರುಣ್

ರೊ–ಕೊ ಸ್ಥಾನಕ್ಕೆ ಕನ್ನಡಿಗರ ಪೈಪೋಟಿ

ಬೆಂಗಳೂರು: ಟೆಸ್ಟ್ ಕ್ರಿಕೆಟ್‌ಗೆ ದಿಢೀರ್ ನಿವೃತ್ತಿ ಘೋಷಿಸಿರುವ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ಸ್ಥಾನಗಳನ್ನು ತುಂಬುವವರು ಯಾರು ಎಂಬ ಚರ್ಚೆ ಈಗ ಜೋರಾಗಿದೆ.

ಮುಂದಿನ ತಿಂಗಳು ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಐದು ಟೆಸ್ಟ್‌ಗಳ ಸರಣಿಯಲ್ಲಿ ಆಡಲು ಭಾರತ ತಂಡವನ್ನು ಬಿಸಿಸಿಐ ಆಯ್ಕೆ ಸಮಿತಿಯು ಪ್ರಕಟಿಸುವ ಸಿದ್ಧತೆಯಲ್ಲಿದೆ. ಇದೇ ಹೊತ್ತಿನಲ್ಲಿ ಇಬ್ಬರೂ ದಿಗ್ಗಜರು ನಿವೃತ್ತಿ ಘೋಷಿಸಿದ್ದಾರೆ.

ಆದ್ದರಿಂದ ತಂಡದ ಆರಂಭಿಕ ಆಟಗಾರ ರೋಹಿತ್ ಮತ್ತು ನಾಲ್ಕನೇ ಕ್ರಮಾಂಕದ ಬ್ಯಾಟರ್ ವಿರಾಟ್ ಸ್ಥಾನಕ್ಕಾಗಿ ಯುವ ಆಟಗಾರರು ಅವಕಾಶ ಪಡೆಯುವ ಸಾಧ್ಯತೆ ಇದೆ. ಈ ಪೈಪೋಟಿಯಲ್ಲಿ ಮೂವರು ಕನ್ನಡಿಗರೂ ಇದ್ದಾರೆ.

ಕರುಣ್ ನಾಯರ್ ಮತ್ತು ಕೆ.ಎಲ್‌.ರಾಹುಲ್

ಕೆ.ಎಲ್. ರಾಹುಲ್: ಸದ್ಯ ಭಾರತ ತಂಡದಲ್ಲಿ ಇರುವ ಹೆಚ್ಚು ಅನುಭವಿ ಬ್ಯಾಟರ್‌ಗಳಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಪ್ರಮುಖರು. ಕಳೆದ ಆಸ್ಟ್ರೇಲಿಯಾ ಪ್ರವಾಸದಲ್ಲಿ ಅವರು ಯಶಸ್ವಿ ಜೈಸ್ವಾಲ್ ಜೊತೆಗೆ ಇನಿಂಗ್ಸ್ ಆರಂಭಿಸಿದ್ದರು. 33 ವರ್ಷದ ರಾಹುಲ್ ಅವರು ಕೆಲವು ಪಂದ್ಯಗಳಲ್ಲಿ 6ನೇ ಕ್ರಮಾಂಕದಲ್ಲಿಯೂ ಬ್ಯಾಟಿಂಗ್ ಮಾಡಿದ್ದಾರೆ. ಕೆಲವು ಟೆಸ್ಟ್‌ಗಳಲ್ಲಿ ರಿಷಭ್ ಪಂತ್ ಗೈರುಹಾಜರಿಯಲ್ಲಿ ವಿಕೆಟ್‌ಕೀಪಿಂಗ್ ಕೂಡ ಮಾಡಿದ್ದಾರೆ. ಯಾವುದೇ ಬ್ಯಾಟಿಂಗ್ ಕ್ರಮಾಂಕದಲ್ಲಿಯೂ ತಂಡಕ್ಕೆ ಉಪಯುಕ್ತ ಕಾಣಿಕೆ ನೀಡುವ ಸಾಮರ್ಥ್ಯ ಅವರಲ್ಲಿದೆ.

ಕರುಣ್ ನಾಯರ್: ಕೆಲವು ವರ್ಷಗಳ ಹಿಂದೆ ಟೆಸ್ಟ್ ಕ್ರಿಕೆಟ್‌ನಲ್ಲಿ ತ್ರಿಶತಕ ಗಳಿಸಿದ್ದ ಕನ್ನಡಿಗ ಕರುಣ್ ನಾಯರ್ ಅವರಿಗೂ ಈಗ ಮತ್ತೆ ಟೆಸ್ಟ್ ತಂಡದಲ್ಲಿ ಸ್ಥಾನ ಸಿಗುವ ಆಸೆ ಚಿಗುರೊಡೆದಿದೆ. ಅವರು ಈಚೆಗೆ ರಣಜಿ ಮತ್ತು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಗಳಲ್ಲಿ ರನ್‌ಗಳನ್ನು ಪೇರಿಸಿದ್ದಾರೆ. ಶತಕಗಳನ್ನು ಸಿಡಿಸಿದ್ದಾರೆ. ಅಲ್ಲದೇ ಐಪಿಎಲ್‌ನಲ್ಲಿಯೂ ಮಿಂಚಿದ್ದಾರೆ. ಅವರು ಕೂಡ 3 ಅಥವಾ 4ನೇ ಕ್ರಮಾಂಕದಲ್ಲಿ ಆಡಲು ಸೂಕ್ತ ಬ್ಯಾಟರ್ ಆಗಿದ್ದಾರೆ. 2016ರಲ್ಲಿ ಅವರು ಇಂಗ್ಲೆಂಡ್ ವಿರುದ್ಧದ ಟೆಸ್ಟ್‌ನಲ್ಲಿ ತ್ರಿಶತಕ ಗಳಿಸಿದ್ದರು. ಅದರ ನಂತರ ಅವರು ಆಡಿದ್ದು ಕೇವಲ 4 ಟೆಸ್ಟ್‌ಗಳಲ್ಲಿ ಮಾತ್ರ. 2017ರ ನಂತರ ಅವರಿಗೆ ಮತ್ತೆ ಟೆಸ್ಟ್ ತಂಡದಲ್ಲಿ ಆಡುವ ಅವಕಾಶ ಸಿಕ್ಕಿಲ್ಲ. 33 ವರ್ಷದ ಕರುಣ್ ಈ ಬಾರಿ ದೇಶಿ ಕ್ರಿಕೆಟ್‌ನಲ್ಲಿ ಮಾಡಿರುವ ಸಾಧನೆಯಿಂದಾಗಿ ಸ್ಥಾನ ಪಡೆಯುವ ಸಾಧ್ಯತೆಗಳು ಹೆಚ್ಚಿವೆ.

ದೇವದತ್ತ ಪಡಿಕ್ಕಲ್: ಕರ್ನಾಟಕದ ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ಕೂಡ ಟೆಸ್ಟ್ ತಂಡದಲ್ಲಿ ಸ್ಥಾನ ಪಡೆಯುವ ನಿರೀಕ್ಷೆಯಲ್ಲಿದ್ದಾರೆ. 24 ವರ್ಷದ ಪಡಿಕ್ಕಲ್ ಅವರು ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಸರಣಿಯಲ್ಲಿ ಆಡಿದ್ದರು. ಮಧ್ಯಮ ಕ್ರಮಾಂಕಕ್ಕೆ ಬಲ ತುಂಬುವ ಉಪಯುಕ್ತ ಬ್ಯಾಟರ್ ಅವರಾಗಿದ್ದಾರೆ.

ಶುಭಮನ್ ಗಿಲ್: ಪಂಜಾಬ್ ಆಟಗಾರ ಗಿಲ್ ಅವರು ನಾಯಕನ ಸ್ಥಾನದ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ. ಸದ್ಯ ಅವರು ಟೆಸ್ಟ್ ತಂಡದಲ್ಲಿ 3ನೇ ಕ್ರಮಾಂಕದ ಬ್ಯಾಟರ್ ಆಗಿದ್ದಾರೆ. 25 ವರ್ಷ ವಯಸ್ಸಿನ ಗಿಲ್ 30 ಪಂದ್ಯಗಳನ್ನು ಆಡಿದ್ದಾರೆ

. ಬಿ. ಸಾಯಿಸುದರ್ಶನ್: ಆಕರ್ಷಕ ಎಡಗೈ ಬ್ಯಾಟರ್ ಬಿ. ಸಾಯಿಸುದರ್ಶನ್ ಅವರು ತಮ್ಮ ಚೆಂದದ ಬ್ಯಾಟಿಂಗ್ ಮೂಲಕ ಗಮನ ಸೆಳೆದಿದ್ದಾರೆ. ಪ್ರಸ್ತುತ ಐಪಿಎಲ್‌ನಲ್ಲಿ ಗುಜರಾತ್ ಟೈಟನ್ಸ್ ಪರವಾಗಿ ರನ್‌ಗಳ ಹೊಳೆಯನ್ನು ಹರಿಸುತ್ತಿದ್ದಾರೆ. ಅವರ ಸ್ಥಿರ ಪ್ರದರ್ಶನವು ಆಯ್ಕೆಗಾರರ ಗಮನ ಸೆಳೆದರೆ ಅಚ್ಚರಿಯೇನಿಲ್ಲ. ದೇಶಿ ಕ್ರಿಕೆಟ್‌ನಲ್ಲಿಯೂ ಅವರು ಉತ್ತಮವಾಗಿ ಆಡಿದ್ದಾರೆ. ಅವರು ಕೂಡ ಆರಂಭಿಕ ಅಥವಾ ಮೂರನೇ ಕ್ರಮಾಂಕದ ಬ್ಯಾಟಿಂಗ್‌ಗೆ ಸೂಕ್ತವಾಗಿದ್ದಾರೆ.

ಐಸಿಸಿ ಏಕದಿನ ರ‍್ಯಾಂಕಿಂಗ್

ಮಂದಾನಗೆ ಎರಡನೇ ಸ್ಥಾನ

ದುಬೈ (ಪಿಟಿಐ): ಭಾರತ ತಂಡದ ಪ್ರಮುಖ ಬ್ಯಾಟರ್ ಸ್ಮೃತಿ ಮಂದಾನ ಅವರು ಐಸಿಸಿ ಮಹಿಳಾ ಏಕದಿನ ಬ್ಯಾಟಿಂಗ್ ಕ್ರಮಾಂಕ ಪಟ್ಟಿಯಲ್ಲಿ ಅಗ್ರಸ್ಥಾನ ಮರಳಿ ಪಡೆಯುವ ಹಾದಿಯಲ್ಲಿದ್ದಾರೆ. ಶ್ರೀಲಂಕಾದಲ್ಲಿ ಇತ್ತೀಚೆಗೆ ನಡೆದ ತ್ರಿಕೋನ ಸರಣಿಯಲ್ಲಿ ಭಾರತ ಪ್ರಶಸ್ತಿ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಂದಾನ ಬುಧವಾರ ಪ್ರಕಟವಾದ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.

ಸ್ಮೃತಿ ಮಂದಾನ

ಸರಣಿಯ ಫೈನಲ್‌ನಲ್ಲಿ ಶತಕ (101, 116ಎ) ಬಾರಿಸಿದ್ದ ಈ ಆಟಗಾರ್ತಿ ಈ ಹಿಂದೆ 2019ರಲ್ಲಿ ಏಕದಿನ ಮಾದರಿಯ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ್ದರು. ಈಗ ಅವರಿಗೂ, ಅಗ್ರಸ್ಥಾನದಲ್ಲಿರುವ ದಕ್ಷಿಣ ಆಫ್ರಿಕಾ ತಂಡದ ನಾಯಕಿ ಲಾರಾ ವೋಲ್ವಾರ್ಟ್ ಅವರಿಗೂ ಕೇವಲ 11 ಪಾಯಿಂಟ್‌ಗಳ ಅಂತರವಿದೆ. ತ್ರಿಕೋನ ಸರಣಿಯಲ್ಲಿ ಮಂದಾನ 264 ರನ್ ಗಳಿಸಿದ್ದರೆ, ಲಾರಾ ಬರೇ 86 ರನ್ ಗಳಿಸಿದ್ದರು.

ಶ್ರೀಲಂಕಾ ತಂಡದ ನಾಯಕಿ ಚಾಮರಿ ಅಟಪಟ್ಟು ಅವರೂ ಅಗ್ರ 10ರೊಳಗೆ ಸ್ಥಾನ ಪಡೆದಿದ್ದಾರೆ. ತವರಿನಲ್ಲಿ ನಡೆದ ಸರಣಿಯಲ್ಲಿ 139 ರನ್ ಗಳಿಸಿದ್ದ ಅವರು ಏಳನೇ ಸ್ಥಾನಕ್ಕೇರಿದ್ದಾರೆ. ಭಾರತದ ಜೆಮಿಮಾ ರಾಡ್ರಿಗಸ್ 20ರಿಂದ 15ನೇ ಸ್ಥಾನಕ್ಕೆ ಜಿಗಿದಿದ್ದಾರೆ.

ಸ್ನೇಹ ರಾಣಾ ಪ್ರಗತಿ: ಇಂಗ್ಲೆಂಡ್‌ನ ಸೋಫಿ ಎಕ್ಲೆಸ್ಟೋನ್ ಅವರು ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ಭಾರತದ ಆಫ್ ಸ್ಪಿನ್ನರ್ ಸ್ನೇಹ ರಾಣಾ ಅವರು ನಾಲ್ಕು ಸ್ಥಾನ ಪ್ರಗತಿ ಕಂಡು 34ನೇ ಸ್ಥಾನಕ್ಕೇರಿದ್ದಾರೆ.

ಅವರು ತ್ರಿಕೋನ ಸರಣಿಯಲ್ಲಿ ಕೇವಲ 14ರ ಸರಾಸರಿಯಲ್ಲಿ 15 ವಿಕೆಟ್‌ಗಳನ್ನು ಪಡೆದು ಸರಣಿಯ ಆಟಗಾರ್ತಿ ಗೌರವಕ್ಕೆ ಪಾತ್ರರಾಗಿದ್ದರು.

ಅಂಧರ ಟಿ–20; ಭಾರತಕ್ಕೆ ಸತತ ಎರಡನೇ ಜಯ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಎ.ರವಿ ಅವರ ಶತಕದ (131, 82 ಎಸೆತ) ನೆರವಿನಿಂದ ಭಾರತ ತಂಡವು, ತಾಲ್ಲೂಕಿನ ಮುದ್ದೇನಹಳ್ಳಿಯ ಸಾಯಿ ಕೃಷ್ಣನ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಅಂಧರ ಟಿ–20 ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು 65 ರನ್‌ಗಳಿಂದ ಸೋಲಿಸಿತು. ಈ ಗೆಲುವಿನಿಂದ ಭಾರತ ಸರಣಿಯಲ್ಲಿ 2–0 ಮುನ್ನಡೆ ಪಡೆಯಿತು.

ಟಾಸ್ ಗೆದ್ದ ಮೊದಲು ಬ್ಯಾಟಿಂಗ್ ಮಾಡಿದ 3 ವಿಕೆಟ್‌ಗೆ 215 ರನ್ ಗಳಿಸಿತು. ರವಿ ಅವರಿಗೆ ಸೋನು ರಾವತ್ (25), ಲೋಕೇಶ್ (22) ಬೆಂಬಲ ನೀಡಿದರು. ಈ ಮೊತ್ತ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ಮುಕೇಶ್ ಕುಮಾರ್ ರಾವತ್ (35ಕ್ಕೆ3) ಮತ್ತು ಮನೀಶ್ ಕುಮಾರ್ (8ಕ್ಕೆ2) ಅವರ ದಾಳಿಗೆ ತತ್ತರಿಸಿ 9 ವಿಕೆಟ್‌ಗೆ 150 ರನ್ ಗಳಿಸಲಷ್ಟೇ ಶಕ್ತವಾಯಿತು. ಎ.ರವಿ ಪಂದ್ಯ ಶ್ರೇಷ್ಠ ಗೌರವಕ್ಕೆ ಪಾತ್ರರಾದರು.